
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

10 ಸೆಪ್ಟೆಂಬರ್ 2014 ಪುಟ 20 ರೂ. 15/-



ಅನಂತಮೂರ್ತಿ
ಅನಂತ ರೀತಿ

ಜಿ. ರಾಜಶೇಖರ್
ರಹಮತ್ ತರೀಕೆರೆ
ವೈದೇಹಿ
ಫಣಿರಾಜ್
ಬಿ.ಚಂದ್ರೇಗೌಡ
ಎಂ.ಎಸ್. ಆಶಾದೇವಿ
ರಂಜಾನ್ ದರ್ಗಾ
ದಿನೇಶ್ ಅಮಿನ್‌ಮಟ್ಟು


ವಿ.ಎಸ್. ಶ್ರೀಧರ್
ಹಯವದನ ಮೂಡುಸಿಗ್ರಿ
ಸರ್ಜಾಶಂಕರ್
ಗಿರಿರಾಜ್ ಬಿ.ಎಂ.
ಪುರುಷೋತ್ತಮ್ ಬಿಳಿಮಲೆ
ಹೃದಯಶಿವ
ಡಾ. ವಾಸು
ಪದ್ಮಾಶ್ರೀರಾಮ

ಾಯಕಿಯನ್ನು ಮುಕ್ಕಿದ
ಸಗಣಿ ಸ್ವಾಮಿ



ಅನಂತಮೂರ್ತಿಯವರ 'ಸಂಸ್ಕಾರ'

ಅಂಚಿನಿಂದ....



ಡಾ.ವಾಸು ಎಚ್.ವಿ.

ಅನಂತಮೂರ್ತಿಯವರ ಕಡೆಯ ಹುಟ್ಟಿದ ದಿನದ ಸಂದರ್ಭದಲ್ಲಿ 'ಪತ್ರಿಕೆ'ಗಾಗಿ ಅವರದ್ದೊಂದು ಸಂದರ್ಶನ ಮಾಡಲು ಸಂಪಾದಕರು ನನಗೆ ಸೂಚಿಸಿದ್ದರು. ಮಣಿಪಾಲ್ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಲೇ ಅನಂತಮೂರ್ತಿಯವರು ಸಂದರ್ಶನ ನೀಡಿದ್ದರು. ಡಯಾಲಿಸಿಸ್ ಮಾಡಿಸಿಕೊಳ್ಳುವಾಗ ಮತ್ತು ನಂತರ ಬಹಳ ಸುಸ್ತಾಗುವ ರೋಗಿಗಳನ್ನಷ್ಟೇ ನೋಡಿದ್ದ ನನಗೆ ಅನಂತಮೂರ್ತಿಯವರ ದೃಢತೆ ನೋಡಿ ಬಹಳ ಆಶ್ಚರ್ಯವಾಗಿತ್ತು. ಅಂತಹ ಆ ಪರಿಸ್ಥಿತಿಯಲ್ಲಿ ಅವರಿಗೆ ಕಿರಿಕಿರಿಯಾಗಬಹುದಾಗಿದ್ದ ಪ್ರಶ್ನೆಗಳನ್ನು ಕೇಳುವುದು ಕಷ್ಟವಿತ್ತು. ಆದರೂ ಒಂದು ಪ್ರಶ್ನೆ ಕೇಳಿದೆ. 'ಸೂರ್ಯನ ಕುದುರೆಯ ಅನಂತು, ಕಾಮರೂಪಿ ಕಥೆಯ ನಿರೂಪಕ ಮತ್ತು ಭಾರತೀಪುರದ ಜಗನ್ನಾಥ ಇವರೆಲ್ಲರೂ ನೀವೇ ಆಗಿದ್ದು ಈ ಮೂವರಲ್ಲೂ ಒಂದು ರೀತಿಯ ಮುಜುಗರ ಎದ್ದು ಕಾಣುತ್ತದೆ......'. 'ಅದು ದಾಕ್ಷಿಣ್ಯ, ನನ್ನ ವ್ಯಕ್ತಿತ್ವದ ಭಾಗವಾಗಿಯೇ ಬಂದಿರುವ ದಾಕ್ಷಿಣ್ಯ. ಅದೇ ಕಾರಣಕ್ಕೆ ನಾನು ಹಲವು ತಪ್ಪುಗಳನ್ನೂ ಮಾಡಿದ್ದೇನೆ. ಒಬ್ಬ ಲೇಖಕನಾಗಿರೋದ್ರಿಂದ ನನಗೆ ಅದನ್ನು ನಿರ್ವಹಣೆ ಮಾಡೋದು ಸುಲಭವಾಗಿದೆ...'

'ಸಂಸ್ಕಾರ'ವು ಅನಂತಮೂರ್ತಿಯವರ ಅತ್ಯಂತ ದೊಡ್ಡ ಸಾಧನೆ ಹಾಗೂ ಮಿತಿಗಳನ್ನು ತೋರುತ್ತಿರುವುದು ವಿಪರ್ಯಾಸಕರ ಸಂಗತಿಯಾಗಿದೆ. ಅವರ ನಿಧನಾನಂತರದ ಸಂಸ್ಕಾರವೂ ಒಂದು ವಿವಾದಾಸ್ಪದ ವಿಷಯವಾಗಿದೆ. ರವೀಂದ್ರ ಕಲಾಕ್ಷೇತ್ರದಿಂದ ವ್ಯಾನ್ ಹೊರಡುತ್ತಿದ್ದ ಸಂದರ್ಭದಲ್ಲಿ ಅವರ ಶಿಷ್ಯರೊಬ್ಬರು ಇದನ್ನು ಬಹಳ ಸ್ಪಷ್ಟವಾಗಿ ಹೇಳಿದರು. 'ಮೇಷ್ಟ್ರು ಇನ್ನೊಂದು ವಿವಾದವನ್ನು ಮಾಡಿಯೇ ಹೋಗೋದು. ಸುಮ್ನೆ ಹಾಗೇ ಹೋಗ್ಬಿಡಲ್ಲ!' ಅವರ ಮಾತು ಸುಳ್ಳಾಗಲಿಲ್ಲ. ಅನಂತಮೂರ್ತಿಯವರ ಅಂತಿಮ ಸಂಸ್ಕಾರದ ರೀತಿ ನಿಜಕ್ಕೂ ಹಲವು ಪ್ರಶ್ನೆಗಳನ್ನೆಬ್ಬಿಸಿತು. ಅದರ ಕುರಿತು ಆಲೋಚನೆಗೆ ತೊಡಗಿದಾಗ, 'ಎರಡು ಪಾತ್ರಗಳ ನಿರ್ವಹಣೆ' ಮತ್ತು ಆ ಸಂದರ್ಶನದಲ್ಲಿ ಪ್ರಸ್ತಾಪವಾದ ಕೆಲವು ಸಂಗತಿಗಳು ಮನದೊಳಗೆ ಸುಳಿದವು.

ಅಂತ್ಯಸಂಸ್ಕಾರದ ವಿಧಿವಿಧಾನಗಳನ್ನು ವಿವಾದದ ಸಂಗತಿ ಮಾಡಬಾರದು ಎಂಬುದರ ಕುರಿತು ನನಗೆ ತಕರಾರಿದೆ. ಸದಾ ಅನಂತಮೂರ್ತಿಯವರ ಮೇಲೆ ಬೀಳಲು ಹವಣಿಸುತ್ತಿದ್ದ ಕೋಮುವಾದಿ ಸಂಘಪರಿವಾರಕ್ಕೆ ನಮ್ಮದು ಸ್ಪಷ್ಟ ವಿರೋಧವಿರಬೇಕು. ಆ ವಿಚಾರದಲ್ಲಿ ಅನಂತಮೂರ್ತಿಯವರು ಗುರುತಿಸಿದ ಫ್ಯಾಸಿಸಂನ ಅಪಾಯ, ಅವರು ಮೋದಿಯನ್ನು ವಿರೋಧಿಸಿದ ರೀತಿ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಇವನ್ನು ನಾವು ಸಂದೇಹಕ್ಕೇ ಇಲ್ಲದೇ ಎತ್ತಿಹಿಡಿಯಬೇಕು. ಮೋದಿಯ ಕಾಲದಲ್ಲಿ ಭಾರತದ ಒಬ್ಬ ಮಹತ್ವದ ಲೇಖಕರು ಆತನನ್ನು ಈ ಪರಿ ವಿರೋಧಿಸಿದ್ದು ಬಹಳ ಮುಖ್ಯವಾದುದ್ದಾಗಿತ್ತು.

ಅನಂತಮೂರ್ತಿಯವರನ್ನು ಸದಾಕಾಲ ವಿರೋಧಿಸುವ ಪಡೆಯ ನಿಲುವನ್ನು ನಾವು ಒಪ್ಪದಿರಬಹುದು. ಚಂಪಾರವರು ಮುಂದಿಡುವ 'ಸೆಕ್ಯೇರಿಯನ್' ನಿಲುವು, ನಂಜು ಎಂದು ಕರೆಯಬಹುದಾದ ಪ್ರಮಾಣಕ್ಕಿರುವ ವ್ಯಂಗ್ಯವನ್ನೂ ನಾವು ಒಪ್ಪದಿರಬಹುದು. ಆದರೆ ಅವರ ಕುರಿತು ವಿಮರ್ಶೆಯೇ ಇರಬಾರದು ಎಂದರೆ ಹೇಗೆ? ಇಲ್ಲದಿದ್ದರೆ ಅನಂತಮೂರ್ತಿಯವರ ಅಭಿವ್ಯಕ್ತಿ ಸ್ವಾತಂತ್ರ್ಯದ ಪರ ನಾವು ನಿಲ್ಲುವುದೇ ವಿರೋಧಾಭಾಸವಾಗಿಬಿಡಬಹುದು. ಕೇವಲ ಹೊಗಳಿಕೆ, ಕೇವಲ ನಂಜಿನ ಆಚೆಗೆ ಒಂದು ಆರೋಗ್ಯಕರ ವಿಮರ್ಶೆ ಎಲ್ಲ ಕಾಲದಲ್ಲೂ ಇದ್ದೇ ಇರಬೇಕು.

ಅನಂತಮೂರ್ತಿಯವರ ಒಟ್ಟಾರೆ ಸಾಮಾಜಿಕ ಪಾತ್ರವನ್ನು ನೋಡುವುದಾದರೆ, ನಾವು ಮೆಚ್ಚಿಕೊಳ್ಳಬಹುದಾದ ಬಹುಮುಖ್ಯ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಚಿಂತನೆಯನ್ನು ಅವರು ನಡೆಸಿದ್ದಾರೆ. ಬ್ರಾಹ್ಮಣ್ಯದ ವಿರುದ್ಧವಾಗಿಯೂ ಅವರು ಸಂಘರ್ಷವನ್ನು ನಡೆಸಿದ್ದಾರೆ. ಉದ್ದೇಶಪೂರ್ವಕವಾಗಿಯೋ, ಅನುದ್ದಿಶ್ಯವಾಗಿಯೋ ಬ್ರಾಹ್ಮಣ ಸಮಾಜದೊಳಗಿನ ಸಮಸ್ಯೆಗಳನ್ನು ಅವರು ಅತ್ಯಂತ ಸಮರ್ಥವಾಗಿ ತಮ್ಮ ಸೃಜನಶೀಲ ಬರಹಗಳಲ್ಲಿ ಕಾಣಿಸಿದ್ದಾರೆ. ಸಂಸ್ಕಾರ ಕಾದಂಬರಿಯಲ್ಲಿ ಬ್ರಾಹ್ಮಣರ ಅಪಾಥಭೂತಿತನವನ್ನು ನಾರಣಪ್ಪ ಮಾತಿನಲ್ಲಿ ಆಡಿ ತೋರಿಸುವುದಕ್ಕಿಂತ ಹೆಚ್ಚಾಗಿ, ಕಾದಂಬರಿಕಾರ ಅನಂತಮೂರ್ತಿ ವಿವಿಧ ಪಾತ್ರಗಳ ನಡವಳಿಕೆಯ ನಿರೂಪಣೆಯಲ್ಲಿ ತೋರುತ್ತಾರೆ. ಘಟಶ್ರಾದ್ಧದಲ್ಲೂ, ಭಾರತೀಪುರದಲ್ಲೂ, ಮೌನಿಯಲ್ಲೂ, ಸೂರ್ಯನ ಕುದುರೆಯಲ್ಲೂ ಸಹಾ ಮತ್ತೆ ಮತ್ತೆ ತರುತ್ತಾರೆ. 'ಬ್ರಾಹ್ಮಣ ಹುಡುಗ'ನೊಬ್ಬ ಈ ರೀತಿ ತನ್ನ ಸಮುದಾಯದೊಳಗಿನ ಸಣ್ಣತನ, ದ್ವಂದ್ವ ನಿಲುವುಗಳು, ಜೀವಂತಿಕೆ ಮತ್ತು ಜೀವ ವಿರೋಧಿತನ ಎಲ್ಲವನ್ನೂ ಬಿಚ್ಚಿಡುವ ಪರಿಯನ್ನು ನಾವು ಅನಂತಮೂರ್ತಿಯವರ ಸೃಜನಶೀಲ ಬರಹಗಳಲ್ಲಿ ಸಾಕಷ್ಟು ಕಾಣಬಹುದು. ಆ ಮಟ್ಟಕ್ಕೆ ಅದು ಪುರೋಗಾಮಿ ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಯೇ ಆಗಿದೆ. ಬ್ರಾಹ್ಮಣ ಜಗತ್ತನ್ನು ಅನಾವರಣ ಮಾಡುವಾಗ ಅನಂತಮೂರ್ತಿಯವರು ಈ ರೀತಿ ಸತ್ಯಕ್ಕೆ ಹತ್ತಿರವಾಗುವ ಬಗೆಯನ್ನು ಸಂಸ್ಕಾರ, ಘಟಶ್ರಾದ್ಧಗಳಲ್ಲಿ ಮಾತ್ರವಲ್ಲದೇ ಅವರ ಇನ್ನೂ ಹಲವು ಸಣ್ಣಕಥೆಗಳಲ್ಲಿ ನೋಡಬಹುದು.

ಸಮಸ್ಯೆ ಇರುವುದು ಲೇಖಕನಾಗಿ ತನ್ನ ಬರಹದಲ್ಲಿ ನಿರ್ವಹಣೆ ಮಾಡಲು ಸಾಧ್ಯವಾಗುವ ಬ್ರಾಹ್ಮಣ್ಯವನ್ನು ತನ್ನದೇ ಜೀವನದಲ್ಲಿ ನಿರ್ವಹಣೆ ಮಾಡುವಾಗ ಅನಂತಮೂರ್ತಿಯವರು ಆಯ್ದುಕೊಂಡ ಧೋರಣೆಯಲ್ಲಿ. ಅಂತ್ಯಸಂಸ್ಕಾರದ ಪೋಸ್ಟ್‌ಮಾರ್ಟಂ ಈಗಾಗಲೇ ಸಾಕಷ್ಟು ನಡೆದಿದೆ. ಅದನ್ನು ನೋಡಿದರೆ 'ವೈದಿಕ ವಿಧಿವಿಧಾನಗಳ ಮೂಲಕ ಅಂತ್ಯಸಂಸ್ಕಾರ ಮಾಡಬೇಕೆನ್ನುವುದು ಅನಂತಮೂರ್ತಿಯವರ ಸೂಚನೆಯಾಗಿರದಿದ್ದರೂ, ಅಪೇಕ್ಷೆಯಾಗಿತ್ತು' ಎನ್ನುವುದು ಕಂಡುಬರುತ್ತಿದೆ. ಇದು ಅನಂತಮೂರ್ತಿಯವರ ಅಪಾಥಭೂತತನ; ಹೇಳುವುದು ಒಂದು ಮಾಡುವುದು ಇನ್ನೊಂದು ಆಗಿರುವುದಕ್ಕೆ ಮತ್ತೊಂದು ನಿದರ್ಶನ ಎಂಬ ಮಾತೂ ಅಲ್ಲಲ್ಲಿ ಕೇಳಿಬರುತ್ತಿದೆ. ಅನಂತಮೂರ್ತಿಯವರ ಒಟ್ಟು ಜೀವನದೃಷ್ಟಿಯನ್ನು ಗಮನಿಸಿದರೆ, ಒಂದು ಮಾತು ಸ್ಪಷ್ಟ. 'ಅವರು ಹೇಳಿದ್ದು ಒಂದು, ಮಾಡಿದ್ದು ಇನ್ನೊಂದು ಅಲ್ಲ'. ಅವರ ಅಂತ್ಯಸಂಸ್ಕಾರದ ವಿಧಾನವು ಸೇರಿದಂತೆ, ಇದುವರೆಗಿನ ಅವರ ಹಲವು ನಿಲುವುಗಳಲ್ಲಿ ಒಂದು ಕನ್ಸಿಸ್ಟೆನ್ಸಿ ಇದೆ. ಆ ಅರ್ಥದಲ್ಲಿ ಅವರು ಹೇಳಿದ್ದನ್ನೇ ಮಾಡಿದರು. ಅದನ್ನು ನಾವು ಒಪ್ಪಬಹುದು ಅಥವಾ ಬಿಡಬಹುದು.


ಬ್ರಾಹ್ಮಣೀಯ ಆಚರಣೆಗಳ ಕುರಿತಾಗಿ, ವರ್ಣ ವ್ಯವಸ್ಥೆಯ ಕುರಿತಾಗಿ, ಜಾತಿವ್ಯವಸ್ಥೆಯ ಕುರಿತಾಗಿ, ಬ್ರಾಹ್ಮಣ ಸಮುದಾಯ ಮತ್ತು ಬ್ರಾಹ್ಮಣ್ಯ ಸಾವಿರಾರು ವರ್ಷಗಳಿಂದ ಕಾಪಾಡಿಕೊಂಡು ಬಂದಿರುವ ಜೀವನ ಕ್ರಮದ ಕುರಿತಾಗಿ ಅವರಿಗೆ ನಾವು ಬಹಳಷ್ಟು ಜನ ಒಪ್ಪದಿರುವ ನಿಲುವುಗಳಿದ್ದವು. ಅಂದರೆ ಸನಾತನವೆಂದು ಕರೆಯಬಹುದಾದ, ಕೆಲವು ಕೋನಗಳಲ್ಲಿ ವಿವೇಕಾನಂದ ಮತ್ತು ಗಾಂಧಿಯವರಿಗೂ ಇದ್ದಂಥ ನಿಲುವುಗಳು ಎಂದು ಹೇಳಬಹುದಾದ ಬ್ರಾಹ್ಮಣೀಯ ನಿಲುವುಗಳು ಅವು.

ಇದನ್ನು ನಾನು ಮಾಡಿದ ಸಂದರ್ಶನದಲ್ಲಿ ಪ್ರಸ್ತಾಪಿಸಿದ್ದೆ. 'ನಿಮ್ಮ ನಿಲುವೇ ಹಾಗೆಯೋ ಅಥವಾ ಅದು ತಪ್ಪಾಗಿ ಔಟ್ ಆಫ್ ಕಾಂಟೆಕ್ಸ್ಟ್ ಕ್ವೋಟ್ ಆಗುತ್ತದೆಯೋ?' ಎಂಬ ಪ್ರಶ್ನೆಗೆ ' .... ಇದಕ್ಕೆ ಏನೂ ಮಾಡೋಕಾಗಲ್ಲ, ನಿಮ್ಮ ವಿಚಾರಗಳನ್ನು ನೀವು ಹೇಳಬೇಕಾದ್ರೆ ನಿರ್ಭಯವಾಗಿ ಹೇಳಬೇಕು. ಇವತ್ತಲ್ಲಾ ನಾಳೆ ಅದು ಗೊತ್ತಾಗುತ್ತದೆ. ನನಗೆ ಇದರ ಬಗ್ಗೆ ಬಹಳ ನಂಬಿಕೆ ಇದೆ. ಹಲವರು, ಅರರೆ ಅನಂತಮೂರ್ತಿಯನ್ನು ಇಷ್ಟು ದಿನ ತಪ್ಪು ತಿಳಿದುಕೊಂಡಿದ್ದೆ ಅಂತ ಅಂದ್ಕೋತಾರೆ ಅಂತ. ಉದಾಹರಣೆಗೆ ನನ್ನ ಬಾಲ್ಯದ ಅನುಭವಗಳನ್ನು ಬರೀತಾ, ನನಗೆ ಬಹಳ ಸುಂದರವಾದ ಬ್ರಾಹ್ಮಣ ಅನುಭವಗಳಿದ್ದಾವೆ, ಅವನ್ನು ಹೇಳಿದರೆ, ಇವನು ಬರೀ ಬ್ರಾಹ್ಮಣ ಅಂತ ಅಂತಾರೆ. ಹಾಗಂತ ನಾನು ಅವನ್ನು ತ್ಯಜಿಸೋಕೆ ತಯಾರಿಲ್ಲ.'

ಮೇಲೆ ಹೇಳಿದ ಸಂದರ್ಶನದಲ್ಲೇ ಅವರು ಹೇಳಿದ ಇನ್ನೊಂದು ಮಾತನ್ನೂ ಈ ಸಂದರ್ಭದಲ್ಲಿ ನೆನೆಯಬಹುದೇನೋ? '15 ವರ್ಷಗಳ ಕೆಳಗೆ ಒಂದು ಸಾರಿ ಒಂದು ಕಾರ್ಯಕ್ರಮದಲ್ಲಿ ನೀವು, ಜಾಗತೀಕರಣವು ಇಲ್ಲಿ ಯಶಸ್ವಿಯಾಗಲು ಸಾಧ್ಯವಿಲ್ಲ; ಯಾಕಂದ್ರೆ ದೊಡ್ಡ ರಾಗಿ ರುಚಿ ತಿಂದ ನಮ್ಮ ಜನರು ಪಿಜ್ಜಾ ಬರ್ಗರ್‌ಅನ್ನು ಇಷ್ಟ ಪಡುವುದಿಲ್ಲ ಎಂದಿದ್ದಿರಿ. ಜಾಗತೀಕರಣವನ್ನು ಹೀಗೆ ಎದುರಿಸೋಕೆ ಸಾಧ್ಯವಾ ಸಾರ್?'. ಇದಕ್ಕೆ ಅವರ ಉತ್ತರ ಹೀಗಿತ್ತು. 'ನಮ್ಮ ದೇಶದ ಅನಿಷ್ಟವಾದ ಜಾತಿಪದ್ಧತಿ ತಂದಿರುವ ರುಚಿಗಳಿವೆಯಲ್ಲಾ, ಅವೂ ನಮಗೆ ಸಹಾಯಕವಾಗ್ತವೆ ಅಂತ ನನಗೆ ಅನ್ನಿಸುತ್ತೆ. ಅದು ಅನಿಷ್ಟವಾದದ್ದೇ. ಆದೇ ಈ ಬಹು ರುಚಿಗಳನ್ನೂ ತಂದಿದೆ. ಅದು ಜಾಗತೀಕರಣವು ನಮ್ಮನ್ನು ಸಂಪೂರ್ಣ ಆವರಿಸಿಕೊಳ್ಳದಂತೆಯೂ ತಡೆಯುತ್ತದೆ.'



ಅನಂತ ಮೂರ್ತಿ ರೀತಿ



ಈ ಸಂದರ್ಶನ ನಡೆಯುವ ಕೆಲವು ದಿನಗಳ ಹಿಂದೆ 'ಮಯೂರ'ದಲ್ಲಿ ಅವರು ಒಂದು ಲೇಖನವನ್ನೂ ಬರೆದಿದ್ದರು. ಅದರಲ್ಲಿ 'ಜಾತಿ ಪದ್ಧತಿಯ ಕಾರಣಕ್ಕೆ ಬಹುತ್ವವೂ ಇಲ್ಲಿದೆ; ಪ್ರತೀ ಜಾತಿಯ ಅಡಿಗೆಯಲ್ಲೂ ಬೇರೆ ಬೇರೆ ರುಚಿಗಳಿರುತ್ತವೆ. ಇಷ್ಟೊಂದು ಜಾತಿಗಳಿರುವುದರಿಂದ ಇಲ್ಲಿನ ರುಚಿಗಳಲ್ಲಿ ಇಷ್ಟೊಂದು ವೈವಿಧ್ಯವೂ ಇದೆ ಎಂಬ ಅರ್ಥದಲ್ಲಿ' ದೀರ್ಘ ಮಾತುಗಳಿದ್ದವು. ಅನಂತಮೂರ್ತಿಯವರದ್ದೇ ಮಾತುಗಳನ್ನು ಇಲ್ಲಿ ಪ್ರಸ್ತಾಪಿಸುವುದಕ್ಕೆ ಕಾರಣವಿದೆ. ಅವರನ್ನು ಬಲ್ಲವರಿಗೆ ಇಂತಹ ಇನ್ನೂ ನೂರಾರು ಸಂಗತಿಗಳು ಗೊತ್ತಿರುತ್ತವೆ. ತಾನು ಬ್ರಾಹ್ಮಣನಾಗಿದ್ದುಕೊಂಡೇ, ಬ್ರಾಹ್ಮಣ್ಯದ ಬಗ್ಗೆ ವಿಮರ್ಶಾತ್ಮಕವಾಗಿರುತ್ತೇನೆ ಎಂಬಂತಹ ಅವರ ನಿಲುವು ಅದು. 'ಜಾತಿ' ತೆಗೆದು ಅಲ್ಲಿ 'ವರ್ಣ' ಅಂತ ಹಾಕಿದರೆ ಹೆಚ್ಚಿನ ಸಮಸ್ಯೆ ಬಗೆಹರಿದುಬಿಡುತ್ತದೆ ಎಂಬ ಅನಿಸಿಕೆಯಾಗಿತ್ತು. ಹಿಂದೂ ಧರ್ಮದೊಳಗೇ ಸುಧಾರಣೆಯನ್ನು ಮಾಡಲು ಸಾಧ್ಯ; ಅದಕ್ಕಾಗಿ ಹಿಂದೂ ಧರ್ಮದ ಅಡಿಪಾಯವಾಗಿರುವ ವರ್ಣ ವ್ಯವಸ್ಥೆಯನ್ನು ಇಲ್ಲವಾಗಿಸುವ ಅಗತ್ಯವೇನೂ ಇಲ್ಲ ಎಂಬ ನಿಲುವು ಗಾಂಧಿಯವರದ್ದೂ ಸಹ. ಅದು ಸಾಂಸ್ಕೃತಿಕ ಬಹುತ್ವವನ್ನೂ, ಪಾರಂಪರಿಕ ಸ್ಮೃತಿಗಳ ಖಜಾನೆಯನ್ನೂ ಮುಂದಿನ ತಲೆಮಾರುಗಳಿಗೆ ಉಳಿಸುತ್ತದೆ ಎಂಬ ಅನಿಸಿಕೆ ಅನಂತಮೂರ್ತಿಯವರದ್ದಾಗಿತ್ತು. ವರ್ಣ ವ್ಯವಸ್ಥೆಯನ್ನು ಈ ರೀತಿ ನಮ್ಮ ಹಿಂದಿನ ತಲೆಮಾರುಗಳ ಜ್ಞಾನಭಂಡಾರ ಹಾಗೂ ಸಂಸ್ಕೃತಿಯನ್ನು ಪೀಳಿಗೆಯಿಂದ ಪೀಳಿಗೆಗೆ ರವಾನಿಸುವ ವಾಹಕವನ್ನಾಗಿ ನೋಡಲು ಸಾಧ್ಯವೇ? ಹಿಂದೂ ಧರ್ಮದ ವರ್ಣ ವ್ಯವಸ್ಥೆಯೊಳಗೆ ಅನುಕೂಲಕರ ಪರಿಸ್ಥಿತಿಯಲ್ಲಿರುವ ವರ್ಣದ ಜನ ಇದನ್ನು ಹೇಳಬಹುದೇ? ಇದರ ಸಾಮಾಜಿಕ ಹಾಗೂ ರಾಜಕೀಯ ಪರಿಣಾಮಗಳೇನು? ಶ್ರೇಣೀಕರಣವಿಲ್ಲದ ವರ್ಣ ವ್ಯವಸ್ಥೆ ಸಾಧ್ಯವೇ? ಇದೇ ಸಂಸ್ಕೃತಿಯೊಳಗೇ, ಆಚಾರಗಳೊಳಗೇ, ಸಂಸ್ಕಾರದ ಕ್ರಮಗಳೊಳಗೇ ಜೀವ ವಿರೋಧಿಯಾದವು, ಶ್ರೇಣೀಕರಣವನ್ನೂ, ಬ್ರಾಹ್ಮಣ ಶ್ರೇಷ್ಠತೆಯನ್ನೂ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪ್ರತಿಪಾದಿಸುವ ಅಂಶಗಳು ತುಂಬಿಕೊಂಡಿಲ್ಲವೇ? ಅವೆಲ್ಲವನ್ನೂ ಬಿಟ್ಟು, 'ಬಹುತ್ವ', 'ರುಚಿಯ ವೈವಿಧ್ಯ'ಕ್ಕಾಗಿ ನಾವು ಪರಂಪರೆಯ ಆಚಾರಗಳನ್ನು ಒಪ್ಪಿಕೊಳ್ಳಲಾಗುತ್ತದೆಯೇ?


ಈ ಪ್ರಶ್ನೆಗಳಿಗೆ ಉತ್ತರಿಸಲು ಅನಂತಮೂರ್ತಿಯವರಿಲ್ಲ. ಆದರೆ ಈ ಅನಿಸಿಕೆಗಳು ಅವರಿಗೆ ಇದ್ದದ್ದು ನಿಜ. ಹಿಂ (ವೈದಿಕ) ಪುನರುತ್ಥಾನದ ವಿವಿಧ ಮಾರ್ಗಗಳು ಇ ತೆರೆದುಕೊಳ್ಳುತ್ತಿವೆ. ಅನಂತಮೂರ್ತಿಯವ ಖಂಡತುಂಡವಾಗಿ ವಿರೋಧಿಸಿದ ಆರೆಸ್ಸೆಸ್ಸಿನ ಮಾ ಬಾಲಗಂಗಾಧರ ಮತ್ತಿತರರು ಪ್ರತಿಪಾದಿಸುತ್ತಿರುವ ಮಾರ್ ಜೊತೆಗೆ ಭಿನ್ನವಾಗಿ ಕಾಣುವ ಇನ್ನೂ ಹಲವು ಮಾರ್ಗಗ ವರ್ಣ ವ್ಯವಸ್ಥೆಯ ವಿಶಿಷ್ಟತೆಯನ್ನು ಪ್ರತಿಪಾದಿಸುವು ಅದರಲ್ಲಿ ಒಂದು ಎಂದು ನಮಗನ್ನಿಸಿದರೆ, 'ಅನಂತಮೂ ಮಾರ್ಗ'ವು ಅದಕ್ಕೆ ಉತ್ತರ ನೀಡಲೇಬೇಕಾಗುತ್ತದೆ. ವ್ಯವಸ್ಥೆಯ ಬುಡಮೇಲನ್ನು ಒಪ್ಪದ ಆದರೆ, ಎಲ್ಲ ರೀತಿ 'ವ್ಯವಸ್ಥೆ'ಯನ್ನು ತಿರಸ್ಕರಿಸುತ್ತೇವೆಂದು ಬಿಂಬಿಸಿಕೊ ಪೋಸ್ಟ್ ಮಾಡರ್ನ್ ಮತ್ತು ಐಡೆಂಟಿಟಿ ರಾಜಕಾರ ಇನ್ನೊಂದು ಮಜಲಾಗಿಲ್ಲವೇ ಎಂಬ ಪ್ರಶ್ನೆಯ ಹಾಕಿಕೊಂಡು ಚರ್ಚಿಸಬೇಕಿದೆ. 'ಸಂಸ್ಕಾರ'ವು ಮತ್ತೆ ಎಲ್ಲಾ ಪ್ರಶ್ನೆಗಳನ್ನು ನಮ್ಮ ಮುಂದಿಡುತ ಅನಂತಮೂರ್ತಿಯವರನ್ನು ಸಂಪೂರ್ಣವಾಗಿ ತಿರಸ್ಕರಿ ಅವರನ್ನು ನೋಯಿಸುವ ರೀತಿಯಲ್ಲಿ ಈ ಚರ್ಚೆಯ ನಡೆಸುವ ಅಗತ್ಯವಿಲ್ಲ; ನಡೆಸಬಾರದು.

ಹುಟ್ಟನ್ನು ಕಳಚಿಕೊಳ್ಳುವ ಅಗತ್ಯವನ್ನು ಅಂಬೇ ಪ್ರತಿಪಾದಿಸಿದ ರೀತಿಯನ್ನು ಹೋಲಿಸಿ ನೋಡಬೇಕೆನ್ನಿಸು 'ಹಿಂದೂವಾಗಿ ಹುಟ್ಟಿದ್ದೇನೆ, ಆದರೆ ಹಿಂದೂ ಸಾಯಲಾರೆ' ಎಂದು ಅಂಬೇಡ್ಕರರು ಘೋಷಿಸಿದ್ದು ಅಂತ್ಯಸಂಸ್ಕಾರದ ವಿಧಿವಿಧಾನಗಳನ್ನು ನಿರ್ಧರಿಸುವ ಸಲು ಮಾತ್ರವಲ್ಲ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ದೇಶದಲ್ಲಿ ಹುಟ್ಟಿನೊಂದಿಗೆ ಅನಿವಾರ್ಯವಾಗಿ ಬ ಕೆಲವು ಬಂಧನಗಳನ್ನು ತೊಡೆದುಕೊಳ್ಳುವುದು ಅ ಅಷ್ಟು ಮುಖ್ಯವಾಗಿತ್ತು. ಬೌದ್ಧ ಧರ್ಮ ಸ್ವೀಕರಿಸಿದ ಎ ತಿಂಗಳಲ್ಲಿ ಅಂಬೇಡ್ಕರ್ ತೀರಿಕೊಂಡರು. ಹುಟ್ಟಿದಾ ಅಂಟಿಕೊಂಡ ಬ್ರಾಹ್ಮಣ್ಯವನ್ನು ಕಳೆದುಕೊಳ್ಳುವ ಮಿಕ್ಕೆಲ್ಲರಿಗಿಂತ 'ಹುಟ್ಟಿನಿಂದ ಬ್ರಾಹ್ಮಣ'ರಾದವ ಆದ್ಯತೆಯ ಸಂಗತಿಯಾಗಬೇಕು. ಇ ಅನಂತಮೂರ್ತಿಯವರಿಗೆ ಗೊತ್ತಿರದ ಸಂಗತಿಯೇನಾಗಿ ಬ್ರಾಹ್ಮಣ ಹಿನ್ನೆಲೆಯ ಚಿಂತಕರು ಆಡಬೇಕಾದ ಬ ಮುಖ್ಯ ಮಾತನ್ನು ಅವರೊಮ್ಮೆ ಆಡಿದ್ದರು. ವಿಧಾನಸೌ ನಡೆದ ಕಾರ್ಯಕ್ರಮವೊಂದರಲ್ಲಿ 'ಜಾತಿಯ ಕಾರಣಕ್ಕೆ ಬ ವೇಳೆ ಬ್ರಾಹ್ಮಣರನ್ನು ಯಾರಾದರೂ ನೋಯಿಸಿ ಅವರದನ್ನು ತಡೆದುಕೊಳ್ಳಬೇಕು. ಏಕೆಂದರೆ ಶತಮಾ ಕಾಲ ಅವರ ಜಾತಿಯವರು ಉಳಿದವರನ್ನು ನೋಯಿಸಿ ಎಂಬರ್ಥದ ಮಾತು ಅದು. ಬ್ರಾಹ್ಮಣ ಹಿನ್ನೆ ಮಿಕ್ಕವರು ಅದನ್ನೆಷ್ಟು ಅಂತರ್ಗತ ಮಾಡಿಕೊಂಡಿದ್ದಾ ಆದರೆ ಸ್ವತಃ ಅನಂತಮೂರ್ತಿಯವರು ಅದನ್ನು ಪಾಲಿಸಿದ್ದಂತೆ ಕಾಣುತ್ತದೆ. ಜಾತಿಯ ಕಾರಣಕ್ಕೆ ಪದೇ ಅನುಮಾನಕ್ಕೆ, ನಿಂದನೆಗೆ ಅವರು ಗುರಿಯಾದರೂ, ಅ ಬಹಳ ಕಹಿ ಮಾಡಿಕೊಂಡಿದ್ದಂತೆ ಕಾಣುವುದಿಲ್ಲ. ಉಳಿಸಿಕೊಳ್ಳದ ಅವರ ಗುಣದ ಕುರಿತು ಎ ಮಾತನಾಡುತ್ತಿದ್ದಾರೆ. ಅದೂ ಸಹ ಅಷ್ಟು ಸುಲಭ ಈ ಕಹಿಯನ್ನು ಕಳೆದುಕೊಂಡಿದ್ದು ಅನಂತಮೂರ್ತಿ ದೊಡ್ಡ ಗುಣವೇನೋ ಹೌದು. ಆದರೆ ಬ್ರಾಹ ಆಚರಣೆಗಳನ್ನು ಪ್ರಜ್ಞಾಪೂರ್ವಕವಾಗಿ ಕಳಚಿ ಹಾಕಬೇ ಅವರಿಗೆ ಅನ್ನಿಸಿರದಿದ್ದುದು ಒಂದು ಮುಖ್ಯ ಸಮಸ ಆಗಿ ಉಳಿದುಕೊಳ್ಳುತ್ತದೆ.

ನಾರಣಪ್ಪ ಬ್ರಾಹ್ಮಣ್ಯವನ್ನು ಬಿಟ್ಟರೂ, ಬ್ರಾ ಅವನನ್ನು ಬಿಡಲಿಲ್ಲ ಎಂದು ಗುರುಗಳು 'ಸಂಸ್ಕಾ ಹೇಳುತ್ತಾರೆ. ಬ್ರಾಹ್ಮಣರು ಸಂಸ್ಕಾರದ ಕ ಚಿಂತಿತವಾಗಿರುವಾಗಲೇ ನಾರಣಪ್ಪನ ಶವವನ್ನು ಮುಸ್ಲಿಂ ಸ್ನೇಹಿತರು ಎತ್ತಾಕಿಕೊಂಡು ಹೋಗಿ ಶವಸಂಸ್ಕಾರ ಮಾಡಿಬಿಡುತ್ತಾರೆ. ಕಾದಂಬರಿ ನಾರಣಪ್ಪನಿಗೆ ಕಡೆಗಾಲದಲ್ಲಿ ಬ್ರಾಹ್ಮಣ್ಯದ ಸೋ ತಗುಲದಂತೆ ಅನಂತಮೂರ್ತಿಯವರು ನಿವ ಮಾಡಿದ್ದರು. ನಿಜಜೀವನದಲ್ಲಿ ಸ್ವತಃ ಅವರಿಗೇ ಅ ಮಾಡುವುದು ಶಕ್ಯವಿರಲಿಲ್ಲ, ಕನಿಷ್ಠ ಚರ್ಚೆಯನ್ನಾ ಮುಂದುವರೆಸಿ ಈ ಸೋಂಕನ್ನು ಕಳೆಯುವ ಅನಂತಮೂರ್ತಿಯವರ ಶಿಷ್ಯಕೋಟಿಯ ಮುಂದಿ

ಅನಂತಮೂರ್ತಿಯವರಿಗೆ ತನಗನ್ನಿಸಿದ್ದನ್ನು ಹೇ ಸ್ವಾತಂತ್ರ್ಯವಿತ್ತು. ಅದನ್ನು ಕಿತ್ತುಕೊಳ್ಳಲು ಫ್ಯಾಸಿಸ್ಟ್ ಶ ಅವರ ಮೇಲೆ ಹಲವು ರೀತಿಯ ದಾಳಿ ನಡೆ ಅದರ ವಿರುದ್ಧ ನಾವಿರಬೇಕಿತ್ತು, ಇದ್ದೆವು. ಆ ಅನಂತಮೂರ್ತಿಯವರು ತಮಗನ್ನಿಸಿದ್ದನ್ನು ಧೈರ್ಯ ಹೇಳಿದ್ದರಿಂದ ಒಳ್ಳೆಯದಾಗಿದೆ. ಈ ನಾಡಿನ ಸಾಕ್ಷಿಪ್ರಜ್ಞೆ ಆಡಬೇಕಾದ ಮಾತುಗಳನ್ನು ಅವರು ಆಡಿದ್ದರು. ಹಾ ಅನಂತಮೂರ್ತಿಯವರ ವಿಚಾರ, ಆಚಾರಗ ವಿಮರ್ಶಿಸುವ ಹಕ್ಕು ಮಿಕ್ಕವರಿಗೂ ಇದೆ. ಅದರಿಂ ಒಳ್ಳೆಯದಾಗುತ್ತದೆ.

ಅನಂತಮೂರ್ತಿಯವರನ್ನು ಕಳೆದುಕೊಂಡ ಶೂನ್ಯದಲ್ಲಿ...




• ಗೌರಿ ಲಂಕೇಶ್
editorlankesh@gmail.com

"ನಾನು ನಿಮ್ಮೆಲ್ಲರೊಂದಿಗೆ ಇದ್ದೇನೆ ಕಣೆ. ನನ್ನ ...ಮು ಹಾಕಿಕೊಳ್ಳೆ. ನನ್ನ ಆರೋಗ್ಯ ಚೆನ್ನಾಗಿದ್ದರೆ ನಾನು ... ಜೊತೆ ಇರ್ತೀನಿ..." ಇದು ಅನಂತಮೂರ್ತಿಯವರು ... ಹೇಳಿದ ಕೊನೆಯ ಮಾತುಗಳು. ಅದು ಆಗಸ್ಟ್ ...ಅಥವಾ 11ನೇ ತಾರೀಖು. ಆ ವಾರ ನಮ್ಮ ಕರ್ನಾಟಕ ...ಮು ಸೌಹಾರ್ದ ವೇದಿಕೆಯ ರಾಷ್ಟ್ರೀಯ ಚಿಂತನಾ ...ನಡೆಯುವುದಿತ್ತು, ಆ ಸಭೆಯನ್ನು ಉದ್ಘಾಟಿಸಬೇಕೆಂದು ...ು ವೇದಿಕೆಯ ಪರವಾಗಿ ನಾನು ಅನಂತಮೂರ್ತಿ...ವರಿಗೆ ಫೋನ್ ಮಾಡಿದ್ದೆ. ಕೋಮುವಾದ ಮತ್ತು ...ಉದಾರವಾದಿ ಫ್ಯಾಸಿಸಂ ಅನ್ನು ಎದುರಿಸುವುದು ... ಎಂದು ಚರ್ಚೆ ಆಗಲಿದ್ದ ಕಾರ್ಯಕ್ರಮಕ್ಕೆ ...ಸ್ತಾ ಸೆಟಲ್ವಾಡ್, ಆನಂದ್ ತೇಲ್‌ತುಂಬ್ಡೆ ಸುಭಾಶ್ ...ಡೆ ತರಹದವರು ಬರುತ್ತಿದ್ದಾರೆಂದು ಹೇಳಿದಾಗ ...ಂತಮೂರ್ತಿಯವರಿಗೆ ತುಂಬ ಖುಷಿಯಾಯಿತು. ...ಸ್ತಾ ತುಂಬಾ ಗಟ್ಟಿ ಹೆಣ್ಣು, ನಾನು 'ಹಿಂದೂತ್ವ ...ವಾ ಹಿಂದ್ ಸ್ವರಾಜ್' ಎಂಬ ನೂರು ಪುಟದ ...ಕ ಬರೆದಿದ್ದೀನಿ ಕಣೆ. ಅದನ್ನು ತೀಸ್ತಾ ಬಿಡುಗಡೆ ...ಡಬೇಕು ಅನ್ನೋದು ನನ್ನ ಆಸೆ" ಎಂದರು. ...ಮ್ಮ ಪುಸ್ತಕ ಬಿಡುಗಡೆ ಮಾಡಲು ತೀಸ್ತಾ ...ಖಿತವಾಗಿಯೂ ಸಂತೋಷದಿಂದಲೇ ಒಪ್ಪುತ್ತಾರೆ. ...ವಾರ ನಿಮಗೆ ಬರೋದಕ್ಕೆ ಆಗದಿದ್ದರೆ ನಾನೇ ...ಸ್ತಾರನ್ನು ನೀವಿರುವಲ್ಲಿಗೆ ಕರೆದುಕೊಂಡು ...ತ್ತೇನೆ" ಎಂದೆ. ಆದರೆ ಆ ಶನಿವಾರ ನಾನು ...ವಾರ್ಯವಾಗಿ ಬೇರೆ ಊರಿಗೆ ಹೋಗಿದ್ದರಿಂದ ...ಸ್ತಾ ಜೊತೆಗೆ ಅನಂತಮೂರ್ತಿಯವರನ್ನು ಭೇಟಿ ...ಸಲು ಆಗಲಿಲ್ಲ. ಅದಾಗಿ ಆರು ದಿನಗಳ ನಂತರ ...ಂತಮೂರ್ತಿಯವರೇ ನಮ್ಮನ್ನೆಲ್ಲ ತಬ್ಬಲಿಗಳನ್ನಾಗಿಸಿ ...ಬಿಟುಹೋದರು.


...ಹೋದವರ್ಷ ಅವರ ಹುಟ್ಟುಹಬ್ಬದ ...ಸಂದರ್ಭದಲ್ಲಿ ಅವರ ಜೊತೆಗಿನ ನನ್ನ ಸಂಬಂಧದ ... ಬರೆದಿದ್ದರಿಂದ ಇಲ್ಲಿ ಇತ್ತೀಚಿಗಿನ ಹಲವು ...ಟಿ ಮತ್ತು ಸಂಭಾಷಣೆಗಳನ್ನು ಕುರಿತು ನೆನಪು ...ಡಿಕೊಳ್ಳುತ್ತೇನೆ. ಕೆಲತಿಂಗಳ ಹಿಂದೆ ಎಂ.ಎಂ. ...ಬುರ್ಗಿಯವರು ಅನಂತಮೂರ್ತಿ ಚಿಕ್ಕವರಾಗಿದ್ದಾಗ ...ವರ ಮೂರ್ತಿಯ ಮೇಲೆ ಮೂತ್ರ ವಿಸರ್ಜಿಸಿದ್ದರು ...ದು ಹೇಳಿದ್ದು ವಿವಾದವಾಗಿತ್ತು, ಆ ವಿವಾದದಿಂದ ...ಬಾ ನೊಂದಿದ್ದ ಅನಂತಮೂರ್ತಿ ಒಂದು ದಿನ ನನಗೆ ...ಫೋನ್ ಮಾಡಿ "ಚಿಕ್ಕವನಾಗಿದ್ದಾಗ ನನ್ನನ್ನು ಮೀರಿದ ...ಶಕ್ತಿಗಳು ಇವೆಯೇ ಎಂದು ಪರೀಕ್ಷಿಸಲು ನಾನು ...ದ ಕಲ್ಲುಗಳ ಮೇಲೆ ಮೂತ್ರ ವಿಸರ್ಜಿಸಿದ್ದೆ. ಆಮೇಲೆ ...ಬಾ ಹೆದರಿಕೊಂಡಿದ್ದೆ. ಈಗ ಅದನ್ನೇ 'ದೇವರ ...ಮೂರ್ತಿಯ ಮೇಲೆ ಮೂತ್ರ ವಿಸರ್ಜಿಸಿ' ಎಂದು ...ಂತಮೂರ್ತಿ ಹೇಳುತ್ತಾನೆ ಎಂಬಂತೆ ಬಣ್ಣಿಸುತ್ತಿದ್ದಾರೆ" ...ದು ವಿಷಾದ ವ್ಯಕ್ತಪಡಿಸಿದ್ದರು.

"ನಿಮ್ಮನ್ನು ವಿರೋಧಿಸುತ್ತಿರುವವರ ಬುದ್ಧಿಮಟ್ಟವೇ ...ತಹದ್ದು. ನೀವು ಬೇಜಾರು ಮಾಡಿಕೊಳ್ಳಬೇಡಿ. ಅಪ್ಪ ...ರ ತನ್ನ ಆತ್ಮಕತೆಯಲ್ಲಿ ಒಂದು ಪ್ರಸಂಗ ಕುರಿತು ...ದಿದ್ದಾರೆ. ಆಗ ಊರಿಗೆ ಪ್ಲೇಗ್, ಕಾಲರಾ ಇತ್ಯಾದಿಗಳು ...ದಾಗ ಊರಿನವರು ಚಿಕ್ಕ ರಥ ಮಾಡಿ, ಅದರಲ್ಲಿ ...ರಮ್ಮನ ಗೊಂಬೆ ಕೂರಿಸಿ, ಪೂಜೆ ಮಾಡುತ್ತಿದ್ದರಂತೆ.



...ಮೇಲೆ ಆ ರಥವನ್ನು ಊರಿನ ಹೊರಗೆ ಬಿಡುತ್ತಿದ್ದರಂತೆ. ...ಲ್ಲಿ ಅಪ್ಪ ಮತ್ತು ಅವರ ಇಬ್ಬರು ಸ್ನೇಹಿತರು ರಥದಲ್ಲಿದ್ದ ...ರಮ್ಮನ ಗೊಂಬೆಗೆ ಯಾರು ಸರಿಯಾಗಿ ಗುರಿಯಿಟ್ಟು ...ಲ್ಲಿ ಹೊಡೆಯುತ್ತಾರೆ ಎಂದು ಪಣ ತೊಟ್ಟರಂತೆ. ಆಗ ... ಹೊಡೆದ ಕಲ್ಲು ರಥಕ್ಕೆ ಮಾತ್ರ ತಗುಲಿದರೆ, ಇನ್ನಿಬ್ಬರ ...ಗಳು ಮಾರಮ್ಮನಿಗೆ ತಾಕಿ ಅದು ನೆಲಕ್ಕೆ ಉರುಳಿತಂತೆ. ...ದ ಕೆಲವೇ ದಿನಗಳಲ್ಲಿ ಅಪ್ಪನ ಸ್ನೇಹಿತರಿಬ್ಬರೂ ಪ್ಲೇಗಿಗೆ ...ಗ್ರಿ ಸತ್ತರಂತೆ. ಆದರೆ ಅಪ್ಪನಿಗೆ ಪ್ಲೇಗ್ ತಾಕಿದರೂ ಸಾಯದೆ ಬದುಕಿದರು. ಇದನ್ನು ಓದಿದ ಯಾರಾದರೂ 'ಲಂಕೇಶರು ದೇವರ ಮೂರ್ತಿಗಳಿಗೆ ಕಲ್ಲು ಬೀಸಿರಿ ಎಂದಿದ್ದರು' ಅಂತ ಹೇಳಿದರೆ ಅದು ಹಾಸ್ಯಾಸ್ಪದವಾಗುವುದಿಲ್ಲವೆ?" ಎಂದೆ.

"ಹೌದಲ್ಲವೇನೇ? ನೋಡು ನಾನು ಆ ಪ್ರಸಂಗವನ್ನು ಓದಿದ್ದನ್ನು ಮರೆತಿದ್ದೆ ಥ್ಯಾಂಕ್ಸ್ ಕಣೆ ಅದನ್ನು ನೆನಪಿಸಿಕೊಂಡು ನನಗೆ ಹೇಳಿದ್ದಕ್ಕೆ" ಎಂದರು. "ಮುಂದಿನ ವಾರ ಮನೆಗೆ ಬಾ, ಮಾತಾಡೋಣ" ಎಂದು ಕರೆದಿದ್ದರು. ಆದರೆ ಅದೇ ವಾರ ನಮ್ಮ ಜಿ.ರಾಜಶೇಖರ್ ಮತ್ತು ರಂಜಾನ್ ದರ್ಗಾ




ಅವರಿಬ್ಬರೂ ಮೂರ್ತಿ ಮೇಲೆ ಮೂತ್ರ ವಿಸರ್ಜನೆ ಕುರಿತು ಲೇಖನಗಳನ್ನು ಬರೆದು ಕಳುಹಿಸಿದರು. ಅವರೆಡನ್ನೂ ಅಕ್ಕಪಕ್ಕದ ಪುಟಗಳಲ್ಲಿ ಪ್ರಕಟಿಸುವ ಮೂಲಕ ಅನಂತಮೂರ್ತಿಯವರಿಗೆ ಪತ್ರಿಕೆ ತನ್ನ ಬೆಂಬಲವನ್ನು ತೋರಿಸಿತ್ತು. ಆ ಲೇಖನಗಳನ್ನು ಓದಿದ ನಂತರ ಅನಂತಮೂರ್ತಿಯವರ ನೋವು ಒಂದಿಷ್ಟು ಕಡಿಮೆ ಆಯಿತು ಎಂದು ನನಗೆ ಅನ್ನಿಸುತ್ತದೆ. ಅವರು ನನಗೆ ಫೋನ್ ಮಾಡಿ ತಮ್ಮ ಪರ ನಿಂತದ್ದಕ್ಕೆ ಮತ್ತೊಮ್ಮೆ ಥ್ಯಾಂಕ್ಸ್ ಅಂದರು. ಆಗ ನಾನು "ನೀವು ಥ್ಯಾಂಕ್ಸ್ ಹೇಳಕೂಡದು. ಇದು ನಮ್ಮ ಕರ್ತವ್ಯ" ಎಂದಿದ್ದೆ.

ಇದಾದ ಸ್ವಲ್ಪ ದಿನಗಳಲ್ಲೇ ಕಲಬುರ್ಗಿಯವರಿಂದಾಗಿ ಅನಂತಮೂರ್ತಿಯವರ ಸುತ್ತ ಮತ್ತೊಂದು ವಿವಾದ ಶುರುವಾಯಿತು. ಅದು ಬಸವಶ್ರೀ ಪ್ರಶಸ್ತಿಗೆ ಸಂಬಂಧಿಸಿದ್ದು. ಅನಂತಮೂರ್ತಿಯವರು ಮತ್ತೊಮ್ಮೆ ನನಗೆ ಫೋನ್ ಮಾಡಿ ತಮ್ಮ ನೋವನ್ನು ತೋಡಿಕೊಂಡಿದ್ದರು. "ನೋಡೆ, ನಾನು ಸಂಪ್ರದಾಯಸ್ಥ ಕುಟುಂಬದಿಂದ ಬಂದವನು. ಆಮೇಲೆ ಆಧುನಿಕ ಜಗತ್ತಿನೊಂದಿಗೆ ವ್ಯವಹರಿಸಿದವನು. ನನ್ನಿಂದ 'ದೇವರು ಇಲ್ಲ' ಎಂದು ಹೇಳಲಾಗುವುದಿಲ್ಲ. ಈಗಲೂ ಅವನು ಇದ್ದಾನೋ, ಇಲ್ಲವೋ ಎಂಬ ಜಿಜ್ಞಾಸೆಯಲ್ಲಿರುವವನು ನಾನು. ನನ್ನ ಜಾತಿಯ ನಂಬಿಕೆ ಮತ್ತು ಆಚಾರಗಳನ್ನು ವಿಮರ್ಶಿಸುತ್ತಲೇ ಬಂದಿರುವ ನಾನು ಅದನ್ನು ದಾಟಿ ಮತ್ತೊಂದು ಸತ್ಯವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿರುವವನು. ಬಸವ ನನ್ನನ್ನು ತುಂಬಾ ಕಾಡುತ್ತಿದ್ದಾನೆ. ಅವನೂ ನನ್ನಂತೆಯೇ ವಿಮರ್ಶೆಗೆ, ಟೀಕೆಗೆ ಗುರಿಯಾದವನು. ಮೊದಲು ಅವನು ತನ್ನ ತತ್ತ್ವವನ್ನು ಹರಡಲಾರಂಭಿಸಿದಾಗ ಅವನಿಗೆ ಬೆಂಬಲ ಸಿಕ್ಕಿತು. ಆಮೇಲೆ ಅವನನ್ನು ಒಂದು ಚಿಂತೆ ಕಾಡಲಾರಂಭಿಸಿತು. ತನ್ನ ಜೊತೆ ಇರುವವರೆಲ್ಲ ನಿಜವಾಗಲೂ ತನ್ನ ತತ್ವಗಳನ್ನು ನಂಬಿರುವವರೋ ಅಥವಾ ಸುಖಾಸುಮ್ಮನೆ ಅನುಭವ ಮಂಟಪಕ್ಕೆ ಬಂದಿರುವವರೋ ಎಂಬ ಜಿಜ್ಞಾಸೆ ಅವನನ್ನು ಕಾಡಲಾರಂಭಿಸಿತು. ಕೊನೆಗೆ ಅದೆಲ್ಲ ಯಾವ ಮಟ್ಟಕ್ಕೆ ಹೋಯಿತೆಂದರೆ ಬಸವ ತನ್ನ ಪ್ರಾಣವನ್ನೇ ಅರ್ಪಿಸಬೇಕಾಯಿತು. ಇತ್ತೀಚಿಗೆ ನನ್ನನ್ನು ಅಪಾರವಾಗಿ ಕಾಡುತ್ತಿರುವವನು ಬುದ್ಧ. ನನಗೆ ಇನ್ನೊಂದಿಷ್ಟು ದಿನಗಳ ಕಾಲ ಬದುಕಲು ಅವಕಾಶ ಸಿಕ್ಕರೆ ನಾನು ಬುದ್ಧನ ಹತ್ತಿರ ಹೋಗಬೇಕೆಂದಿದ್ದೇನೆ" ಎಂದು ತಮ್ಮನ್ನು ಕಾಡುತ್ತಿದ್ದ ಪ್ರಶ್ನೆಗಳನ್ನು, ತಮ್ಮ ಆಶೆಗಳನ್ನು ನನ್ನೊಂದಿಗೆ ಹಂಚಿಕೊಂಡಿದ್ದರು.

ಅವತ್ತು ಅವರ ದನಿ ನಡುಗುತ್ತಿತ್ತು. ಅದನ್ನು ಕೇಳಿ 'ಅನಂತಮೂರ್ತಿಯವರು ಇನ್ನು ಹೆಚ್ಚು ಕಾಲ ನಮ್ಮೊಂದಿಗಿರಲ್ಲ' ಎಂದೆನಿಸಿ ಆತಂಕ ನನ್ನನ್ನು ಆವರಿಸಿತ್ತು.

ಬಸವಶ್ರೀ ಪ್ರಶಸ್ತಿಯನ್ನು ಸ್ವೀಕರಿಸುವ ಮೂಲಕ ತಾನು ಯಾವ ತಪ್ಪನ್ನೂ ಮಾಡಿಲ್ಲ ಎಂದ ಅನಂತಮೂರ್ತಿಯವರು "ನನ್ನ ಚಿಕಿತ್ಸೆಗೇ ಪ್ರತಿತಿಂಗಳು ಎಂಭತ್ತು ಸಾವಿರ ರೂಪಾಯಿ ತಗಲುತ್ತಿದೆ. ಅಷ್ಟೊಂದು ದುಡ್ಡನ್ನು ನಾನೆಲ್ಲಿಂದ ತರಲಿ. ಈ ಪ್ರಶಸ್ತಿಯ ಹಣದಿಂದ ನಾನು ನನ್ನ ಚಿಕಿತ್ಸೆಯನ್ನು ಮುಂದುವರಿಸಬಹುದು. ನಾನು ಎಂತಹ ಪರಿಸ್ಥಿತಿಯಲ್ಲಿದ್ದೇನೆ ಎಂದರೆ ಇವತ್ತು ಚಿಕಿತ್ಸೆ ಪಡೆದರೆ ನಾನು ನಾಳೆ ಬದುಕಿರುತ್ತೇನೆ. ಇವತ್ತು ಪಡೆಯಲಿಲ್ಲ ಎಂದರೆ ನಾನು ನಾಳೆ ಇರುವುದಿಲ್ಲ" ಎಂದು ಅವರು ಹೇಳಿದಾಗ ನನಗೇ 'ಅಯ್ಯೋ' ಅನ್ನಿಸಿತ್ತು.

ಅನಂತಮೂರ್ತಿಯವರ ಜೊತೆ ಆಗೀಗ ಫೋನ್‌ನಲ್ಲಿ ಮಾತನಾಡುತ್ತಿದ್ದರೂ ನಾನು ಕೊನೆಯ ಬಾರಿಗೆ ಅವರನ್ನು ಭೇಟಿ ಆಗಿದ್ದು ಸುಮಾರು ಎರಡು ತಿಂಗಳ ಹಿಂದೆ. ಅವತ್ತು ಮಿತ್ರ ಚಂದನ್ ಗೌಡನ ಜೊತೆ ಅನಂತಮೂರ್ತಿಯವರ ಮನೆ 'ಸುರಗಿ'ಗೆ ಹೋಗಿದ್ದೆ. ಅವತ್ತು ಅವರು ಬಿಡುವಾಗಿರುತ್ತಾರೆಂದೂ, ಒಂದೆರೆಡು ಗಂಟೆ ಅವರೊಂದಿಗೆ ಚರ್ಚಿಸಬಹುದೆಂದೂ ನಾನು ಮತ್ತು ಚಂದನ್ ಆಶಿಸಿದ್ದೆವು. ಆದರೆ ಅವತ್ತು ಚಂದ್ರಿಕಾ ಅವರು ತಮ್ಮ ಕ್ಯಾಮೆರಾ ತಂಡದೊಂದಿಗೆ ಬಂದು



ಅನಂತಮೂರ್ತಿಯವರನ್ನು ಸಂದರ್ಶಿಸುತ್ತಿದ್ದರು. ಹಾಗೆಯೇ ಅವತ್ತು ಅವರ ಮನೆಗೆ ರೇಣುಕಾ ನಿಡಗುಂದಿ ಮತ್ತು ಭಾರತಿ ಅವರು ಕೂಡ ಬಂದಿದ್ದರು. ಶೂಟಿಂಗ್ ಮಧ್ಯೆ ಸಮಯ ಸಿಕ್ಕಾಗಲೆಲ್ಲ ಅನಂತಮೂರ್ತಿಯವರು ನಮ್ಮನ್ನೆಲ್ಲ ಮಾತನಾಡಿಸುತ್ತಿದ್ದರು. (ಅವತ್ತು ನಾನು ಅವರ ಮುಂದೆ ಕೂತಿದ್ದ ಫೋಟೊ ತೆಗೆದದ್ದು ಭಾರತಿಯವರು) ಎಂದಿನಂತೆ ಅನಂತಮೂರ್ತಿಯವರು ಎಲ್ಲರನ್ನು ಪ್ರೀತಿಯಿಂದ ಮಾತನಾಡಿಸುತ್ತಿದ್ದರೂ ಅವರ ದೇಹ ದಣಿದಿತ್ತು. ಕೂತಿದ್ದರೆ ಸುಲಭವಾಗಿ ಅವರಿಂದ ಎದ್ದು ನಿಲ್ಲಲಾಗುತ್ತಿರಲಿಲ್ಲ, ನಿಂತಿದ್ದರೆ ಕೂರುವುದು ಕಷ್ಟವಾಗುತ್ತಿತ್ತು. ನಿಂತಾಗ ಅವರ ದೇಹ ಸಣ್ಣದಾಗಿ ನಡುಗುತ್ತಿತ್ತು.

ಹೀಗೆ ಅವರು ಕ್ಯಾಮೆರಾ ಮುಂದೆ ಬ್ಯುಸಿ ಇದ್ದಾಗ ನಾವೆಲ್ಲ ಹರಟುವುದು, ಅವರಿಗೆ ಒಂದಿಷ್ಟು ಬಿಡುವಾದಾಗ ಅವರೊಂದಿಗೆ ಒಂದಿಷ್ಟು ಚರ್ಚಿಸುವುದು ಮಧ್ಯಾಹ್ನದ ತನಕ ಸಾಗಿತು. ಆದರೆ ಅವತ್ತು ಅವರೊಂದಿಗೆ ಕೂತು ಯಾವುದರ ಬಗ್ಗೆಯೂ ದೀರ್ಘವಾಗಿ ಚರ್ಚಿಸುವುದು ಸಾಧ್ಯವಿರಲಿಲ್ಲ. ಇತರರು ಹೊರಡುವ ಹೊತ್ತಿಗೆ ಅನಂತಮೂರ್ತಿಯವರಿಗೆ ಔಷಧಿ ತೆಗೆದುಕೊಳ್ಳುವ ಮತ್ತು ಊಟ ಮಾಡುವ ಸಮಯವಾಯಿತು. ಅವರು ಊಟ ಮಾಡುತ್ತಿದ್ದಾಗ ನಾನು ಮತ್ತು ಚಂದನ್ ಒಂದಿಷ್ಟು ಹೊತ್ತು ಅವರೊಂದಿಗೆ ಅಂಬೇಡ್ಕರ್ ಅವರ 'ಜಾತಿವಿನಾಶ' ಲೇಖನಕ್ಕೆ ಅರುಂಧತಿ ರಾಯ್ ಬರೆದಿರುವ ಮುನ್ನುಡಿಯ ಬಗ್ಗೆ ಚರ್ಚಿಸಿದೆವು. ಅದು ಅವರು ವಿಶ್ರಾಂತಿ ಪಡೆಯುವ ಸಮಯವಾದ್ದರಿಂದ ನಾವಿಬ್ಬರು ಹೊರಟೆವು. ಆಗಲೂ ಅನಂತಮೂರ್ತಿಯವರು ಮತ್ತೊಮ್ಮೆ ಅಪ್ಪನೊಂದಿಗೆ ಜೀವನ ಕುರಿತು ಅಮ್ಮ ಬರೆದಿರುವ ಪುಸ್ತಕವನ್ನು ನೆನೆಪಿಸಿಕೊಂಡು "ತುಂಬಾ ಚೆನ್ನಾಗಿ ಬರೆದಿದ್ದಾರೆ ಕಣೆ. ನಿನ್ನ ಅಮ್ಮ ಲಂಕೇಶನನ್ನು ಮತ್ತೆ ನನಗೆ ತುಂದುಕೊಟ್ಟರು" ಎಂದು ಹೇಳಿದರು.

ಆದಷ್ಟು ಬೇಗ ಮತ್ತೊಮ್ಮೆ ಅವರ ಮನೆಗೆ ಬರುವುದಾಗಿ ಹೇಳಿ ಹೊರಟೆ. ಆದರೆ ಅದೇ ಅವರೊಂದಿಗಿನ ಕೊನೇ ಭೇಟಿ ಆಯಿತು.

ಎಲ್ಲ ರೀತಿಯಲ್ಲೂ ಅನಂತಮೂರ್ತಿಯವರು ನನಗಿಂತ ತುಂಬಾ ಹಿರಿಯರು. ಆದರೆ ಕಳೆದ ಎರಡು ವರ್ಷಗಳಲ್ಲಿ ಅವರು ಕೋಮುವಾದ ವಿರುದ್ಧದ ನಮ್ಮೆಲ್ಲರ ಹೋರಾಟದಲ್ಲಿ ನಮ್ಮಷ್ಟೇ ಆಸಕ್ತಿಯೊಂದಿಗೆ ಭಾಗಿಯಾಗಿದ್ದರು, ಮಾರ್ಗದರ್ಶಿಗಳಾಗಿದ್ದರು, ಮುಂದಾಳತ್ವವನ್ನು ವಹಿಸಿಕೊಂಡಿದ್ದರು.

ಅವರು ಇನ್ನಿಲ್ಲ ಎಂದು ಗೊತ್ತಾದಾಗ ನನ್ನನ್ನು ತೀವ್ರವಾಗಿ ಕಾಡಿದ್ದು ಒಬ್ಬ ಸಹಹೋರಾಟಗಾರನನ್ನು ಕಳೆದುಕೊಂಡ ನೋವು.


ನಾವು ಎಂತಹ ಕೆಟ್ಟ ಕಾಲದಲ್ಲಿ ಎಂತಹ ನೀಚ ಮನುಷ್ಯರ ನಡುವೆ ಬದುಕುತ್ತಿದ್ದೇವೆ ಎಂದರೆ ಅನಂತಮೂರ್ತಿಯವರು ಇನ್ನಷ್ಟು ಕಾಲ ನಮ್ಮೊಂದಿಗಿದ್ದು ನಮ್ಮ ದನಿಯಾಗುವ ಅಗತ್ಯತೆ ಇತ್ತು.

ಮೊನ್ನೆ ದೇವನೂರು ಮಹಾದೇವ ಅವರಿಗೆ ಫೋನ್ ಮಾಡಿದಾಗ ಅವರು ಅಂದದ್ದು ತುಂಬಾ ಸೂಕ್ತ ಅನ್ನಿಸಿತು. ಅವರು ಹೀಗೆಂದರು: "ಲಂಕೇಶ್ ಹೋದಾಗಲೂ ಅವರು ಇನ್ನಿಲ್ಲ ಎಂದು ಅರಗಿಸಿಕೊಳ್ಳಲು ನನಗೆ ಹಲವು ದಿನಗಳೇ ಬೇಕಾಯಿತು. ಈಗಲೂ ಅದೇ ಪರಿಸ್ಥಿತಿಯಲ್ಲಿದ್ದೇನೆ. ಅನಂತಮೂರ್ತಿ ಗಟ್ಟಿಯಾಗಿ ಮಾತನಾಡುತ್ತಿದ್ದರು. ಅಂತಹವರು ಹೋದಾಗ ಎಲ್ಲವೂ ಮೌನವಾದಂತೆ ಭಾಸವಾಗುತ್ತದೆ. ಶೂನ್ಯ ಆವರಿಸಿದಂತಾಗುತ್ತದೆ."

ಅಂತಹ ಶೂನ್ಯ ಈಗ ಕನ್ನಡ ಲೋಕವನ್ನು ಆವರಿಸಿದೆ... ●

ಗೆಳೆಯರೊಬ್ಬರನ್ನು ನೋಡಿದ್ದು


ಮೊನ್ನೆ ಹದಿನೈದನೆ ತಾರೀಖು ಬುಧವಾರ ಡಾ. ಯು.ಆರ್. ಅನಂತಮೂರ್ತಿಯವರನ್ನು ಅವರ ಮನೆಯಲ್ಲಿ ನೋಡಲು ಹೊರಟೆ. ನನ್ನ ಜೊತೆಗೆ ಮಹಾಬಲಮೂರ್ತಿ ಇದ್ದ. ಈ ಮನೆಯನ್ನು ನಾನು ಮುಂಚೆ ನೋಡಿರಲಿಲ್ಲ. ಅನಂತಮೂರ್ತಿಯವರಿಗೆ ದಿಲ್ಲಿಯಲ್ಲಿ ಕಾಯಿಲೆ ಉಲ್ಬಣಿಸಿದಾಗ ನಮಗೆಲ್ಲ ಆತಂಕವಾಯಿತು. ರಕ್ತನಾಳದ ಆಪರೇಷನ್ ಮಾಡಲು ಹಂಗಾಮಿಯಾಗಿ ನಿಲ್ಲಿಸಿದ ಮೂತ್ರಪಿಂಡ ಕೂಡಲೆ ಚೇತರಿಕೆ ಪಡೆಯಲಿಲ್ಲವಂತೆ. ಬೆಂಗಳೂರಲ್ಲೇ ಇದ್ದಿದ್ದರೆ ಹೋಗಿ ನೋಡಬಹುದಿತ್ತು. ಆದರೆ ಇದು ಆದದ್ದು ದಿಲ್ಲಿಯಲ್ಲಿ, ಹೇಗೆ ಸಂಪರ್ಕಿಸುವುದು, ಹಾಗೆ ತೊಂದರೆ ಕೊಡುವುದು ಒಳ್ಳೆಯದೋ ಕೆಟ್ಟದೋ ಏನೂ ಗೊತ್ತಿಲ್ಲದೆ ನಾನು ಸುಮ್ಮನಾಗಿದ್ದೆ. ಇದೆಲ್ಲ ಕಾಳಜಿ ಕೃತಕ, ನಾಟಕೀಯ ಎಂದು ನಿಮಗೆ ಅನ್ನಿಸಬಹುದು. ಅನಂತಮೂರ್ತಿಯವರಿಗೆ ಏನೆನ್ನಿಸುತ್ತದೋ ಗೊತ್ತಿಲ್ಲ; ನನಗಂತೂ ಇದು ತುಂಬ ಗಂಭೀರ ವಿಷಯ. ನಾವೆಲ್ಲ ಒಟ್ಟಿಗೇ ಬೆಳೆದವರು. ಗೆಳೆತನ, ಅಸೂಯೆ, ಸಿಟ್ಟು, ನೋವು, ಸಹಕಾರ ಎಲ್ಲವನ್ನೂ ಇಟ್ಟುಕೊಂಡು ಬೆಳೆದವರು. ನಾವು ಆದರ್ಶ ಸ್ನೇಹಿತರು ಎಂಬ ಹೆಮ್ಮೆ ನಮಗಿಲ್ಲ; ಆದರೆ ಒಟ್ಟಾಗಿಯೇ ಜೀವಂತವಾಗಿದ್ದೆವು ಎಂಬ ನಂಬಿಕೆ ನಮಗಿದೆ. ಅವರನ್ನು ಕಂಡರಾಗದವರು ನನ್ನ ಹತ್ತಿರ ಅವರನ್ನು ಬೈಯುವುದು, ನನ್ನನ್ನು ಕಂಡರಾಗದವರು ಅವರ ಹತ್ತಿರ ನನ್ನನ್ನು ಖಂಡಿಸುವುದು ಎಲ್ಲ ಆಗಿದೆ. ಆದರೆ ಅನೇಕ ಸಲ ನಾನು ಹೇಳಿದ್ದೇನೆ: 'ಆದರೆ ಇಷ್ಟಾಗಿಯೂ ಅನಂತಮೂರ್ತಿ ಒಳ್ಳೆಯ ಲೇಖಕರು, ನಮಗೆಲ್ಲ ಉಪಯುಕ್ತರಾಗಿದ್ದ ವಿಮರ್ಶಕರು. ಕಾದಂಬರಿಕಾರರು. ಎಲ್ಲ ಬ್ರಾಹ್ಮಣರ ಶೈಲಿಯಂತೆ ಇವರ ಶೈಲಿಯೂ ಸ್ವಲ್ಪ ಭಾರವಾಗಿದೆ; ಎಲ್ಲ ಪಂಡಿತರಂತೆ ಜನಸಾಮಾನ್ಯರ ಮಾತನ್ನು ಕೇಳಿಸಿಕೊಳ್ಳದ ಪರಿಣಾಮವಾಗಿ ಅಸೂಕ್ಷ್ಮವಾಗಿದೆ. ಇದು ನಾವು ದಾಸರ ಪದಗಳು, ವಚನಗಳು ಮುಂತಾದವುಗಳ ಪಕ್ಕದಲ್ಲಿ ಇಟ್ಟು ನೋಡಿದರೆ ತಿಳಿಯುತ್ತೆ, ಮನುಷ್ಯರ ಭಾಷೆಯಲ್ಲಿ ಅತ್ಯಂತ ಕೋಮಲ, ಮಧುರ ಸಂಗೀತವಿದೆ. ಅದನ್ನು ಹಿಡಿದಿಡುವಲ್ಲಿ ಅನೇಕರು ಸೋಲುತ್ತಾರೆ. ಹಾಗೇ ಅನಂತಮೂರ್ತಿ, ಇದು ಮಿತಿ, ಅಷ್ಟೆ' ಅನ್ನುತ್ತೇನೆ.



ಅವತ್ತು ನಾನು ಅನಂತಮೂರ್ತಿ ಮನೆಗೆ ಹೊರಟಾಗ ಸಂಜೆಯಾಗಿತ್ತು. ಬೆಂಗಳೂರು ದಣಿವು ಅನುಭವಿಸುತ್ತಿತ್ತು. ಆಫೀಸ್, ಫ್ಯಾಕ್ಟರಿ, ಕಾಲೇಜುಗಳ ಜನ ನಿಧಾನಕ್ಕೆ ಮನೆಯ ಕಡೆ ಸಾಗತೊಡಗಿದ್ದರು.

ಒಂದೂವರೆ ಗಂಟೆ ಹುಡುಕಿದ ಮೇಲೆ ಮನೆ ಸಿಕ್ಕಿತು.

ನನಗೆ ಕುತೂಹಲವಿದ್ದುದು ಅನಂತಮೂರ್ತಿ ಬಗ್ಗೆ, ಡಾಲರ್ ಕಾಲನಿಯ ಈ ಮನೆಯ ಬಗ್ಗೆ. ಅಲ್ಲ, ಕಡುಬಡತನದಿಂದ ಬಂದ ಅನಂತಮೂರ್ತಿ ಹಣದ ಬಗ್ಗೆ ಸ್ವಲ್ಪ ಎಚ್ಚರಿಕೆ ವಹಿಸುತ್ತಾರೆ.



'ಹೇಗಿದ್ದೀರಿ?' ಅಂದೆ.

ಅವರು ಸೇಂಟ್ ಜಾನ್ಸ್‌ಗೆ ಬಂದು ನನ್ನನ್ನು ನೋಡಿದ್ದರಿಂದ ನಾನು ಈಗ ಅವರನ್ನು ನೋಡುತ್ತಿದ್ದೇನೆ ಅನ್ನಿಸಕೂಡದು. ಹಾಗೆ ಹೇಳುವುದೂ ಹುಂಬತನ. ಹಾಗೆ ಚಿಂತಿಸುವುದೂ ಮೂರ್ಖತನ.

ಏನೇನೋ ಮಾತಾಡಿದೆವು. ಅನಂತಮೂರ್ತಿ ದುರ್ಬಲರಾಗಿದ್ದರೂ ಪ್ರೀತಿಯ ಹುಮ್ಮಸ್ಸು ಕಳೆದುಕೊಂಡಿರಲಿಲ್ಲ. ಅವರ ಸೊಸೆ ಟೀ ಕೊಟ್ಟರು. ಪತ್ನಿ ಎಸ್ತರ್ ಮತ್ತು ಮಗ ಶರತ್ ಒಳಗಡೆ ಕೆಲಸ ಮಾಡುತ್ತಿದ್ದಂತಿತ್ತು. ಅವರು ಹೊರಗೇ ಬರಲಿಲ್ಲ.

ಹೊರಟಾಗ ಮಹಾಬಲಮೂರ್ತಿ 'ಅವರೂ ನಿಮ್ಮನ್ನು ನೋಡಬಹುದಿತ್ತು' ಅಂದ.

'ನನಗೇನೂ ಬೇಸರವಾಗಿಲ್ಲಪ್ಪ ಅವರ ಸಿಟ್ಟು ಸೆಡ… ಎಲ್ಲ ನನಗೆ ಅರ್ಥವಾಗುತ್ತೆ. ಅವರೆಲ್ಲ ಒಳ್ಳೆಯವ… ಅಂದೆ.

'ಆದರೂ ಅವರು ನಿಮ್ಮನ್ನು ಇಷ್ಟಪಡದವರ… ವರ್ತಿಸಿದರು ಅನ್ನಿಸಿತು.'

'ಅದಕ್ಕೆ ಕಾರಣವೂ ಇರಬಹುದು. ಅವೆಲ್ಲ ಈ… ಯಾಕೆ. ಜೀವಿಸುತ್ತಾ ಹೋಗೋಣ. ಅನಂತಮೂ… ಬದುಕಿದ್ದಾರೆ. ನಾನು ಕೂಡ. ಪ್ರತಿಯೊಂದು ದಿನ… ಮುಖ್ಯ' ಅಂದೆ.

● ಪಿ.ಎಲ…

(ಸೆಪ್ಟೆಂಬರ್ 29, 199…

ಮೌನಕ್ಕೆ ಸಂದ ಕತೆಗಾರ




ಕಳೆದವಾರ ತೀರಿಕೊಂಡ ಯು.ಆರ್. ಅನಂತಮೂರ್ತಿ ಕೇವಲ ಕತೆಗಾರರಾಗಿರಲಿಲ್ಲ. ಕವಿ, ನಾಟಕಕಾರ, ವಿಮರ್ಶಕ, ಅನುವಾದಕ, ಪರಿಸರವಾದಿ, ಸಮಾಜವಾದಿ, ಪ್ರಾಧ್ಯಾಪಕ- ಹೀಗೆ ಅವರ ಕ್ರಿಯಾಶೀಲತೆಗೆ ಹಲವು ಮುಖಗಳಿದ್ದವು. ಈ ಎಲ್ಲ ಕ್ಷೇತ್ರಗಳಲ್ಲೂ ಅವರು ಶ್ರೇಷ್ಠವಾದದ್ದನ್ನೇ ಭಾಷೆಗೆ ಕೊಟ್ಟರು. ಆದರೆ ಅನಂತಮೂರ್ತಿ ಮೂಲತಃ ಅಹುದಹುದು ಅನ್ನಿಸುವ ಹಾಗೆ ಕತೆ ಕಟ್ಟಿ ಹೇಳಬಲ್ಲ ಕತೆಗಾರ. ಅವರ ಕಾದಂಬರಿ, ಸಣ್ಣಕತೆ ಮತ್ತು ನಾಟಕಗಳು ಮಾತ್ರವಲ್ಲ ಅವರ ಕವಿತೆ ಹಾಗೂ ಪ್ರಬಂಧಗಳು ಕೂಡ ಕಥಾನಕದಂತಹ ಬರಹಗಳು. ಎಷ್ಟೇ ಗಹನವಾದ ವಿಚಾರವನ್ನೇ ಆಗಲಿ, ಒಂದು ಪ್ರಸಂಗದ ಕತೆಯನ್ನಾಗಿಸಿ, ಅದನ್ನೇ ಒಂದು ರೂಪಕವನ್ನಾಗಿಯೂ ಮಾರ್ಪಡಿಸುವ ಕೌಶಲ ಅವರಿಗೆ ಸಹಜವಾಗಿ ಸಿದ್ಧಿಸಿತ್ತು. ಅನಂತಮೂರ್ತಿ ಯವರ ದೇಹಾಂತ್ಯದ ನಂತರ ಅವರ ಕುರಿತ ತಮ್ಮ ಶ್ರದ್ಧಾಂಜಲಿ ಬರಹದಲ್ಲಿ ಶಿವ್ ವಿಶ್ವನಾಥನ್, "ಅವರ ನಿಧನ, ಕತೆಗಳ ಮಹಾಪೂರಕ್ಕೆ ಕಾರಣವಾಗಬಹುದು; ಎಲ್ಲರೂ ಅನಂತಮೂರ್ತಿ ಜೊತೆಗಿನ ತಮ್ಮ ಒಡನಾಟವನ್ನು ಕತೆ ಮಾಡಿ ಹೇಳಬಹುದು" ಎಂದು ಬರೆದರು. ಎಂತಹ ಸಾಮಾನ್ಯನ ಬದುಕನ್ನೂ ಸಹ, ಅವನ ಸಾವು, ಒಂದು ಪುರಾಣವನ್ನಾಗಿಸುತ್ತದೆ ಎಂಬ ಅರ್ಥದ ಮಾತನ್ನು ವಿಮರ್ಶಕ ವಾಲ್ಟರ್ ಬೆಂಜಮಿನ್ ಕತೆಗಳ ಕುರಿತ ತನ್ನ ಒಂದು ಪ್ರಬಂಧದಲ್ಲಿ ಹೇಳುತ್ತಾನೆ. ಅಂತಹದ್ದರಲ್ಲಿ ಅನಂತಮೂರ್ತಿ ಯಂತಹ ಅಸಾಮಾನ್ಯ ಕತೆಗಾರನ ಮರಣ ಕತೆಯಾಗುವುದರಲ್ಲಿ ಆಶ್ಚರ್ಯವಿಲ್ಲ.


ತನ್ನ ಇಳಿಗಾಲದಲ್ಲಿ ಅನಂತಮೂರ್ತಿ, ನರೇಂದ್ರ ಮೋದಿ ಬಗ್ಗೆ ಆಡಿದ ಮಾತಿನ ಕುರಿತು ಮೆಚ್ಚುಗೆಯಲ್ಲಿ ಬರೆಯುತ್ತ ಶಿವ್ ವಿಶ್ವನಾಥನ್, "ಆ ಕಾರಣಕ್ಕೆ ಗಿರಿರಾಜ ಕಿಶೋರ್ (ವಿಶ್ವ ಹಿಂದೂಪರಿಷತ್ ನೇತಾರ) ಅನಂತಮೂರ್ತಿಯನ್ನು ರೈಲು ಹತ್ತಿಸಿ ಪಾಕಿಸ್ತಾನಕ್ಕೆ ಕಳುಹಿಸಲು ಉತ್ಸುಕರಾಗಿರಬಹುದು. ಆದರೆ ಆ ರೈಲಿನಲ್ಲಿ ಅನಂತಮೂರ್ತಿಯವರ ಸಹ ಪ್ರಯಾಣಿಕನಾಗಿ ಇನ್ನೊಬ್ಬ ಮಹಾನ್ ಕತೆಗಾರ ಮಾಂಟೋ ಇರುತ್ತಾನೆ. ಅವರಿಬ್ಬರೂ ಪರಸ್ಪರ ಕತೆಗಳನ್ನು ಹಂಚಿಕೊಂಡು, ದೇಶ ವಿಭಜನೆಯ ದುರಂತವನ್ನು ಮೀರಿ ನಿಲ್ಲುವುದು ಹೇಗೆ ಎಂದು ಮಾತಾಡಿಕೊಳ್ಳಬಹುದು" ಎನ್ನುತ್ತಾರೆ. ಆ ದಿನಗಳಲ್ಲಿ ಕೊಲೆಯಾದ ಲಕ್ಷಾಂತರ (ಸುಮಾರು 10 ಲಕ್ಷ ಎಂದು ಒಂದು ಅಂದಾಜು) ಹಿಂದೂಗಳು, ಮುಸ್ಲಿಮರು ಮತ್ತು ಸಿಖ್ಖರು ಹೇಳಹೆಸರಿಲ್ಲದೆ ಸತ್ತರು. ಅವರಂತೂ ಕತೆಯಾಗುವುದು ಸಾಧ್ಯವಿರಲಿಲ್ಲ. 47ರ ನಂತರ ದೇಶದಲ್ಲಿ ಸಂಭವಿಸಿದ ಕೋಮುಹಿಂಸೆಯ ಎಲ್ಲ ಪ್ರಕರಣಗಳಲ್ಲೂ ತೀರಿಕೊಂಡವರು, ಗಾಯಾಳುಗಳು, ಅತ್ಯಾಚಾರಕ್ಕೆ ಒಳಗಾದವರು ಮತ್ತು ಮನೆಮಾರು ಕಳೆದುಕೊಂಡವರು ಯಾರೂ ಕತೆಯಾಗಲಿಲ್ಲ. ಈ ಪೈಕಿ, ಸಾವಿಗೀಡಾದವರ ಸಂಖ್ಯೆ ನಾಲ್ಕಂಕಿಯನ್ನು ಮೀರಿದ ಕೆಲವು ಪ್ರಕರಣಗಳಲ್ಲಿ- ಉದಾ: 1983ರಲ್ಲಿ ಅಸ್ಸಾಂನ ನೆಲ್ಲಿ ಹತ್ಯಾಕಾಂಡ, 1984ರಲ್ಲಿ ದೆಹಲಿಯ ಸಿಖ್ಖ್ ನರಮೇಧ, 1992-93ರ ಮುಂಬೈ ಹಿಂಸಾಚಾರ, 2002ರ ಗುಜರಾತ್ ಕಗ್ಗೊಲೆಗಳು, 2009ರಲ್ಲಿ ಒರಿಸ್ಸಾದ ಕಂಧಮಾಲ್‌ನ ಸರಣಿ ಹಿಂಸಾಕೃತ್ಯಗಳು- ಅಲ್ಪಸಂಖ್ಯಾತರಾದ ಸಿಖ್ಖರು, ಮುಸ್ಲಿಮರು ಮತ್ತು ಕ್ರೈಸ್ತರೇ ಹೆಚ್ಚಿನ ಸಂಖ್ಯೆಯಲ್ಲಿ ಬಲಿಯಾದರು. ಅವರಲ್ಲಿ ಹಲವರ ಕಳೇಬರಗಳು ಸಹ ಮೃತರ ಕುಟುಂಬದವರಿಗೆ ದೊರೆಯಲಿಲ್ಲ. ಕೋಮುಹಿಂಸೆಯ ಈ ಸಂತ್ರಸ್ತರ ಜೊತೆಗೆ 1947ರಿಂದ ಈಚೆಗೆ 'ಆರ್ಥಿಕ ಅಭಿವೃದ್ಧಿ' ಗೋಸುಗ, ತಮ್ಮ ನೆಲ, ಊರು, ಮನೆಗಳನ್ನು ಕಳೆದುಕೊಂಡು ನಿರಾಶ್ರಿತರಾದ ಬಡ ರೈತರು ಮತ್ತು ಆದಿವಾಸಿಗಳು, ಕಾಶ್ಮೀರ ಮತ್ತು ಈಶಾನ್ಯ ಭಾರತದ ಕೆಲವೆಡೆ ಪ್ರಭುತ್ವದ ಕಾರಣಗಳಿಗಾಗಿ ಸೈನಿಕರಿಂದಲೋ ಉಗ್ರರಿಂದಲೋ ಕೊಲೆಯಾಗುತ್ತಿರುವವರು, ಅತ್ಯಾಚಾರಕ್ಕೆ ಬಲಿಯಾಗುತ್ತಿರುವವರು, ನಾಪತ್ತೆಯಾದವರು- ಇವರನ್ನೂ ಸೇರಿಸಿಕೊಂಡರೆ ಯಾರ ಬಾಯಲ್ಲೂ ಕತೆಯಾಗಲಾರದ ಇಂತಹ ನತದೃಷ್ಟರ ಸಂಖ್ಯೆ ಹಲವು ದಶಲಕ್ಷಗಳನ್ನು ದಾಟುತ್ತದೆ. ಅವರ ನಿಖರವಾದ ತಲೆ ಲೆಕ್ಕ ಇಡುವುದು ಅಸಾಧ್ಯವಾಗಿರುವುದರಿಂದ, ಅದು ಯಾವಾಗಲೂ ಸೊನ್ನೆಗಳಲ್ಲಿಯೇ ಮುಗಿಯುತ್ತದೆ. ಪಾಕಿಸ್ತಾನದ ರೈಲಿನಲ್ಲಿ ಅನಂತಮೂರ್ತಿ ಮತ್ತು ಮಾಂಟೋ, ರಾಷ್ಟ್ರಪ್ರಭುತ್ವ, ಆರ್ಥಿಕ ಅಭಿವೃದ್ಧಿ ಮುಂತಾದ ಘನ ಉದ್ದೇಶಗಳಿಗಾಗಿ ಕತೆಯಾಗದೆ ಬಲಿಯಾದ ಇಂತಹ ಅನಾಮಧೇಯರ ಬಗೆಗೂ ಕತೆಗಳನ್ನು ಈಗ ಪರಸ್ಪರರಿಗೆ ಹೇಳುತ್ತಿರಬಹುದು. ಹೀಗೆ ಊಹಿಸುವುದಕ್ಕೆ ಒಂದು ಕಾರಣವಿದೆ. ಅನಂತಮೂರ್ತಿ ತನ್ನ ಕೊನೆಯ ದಿನಗಳಲ್ಲಿ ಕೋಮುವಾದದ ಜೊತೆಗೆ ರಾಷ್ಟ್ರಪ್ರಭುತ್ವ ಮತ್ತು ಆರ್ಥಿಕ ಅಭಿವೃದ್ಧಿಗಳ ಕಾರಣಕ್ಕೆ ನಡೆಯುವ ಜೀವಹಿಂಸೆಯ ಬಗ್ಗೆ ಸದಾ ಯೋಚಿಸುತ್ತಿದ್ದರು. ತನ್ನ ತೀವ್ರ ಅನಾರೋಗ್ಯದ ನಡುವೆಯೇ, ಅವರು ಅದರ ಕುರಿತು ಒಂದು ಪ್ರಬಂಧವನ್ನೂ ಬರೆದಿದ್ದರು. (ಅದು ಇನ್ನೂ ಪ್ರಕಟವಾಗಿಲ್ಲ)

ಕತೆಗಳ ಜೊತೆಗೆ ವಾಗ್ವಾದಗಳನ್ನು ಹುಟ್ಟು ಹಾಕುವುದರಲ್ಲೂ ಅನಂತಮೂರ್ತಿ ನಿಸ್ಸೀಮರು. ಹಾಗೆಂದು ವಾದಕ್ಕೋಸ್ಕರವೇ ಅವರು ಎಂದೂ ಯಾರ ಜೊತೆಗೂ ವಾದಕ್ಕೆ ನಿಂತವರಲ್ಲ. ಆದರೆ ಅವರ ನಿಲುವುಗಳೇ ಹಲವರಿಗೆ ಅಪಥ್ಯವೆನ್ನಿಸುತ್ತಿತ್ತು. ಅಂತಹವರ ಮಾತುಗಳನ್ನೂ ಅನಂತಮೂರ್ತಿ ಸಾವಧಾನದಿಂದ ಕೇಳಿಸಿಕೊಂಡು ಸೂಕ್ತ ಉತ್ತರ ನೀಡುವ ಸೌಜನ್ಯವನ್ನು ಕೊನೆಯವರೆಗೂ ಉಳಿಸಿಕೊಂಡಿದ್ದರು. ಆದಾಗ್ಯೂ ಅವರನ್ನು ಹಲ್ಲು ಕಚ್ಚಿ ವಿರೋಧಿಸುವ ಎದುರಾಳಿಗಳಿದ್ದರು. ತನ್ನ ಬದುಕಿನುದ್ದಕ್ಕೂ ಹಲವು ಬಾರಿ ವಾದ-ವಿವಾದಗಳಿಗೆ ಕಾರಣಪುರುಷರಾಗಿದ್ದ ಅವರ ಮರಣಾನಂತರ ಉತ್ತರ ಕ್ರಿಯೆಯ ವಿಧಿವಿಧಾನ ಕೂಡ ವಾದಗ್ರಸ್ತವಾಯಿತು. ಆ ಬಗ್ಗೆ ಸ್ವತಃ ಅನಂತಮೂರ್ತಿಯವರನ್ನೇ ಪ್ರಶ್ನಿಸಿದ್ದರೆ, ಅವರು ಹೇಗೆ ಉತ್ತರಿಸುತ್ತಿದ್ದರೋ ತಿಳಿಯದು. ಇಂತಹ ಆಚರಣೆಗಳ ಕುರಿತು ಅವರದ್ದು ಸದಾ ಡೋಲಾಯಮಾನ ಮನಸ್ಸು. ದೇವರ ಮಾತಿಗೆ ಬಂದರೆ ಅನಂತಮೂರ್ತಿಯವರದ್ದು "ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ" ಎಂಬ ಬಗೆಯ 'ಸಂಶಯ ಭಕ್ತಿ'. (ಹೆಚ್ಚುಕಡಿಮೆ ಇದೇ ವಸ್ತುವಿನ ಕುರಿತ ಎ.ಕೆ. ರಾಮಾನುಜನ್ ಅವರ ಅತ್ಯುತ್ತಮ ಕವಿತೆಯೊಂದರ ಶೀರ್ಷಿಕೆ ಇದು.) ಆದರೆ ಒಂದು ಮಾತನ್ನಂತೂ ಇಲ್ಲಿ ಕಾಣಿಸಲೇಬೇಕು. ಅನಂತಮೂರ್ತಿಯವರ ಅಂತಿಮ ಕ್ರಿಯೆಗಳು ನಡೆದ ವಿಧಾನದ ಬಗ್ಗೆ ಪರ, ವಿರೋಧ- ಎರಡು ವಾದಗಳಿಗೂ ಸ್ವತಃ ಅವರೇ ತನ್ನ ಬರವಣಿಗೆಯಲ್ಲಿ ಸಾಕಷ್ಟು ಆಧಾರ, ವಿವರಣೆ ಮತ್ತು ಸಮರ್ಥನೆಗಳನ್ನು ಬಿಟ್ಟುಹೋಗಿದ್ದಾರೆ. ಅತ್ಯುತ್ತಮ ಸಾಹಿತ್ಯ ಕೃತಿಯೊಂದು ತನ್ನ ವಿಮರ್ಶೆಯ ಮಾನದಂಡಗಳನ್ನು ತಾನೇ ರೂಪಿಸುವಂತೆ ಅನಂತಮೂರ್ತಿ ಯವರ ನಿಲುವುಗಳನ್ನು ವಿಶ್ಲೇಷಿಸಲು ಅವರೇ ರೂಪಿಸಿದ ತಾತ್ವಿಕ ಪ್ರಣಾಲಿಗಳಿವೆ. ತನ್ನ ಬರವಣಿಗೆಯಿಂದ, ಅದರಲ್ಲೂ ಮುಖ್ಯವಾಗಿ 'ಸಂಸ್ಕಾರ' ಕಾದಂಬರಿಯಿಂದ, ಕರ್ನಾಟಕದ ಬ್ರಾಹ್ಮಣರನ್ನು ರೊಚ್ಚಿಗೆಬ್ಬಿಸಿದ ಅನಂತಮೂರ್ತಿ ನಂತರ ಬ್ರಾಹ್ಮಣವಾದಿ ಎಂದೂ ಕರೆಸಿಕೊಂಡರು. ನರೇ… ಮೋದಿಯನ್ನು ಕಟುವಾಗಿ ಟೀಕಿಸುವ ಅನಂತಮೂ… ವಾಜಪೇಯಿ ಮತ್ತು ಅದ್ವಾನಿಗಳಲ್ಲಿ ಅದು ಯಾವ ಒಳ್ಳೆ… ಗುಣ 'ಕಂಡು' ಹೊಗಳುತ್ತಿದ್ದರೋ ಎಂ… ವಿಸ್ಮಯವಾಗುತ್ತಿತ್ತು. ಹಿಂದುತ್ವವಾದಿಗಳ ಹಿಂಸೆಯ… ಪ್ರತಿಭಟಿಸುತ್ತಲೇ ಅವರು ವಿಶ್ವಹಿಂದೂ ಪರಿಷ… ರೂವಾರಿಗಳಲ್ಲಿ ಒಬ್ಬರಾದ ಪೇಜಾವರ ಶ್ರೀಗಳನ್ನು 'ಬ… ಎಂದು ಗೌರವಪೂರ್ವಕ ಸಂಬೋಧಿಸಿ ವಿನಯದಿ… ನಡೆದುಕೊಳ್ಳುತ್ತಿದ್ದುದಂತೂ ನನ್ನನ್ನೂ ಒಳಗೊಂಡು ಅ… ಅನೇಕ ಅಭಿಮಾನಿಗಳಿಗೆ ಕಸಿವಿಸಿ ಉಂಟುಮಾಡಿತ್ತು. ಅ… ನಾಡುನುಡಿಗಳಿಗೆ ಅವರ ಕೊಡುಗೆಯ ಅಗಾಧತೆಯ… ಗಮನಿಸಿದರೆ ಅವರ ವ್ಯಕ್ತಿತ್ವದ ಈ ವಿರೋಧಾಭಾಸ… ಗೌಣವೆಂದೂ ಅನ್ನಿಸುತ್ತದೆ.

ಅನಂತಮೂರ್ತಿಯವರನ್ನು ಬ್ರಾಹ್ಮಣವಾದಿ ಎ… ಕರೆಯುವವರು ಕರ್ನಾಟಕದಲ್ಲಿ ಜಾತಿವ್ಯವಸ್ಥೆ… ಅಮಾನುಷತೆಯ ವಿರುದ್ಧ ನೈತಿಕ ಆಕ್ರೋಶ ವ… ಸೈದ್ಧಾಂತಿಕ ಸಿದ್ಧತೆ ಎರಡನ್ನೂ ಜೊತೆಯಾಗಿಸಿಕೊಂ… ಪ್ರತಿಭಟಿಸಿದ ಮೊದಲಿಗರಲ್ಲಿ ಅನಂತಮೂರ್ತಿ ಒ… ಎನ್ನುವುದನ್ನು ಮರೆಯುತ್ತಾರೆ. ತನ್ನ ಬರವಣಿಗೆಯಲ್ಲಿ ಅ… ಬ್ರಾಹ್ಮಣ ಮತ್ತು ಶೂದ್ರರ ನಡುವಿನ ತಾರತಮ್ಯವ… ಶೋಧಿಸಲಿಲ್ಲ. ಈ ತಾರತಮ್ಯದ ವ್ಯವಸ್ಥೆ ಒಂದು ನ… ವಿಶ್ವವನ್ನೇ ಸೃಷ್ಟಿಸಿಕೊಂಡಿದ್ದು ಬ್ರಾಹ್ಮಣ-ಶೂದ್ರ … ಭೇದದ ಜೊತೆಗೆ ಅದಕ್ಕೆ ಪೂರಕವಾಗಿ ಮಡಿ-ಮೈ… ಒಳಗು-ಹೊರಗು, ಉಚ್ಚ-ನೀಚ, ಸಕಲೆಂಟು ಜಾತಿ… ಮತ್ತು ಎಲ್ಲಿಯೂ ಜಾಗವಿಲ್ಲದ ಪಂಚಮರು, … ದೇಹ, ದೇಹದಲ್ಲಿ ಮತ್ತೆ ತಲೆ, ಮುಖಗಳ ಶ್ರೇ… ಮತ್ತು ಮಲಮೂತ್ರ ವಿಸರ್ಜನೆಯ ಅಂಗಗಳ ಕೀಳ… ಸಂಸ್ಕೃತ-ಇಂಗ್ಲಿಷ್- ದೇಶಭಾಷೆಗಳು, ಶ್ರೀಮಂತ-ಬ… ಹೀಗೆ ನಮ್ಮ ಸಮಾಜ, ಮನುಷ್ಯರನ್ನು ಬೇರ್ಪಡಿಸಿ … ನಮ್ಮವ, ಇವ ನಮ್ಮವನಲ್ಲ ಎಂದು ಹೊರಗಿಡುವ ಕ… ನಿಯಮಗಳ ಒಂದು ವ್ಯವಸ್ಥೆ. ಅನಂತಮೂರ್ತಿ ಈ … ವಿಧದ ತರತಮ ಮತ್ತು ಭೇದದ ವ್ಯವಸ್ಥೆಯನ್ನು … ಮತ್ತೆ ತನ್ನ ಕೃತಿಗಳಲ್ಲಿ ಶೋಧಿಸಿದ್ದಾರೆ; ಸ್ವಾತಂತ್ರ್ಯ … ಸಮಾನತೆಗಳೇ ಈ ವ್ಯವಸ್ಥೆಗೆ ಏಕಮಾತ್ರ ಪರ್ಯಾ… ಎಂದು ನಮಗೆ ಕಾಣಿಸಿದ್ದಾರೆ. ಪೇಜಾವರರಿಗೆ … ಶರಣೆನ್ನುವ ಅವರ ಧೋರಣೆ ಏನೇ ಇರಲಿ, ಆತ್ಮ … ದೇಹಗಳ ನಡುವೆ ಅವರ ನಿಷ್ಠೆ ಇದ್ದುದು ದೇಹ… ದೇಹದ ಹಸಿವು, ದೇಹದ ಕಾಮ ಮತ್ತು ದೇ… ಮೇಲಾಗುವ ಹಿಂಸೆ, ಅವರನ್ನು ಸದಾ ಕಂಗೆಡಿಸುತ್ತಿ… ಬುದ್ಧಿ ಮತ್ತು ಆತ್ಮಗಳ ನೆಲೆ ಕೂಡ ನಮ್ಮ ದೇ… ಎಂದು ಅವರು ತಿಳಿದಿದ್ದರು. ಅನಂತಮೂರ್ತಿ ದೇವರಿಗಾಗಿ ಒಮ್ಮೊಮ್ಮೆ ಹಂಬಲಿಸಿರಬಹುದು. ಆದರೆ ಕೊನೆಯವರೆಗೂ ಅವರು ದೇಹಕ್ಕೆ ಬದ್ಧನಾಗಿ ಉಳಿದ 'ಸೆಕ್ಯುಲರ್' ಲೇಖಕ.



● ಜೆ.ರಾಜಶೇಖರ್



ತೀರ್ಥಹಳ್ಳಿ ಹುಡುಗನ ಕಣ್ಣಿನಲ್ಲಿ ಅನಂತಮೂರ್ತಿ

ಪ್ರೀತಿ, ಕಾಳಜಿ, ಸಿಟ್ಟು.. ಅನಂತಮುಖ

ಅನಂತ ಮೂರ್ತಿ ರೀತಿ

ಬೆಂಗಳೂರಿನ ಜೀವನಕ್ಕೆ ಗುಡ್‌ಬೈ ಹೇಳಿ ಊರಿಗೆ ...ರುವ ಹೊತ್ತಿನಲ್ಲಿ ಬೆಂಗಳೂರಿನಲ್ಲಿದ್ದು ತೀರ್ಥಹಳ್ಳಿಯ ...ದಲ್ಲಿ ನಾನು ಸುಮಾರು ನಾಲ್ಕು ವರ್ಷಗಳ ಕಾಲ ... ಅಂಕಣ ಬರಹಗಳ ಸಂಕಲನ 'ಬೆಚ್ಚಿ ಬೀಳಿಸಿದ ...ಊರು' ಹೆಸರಿನಲ್ಲಿ ಪುಸ್ತಕವಾಗಿ ಕೈಯಲ್ಲಿತ್ತು. ...ನಿಂದಲೇ ಈ ಅಂಕಣಗಳನ್ನು ಪುಸ್ತಕವನ್ನಾಗಿಸಿದರೂ ... ರಹಮತ್ ತರೀಕೆರೆ ಅವರು ಬರೆದ ಮುನ್ನುಡಿಯ ...ುಗಳು ನನಗೆ ಕೊಂಚ ವಿಶ್ವಾಸ ಮೂಡಿಸಿತ್ತು. ಈ ...ನ್ನು ನಮ್ಮೂರಿನ ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ ...ಆರ್ ಅನಂತಮೂರ್ತಿ ಅವರಿಂದಲೇ ಬಿಡುಗಡೆ ...ಸಬೇಕೆಂದು ನಿರ್ಧರಿಸಿದೆ. ನನ್ನ ಅಂಕಣ ಪ್ರಕಟವಾ... ಪಾಕ್ಷಿಕದ ಸಂಪಾದಕರಾದ ನೆಂಪೆ ದೇವರಾಜ್ ... ನಮ್ಮೆಲ್ಲ ಗೆಳೆಯರಿಗೂ ಅದು ಸೂಕ್ತವೆನಿಸಿತ್ತು. ... ಅನಂತಮೂರ್ತಿ ಅವರ ಬೆಂಗಳೂರಿನ ಮನೆಗೆ ...ಗಿ ಅವರನ್ನು ಕಂಡು ಅವರಿಗೆ ಪುಸ್ತಕವನ್ನು ನೀಡಿ ... ಬಿಡುಗಡೆಗೆ ಬರಬೇಕೆಂದು ವಿನಂತಿಸಿದೆ. ಒಂದು ...ನಲ್ಲಿ ನಿಮಗೆ ಸೂಕ್ತವಾಗಬಹುದಾದ ದಿನಾಂಕ ...ದರೆ ಅದಕ್ಕೆ ಸರಿಯಾಗಿ ನಮ್ಮ ಕಾರ್ಯಕ್ರಮವನ್ನು ...ಡಿಸಿಕೊಳ್ಳುವುದಾಗಿ ತಿಳಿಸಿದೆ. ಅನಂತಮೂರ್ತಿ ...ರು. ಖುಷಿಯಿಂದ ಊರಿಗೆ ಮರಳಿದೆ.


...ದಕ್ಕೂ ಹಿಂದೆ ಅನಂತಮೂರ್ತಿ ಅವರನ್ನು ಹತ್ತಿರ ...ನೋಡುವ, ಅವರ ಕೈಕುಲುಕುವ ಅವಕಾಶವೊಂದು ...ಜಾಗಿತ್ತು, ನಾನು ದ್ವಿತೀಯ ಪದವಿ ತರಗತಿಯಲ್ಲಿದ್ದಾಗ ...ಊಗ್ಗದ ಸಹ್ಯಾದ್ರಿ ಕಾಲೇಜು ತನ್ನ ಸುವರ್ಣ ...ಹೋತ್ಸವದ ನಿಮಿತ್ತ ಕುವೆಂಪು ವಿಶ್ವವಿದ್ಯಾಲಯ ಮಟ್ಟದ ...ರ್ಧೆ ಏರ್ಪಡಿಸಿತ್ತು, ಅದರಲ್ಲಿ ನನ್ನ ಕಥೆಗೆ ಬಹುಮಾನ ...ತ್ತು. ಈ ಬಹುಮಾನವನ್ನು ಸುವರ್ಣ ಮಹೋತ್ಸವ ...ಕ್ರಮದ ಮುಖ್ಯ ಅತಿಥಿಯಾಗಿದ್ದ ಅನಂತಮೂರ್ತಿ ...ವವರಿದ್ದರು. ನಾನಂತೂ ಅನಂತಮೂರ್ತಿ ಅವರಿಂದ ...ಮಾನ ತೆಗೆದುಕೊಳ್ಳುವಾಗ ಫೋಟೊ ತೆಗೆಸಿಕೊಳ್ಳುವ ...ಗಿ ಕಾಯುತ್ತಿದ್ದೆ. ಅನಂತಮೂರ್ತಿ ವೇದಿಕೆಯಲ್ಲಿದ್ದರು. ...ಕ್ರಮ ನಡೆಯುತ್ತಿರುವಾಗ ಇದ್ದಕ್ಕಿದ್ದಂತೆ ನನ್ನೊಂದಿಗಿದ್ದ ...ರಘುರಾಮ ನನ್ನನ್ನು ಮತ್ತು ಶಿವುನನ್ನು 'ಏ ಬರ್ರಲೇ ...ಕ್ಕಿಲ್ಲ, ಉಚ್ಚೆ ಹೊಯ್ಕೊಂಡು ಬರೋಣ' ಎಂದು ...ಕೊಂಡು ಹೋದ. ನಾವು ನಿರಾಳವಾಗಿ ...ವುದರೊಳಗೆ ಅನಂತಮೂರ್ತಿ ಬಹುಮಾನ ವಿತರಿಸಿ ...ಯಿಳಿದು ಹೊರಟುಹೋಗಿದ್ದರು!

...ನ್ನ ಪುಸ್ತಕ ಬಿಡುಗಡೆಗೆ ಬರುವುದಾಗಿ ಭರವಸೆ ... ಅನಂತಮೂರ್ತಿ ಅವರು ತಿಂಗಳು ಕಳೆದರೂ ... ಕೆಲಸದೊತ್ತಡದಲ್ಲಿ ಬರಲಾಗಲಿಲ್ಲ. ಈ ನಡುವೆ ...ತಿಯ ಬಗ್ಗೆ ಮೆಚ್ಚುಗೆ, ವಿಮರ್ಶೆಯಿಂದ ಕೂಡಿದ ... ಪತ್ರ ಅನಂತಮೂರ್ತಿ ಅವರಿಂದ ಅಂಚೆಯಲ್ಲಿ ... ನನ್ನ ಖುಷಿ ಹೆಚ್ಚಿಸಿತು. ಮತ್ತೆ ಅವರ ಬರುವಿಕೆಗಾಗಿ ...ಕೊಡಗಿದೆವು. ಮತ್ತೆ ಸಂಪರ್ಕಿಸಿದಾಗ ತಾವು ವಿದೇಶಕ್ಕೆ ...ಗುತ್ತಿರುವುದಾಗಿಯೂ ಬಂದನಂತರ ನಾನೇ ಬಂದು ...ಡೆ ಮಾಡುವುದಾಗಿಯೂ ತಿಳಿಸಿದರು. ಆದರೆ ಮತ್ತೆ ... ತಿಂಗಳು ಕಳೆದರೂ ಅನಂತಮೂರ್ತಿ ಅವರು ... ಹಾಗೆ ಕಾಣಲಿಲ್ಲ.

...ಪಗೋ ಕನ್ನಡ ಸಾಹಿತ್ಯದಲ್ಲಿ ಆದಷ್ಟು ಬೇಗ ...ಪಡಿಸಿಕೊಳ್ಳುವ ತವಕ! ಪುಸ್ತಕ ಬಿಡುಗಡೆ ಒಂದೊಂದು ...ವಿಳಂಬವಾದಷ್ಟೂ ಚಡಪಡಿಕೆ! ಇದರೊಂದಿಗೆ ಪುಸ್ತಕ ...ಡೆಗೊಳ್ಳದೆ ಮಾರಾಟ ಮಾಡುವುದು ಹೇಗೆ? ಪುಸ್ತಕಕ್ಕೆ ... ಸುಮಾರು ಇಪ್ಪತ್ತೈದು ಸಾವಿರ ರೂಪಾಯಿಗಳು ... ಬರುವುದು ಬೇಡವೇ? ದುಡ್ಡಾದರೂ ಹಾಳಾಗಿ ...ಲಿ, ಪಾಪ ಎಷ್ಟು ಜನ ಓದುಗ ಅಭಿಮಾನಿಗಳು ... ಕೃತಿಗಾಗಿ ಕಾಯುತ್ತಿದ್ದಾರೇನೋ ಏನೋ ಎಂಬ ...ಪ!

...ನೆಗೆ ನಮ್ಮ 'ಮಾತುಕತೆ' ಬಳಗ ಪುಸ್ತಕ ಬಿಡುಗಡೆಗೆ ... ಪರ್ಯಾಯ ಯೋಚನೆ ಮಾಡಿತು. ಬಳಗದ ...ರದ ಕೆ... ಅವರು ತಮ್ಮ ಗೆಳೆಯರಾದ ಕನ್ನಡ ...ಲಯದಲ್ಲಿ ಪ್ರಾಧ್ಯಾಪಕರಾದ ಪ್ರಸಿದ್ಧ ಕತೆಗಾರ ಮೊಗಳ್ಳಿ ಗಣೇಶ್ ಅವರನ್ನು ಪುಸ್ತಕ ಬಿಡುಗಡೆಗೆ ಬರುವಂತೆ ವಿನಂತಿಸಿಕೊಂಡರು. ಗೆಳೆಯನ ವಿನಂತಿಯನ್ನು ಮನ್ನಿಸಿ ಕಾರ್ಯಕ್ರಮಕ್ಕೆ ಬಂದ ಅವರು ತಮ್ಮ ಪ್ರೀತಿಯನ್ನೆಲ್ಲ ಕೃತಿಯ ಮೇಲೆ ಧಾರೆ ಎರೆದರು.

ಪುಸ್ತಕ ಬಿಡುಗಡೆಯಾದ ಸ್ವಲ್ಪ ದಿನಗಳಲ್ಲಿಯೇ ಒಂದು ಘಟನೆ ನಡೆಯಿತು. ತೀರ್ಥಹಳ್ಳಿ ತಾಲ್ಲೂಕಿನ ಲಿಂಗಾಯತ ಮಠವೊಂದು ಅನಂತಮೂರ್ತಿ ಅವರಿಗೆ ಪ್ರಶಸ್ತಿಯೊಂದನ್ನು ಘೋಷಿಸಿತು. ಈ ಘೋಷಣೆಯ ಹಿಂದೆಯೇ ಅನಂತ ಮೂರ್ತಿ ಬೆಂಗಳೂರಿನಿಂದ ಮಿಂಚಿನಂತೆ ಬಂದು ಈ ಪ್ರಶಸ್ತಿಯನ್ನು ಸ್ವೀಕರಿಸಿ ಹೋದರು. ಈ ಘಟನೆಯಿಂದ ಕೆರಳಿದ ಸಂಪಾದಕ ನೆಂಪೆ ದೇವರಾಜ್ 'ತಾಲ್ಲೂಕಿನ ಯುವ ಬರಹಗಾರನೊಬ್ಬನ ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕೆ ಬರುತ್ತೇನೆಂದು ತಿಂಗಳುಗಟ್ಟಳೆ ಸತಾಯಿಸಿ ಕೈಕೊಟ್ಟ ಸಾಹಿತಿಗಳು ಐದು ಸಾವಿರ ರೂಪಾಯಿ ಮೊತ್ತದ ಪ್ರಶಸ್ತಿ ಸ್ವೀಕರಿಸಲು ಓಡೋಡಿ ಬಂದರು' ಎಂಬ ಟಿಪ್ಪಣಿಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದರು. ಇದರಿಂದ ಅನಂತಮೂರ್ತಿ ಸಿಟ್ಟಾಗಿದ್ದರು. ಮುಂದೆ ಅನಂತಮೂರ್ತಿ



ಅವರ ಕುರಿತು ವಾರ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಬರಹವೊಂದನ್ನು ದೇವರಾಜ್ ತಮ್ಮ ಪತ್ರಿಕೆಯಲ್ಲಿ ಮರುಮುದ್ರಿಸಿದರು.

ತನ್ನ ತೀರ್ಥಹಳ್ಳಿ ತನ್ನ ಬಗ್ಗೆ ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದು ಅನಂತಮೂರ್ತಿ ಅವರಿಗೆ ಎಲ್ಲಕ್ಕಿಂತ ಮುಖ್ಯವಾಗಿತ್ತು. ಇಲ್ಲಿನ ಪ್ರೀತಿ ಅವರನ್ನು ಆರ್ದ್ರಗೊಳಿಸುತ್ತಿದ್ದಂತೆ ಟೀಕೆಗಳು ವಿಚಲಿತಗೊಳಿಸುತ್ತಿದ್ದವು. ಹಿಂದಿನ ಟಿಪ್ಪಣಿಯೂ ಸೇರಿದಂತೆ ತಮ್ಮ ಊರಿನ ಪತ್ರಿಕೆಯಲ್ಲಿ ತನ್ನ ಬಗ್ಗೆ ಬಂದ ಬರಹ ಅನಂತಮೂರ್ತಿ ಅವರನ್ನು ಕಂಗೆಡಿಸಿತು. ವಾರ ಪತ್ರಿಕೆಯ ಕಚೇರಿಯ ಮುಂದೆ ಅನಂತಮೂರ್ತಿ ತಮ್ಮ ಕೆಲವು ಕುಟುಂಬದ ಸದಸ್ಯರೊಂದಿಗೆ ಧರಣಿ ಮಾಡಲು ಇದು ಪ್ರಮುಖ ಕಾರಣವಾಗಿತ್ತು. ಇದು ನಡೆದಿದ್ದು 2002 ರಲ್ಲಿ.

ಆದರೆ ಅನಂತಮೂರ್ತಿ ಅವರು ನನಗೆ ನಿಕಟವಾದದ್ದು ಈ ನಂತರವೇ. ಬಲಪಂಥೀಯ ರಾಜಕಾರಣ ತೀವ್ರಗತಿಯಲ್ಲಿ ಬೆಳೆಯತೊಡಗಿದಂತೆ ಅದರ ವಿರುದ್ಧದ ಅನಂತಮೂರ್ತಿ ಅವರ ದನಿಯೂ ಜೋರಾಗಿ ಕೇಳಬರತೊಡಗಿತು. 'ಯಾರ್ರೀ ಅನಂತಮೂರ್ತಿ', 'ಅನಂತಮೂರ್ತಿ ಒಬ್ಬ ಹುಚ್ಚ' ಇತ್ಯಾದಿ ನಿಂದನೆಗಳು ರಾಜಕಾರಣಿಗಳಿಂದ ಬರತೊಡಗಿತು. ಮತೀಯ ಅಜೆಂಡಾ ಹೊಂದಿದ್ದ ಕೆಲವು ಪತ್ರಿಕೆಗಳು ಹೊಸ ಹೊಸ ವಿವಾದಗಳನ್ನು ಸೃಷ್ಟಿಸಿ ಅವರ ಮೇಲೆ ದಾಳಿ ಮಾಡತೊಡಗಿದವು. ಈ ಪತ್ರಿಕೆಗಳು ಇನ್ನೊಂದು ಕೆಲಸವನ್ನು ವ್ಯವಸ್ಥಿತವಾಗಿ ಮಾಡತೊಡಗಿದ್ದವು. ವೈಚಾರಿಕ ಜಗತ್ತಿನಲ್ಲಿ ಮಹತ್ವ ಪಡೆದಿದ್ದ ಲೇಖಕರನ್ನು ಅವರ ಸಣ್ಣಪುಟ್ಟ ಕಾರಣಗಳನ್ನೆಲ್ಲಾ ದೊಡ್ಡದಾಗಿ ಬಿಂಬಿಸಿ ಅವರನ್ನೊಂದು ರೀತಿ ವ್ಯಂಗ್ಯಚಿತ್ರದ ರೀತಿ ಜನರು ಅವರ ಕಾಳಜಿಯ ಮಾತು ಗಳನ್ನು ಗಂಭೀರವಾಗಿ ಪರಿಗಣಿಸದಂತೆ ಮಾಡತೊಡಗಿದವು. ಅದಕ್ಕೆ ಅನಂತಮೂರ್ತಿ ಪದೇಪದೇ ಈಡಾಗ ತೊಡಗಿದರು. ಬಾಲಗಂಗಾಧರ ಅವರ ಗುಂಪು ಇನ್ನೊಂದು ಕಡೆಯಿಂದ ದಾಳಿ ಮಾಡುತ್ತಿತ್ತು. ಆಗೆಲ್ಲಾ ಅವರಿಗೆ ಫೋನ್ ಮಾಡಿ 'ಶಿವಮೊಗ್ಗದ ನಾವೆಲ್ಲಾ ನಿಮ್ಮ ಜೊತೆಗಿದ್ದೇವೆ ಸಾರ್' ಎಂದು ಬೆಂಬಲ ಸೂಚಿಸುತ್ತಿದ್ದೆ. ಉದಯವಾಣಿ, ಪ್ರಜಾವಾಣಿ ಪತ್ರಿಕೆಗಳಲಿ ಬರುತ್ತಿದ್ದ ಅವರ ಅಂಕಣಗಳನ್ನು ಕುರಿತು ಮಾತನಾಡುತ್ತಿದ್ದೆ. ಇಂತಹ ಅನೇಕ ಸಂದರ್ಭಗಳಲ್ಲಿ ಅವರು ನನ್ನೊಂದಿಗೆ ಅರ್ಧ ಗಂಟೆಗೂ ಮಿಕ್ಕಿ ಮಾತನಾಡಿದ್ದುಂಟು.

2008 ರ ಚುನಾವಣೆಯ ಸಂದರ್ಭದಲ್ಲಿ ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ಮತೀಯ ರಾಜಕಾರಣದ ಅಪಾಯಗಳ ಬಗ್ಗೆ ಅನಂತಮೂರ್ತಿ ಅದ್ಭುತ ಭಾಷಣ ಮಾಡಿದ್ದರು. ಕಾರ್ಯಕ್ರಮ ಮುಗಿಯುತ್ತಿದ್ದಂತೆ ನಾನು ಮತ್ತು ಸಿರಾಜ್ ಅಹ್ಮದ್ ಅನಂತಮೂರ್ತಿ ಅವರನ್ನು ಕಂಡು ಅಭಿನಂದಿಸಿದೆವು. ಆಗ ನಮ್ಮ ಬೆನ್ನುತಟ್ಟಿ ಆದಷ್ಟು ಈ ಮತೀಯ ರಾಜಕಾರಣದ ವಿರುದ್ಧ ಕ್ರಿಯಾಶೀಲರಾಗುವಂತೆ ಪ್ರೇರೇಪಿಸಿದ್ದರು. ಇದೇ ವೇಳೆ ನಾವು ಅನಂತಮೂರ್ತಿ ಬೆಂಗಳೂರಿನಿಂದ ತಮ್ಮೊಂದಿಗೆ ತಂದಿದ್ದ ಬಿ.ಜೆ.ಪಿ ವಿರುದ್ಧ ಲೇಖಕರ ಬಳಗ ಹೊರಡಿಸಿದ್ದ ಕರಪತ್ರಗಳ ಬಂಡಲನ್ನು ಪಡೆದು ಅದನ್ನು ವಿತರಿಸಲು ಸಂಬಂಧಿಸಿದ ಜಾಗಕ್ಕೆ ತಲುಪಿಸಿದೆವು.

ಅನಂತಮೂರ್ತಿ ಅವರು ಶಿವಮೊಗ್ಗಕ್ಕೆ ಬಂದಾಗೊಮ್ಮೆ ಕಡಿದಾಳು ಶಾಮಣ್ಣ ಮತ್ತು ಕೋಣಂದೂರು ಲಿಂಗಪ್ಪನವರು ಅವರನ್ನು ನಮ್ಮ ಕೈಮಗ್ಗದ ಬಟ್ಟೆಗಳ ಅಂಗಡಿಗೆ ಕರೆದುಕೊಂಡು ಬಂದಿದ್ದರು. ಆದರೆ ಆ ಸಂದರ್ಭದಲ್ಲಿ ನಾನೇ ಇರಲಿಲ್ಲ. ಅಂಗಡಿ ನೋಡಿಕೊಳ್ಳುತ್ತಿದ್ದ ಯಾಕೂಬ್ ಫೋನ್ ಮಾಡಿದಾಗ 'ಛೇ,ಎಂತಾ ಸಂದರ್ಭದಲ್ಲಿ ನಾನಿರಲಿಲ್ಲವಲ್ಲಾ' ಎಂದು ತಳಮಳವಾಯಿತು. ಆನಂತರ ಅನಂತಮೂರ್ತಿ ಅವರ ಅಳತೆಯನ್ನು ಅಂದಾಜು ಮಾಡಿಕೊಂಡು ಆಕರ್ಷಕ ಬಣ್ಣದ ಎರಡು ಜುಬ್ಬಾಗಳನ್ನು ಬೆಂಗಳೂರಿನ ಅವರ ಮನೆಗೆ ತೆಗೆದುಕೊಂಡು ಹೋಗಿ ಕೊಟ್ಟು ಬಂದೆ. ಅವರು ಅಂದು ತೇಜಸ್ವಿ ಕುರಿತು ಸೆಮಿನಾರೊಂದರಲ್ಲಿ ತಾವು ಮಾಡಿದ ಭಾಷಣದ ಕಿರುಪುಸ್ತಕವನ್ನು ತಮ್ಮ ಸಹಿ ಹಾಕಿ ನನಗೆ ನೀಡಿದರು. ಮುಂದೆ ಯಾವ ಸಂದರ್ಭದಲ್ಲಿ ಫೋನ್ ಮಾಡಿದರೂ ಮಾತಿನ ನಡುವೆ 'ಸರ್ಜಾ ಅಂಗಡಿ ಹೇಗೆ ನಡೀತಿದೆಯೋ' ಎಂದು ಮರೆಯದೆ ವಿಚಾರಿಸುತ್ತಿದ್ದರು.

ತೀರ್ಥಹಳ್ಳಿ ತಾಲ್ಲೂಕು ಸಾಹಿತ್ಯ ಸಮ್ಮೇಳನಕ್ಕೆ ಉದ್ಘಾಟಕರಾಗಿ ಅವರು ಬಂದಾಗ ಅವರನ್ನು ನಾನೇ ಕೈಹಿಡಿದು ವೇದಿಕೆಗೆ ಕರೆದುಕೊಂಡು ಹೋದೆ. ಅವರು ತಮ್ಮ ಭಾಷಣದ ಕೊನೆಯಲ್ಲಿ 'ದೇವರು ಎಲ್ಲರಿಗೂ ಒಳ್ಳೆಯದು ಮಾಡಲಿ' ಎಂದು ಹಾರೈಸಿದ್ದನ್ನು ಕೇಳಿ ಗೊಂದಲವಾಗಿ ಸಂಜೆ ನಡೆದ ಅವರೊಂದಿಗಿನ ಸಂವಾದದಲ್ಲಿ 'ನೀವು ಬಾಲ್ಯಕಾಲದಲ್ಲಿ ದೇವರನ್ನು ಪರೀಕ್ಷಿಸಲು ದೇವರಕಲ್ಲಿನ ಮೇಲೆ ಮೂತ್ರ ಮಾಡಿದ್ದನ್ನು ಬರೆದಿದ್ದೀರಿ, ಆದರೆ ಈಗ ದೇವರನ್ನು ನಂಬುವ ಮಾತನಾಡುತ್ತಿದ್ದೀರಲ್ಲ' ಎಂದು ಪ್ರಶ್ನಿಸಿದ್ದೆ. ಅದಕ್ಕೆ ಅನಂತಮೂರ್ತಿ ದೀರ್ಘ ಉತ್ತರ ಕೊಟ್ಟು ನನ್ನನ್ನು ಮತ್ತಷ್ಟು ಗೊಂದಲದಲ್ಲಿ ಮುಳುಗಿಸಿದರು.

ಶಿವಮೊಗ್ಗದಲ್ಲಿ ಅನಂತಮೂರ್ತಿ ಅವರ ತಮ್ಮ ಡಾ.ಯು.ಆರ್ ಅನಿಲ್ ಕುಮಾರ್ ಇದ್ದಾರೆ. ಅನಂತಮೂರ್ತಿ ಶಿವಮೊಗ್ಗಕ್ಕೆ ಬಂದಾಗ ಇಲ್ಲಿಯೇ ಉಳಿಯುವುದು. ಎರಡು ವರ್ಷದ ಹಿಂದೆ ಅವರಲ್ಲಿ ಬಂದು ಉಳಿದಾಗ ಅಲ್ಲಿಗೆ ಹೋಗಿ ತುಂಬಾ ಹೊತ್ತು ಅವರೊಂದಿಗೆ ಮಾತನಾಡಿ ಬಂದಿದ್ದೆ. ನಾನು ಅಲ್ಲಿದ್ದ ಸಂದರ್ಭದಲ್ಲಿಯೇ ತೀರ್ಥಹಳ್ಳಿಯ ಹಳ್ಳಿಯಿಂದ ಕೆಲವು ಗ್ರಾಮಸ್ಥರು ಅನಂತಮೂರ್ತಿ ಅವರನ್ನು ನೋಡಲು ಬಂದಿದ್ದರು. ಅವರಲ್ಲಿ ಕೆಲವರು ಅನಂತಮೂರ್ತಿ ಅವರ ಕಾಲಿಗೆರಗಿದರು. ಹೀಗೆ ಮಾಡಬೇಡಿರೆಂದು ಅನಂತಮೂರ್ತಿ ಗದರುತ್ತಾರೆಂದು ನಾನೆಂದುಕೊಂಡರೆ ನನಗೆ ಅಚ್ಚರಿಯಾಗುವಂತೆ ಅವರು ಮಂದಸ್ಮಿತರಾಗಿ ಕುಳಿತೇ ಇದ್ದರು.

ಅದರ ಮಾರನೇ ದಿನ ಸಂಜೆಯೇ ಕರ್ನಾಟಕ ಸಂಘದಲ್ಲಿ ಅನಂತಮೂರ್ತಿ ಅವರೊಂದಿಗೆ ಸಂವಾದ ಕಾರ್ಯಕ್ರಮ ಏರ್ಪಡಾಯಿತು. ಕರ್ನಾಟಕ ಸಂಘ ಭವನದಲ್ಲಿ ಜನ ಕಿಕ್ಕಿರಿದು ಸೇರಿದ್ದರು. ಈ ಸಂವಾದ ಕಾರ್ಯಕ್ರಮವನ್ನು ನಡೆಸುವ ಜವಾಬ್ದಾರಿ ನನ್ನದೇ ಆಗಿತ್ತು. ಅನಾರೋಗ್ಯದಲ್ಲಿ ಬಳಲುತ್ತಿದ್ದ ಅನಂತಮೂರ್ತಿ ಅವರಿಗೆ ಆಯಾಸವಾಗದಂತೆ, ಜನರು ನೇರವಾಗಿ ಪ್ರಶ್ನೆ ಕೇಳಿ ವಾಗ್ವಾದಗಳಿಗೆ ಆಸ್ಪದವಾಗದಂತೆ ಜನರಿಗೆ ಚೀಟಿಗಳನ್ನು ಒದಗಿಸಿ ಅವರಿಂದ ಪ್ರಶ್ನೆಗಳನ್ನು ಬರೆಸಿಕೊಂಡು ತುಂಬ ಮುಖ್ಯ ಎನ್ನಿಸಿದ ಪ್ರಶ್ನೆಗಳನ್ನಷ್ಟೇ ನೀಡಿದೆ.

ಮುಂದೆ ನಾನು ವಿವರಿಸುವ ಘಟನೆ ನಡೆದಿದ್ದು 2012ರಲ್ಲಿ.

ತೀರ್ಥಹಳ್ಳಿ ಸೆರಗಿನ ಗ್ರಾಮ ಪಂಚಾಯತಿಯ ಅಧ್ಯಕ್ಷರೊಬ್ಬರು ತೀರ್ಥಹಳ್ಳಿಯಲ್ಲಿ ಕುವೆಂಪು ಅವರ ಮೂರ್ತಿಯನ್ನು ಸ್ಥಾಪಿಸಿದ್ದು ಅದರ ಅನಾವರಣಕ್ಕೆ ಅನಂತಮೂರ್ತಿ ಅವರನ್ನು ಕರೆಸುವ ಹಂಬಲ ವ್ಯಕ್ತಪಡಿಸಿದರು. ಈ ವಿಚಾರವನ್ನು ಗೆಳೆಯ ಮೋಹನ ನನ್ನ ಗಮನಕ್ಕೆ ತಂದ ಮೇರೆಗೆ ಹಿಂದುಮುಂದು ಯೋಚಿಸದ ನಾನು ಪ್ರಯತ್ನಿಸೋಣ ಎಂದೆ. ಸ್ವಲ್ಪ ದಿನಗಳಲ್ಲಿಯೇ ಅನಂತಮೂರ್ತಿ ತೀರ್ಥಹಳ್ಳಿಯ ಅವರ ಸಹಪಾಠಿ ಕೆ.ಗಂಗಾಧರ್ ಅವರ ಮನೆಗೆ ಬರುವ ವಿಚಾರ ತಿಳಿದು ಅವರಿಗೆ ಫೋನ್ ಮಾಡಿ ಅನಂತಮೂರ್ತಿ ಅವರನ್ನು ಕರೆಸುವ ಗ್ರಾಮ ಪಂಚಾಯತಿಯವರ ಆಸೆಯನ್ನು ತಿಳಿಸಿ ಈ ಬಗ್ಗೆ ಅನಂತಮೂರ್ತಿ ಅವರ ಬಳಿ ಮಾತನಾಡಿ ಅವರಿಗೆ ಬರಲು ಸಾಧ್ಯವೇ ಎಂದು ವಿಚಾರಿಸಲು ವಿನಂತಿಸಿದೆ. ಅನಂತಮೂರ್ತಿ ಅವರು ಬರುವ ಸಂದರ್ಭದಲ್ಲಿ ಕೆ.ಗಂಗಾಧರ್ ಅವರ ಮನೆಗೆ ನೀವೂ ಹೋಗಿ ಅನಂತಮೂರ್ತಿ ಅವರಲ್ಲಿ ವಿನಂತಿಸಿ ಎಂದು ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ಮತ್ತು ಮೋಹನನಿಗೆ ಹೇಳಿದೆ. ಆದರೆ ಇವರು ಅಲ್ಲಿಗೆ ಹೋಗುವಾಗ ಅನಂತಮೂರ್ತಿ ಅವರು ಹೆಗ್ಗೋಡಿನಲ್ಲಿ ನಡೆಯುತ್ತಿದ್ದ ಸಂಸ್ಕೃತಿ ಶಿಬಿರಕ್ಕೆ ಹೋಗಿದ್ದರು. 'ನಾನು ಈ ಕುರಿತು ಅನಂತಮೂರ್ತಿ ಅವರ ಬಳಿ ಸೂಕ್ಷ್ಮವಾಗಿ ಮಾತನಾಡಿರುವುದಾಗಿಯೂ, ನೀವು ಹೆಗ್ಗೋಡಿಗೆ ಹೋಗಿ ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ' ಎಂದು ಗಂಗಾಧರ್ ಅವರು ತಿಳಿಸಿದರು.

ನಾವು ನಾಲ್ಕು ಜನ ಹೆಗ್ಗೋಡಿಗೆ ಹೋದಾಗ ಮಧ್ಯಾಹ್ನ ಸುಮಾರು ಒಂದು ಗಂಟೆಯಾಗಿತ್ತು. ಅನಂತಮೂರ್ತಿ ಅವರು ಒಳಗೆ ನಡೆಯುತ್ತಿದ್ದ ಸಂಸ್ಕೃತಿ ಶಿಬಿರದಲ್ಲಿದ್ದರು. ಶಿಬಿರದ ಬೆಳಗಿನ ಗೋಷ್ಠಿ ಮುಗಿಯುತ್ತಿದ್ದಂತೆ ಎಲ್ಲರೂ ಹೊರಗೆ ಬರತೊಡಗಿದರು. ಜನರೊಂದಿಗೆ ಹೊರಬಂದ ಅನಂತಮೂರ್ತಿ ಅವರನ್ನು ನಾವು ಹಿಂಬಾಲಿಸಿದೆವು. 'ಏನೋ ಸರ್ಜಾ' ಎಂದರು. ನನ್ನೊಂದಿಗಿದ್ದವರನ್ನು ಅವರನ್ನು ಪರಿಚಯಿಸಿ ನಿಮ್ಮೊಂದಿಗೆ ಮಾತನಾಡಬೇಕಿತ್ತು ಸಾರ್' ಎಂದೆ. 'ಸ್ವಲ್ಪ ಇರಿ, ನಾನು ಡಯಾಲಿಸಿಸ್ ಮಾಡಿಕೊಂಡು ಬರ್ತೀನಿ' ಎಂದು ಅವರಿಗೆ ಮೀಸಲಾಗಿದ್ದ ಕೋಣೆಯೊಳಗೆ ಹೋದರು. ನಾವು ಹೊರಗೆ ಕಾಯುತ್ತಾ ಕುಳಿತೆವು. ಸುಮಾರು ಮುಕ್ಕಾಲು ಗಂಟೆಯ ನಂತರ ಅವರು ಹೊರಬಂದರು.

ನನ್ನತ್ತ ತಿರುಗಿ ಕಣ್ಣಿನಲ್ಲೇ ಏನೆಂದು ಪ್ರಶ್ನಿಸಿದರು. ನಾನು 'ಗಂಗಾಧರ್ ಅವರು ನಿಮಗೆ ಹೇಳದಂತೆ..' ಎಂದು ಆರಂಭಿಸಿ ಬಂದ ಉದ್ದೇಶವನ್ನು ತಿಳಿಸಿ ತಾವು ಸಾಧ್ಯವಾದರೆ ಬರಬೇಕೆಂದು ವಿನಂತಿಸಿದೆ. ನಾನಿನ್ನೂ ಮಾತು ಮುಗಿಸಿರಲಿಲ್ಲ 'ಬರಲ್ಲ, ನಾಳೆ ಕುವೆಂಪು ಅವರ ಮೂರ್ತಿ ಮೇಲೆ ಕಾಗೆ ಹಿಕ್ಕೆ ಹಾಕತ್ತೆ' ಎಂದು ಆವೇಶದಿಂದ ಮಾತನಾಡಿದರು. ಮಾತನಾಡುತ್ತಾ ಶಿವರಾಮ ಕಾರಂತ ರಂಗಮಂದಿರದತ್ತ ನಡೆದರು. ಇವರ ಮಾತಿನ ದನಿ ಕೇಳಿ ಕೆಲವರು ಈ ಕಡೆ ಬರಲಾರಂಭಿಸಿದ್ದರು. ನನಗೆ ಏನು ಮಾತನಾಬೇಕೆಂದೇ ತಿಳಿಯಲಿಲ್ಲ. ಅವರು ಬರಲು ಆಗದೆಂದು ನಿಧಾನಕ್ಕೆ ಹೇಳಬಹುದಿತ್ತು. ಆದರೆ ಅವರು ಸಿಟ್ಟುಗೊಂಡಿದ್ದರು. ನಾವ್ಯಾರೂ ಏನೂ ಮಾತನಾಡದೇ ಅವರನ್ನು ಹಿಂಬಾಲಿಸಿ ನಡೆದೆವು. ಇವರು ಮತ್ತೆ ತನ್ನನ್ನು ಒತ್ತಾಯಿಸಲು ಬರುತ್ತಿದ್ದಾರೆಂದು ಅವರು ಗ್ರಹಿಸಿದರೋ ಏನೋ ಮತ್ತೆ ಸ್ಫೋಟಿಸಿದರು ' ಬೇಕಾದ್ರೆ ನಾನು ಹೀಗೆ ಹೇಳ್ದೆ ಎಂದು ಪತ್ರಿಕೇಲಿ ಬರ್ಕೊಳ್ಳಿ, ಈಗ ಎಲ್ಲಿದ್ದಾರೆ ನಿಮ್ಮ ದ್ವಾರಕಾನಾಥ, ರವೀಂದ್ರ ರೇಶ್ಮೆ'


ನನಗೆ ಶಾಕ್ ಹೊಡೆದಂತಾಯಿತು.

ಮೌನವಾಗಿ ಹಿಂತಿರುಗಿದೆವು.

ಈ ಘಟನೆಯನ್ನು ಜೀರ್ಣಿಸಿಕೊಳ್ಳಲು ನನಗೆ ತುಂಬಾ ಸಮಯವೇ ಹಿಡಿಯಿತು. ಡಯಾಲಿಸಿಸ್ ಪಡೆದ ನಂತರದ ನೋವಿನ ಸ್ಥಿತಿಯಲ್ಲಿ ಅನಂತಮೂರ್ತಿ ಹೀಗೆಂದರಾ? ಅಥವಾ ನನ್ನ ಪುಸ್ತಕ ಬಿಡುಗಡೆ ಸಂಬಂಧ ಅವರಿಗಾದ ನೋವಿಗೆ ಈಗ ಸೇಡು ತೀರಿಸಿಕೊಂಡರಾ ಅರ್ಥವಾಗಲಿಲ್ಲ.

ಆನಂತರ ಎಷ್ಟೋ ಕಾಲದವರೆಗೆ ನಾನು ಅನಂತಮೂರ್ತಿ ಅವರನ್ನು ಸಂಪರ್ಕಿಸಲಿಲ್ಲ. ಆದರೆ ನಾಡಿನ ಮೇಲಿನ ಕಾಳಜಿಯಿಂದ ಅವರು ಮಾತನಾಡುತ್ತಿದ್ದುದ್ದನ್ನೆಲ್ಲ ವಿವಾದವಾಗಿಸಿ ಅವರ ಮೇಲೆ ಮತೀಯವಾದಿಗಳ ಮತ್ತು ಅಂತಹ ಪತ್ರಿಕೆಗಳ ದಾಳಿ ಹೆಚ್ಚಾದಂತೆ ಮತ್ತೆ ಅವರಿಗೆ ಫೋನು ಮಾಡತೊಡಗಿದೆ.

ಅನಂತಮೂರ್ತಿ ಎಂದಿನಂತೆ ಮಾತನಾಡತೊಡಗಿದರು.



● ಸರ್ಜಾಶಂಕರ ಹರಳಿಮಠ

ಹಿಂದೂತ್ವ ಅಥವಾ ಹಿಂದ್ ಸ್ವರಾಜ್

ಅನಂತಮೂರ್ತಿ ಅವರು ನಿಧನರಾಗುವುದಕ್ಕೆ ಕೆಲ ದಿನಗಳ ಹಿಂದೆ 'ಹಿಂದೂತ್ವ ಅಥವಾ ಹಿಂದ್ ಸ್ವರಾಜ್' ಎಂಬ ಲೇಖನವನ್ನು ಇ-ಮೇಲ್ ಮಾಡಿ ನನ್ನ ಅಭಿಪ್ರಾಯ ಕೇಳಿದರು. 12,500 ರಷ್ಟು ಶಬ್ದಗಳಿಂದ ಕೂಡಿದ 10 ಅಧ್ಯಾಯಗಳ ದೀರ್ಘ ಲೇಖನ ಅದು. ಮೊದಲನೇ ಅಧ್ಯಾಯದಲ್ಲಿ 29 ಸೂತ್ರಗಳಿವೆ. ಅದನ್ನು ಅಂದೇ ಓದಿ "ಭಾರತದ ಭವಿಷ್ಯದ ದೃಷ್ಟಿಯಲ್ಲಿ ಇದು ಬಹಳ ಮಹತ್ವಪೂರ್ಣ ಲೇಖನ. ಇದು ದೇಶದ ಎಲ್ಲ ಭಾಷೆಗಳಿಗೂ ಅನುವಾದವಾಗಬೇಕು" ಎಂದೆ. "ಆದರೆ ಪರಿಸರದ ಕುರಿತು ತಾವು ಮಾರ್ಕ್ಸ್‌ವಾದದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ್ದು ಸರಿಯಾದುದಲ್ಲ" ಎಂದು ಹೇಳಿದೆ. ಬಂಡವಾಳಶಾಹಿಗಳಿಂದ ನಡೆಯುವ ಸಂಪನ್ಮೂಲಗಳ ಮತ್ತು ಮಾನವಸಂಪನ್ಮೂಲಗಳ ಶೋಷಣೆ ಕುರಿತು ಮಾರ್ಕ್ಸ್ 19ನೇ ಶತಮಾನದಲ್ಲೇ ವ್ಯಕ್ತಪಡಿಸಿದ ಕಾಳಜಿ ಕುರಿತು ವಿವರಿಸಿದೆ. ಜೀವಜಾಲಸಮತೋಲನದ ಕುರಿತು ನಿಮಗಿರುವ ಕಾಳಜಿ ಮತ್ತು ಮಾರ್ಕ್ಸ್‌ಗೆ ಇದ್ದ ಕಾಳಜಿಗೂ ಯಾವ ವ್ಯತ್ಯಾಸವಿದೆ ಎಂದು ಹೇಳಿದೆ. ನನ್ನ ವಿವರಣೆ ಅವರಿಗೆ ಬಹಳ ಖುಷಿಯಾಯಿತು. "ಸಂಪನ್ಮೂಲಗಳ ಶೋಷಣೆ ಕುರಿತು ಮಾರ್ಕ್ಸ್ ಹೇಳಿದ್ದನ್ನು ಸಂಗ್ರಹಿಸಿ ತಮಗೆ ಇ-ಮೇಲ್ ಮಾಡುವೆ, ಅದನ್ನು ತಮ್ಮ ದೀರ್ಘ ಲೇಖನಕ್ಕೆ ಬಳಸಿಕೊಳ್ಳಬಹುದು" ಎಂದೆ. ಆಗ ಆ ದೊಡ್ಡ ಮನುಷ್ಯ "ಹಾಗೆ ಬೇಡ, ನೀನು ನನ್ನ ಲೇಖನ ಕುರಿತು ವಿಮರ್ಶಾತ್ಮಕವಾಗಿ ಬರೆದು ಕಳಿಸು ನಾನು ಲೇಖನದ ಜೊತೆ ಪ್ರಕಟಿಸುವೆ" ಎಂದರು. ಆದರೆ ನಾನು ಬರೆಯುವದರೊಳಗೆ ಅವರು ಹೊರಟುಹೋದರು!

"ಮೋದಿಯವರು ಬಹುಮತದಿಂದ ಚುನಾಯಿತರಾದ ನಂತರ ಅವರ ಬಗ್ಗೆ ಮೀಡಿಯಾದಲ್ಲೂ ಜನಮನದಲ್ಲೂ ಮೂಡಿದಂತೆ ತೋರುತ್ತಿರುವ ಆಶಾವಾದಕ್ಕೂ, ಈ ಬಗ್ಗೆ ನನ್ನಲ್ಲಿ ಇರುವ ಅನುಮಾನಗಳಿಗೂ ಸ್ಪಂದಿಸುವ ಈ ಬರವಣಿಗೆಯನ್ನು ಹೇಗೆ ಶುರುಮಾಡಲಿ?" ಎಂದು ಪ್ರಶ್ನೆ ಹಾಕಿಕೊಳ್ಳುತ್ತಲೇ ಅನಂತಮೂರ್ತಿ ಅವರು ಲೇಖನವನ್ನು ಆರಂಭಿಸಿದ್ದಾರೆ.

ನೆಹರೂ ಮನೆತನವೇ ಈ ದೇಶವನ್ನು ಆಳಲು ಅರ್ಹವೆಂದು ತಿಳಿದ ಭಟರಿಂದ ನೆಹರೂ ಮನೆತನದವರೂ ಬಿಡುಗಡೆಯಾದರು. ನಾವೂ ಬಿಡುಗಡೆಯಾದೆವು ಎಂದು ಹೇಳುತ್ತಲೆ ಇಂದಿರಾ ಗಾಂಧಿ ಮತ್ತು ರಾಜೀವ ಗಾಂಧಿ ಅವರು ದುಷ್ಟರಿಂದ ಕೊಲೆಗೀಡಾದುದನ್ನು ನೆನಪಿಸಿಕೊಳ್ಳುತ್ತಾರೆ. ಒಂದು ಮನೆತನದಿಂದ ಬಿಡುಗಡೆಯಾದ ದೇಶ ಅಧ್ಯಕ್ಷೀಯ ಮಾದರಿಯ ಸರ್ಕಾರದ ವ್ಯವಸ್ಥೆಯ ಕಡೆಗೆ ಒಯ್ಯುತ್ತಿರುವ ಬಗ್ಗೆ ಸಂಶಯ ವ್ಯಕ್ತಪಡಿಸುತ್ತಾರೆ. ಬಹುಮತ ಪಡೆದವರೊಬ್ಬರು ಅಧಿಕಾರಕ್ಕೆ ಬಂದಾಕ್ಷಣ ಒಪ್ಪಿಕೊಳ್ಳಬೇಕೆಂಬುದು ಪ್ರಜಾತಂತ್ರದ ನಿಯಮವೆಂದು ಹೇಳುವುದನ್ನು ನಾನು ಒಪ್ಪಲಾರೆ. ಬಹುಮತವಿಲ್ಲದ್ದಕ್ಕೆ ಅವಕಾಶ ಇರುವುದೇ ಪ್ರಜಾತಂತ್ರದ ಆಡಿಪಾಯ ನನ್ನ ಪಾಲಿಗೆ ಎಂದು ಅವರು ಸ್ಪಷ್ಟಪಡಿಸುತ್ತಾರೆ.


ಬಹುಮತವಿಲ್ಲದ್ದಕ್ಕೆ ಅವಕಾಶ ಇರುವುದೇ ಪ್ರಜಾತಂತ್ರದ ಅಡಿಪಾಯ ನನ್ನ ಪಾಲಿಗೆ. ಆದ್ದರಿಂದ ಮೋದಿಯವರನ್ನು ಅನುಮಾನದಿಂದ ನೋಡುವ ನನ್ನನ್ನು ದೇಶಾದ್ಯಂತ ಹೊಲಸು ಮಾತುಗಳಲ್ಲಿ ಜರಿದವರನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೆ ನಿಮ್ಮೊಡನೆ ಮಾತನಾಡುವೆ ಎಂದು ಅವರು ಓದುಗರ ಜೊತೆ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುತ್ತಾರೆ.

...ಭಿನ್ನವಾಗಿ ಯೋಚಿಸುವಾತ ಗೋಡ್ಸೆ. ಅವನ ಭಾರತ ಪ್ರೀತಿಯಲ್ಲಿ ಅಹಿಂಸಾವಾದಿ ಗಾಂಧಿ ಒಂದು ಕಾಲ್ತೊಡಕು ಎಂದು ಸಾವರ್ಕರರನ್ನು ಓದಿದ್ದ ಗೋಡ್ಸೆ ಪ್ರಾಮಾಣಿಕವಾಗಿಯೇ ತಿಳಿದಿದ್ದ. ಮೋದಿಯವರ ಆವೇಶಪೂರಿತವಾದ ದೇಶಪ್ರೇಮದ ಮಾತುಗಳನ್ನು ಗೋಡ್ಸೆಯ ಕೊನೆಯ ಭಾಷಣದ ಜೊತೆ ಹೋಲಿಸಬೇಕು. ಒಂದು ವ್ಯತ್ಯಾಸ ಇದೆ ಗಾಂಧಿ ದೇಶದಲ್ಲಿ ಬಲಿಷ್ಟ ಶಕ್ತಿಯಾಗಿದ್ದಾಗ ಅದನ್ನು ಕೊನೆಗಾಣಿಸಲೆಂದು ಬೇರಾವ ಮಾರ್ಗವೂ ಕಾಣದೆ ಅವನು ಗಾಂಧಿಯನ್ನು ಕೊಂದ.

ಕಾರ್ಪೋರೇಟ್ ಮಾಲೀಕರು ಮಾಡುವ ಬೇಟೆಯನ್ನು ನಾವೀಗ ಗ್ಲೋಬಲೈಸೇಶನ್ ಎಂದು ಕರೆಯುತ್ತೇವೆ. ಸಹಾಯಕರಿಗೆ ಬೇಟೆಯಲ್ಲಿ ಅಷ್ಟಿಷ್ಟು ಮಾಂಸ ಸಿಗುವಂತೆ ನಮಗೂ ಸಿಗುತ್ತ ಇದೆ. ಬಡದೇಶಗಳಿಂದ ಐಟಿಬಿಟಿ ಕೂಲಿಗೆ ಹೋಗುವವರು, ಹೊರದೇಶದವರಿಂದ ಚೀಪಾದ ವೇತನ ಪಡೆದು ತಮ್ಮ ಲಾಭ ಹೆಚ್ಚಿಸುವವರಾಗಿ ಕಾಣುತ್ತಾರೆ.

ಫಲವತ್ತಾದ ಮಣ್ಣು ನೀರನ್ನು ಉಣ್ಣುವಂತೆ ಮಾಡುವ ಬಡವರ ಉಳುವ ಹಕ್ಕನ್ನು ಕಸಿದುಕೊಳ್ಳಬಾರದು. ಕೃಷಿಕಜೀವಿಗಳ ನೆಲವನ್ನು ವಿದ್ಯುತ್ ಸ್ಥಾವರಗಳಿಗಾಗಿ, ಐಟಿಬಿಟಿಗಳನ್ನು ವಿಸ್ತರಿಸುವುದಕ್ಕಾಗಿ, ಗಣಿಗಾರಿಕೆಗಾಗಿ ಪಂಚತಾರಾ ಹೋಟೆಲುಗಳ ವಿಕಾಸಕ್ಕಾಗಿ ಬಳಸಕೂಡದು.

ವಿಮಾನ ಸಂಚಾರಿಗಳಾಗಿ ಬಿಟ್ಟ ಪಾಶ್ಚಾತ್ಯರು ಈಗ ಯಾವ ಪಾಪಿತ್ವದ ಭಾವನೆಯೂ ಇಲ್ಲದ ಕೇವಲ



ವ್ಯಾಪಾರಿಗಳಾದ ನಿರ್ದಯಿ ಬೇಟೆಗಾರರಾಗಿಬಿಟ್ಟಿದ್ದಾರೆ.

ನಮ್ಮ ಒಳಗೂ ನಮ್ಮ ಸುತ್ತಲೂ ಇರುವ ಈವಿಲ್‌ನ ಶತಾವತಾರಗಳನ್ನು ಕಾಣಲು ಪ್ರಯತ್ನಿಸುವೆ. ಈವಿಲ್ ನಮ್ಮ ಕಾಲದಲ್ಲಿ ಗಣಿಗಳು, ಡ್ಯಾಮ್‌ಗಳು, ವಿದ್ಯುತ್ ಸ್ಥಾವರಗಳು. ನೂರಾರು ಸ್ಮಾರ್ಟ್ ಸಿಟಿಗಳು. ಮರಗಳನ್ನು ನಾಶಮಾಡಿ ಅಗಲ ಮಾಡಿದ ನೆರಳಿಲ್ಲದ ರಸ್ತೆಗಳು. ದಿಕ್ಕು ತಪ್ಪಿ ಹರಿದು ಪಂಚತಾರಾ ಹೋಟೆಲುಗಳ ಕಕ್ಕಸ್ಸುಗಳನ್ನು ತೊಳೆಯುವ ನೀರಾಗಿ ಸಲ್ಲುವ ನದಿಗಳು. ಗಣಿಗಾರಿಕೆಯಿಂದ ಬೋಳಾದ ಗಿರಿಜನರ ದೇವಾಲಯಗಳಾಗಿದ್ದ ಗುಡ್ಡಗಳು. ಗುಬ್ಬಚ್ಚಿಗಳು ಇಲ್ಲದ ಪೇಟೆಗಳು. ಹಕ್ಕಿ ಕೂರದ ಹಸಿರು ಮರಗಳು. ನಮ್ಮ ಒಳಗೇ ಪವರ್‌ನ ರುಚಿಕಂಡ ಈವಿಲ್ ಇದೆಯೆಂದು ಕಂಡು ಸತತ ಶೋಧದಲ್ಲಿ ಅದನ್ನು ಮೀರುವುದು ಗಾಂಧಿ ಮಾರ್ಗ. ಈ ಈವಿಲ್ ನಮ್ಮ ಹೊರಗೆ ಇದೆ ಎಂದು ತಿಳಿಯುವುದು ಗೋಡ್ಸೆ ಮಾರ್ಗ. ಗಾಂಧಿ ಪ್ರಾರ್ಥನೆಗೆ ಸಿದ್ಧವಾಗುತ್ತ ಇದ್ದಾರೆಂಬುದು ಇವನನ್ನು ಬಾಧಿಸಲಿಲ್ಲ.

ಕ್ಷಾತ್ರ ಧರ್ಮಗಳು ಆಳುವ ಲೋಕದಲ್ಲಿ (ಅಮೆರಿಕ, ಇಂಗ್ಲೆಂಡ್, ಚೀನಾ, ರಷ್ಯಾ ಇತ್ಯಾದಿ) ಗಾಂಧಿ ಮತ್ತು ಟಾಗೋರರು ಅನುಮಾನಿಸಿದ ರಾಷ್ಟ್ರಕಲ್ಪನೆ ಇನ್ನೂ ಕಾರ್ಪೋರೇಟ್ ರೂಪಗಳಲ್ಲಿ ಮುಂದುವರಿದಿವೆ. ಅಂತಾರಾಷ್ಟ್ರೀಯ ಮುಖವಾಡ ತೊಟ್ಟಿವೆ.

ಈ ಭೂಮಿಯನ್ನು ರಸಹೀನವಾಗಿಯೂ, ಹರಿಯುವ ನದಿಗಳನ್ನು ವಿಷಪೂರಿತವಾಗಿಯೂ ಮಾಡುವ, ಉಸಿರಾಡಲಾರದ, ಯಾರದೂ ಅಲ್ಲದ, ನಿನ್ನೆಗಳನ್ನು ಮರೆತ ನಾಡಾಗಿ ಮಾಡುವ ಡೆವಲಪ್‌ಮೆಂಟ್ ಎಂಬುದು ಎಲ್ಲರಲ್ಲೂ ಇರಬಹುದಾದ ಆಕರ್ಷಕವಾದ ಆಸೆಗಳ ಉಲ್ಬಣ ಸ್ಥಿತಿ. ಈ ಉಲ್ಬಣಗೊಂಡ ಮಾನವಕೇಂದ್ರಿತ ದುರಹಂಕಾರಕ್ಕೆ ತುಂಡು ತೋಳಿನ ಜುಬ್ಬದಲ್ಲೂ, ಎತ್ತಿಮಾತಾಡುವ ಗದ್ದದಲ್ಲೂ ಭಾರತವನ್ನು ತಳ್ಳುವವರಲ್ಲಿ ಮೋದಿಯವರೂ ಒಬ್ಬರಾಗಿ ಕಾರ್ಪೋರೇಟರ್‌ಗಳಿಗೆ 24 ಗಂಟೆಗಳೂ ವಿದ್ಯುತ್ ಹರಿಸುವ ನಾಯಕಮಣಿಯಾಗಿ ಕಂಡಾರೆಂಬುದನ್ನು ಊಹಿಸುವೆ. ಮೋದಿ ಕರಪ್ಟ್ ಅಲ್ಲ ಎಂದು ಹೇಳಲು ಯಾರೂ ಮರೆಯುವುದಿಲ್ಲ, ಇದೊಂದು ಹೊಗಳುವ ಮಾತಾಗಿರುವುದೇ ದುರಂತ.

ಸಾವರ್ಕರ್ ಬರೆದ ಹಿಂದೂತ್ವ ವಿಶ್ಲೇಷಣೆಯನ್ನು ಸುಮಾರು ಆ ಕಾಲದಲ್ಲೇ ಹುಟ್ಟಿದ ಗಾಂಧಿಯವರ ಹಿಂದ್ ಸ್ವರಾಜ್ ಪುಸ್ತಕದ ಜೊತೆ ಹೋಲಿಸುತ್ತೇನೆ.

ಗಾಂಧಿ ತನ್ನ ಒಳಗಿನ ದೇವರನ್ನು ಮುಟ್ಟುವುದು, ಮುಟ್ಟಿ ಅವನ ಮಾತು ಕೇಳಿಸಿಕೊಳ್ಳುವುದು ಒಂಟಿಯಾಗಿ, ಉಪವಾಸದಲ್ಲಿ, ಮೌನದಲ್ಲಿ, ತಾನು ಹೋರಾಡಿ ಗಳಿಸಿದ ಸ್ವತಂತ್ರ ಭಾರತದ ಲೌಕಿಕ ಹಿತವನ್ನು ಕಡೆಗಣಿಸುವ ಅವರ ಕೊನೆಯ ಉಪವಾಸ, ತನಗೆ ಪ್ರಿಯರಾದ ನೆಹರೂ ಪಟೇಲರ ವಿರೋಧವಾಗಿಯೂ ಮಾಡಿದ ಉಪವಾಸ, ಆತ್ಮಸಾಕ್ಷಿಯದು. ಈ ಸಾಕ್ಷಿತ್ವ ಸಾಧ್ಯವಾದದ್ದು ದೇವರ ಕೃಪೆಯಿಂದ.

ಒಳ್ಳೆಯತನದಷ್ಟೇ ದುರಾಸೆಯೂ ಆತ್ಮರತನಾದ ಮನುಷ್ಯನ ಗುಣಗಳಲ್ಲಿ ಒಂದು; ಆದ್ದರಿಂದ ಅವನನ್ನು ಹಿಡಿತದಲ್ಲಿ ಇಡುವ ಹದ್ದುಬಸ್ತುಗಳ ಅಗತ್ಯಕ್ಕಾಗಿಯೆ ಸ್ಟೇಟ್ ಎಂಬುದು ಹುಟ್ಟಿಕೊಂಡಿತು ಎಂಬುದಕ್ಕೆ ಒಂದು ಗಾಢವಾದ ಬೌದ್ಧ ಕಥೆಯಿದೆ.

ಸೃಷ್ಟಿಯ ಆದಿಯಲ್ಲಿ ಭೂಮಿಯ ಮೇಲೆಲ್ಲ ಮಾನವನಿಗೆ ಬೇಕಾದ ಆಹಾರ ಹಾಲಿನ ಕೆನೆಯಂತೆ ಹರಡಿಕೊಂಡಿರುತ್ತಿತ್ತು. ಪ್ರತಿ ಮುಂಜಾನೆ, ಪ್ರತಿ ಮನುಷ್ಯ ಪ್ರತಿ ದಿನವು ತನಗೆ ಬೇಕಾದಷ್ಟು ಆಹಾರವನ್ನು ನೇರವಾಗಿ ಭೂಮಿಯಿಂದ ಪಡೆದುಕೊಳ್ಳುತ್ತಿದ್ದ. ಹಸಿವನ್ನು ಹಿಂಗಿಸಿಕೊಳ್ಳಲು ದೈಹಿಕ ಶ್ರಮದ ದುಡಿಮೆ ಅಗತ್ಯ ಇರದ ಕಾಲ ಅದು. ಒಮ್ಮೆ ಒಬ್ಬನಿಗೆ ಆಸೆ ಹುಟ್ಟಿತು. ಪ್ರತಿದಿನ ಯಾಕೆ ನಾನು ಆಹಾರವನ್ನು ಪಡೆದುಕೊಳ್ಳುವ ಶ್ರಮ ಪಡಬೇಕು? ಎರಡು-ಮೂರು ದಿನಗಳಿಗೆ ಸಾಕಾಗುವಷ್ಟನ್ನು ಒಟ್ಟಿಗೆ ಸಂಗ್ರಹಿಸಬಹುದಲ್ಲವೆ? ಹೀಗೆ ಇವನು ಸಂಗ್ರಹಿಸಿದ್ದನ್ನು ನೋಡಿ ನೆರೆಮನೆಯವನಿಗೂ ಆಸೆಯಾಗಿ ಅವನು ಒಂದು ವಾರಕ್ಕೆ ಬೇಕಾದಷ್ಟನ್ನು ಸಂಗ್ರಹಿಸಿ ಇಟ್ಟುಕೊಂಡ. ಇದು ಹೀಗೆ ಬೆಳೆದು ಪೈಪೋಟಿಯಲ್ಲಿ ಜನ ಭೂಮಿಯ ಮೇಲಿನ ಆಹಾರದ ಕೆನೆಯನ್ನು ಸಂಗ್ರಹಿಸತೊಡಗಿದರು. ಆಗ ಪ್ರತಿನಿತ್ಯ ಬೇಕಾದಷ್ಟು ಆಹಾರದ ದಯೆಯನ್ನು ತೋರುತ್ತಿದ್ದ ಭೂತಾಯಿ ಬರಿದಾದಳು. ಇದರಿಂದ ಭೀತರಾದ ಜನರು ಒಟ್ಟಾಗಿ ಸೇರಿ ಪರಿಹಾರ ಹುಡುಕಿದರು. ಮಹಾಸಮ್ಮತ ಒಬ್ಬನನ್ನು ಎಲ್ಲರೂ ಸೇರಿ ಆಯ್ಕೆ ಮಾಡಿದರು. ಅವನು ಹಾಕುವ ಕಟ್ಟುನಿಟ್ಟಿನ ನಿಯಮದಲ್ಲಿ ತಾವು ಬಾಳುವುದೆಂದು ನಿರ್ಧರಿಸಿದರು. ಸರ್ವಸಮ್ಮತ ನಿಯಮಗಳ ಸ್ಟೇಟ್ ಮನುಷ್ಯನಿಗೆ ಯಾಕೆ ಅಗತ್ಯವೆಂಬ ಅದ್ಭುತ ಕಥೆ ಇದು ಈ ಕಾಲಕ್ಕೂ ಸಲ್ಲುವ ಕಥೆ ಎನ್ನಬಹುದು.

ಈ ಭೂಮಿಯೊಂದು ಅಕ್ಷಯಪಾತ್ರೆ ಎಂದು ತಿಳಿಯುವುದರಿಂದಲೇ ಈ ಎಲ್ಲಾ ಗೊಂದಲಗಳು ಹುಟ್ಟಿಕೊಳ್ಳುತ್ತವೆ. (ಡೆವಲಪ್‌ಮೆಂಟ್ ದುರಾಸೆಗಳು) ಅಕ್ಷಯಪಾತ್ರೆಯಿಂದ ಬಾಚಿ ಬಾಚಿ ಉಣ್ಣುವುದಕ

ಮಾನವ, ನಿಸರ್ಗ, ಬಸವಣ್ಣ ಮತ್ತು ಮಾರ್ಕ್ಸ್


ಮಾರ್ಕ್ಸ್‌ವಾದದ ಬಹುಮುಖ್ಯ ಗುರಿ ಮಾನವ ಮತ್ತು ನಿಸರ್ಗದ ಮಧ್ಯೆ ಘನ ಸಂಬಂಧವನ್ನುಂಟುಮಾಡುವುದೇ ಆಗಿದೆ. ಬಂಡವಾಳಶಾಹಿ ವ್ಯವಸ್ಥೆ ಏಕಕಾಲಕ್ಕೇ ಮಾನವನನ್ನು ಮತ್ತು ನಿಸರ್ಗವನ್ನು ಶೋಷಣೆ ಮಾಡುವಂಥದ್ದು ಎಂಬುದನ್ನು ಕಾರ್ಲ್ ಮಾರ್ಕ್ಸ್ ಅವರು 19ನೇ ಶತಮಾನದಲ್ಲೇ ಅರಿತುಕೊಂಡಿದ್ದರು.

ಎಲ್ಲ ತೆರನಾದ ಶೋಷಣೆಗೆ ಖಾಸಗಿ ಆಸ್ತಿಯೇ ಮೂಲ ಎಂಬುದು ಮಾರ್ಕ್ಸ್‌ವಾದದ ತಿರುಳಾಗಿದೆ. ಕಮ್ಯೂನಿಸ್ಟ್ ಸಿದ್ಧಾಂತವನ್ನು ಒಂದೇ ಸಾಲಿನಲ್ಲಿ ಹಿಡಿದಿಡಬಹುದು. ಅದೇನೆಂದರೆ ಖಾಸಗಿ ಆಸ್ತಿಯನ್ನು ರದ್ದುಗೊಳಿಸುವುದು ಎಂದು ಕಾರ್ಲ್ ಮಾರ್ಕ್ಸ್ ಹೇಳುತ್ತಾರೆ.

ಬುದ್ಧ ಹೇಳಿದ ಆಸೆಯೆ ದುಃಖಕ್ಕೆ ಮೂಲ ಎಂಬುದರ ಒಳಗಿನ ಅರ್ಥ, ಖಾಸಗಿ ಆಸ್ತಿಯೆ ದುಃಖಕ್ಕೆ ಮೂಲ ಎಂಬುದಾಗಿದೆ.

ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ, ಅನ್ನದೊಳಗೊಂದಗುಳ ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ ಎಂದು ಬಸವಣ್ಣನವರು ಹೇಳುತ್ತಾರೆ. ಮಿಗುತಾಯ ಮೌಲ್ಯವನ್ನು ಅಂದರೆ ಹೆಚ್ಚಿಗೆ ಗಳಿಸಿದ್ದನ್ನು ಶಿವನ ಸೊಮ್ಮು ಎಂಬ ಶರಣಸಂಕುಲದಲ್ಲಿನ ಸಾಮಾಜಿಕ ನಿಧಿಗೆ ಶರಣರೆಲ್ಲ ಅರ್ಪಿಸುತ್ತಿದ್ದರು. ಕಾಯಕಜೀವಿಗಳನ್ನು ಒಂದುಮಾಡಿ ಖಾಸಗಿ ಆಸ್ತಿ ಇಲ್ಲದ ಆದರೆ ಸಾಮೂಹಿಕ ಭದ್ರತೆಯನ್ನು ಒದಗಿಸಿದ ಸಮಾಜವನ್ನು ಕಟ್ಟಿದ ಮೊದಲ ಮಹಾನುಭಾವಿ ಎಂದರೆ ಬಸವಣ್ಣನವರು. ಇಂಥ ಒಂದು ಸಮಾಜವನ್ನು ವಿಶ್ವವ್ಯಾಪಿಯಾಗಿ ಕಟ್ಟಲು ಪಣ ತೊಟ್ಟವರೆಂದರೆ ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಮುಂತಾದವರು.

ಬಸವಣ್ಣನವರು ಕೂಡ ಮಾನವ ಮತ್ತು ನಿಸರ್ಗದ ಸಂಬಂಧದ ಕುರಿತು ಆಳವಾದ ಚಿಂತನೆ ಮಾಡಿದ್ದಾರೆ. ಸಕಲಜೀವಾತ್ಮರಿಗೆ ಲೇಸನೆ ಬಯಸಿದ್ದಾರೆ. ಮನುಷ್ಯ ಈ ವಿಶ್ವದ ಕೇಂದ್ರಬಿಂದು ಅಲ್ಲ, ಸಕಲಜೀವಿಗಳೆಲ್ಲ ಈ ವಿಶ್ವದ ಕೇಂದ್ರಬಿಂದು ಎಂದು ಸೂಚಿಸುವ ಮೂಲಕ ಜೀವಜಾಲ ಸಮತೋಲನದ ಅರಿವು ಮೂಡಿಸಿದ್ದಾರೆ. ಜೀವಜಾಲದಲ್ಲಿದೆ ಚರಾಚರವೆಲ್ಲ ಎಂದು ಹೇಳುವ ಮೂಲಕ ಮಾನವ, ಪ್ರಾಣಿ, ಪಕ್ಷಿ, ಭೂಮಿ ಮತ್ತು ಒಟ್ಟಾರೆ ನಿಸರ್ಗವೆಲ್ಲ ಜೀವಜಾಲದಲ್ಲಿದೆ ಎಂಬ ಅತ್ಯಾಧುನಿಕವಾದ ವೈಜ್ಞಾನಿಕ ಸತ್ಯವನ್ನು 12ನೇ ಶತಮಾನದಲ್ಲೇ ಹೇಳಿದ್ದಾರೆ.



ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ. ಒಮ್ಮನವಾದಡೆ ಒಡನೆ ನುಡಿವನು, ಇಮ್ಮನವಾದಡೆ ನುಡಿಯನು. ಕಾಣಿಯ ಸೋಲ, ಅರ್ಧಗಾಣಿಯ ಗೆಲ್ಲ, ಜಾಣ ನೋಡವ್ವ ನಮ್ಮ ಕೂಡಲಸಂಗಮದೇವ ಎಂದು ತಿಳಿಸುವ ಮೂಲಕ ಬಸವಣ್ಣನವರು ಜೀವಜಾಲ ಸಮತೋಲನದ ಮಹತ್ವವನ್ನು ಸಾರುತ್ತಾರೆ. ನಿಸರ್ಗ ವ್ಯವಹಾರದಲ್ಲಿ ಮಾನವರು ಜಾಗರೂಕರಾಗಿರಬೇಕು. ಕನಿಷ್ಠ ಆವಶ್ಯಕತೆಗೆ ತಕ್ಕಷ್ಟು ಮಾತ್ರ ನಿಸರ್ಗದಿಂದ ಪಡೆಯಬೇಕು. ನಿಸರ್ಗವನ್ನು ಸುಲಿಯುವ ಸ್ವಾರ್ಥಿಗಳ ಜೊತೆ ಕೂಡಲಸಂಗಮದೇವ ಮಾತನಾಡುವುದಿಲ್ಲ, ಈ ದೇವರು



ಹೇಗೆಂದರೆ ಆತ ಒಂದು ಚಿಕ್ಕ ನಾಣ್ಯದಷ್ಟೂ ಸೋಲುವುದಿಲ್ಲ ಮತ್ತು ಆ ಚಿಕ್ಕ ನಾಣ್ಯ ಅರ್ಧದಷ್ಟೂ ಗೆಲ್ಲುವುದಿಲ್ಲ. ಆತನ ಉದ್ದೇಶ ನಿಸರ್ಗದಲ್ಲಿ ಸಮತೋಲ ಕಾಯ್ದುಕೊಳ್ಳುವುದೇ ಆಗಿದೆ ಎಂದು ಬಸವಣ್ಣನವರು ನಿಸರ್ಗದ ಮಹತ್ವವನ್ನು ಮ ಮಾನವರ ಜವಾಬ್ದಾರಿಯನ್ನು ಸೂಚಿಸಿದ್ದಾರೆ.

ದುಡಿಮೆ ಎನ್ನುವುದೊಂದು ಪ್ರಕ್ರಿಯೆ ಅದರಲ್ಲಿ ಮಾನವ ಮತ್ತು ನಿಸರ್ಗ ಸಹಭಾಗಿತ್ವವಿರುತ್ತದೆ ಎಂದು ಕಾರ್ಲ್ ಮಾರ್ಕ್ಸ್ ಹೇಳುತ್ತಾರೆ. ಬಂಡವಾಳಶಾಹಿ ಕೃಷಿಯಲ್ಲಿ ಎಲ್ಲ ತೆರನಾದ ಅಭಿವೃದ್ಧಿ ಚಾಲಾಕಿತನದ ಅಭಿವೃದ್ಧಿಯಾಗಿದೆ. ಅದು ಕೂಲಿಕಾರ ಶೋಷಣೆ (ದರೋಡೆ) ಮಾಡುವುದಲ್ಲದೆ ಭೂಮಿಯ ಶೋಷಣೆಯನ್ನೂ ಮಾಡುತ್ತ ಎಂಬುದನ್ನು ಅವರು 19ನೇ ಶತಮಾನದಲ್ಲೇ ಕಂಡುಹಿಡಿದಿದ್ದಾರೆ. ಲಂಗುಲಗಾಮಿಲ್ಲ ಕೃಷಿ ಅಭಿವೃದ್ಧಿಯನ್ನು ಪ್ರಜ್ಞಾಪೂರ್ಣವಾಗಿ ಹತೋಟಿಯಲ್ಲಿಡದಿದ್ದರೆ ಭೂಮಿಯ ಬಂಜರಾಗುವುದು ಎಂದು ಎಚ್ಚರಿಸಿದ್ದಾರೆ. ನಿಸರ್ಗ ವಿಕಾಸದಲ್ಲಿ ಅವ್ಯವಸ್ಥಿತ ಹಸ್ತಕ್ಷೇ ಮಾಡಿದಾಗ ನೈಸರ್ಗಿಕ ಸಮತೋಲನದಲ್ಲಿ ವ್ಯತ್ಯಾಸವಾಗುವುದು. ಅದರಿಂದ ಸಮಾಜ ಮೇಲೆ ದುಷ್ಪರಿಣಾಮವಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

ಇಡೀ ಸಮಾಜವಾಗಲಿ, ದೇಶವಾಗಲಿ ಅಥವಾ ವಿಶ್ವದ ಯಾವುದ ಸಮುದಾಯದವರಾಗಲಿ ಈ ಪೃಥ್ವಿಯ ಒಡೆಯರಲ್ಲ.. ಅವರು ಭೂಮಿಯನ್ನು ಹೆ ಯೋಗ್ಯವಾಗಿಸಿ ಮುಂಬರುವ ಜನಾಂಗಕ್ಕೆ ಕೊಡಲೇಬೇಕು ಎಂದು ಕಾರ್ಲ್ ಮಾರ್ ಹೇಳಿದ್ದು ಅರ್ಥಪೂರ್ಣವಾಗಿದೆ.

ಯು.ಆರ್. ಅನಂತಮೂರ್ತಿ ಅವರು ತಮ್ಮ ದೀರ್ಘ ಲೇಖನದುದ್ದಕ್ಕೂ ಇ ವಿಚಾರಗಳನ್ನೇ ಪ್ರತಿಪಾದಿಸಿದ್ದಾರೆ.

ಟಿ ಶುರುವಾಗುತ್ತದೆ. ಆತ್ಮನಿರೀಕ್ಷಣೆ ಮಾಡಿಕೊಳ್ಳ ಅಕ್ಷಯಪಾತ್ರೆಯಿಂದ ಆಕರ್ಷಿತನೂ ಆಗುತ್ತಾನೆ. ಯ ಇದು ಅಕ್ಷಯ ಎಂದು ತಿಳಿಯುವುದು ಭ್ರಾಂತಿ ಹುದು ಎನ್ನುವ ವಿಚಾರ ಅವನನ್ನು ಬಾಧಿಸುತ್ತದೆ. ಕಲ್ಪನೆಯಲ್ಲಿ ಸ್ಟೇಟ್ ಉದುರಿಹೋಗುವಷ್ಟು ನಾ ಪ್ರಗತಿ ಸಾಧ್ಯ. ಯಾಕೆಂದರೆ ಈ ಭೂಮಿ ಪಾತ್ರ)

ನುಷ್ಯ ಒಳ್ಳೆಯವನು ಅಲ್ಲ, ಕೆಟ್ಟವನು ಅಲ್ಲ ಎಂದು ವುದು ನಮ್ಮ ಹೊರಗಿರುವ ಮನುಷ್ಯರನ್ನು ವುದರಿಂದ ಮಾತ್ರವಲ್ಲ, ನಮ್ಮಲ್ಲೂ ಒಳಿತು/ ಗಳು ಘರ್ಷಣೆಯಲ್ಲಿ ಇರುತ್ತವೆ ಎಂದು ವುದರಲ್ಲಿ. ಹೀಗೆ ಆತ್ಮಪರೀಕ್ಷೆಯಲ್ಲಿ ಹೊರಗಿನ ವನ್ನು ನೋಡಿದಾಗ ಒಂದು ಸ್ಟೇಟ್ ಎಷ್ಟು ಶೀಲವಾಗಿ ಉಳಿದಿರಬೇಕೆಂಬ ಪ್ರಜ್ಞೆ ನಮ್ಮಲ್ಲಿ ಮುತ್ತದೆ. ಮತೀಯತೆಯನ್ನೋ (ಹಿಂದೂ ಅಥವಾ ಲಕ್ ರೇಸನ್ನೋ ಆಧಾರವಾಗಿಟ್ಟುಕೊಂಡು ಬಿಟ್ಟಾಗ ಷ್ಯ ವರ್ತನೆಯ ನೈತಿಕ ಬಿಕ್ಕಟ್ಟುಗಳು ವಾಗುತ್ತವೆ.)

ಯರಾದವರನ್ನು ಹೊರಗಟ್ಟಿ ಯಹೂದ್ಯರಿಗೆಂದು ನ್ನು ಪಾಶ್ಚಾತ್ಯರು ಸೃಷ್ಟಿಸಿದಾಗ ಗಾಂಧಿ ವಿರೋಧಿಸಿ ಚರಿತ್ರೆಯಲ್ಲಿ ಹಿಮ್ಮುಖ ನಡೆ (ರಿವೈವಲಿಸಂ) ಸಲ್ಲದು. ದಿಗಳು ತಾವು ಇರುವ ಊರೇ ತಮ್ಮದು ಎಂದು ಬದುಕುವುದೇ ತಮ್ಮ ಪಾಡೆಂದು ಅರಿತು ಂತೆ ತಾವು ಬಾಳುವ ಲೋಕವನ್ನು ಬೇಕು. ಗಾಂಧಿ ಹೀಗೆ ಹೇಳಿ ಹಲವು ದ್ಯ ಚಿಂತಕರಿಗೆ ಸಲ್ಲದವರಾಗಿದ್ದಾರೆ. ರ್‌ಗೂ ನೇಷನ್ ಸ್ಟೇಟ್ ಬಗ್ಗೆ ಧಿ ಉದಾಸೀನರೆಂದು ದ್ರೋಹಿಯಾಗಿ ಕಂಡಿರಬಹುದು. ತಮ್ಮ ನೆಲಕ್ಕಾಗಿ ಹೋರಾಡುವ ಸ್ತೀನಿಯರನ್ನು ಅಮೆರಿಕದ ಂದ ಹತ್ತಿಕ್ಕುವ ಇಸ್ರೇಲ್ ಈ ನಮ್ಮ ವ ಆತಂಕಕ್ಕೆ ಕಾರಣವಾಗಿದೆ. ಮಿಕ್ ಆತಂಕವಾದಿಗಳೂ ವರಿಗಾದ ಅನ್ಯಾಯದಿಂದ ಗಿ ಯಾವ ಪ್ರತಿಹಿಂಸೆಗೂ ಅಂಜದವರಾಗಿದ್ದಾರೆ. ನ ರೀತಿಯಲ್ಲೇ ಸಾವರ್ಕರ್ ಪ್ರೇರಿತ ಹಿಂದೂತ್ವದ ನ್ನು ಕಟ್ಟುವ ಪ್ರೇರಣೆಯ ಮೋದಿ ಸರ್ಕಾರ ಈಗ ಲ್ ಪರ ನಿಂತಿರುವುದು ಸ್ಪಷ್ಟವಾಗಿದೆ. ವಾಜಪೇಯಿ ಕ್ಕಿಂತ ಭಿನ್ನವಾದ ನಿಲವು ಗುಜರಾತ್ ಯಜ್ಞದಲ್ಲಿ ಕೂತಿದ್ದ ಮೋದಿಯವರದು.

ಸ್ರೇಲ್ ಭೂಪಟದಲ್ಲಿ ನೋಡುವುದಕ್ಕೂ ವಿಷ್ಯಾದ ದಲ್ಲಿ ಇರಿದ ಚೂರಿಯ ಆಕಾರದಲ್ಲಿದೆ.

ರ್ಥೋಡಕ್ಸ್ ಎಂದರೆ ಮಡಿವಂತ ಜನ- ವೈದಿಕರಿರಲಿ, ರ್ ಆಚರಿಸುವ ಯಹೂದ್ಯರಿರಲಿ, ಇಸ್ಲಾಮಿಕ್ ರಲಿ ಸ್ಟೇಟ್ ಅನ್ನು ಸ್ವತಃ ಕಟ್ಟುವವರಲ್ಲ, ಕಟ್ಟುವ ಧೀರರಂಗಿ ಇವರು ಪಂಬ್ಲೆಮ್ ಆಗಿ ಆಗತ್ಯ ರಂತೂ ಈಚೆಗೆ ರಾಜಕಾರಣಿಗಳ ಜಾತಕ ನೋಡುವ ಮಂತ ಜೋತಿಷಿಗಳಾಗಿ ಬಿಟ್ಟಿದ್ದಾರೆ.


ಪರಾಧಕ್ಕೆ ಕ್ರೈಸ್ತಧರ್ಮದಲ್ಲಿ ಅಪರಾಧಿ ಒಂದು ಷ್ಟ ಜೀವಿಯಾಗಿ ಹೊಣೆಯಾಗುತ್ತಾನೆ. ಹಿಂದೂ ನ ಎಕಾಲಾಜಿಕಲ್. ಅಪರಾಧಿ ಒಬ್ಬನಾದರೂ ಲ್ಲರೂ ಅಪರಾಧಿಗಳೇ. ಗುಜರಾತಿನಲ್ಲಿ ನಡೆದ ಕಾಂಡಕ್ಕೆ ತಾನೇ ಹೊಣೆಯೋ ಎಂಬಂತೆ ಟೀಸ್ಟಾ ತನಕ ಹೋರಾಡಿದಳು.

ಎಲ್ಲೋ ಪ್ರಕೃತಿಗೆ ಮಾಡಿದ ಹಿಂಸೆ ಇನ್ನೆಲ್ಲೋ ಮ ಮಾಡುತ್ತದೆ. ಆದ್ದರಿಂದ ಡೆವಲಪ್‌ಮೆಂಟ್ ಯುದ ಈವಿಲ್ ಸಹಿಸಲಾರದ ಸೆಖೆಯಾಗಿ, ಗಿ, ಪ್ರವಾಹವಾಗಿ ಅಲ್ಲಿ ಇಲ್ಲಿ ಎಲ್ಲಿ ಅನ್ನಗೊಡದಂತೆ ಮಾರಕವಾಗಬಲ್ಲುದು. ಒಂದು ದೇಶದ ಧವನ್ನು ಇನ್ನೊಂದು ದೇಶಕ್ಕೆ ಸಾಂಕ್ರಾಮಿಕವೆನ್ನುವಂತೆ ಬಲ್ಲ ವ್ಯವಸ್ಥೆ ಕಾರ್ಪೊರೇಟ್‌ಗಳಿಗೆ ಇವೆ. ಇರಾಕ್‌ನಲ್ಲಿ ಣವಾಗಿ ಅಮೆರಿಕ ನಡೆಸಿದ ಹತ್ಯೆ ನಮ್ಮನ್ನೂ ಈಗ ಸತೊಡಗಿದೆ.

ಗುಜರಾತಿನಲ್ಲಿ ಒಬ್ಬ ಭಾರತದ ಹೀರೋ ರಾಗಿದ್ದಾರೆ. ಹೇಗೆ? ಗುಜರಾತಿನ ಹತ್ಯಾಕಾಂಡ ಅವರು ಮಂತ್ರಿ ಯಾಗಿದ್ದಾಗ ನಡೆಯಿತು. ಅದನ್ನು ತಡೆಯಲು ಸತ್ಪಟ್ಟು 'ಸೋತರು ಎಂದರೆ ಅವರು ಬರಾಗುತ್ತಾರೆ. ಇಂತಹ ಮಾತನ್ನು ಯಾರೂ ವುದಿಲ್ಲ, ಆಡಿಗರು ಬಳಸಿದ ಬೊಂದು ನೆನಪಾಗುತ್ತದೆ. ಯಜ್ಞಗಳು ದಾಗ ಹಲವಾರು ಜನ ತ್ತರಾಗಿರುತ್ತಾರೆ. ಏನಾದರೊಂದು ದಲ್ಲಿ ತೊಡಗಿರುತ್ತಾರೆ. ಆದರೆ ಯಾವ ನನ್ನು ಮಾಡದೆ ಸುಮ್ಮನೆ ಇರುವ ಬಹಳ ಮುಖ್ಯ ಮನುಷ್ಯ ಇರುತ್ತಾನೆ. ನನ್ನು ಯಜ್ಞದಲ್ಲಿ ಬ್ರಹ್ಮ ಎಂದು ತ್ತಾರೆ. ಏನನ್ನೂ ಮಾಡದವನ ಈ ಬ್ರಹ್ಮ. ದುಉತ ಬ್ರಹ್ಮನಾಗಿ ಕೂತಿದ್ದ, ಆದದ್ದು

ಆಯಿತು. ರಾಸ್ ಕಾಲ್ನಿಕೋವ್ ಒಂದು ಕೊಲೆ ಮಾಡಿ ಇದು ಮಾಡತಕ್ಕದ್ದಲ್ಲ ಎಂಬ ಜ್ಞಾನದಲ್ಲಿ ನರಳುತ್ತಾನೆ. ಒಬ್ಬ ಹತಾಶ ಸೂಳೆ ಅವನ ಪ್ರೇಮದ ಗುರುವಾಗುತ್ತಾಳೆ. ಮೋದಿಯವರಿಗೂ ಬೇಸರವಿದೆ. ಅದು ಎಂತಹ ಬೇಸರವೆಂದರೆ ಓಡುತ್ತಿರುವ ಕಾರಿನಡಿ ಒಂದು ನಾಯಿಮರಿ ಸಿಕ್ಕಿಬಿದ್ದರೆ ಏನು ಮಾಡಲು ಸಾಧ್ಯ? ಅಯ್ಯೋ ಪಾಪ ಎನ್ನಬಹುದು. ಓಡುತ್ತ ಇರುವ ಕಾರು ನಿಂತರೆ ಕುನ್ನಿ ಬದುಕೀತೆ?

ಇಲ್ಲಿ ನಾನೊಂದು ವಿಚಾರವನ್ನು ಮಾಡುವ ಧೈರ್ಯ ಮಾಡುತ್ತೇನೆ. ಭಾರತ ಇದಕ್ಕಾಗಿಯೇ ಮೋದಿಯನ್ನು ಮೆಚ್ಚಿರುವುದು. ಹೇಗೆ ತರಳೆ ಮಾಡುವ ಅಲ್ಪಸಂಖ್ಯಾತರ ಬಾಯಿಯನ್ನು ಈತ ಮುಚ್ಚಿಸಿದ? ಬರ್ಖಾ ದತ್ ಅವರು 24 ಇಂಟು 7 ಎನ್‌ಡಿಟಿವಿಯಲ್ಲಿ ಒಬ್ಬ ಪ್ರಸಿದ್ಧ ಮುಸ್ಲಿಮನನ್ನು ಕರೆಸಿ ಮೋದಿಯನ್ನು ಹೊಗಳಿಸುತ್ತಾರೆ. ಈಗ ನಾವು ಕಾಣುವುದು ನಿಷ್ಠುರ ಮಾತಿನ ಮೋದಿಯವರ ಮುಖವನ್ನಲ್ಲ. ಎಲ್ಲರಿಗೂ ಇಷ್ಟವಾಗುವ ಒಬ್ಬ ಮೋದಿಯನ್ನು. ಎಲ್ಲರೂ ಸೇರಿ ಮೀಡಿಯಾವೂ ಸೇರಿ ಸೃಷ್ಟಿ ಮಾಡುವ ಈ ಮೋದಿ ಯಾರು? ಮೋದಿ ತನ್ನ ಮನೆಯಲ್ಲಿರುವ ಗಾಂಧಿಯ ಪುಟ್ಟ ಚಿತ್ರಕ್ಕೆ ಹೂವು ಮುಡಿಸುವುದನ್ನು, ಕೈಮುಗಿಯುವುದನ್ನು ಮತ್ತೆ ಮತ್ತೆ ನಾವು ಟಿವಿಯಲ್ಲಿ ನೋಡುತ್ತೇವೆ. ಅವರ ಬಗೆಗಿದ್ದ ಸಂಶಯಗಳೆಲ್ಲಾ ನಿವಾರಣೆಯಾಗಿ ಅವರೊಂದು ಶುದ್ಧರೂಪದ ಹೊಸ ಕಾಲದ, ಮುನ್ನೋಟದ, ನಿದ್ದೆಗೆಟ್ಟು ಕೆಲಸ ಮಾಡುವ, ಆಕರ್ಷಕ ಬಟ್ಟೆ ತೊಡುವ, ಪೇಟ ಸುತ್ತುವ, ಕೈಯಲ್ಲಿ ಗದೆ ಹಿಡಿದ ನಾಯಕನಾಗಿ ಒಳಗೆ ಬದಲಾಗದೆ ಹೊರನೋಟಕ್ಕೆ ಬದಲಾಗುತ್ತಾನೆ.



ಅನಂತ ಮೂರ್ತಿ ರೀತಿ

ನೋಡಿ ಹೇಗೆ ಅಂಬೇಡ್ಕರ್‌ವಾದಿಗಳ ಬಾಯಿಯನ್ನು ಮೋದಿ ಮಧ್ಯಪ್ರದೇಶದಲ್ಲಿ ಮುಚ್ಚಿಸಿದ? ಆಮೇಲೆ ಅಂಬೇಡ್ಕರರ ಪ್ರತಿಮೆಗೆ ಕೈಮುಗಿದ?

ಇದಕ್ಕೂ ಮಿಗಿಲಾಗಿ ಇನ್ನೊಂದು ಸತ್ಯವನ್ನು ನಾವು ಗಮನಿಸಬೇಕು. ಮಧ್ಯಮ ವರ್ಗಗಳಾದ ಶೂದ್ರರು, ದಲಿತರು, ಮುಸ್ಲಿಮರು, ಮೋದಿ ಮಾತುಗಾರಿಕೆಗೆ ಮನಸೋತವರು. ಇವರೆಲ್ಲರೂ ಎಡಪಂಥೀಯ ರಾಜಕಾರಣವನ್ನು ಬಿಟ್ಟವರಂತೆ ಸದ್ಯದ ಮೋದಿ ಹನಿಮೂನಿನಲ್ಲಿ ಕಾಣುತ್ತಾರಲ್ಲವೆ? ಇನ್ನು ಮುಂದೆ ಎಡದ ಮಾತುಗಳನ್ನು ಮೋದಿಯವರ ಡೆವಲಪ್‌ಮೆಂಟಿನಿಂದ ಕೊರಗಿ ಕುದ್ದಳಾಗುವ ಭೂಮಿಯೇ ಆಡಬೇಕೇನೋ? ಮಳೆ ಗುಡುಗು ಮಿಂಚು ಪ್ರವಾಹ ಭೂಕಂಪಗಳ ಅಸ್ತ್ರವನ್ನು ಭೂಮಿ ಹೇಗೆ ಬಳಸಿಯಾಳು ಎಂಬುದನ್ನು ಲೋಕ ಅನುಭವಿಸಿ ಬಲ್ಲುದು.

ಈಗ ಅನಾದರಕ್ಕೆ ಒಳಗಾದ ಲಿಬರಲ್ ಪ್ರಜ್ಞೆಗೆ ರಾಷ್ಟ್ರ ಎಂಬ ಕಲ್ಪನೆಯೇ ಅದರ ಅತಿಯಲ್ಲಿ ಫ್ಯಾಸಿಸ್ಟ್ ಆಗುತ್ತದೆ ಎಂಬ ಭಯ ಇದೆ.

ಕನಸನ್ನು ಕಾಣಲಾರದವನು ಮನುಷ್ಯನೇ ಅಲ್ಲ. ಬಹುಜನ ಹಿತದ ನೆಮ್ಮದಿಯ, ಹಸಿರಾದ ನೆಲದ, ತಿಳಿಯಾದ ಆಕಾಶದ ಒಂದು ಕನಸಿದೆ. ಅದು ಗಾಂಧಿಯ ಅಹಿಂಸೆಯ ಕನಸು. ಮನುಷ್ಯ ಕಾಯಕಜೀವಿಯಾಗಿ ಬದುಕುತ್ತಾ ವೈಜ್ಞಾನಿಕವಾಗಿ ಪಡೆದ ಸವಲತ್ತುಗಳನ್ನು ವಿವೇಕದಲ್ಲಿ ಬಳಸಿಕೊಳ್ಳುತ್ತಾ ವಾತಾವರಣದ ಹಿತವನ್ನು ಕೆಡಿಸದಂತೆ ಬಾಳುವ ಕನಸು. ಅಂತಹ ಕನಸಿಗೆ ಭಾರತ ಪರ್ಯಾಯವಾಗಬೇಕೆಂಬ ಗಾಂಧಿಯವರ ಹಿಂದ್ ಸ್ವರಾಜ್‌ಗೆ ಮೋದಿಯ ಜಯ, ವಿರೋಧವಾದ ವ್ಯಾಖ್ಯೆಯಾಗಿದೆ. ಸಾವರ್ಕರ್ ಹಿಂದೂತ್ವ ಕಲ್ಪನೆಗೆ (ಹಾಗೆಂದು ಸಾರದೆ) ಹತ್ತಿರವಾಗಿದೆ.

ಸಾವರ್ಕರ್ ಹೀಗೂ ತಮ್ಮ ಭಾವಲಹರಿಯನ್ನು ಹರಿಬಿಡಬಲ್ಲರು. ಭಾರತ ದೇಶದ ಗುರಿ ಹಿಂದೂತ್ವವಾಗುವುದಾದರೆ, ದೇಶದ ಪ್ರಜೆಗಳೆಲ್ಲರನ್ನು ನಾವು ಹಿಂದೂ ಎಂದು ಭಾವಿಸಬಹುದಾದರೆ ಒಬ್ಬ ಮಹ್ಮದಿಯನನ್ನೂ ಹಿಂದೂ ಎಂದು ಕರೆಯುವುದು ನಿಜವಾಗುವುದು ಯಾವಾಗ? ಯಾವುದೋ ಮುಂದಿನ ಭವಿಷ್ಯ ಕಾಲದಲ್ಲಿ, ಸದ್ಯದಲ್ಲಿ ಅಲ್ಲ.... ಬದಲಾಗಿ ಗಾಂಧಿಯ ಮಾತು: ಯಾವ ರಿಲಿಜನ್ನೂ ಪರಿಪೂರ್ಣವಲ್ಲ, ಆದ್ದರಿಂದ ಪ್ರಪಂಚದ ಎಲ್ಲ ರಿಲಿಜನ್‌ಗಳೂ ಉಳಿದಿರಬೇಕು; ಸಮಾನ ಮರ್ಯಾದೆಯಲ್ಲಿ.

ಭಾರತದ ಭೂತಕಾಲದ ಚರಿತ್ರೆಯನ್ನು ಕೊಂಡಾಡುತ್ತಾ ಪ್ರಸ್ತುತವಾದುದನ್ನು ಬರೆಯುವುದು ಮತ್ತು ಪ್ರಸ್ತುತ ಕಾಲದಲ್ಲಿ ಎಲ್ಲಾ ಮತಗಳ, ಜಾತಿಯ ಜನರು ಭಾರತಕ್ಕೆ ಮಾಡಿದ ಕೊಡುಗೆಯನ್ನು ಮರೆಯುವುದು ಇವೆಲ್ಲವೂ ಸಾವರ್ಕರ್ ವಾದದಿಂದ ಸುಲಭವಾಗುತ್ತದೆ.

(ದಿವಂಗತ ಡಾ.ಯು.ಆರ್. ಅನಂತಮೂರ್ತಿ ಅವರ ಅಪ್ರಕಟಿತ ಕೊನೆಯ ಮತ್ತು ಅನನ್ಯ ಲೇಖನದ ಸಾರ)



● ರಂಜಾನ್ ದರ್ಗಾ

ದ್ವಂದ್ವಗಳ ಘರ್ಷಣೆಯ ಬೆಳಕು

ಅನಂತಮೂರ್ತಿಯವರನ್ನು ಕುರಿತು ಬರೆಯುವುದೆಂದರೆ ಸ್ವಾತಂತ್ರ್ಯೋತ್ತರ ಭಾರತವು ರೂಪಿಸಿಕೊಂಡ ಬೌದ್ಧಿಕ ಮತ್ತು ಸಾಮಾಜಿಕ ಮಾದರಿಯೊಂದನ್ನು ಚರ್ಚಿಸುವುದೆಂದೇ ಅರ್ಥ. ಅವರನ್ನು ಕೇವಲ ಲೇಖಕನ ಚೌಕಟ್ಟಿನಲ್ಲಿ ಇಟ್ಟು ನೋಡುವುದೆಂದರೆ ಅವರ ಬರವಣಿಗೆ ಮತ್ತು ಇತರ ಪ್ರಯೋಗಗಳನ್ನು ಕುಬ್ಜಗೊಳಿಸಿದಂತೆ. ಲೋಹಿಯಾ ಪ್ರಣೀತ ಸಮಾಜವಾದದ ಸಾಹಿತ್ಯಕ ಆವೃತ್ತಿಯೆಂದು ಇವರನ್ನು ನೋಡುವ ಪ್ರಯತ್ನಗಳಾಗಿವೆ. ಆದರೆ ಸಮಾಜವಾದದ ತಾತ್ವಿಕ ಪ್ರಣಾಳಿಕೆಗಳನ್ನು ರೂಪಿಸಿದ ಲೋಹಿಯಾ ಅವರ ಬರವಣಿಗೆಗಳನ್ನು ಗಮನಿಸಿದರೆ, ಸಮುದಾಯ ವನ್ನು ಕುರಿತ ಇಡಿ ಅನ್ನಬಹುದಾದ ಹೋಲಿಸ್ಟಿಕ್ ದೃಷ್ಟಿಕೋನವನ್ನು ಲೋಹಿಯಾ ಅಪಾರ ಎಚ್ಚರದಲ್ಲಿ ಕಟ್ಟಿರುವುದನ್ನು ನಾವು ಗಮನಿಸಬಹುದು. ಎಂದರೆ ಒರಟಾಗಿ ಹೇಳುವುದಾದರೆ ಮೊದಲ ಬಾರಿಗೆ ಎಂಬಂತೆ ಕಲಾ ಮತ್ತು ಸಾಂಸ್ಕೃತಿಕ ದೃಷ್ಟಿಕೋನಗಳನ್ನು ಒಳಗೊಂಡ ರಾಜಕೀಯ ತಾತ್ವಿಕತೆಯೊಂದನ್ನು ಭಾರತಕ್ಕೆ ಕೊಟ್ಟವರು ಲೋಹಿಯಾ. ಆಧುನಿಕತೆಯೂ ಸೇರಿದಂತೆ ಪಲ್ಲಟಗಳ ಹೊಸ್ತಿಲಲ್ಲಿದ್ದ, ಸುಧಾರಣಾವಾದಿ ನೆಲೆಯಿಂದ ಆಧುನಿಕತೆಯ ಆಯಾಮಕ್ಕೆ ಹೊರಳುತ್ತಿದ್ದ ಭಾರತದ ಸಂಗತ್ಯ ಅನಿವಾರ್ಯಗಳನ್ನೂ ಅದರೆದುರಿಗಿನ ಸವಾಲು ಮತ್ತು ಆಮಿಷಗಳನ್ನೂ ಲೋಹಿಯಾ ಅವರಷ್ಟು ಸೂಕ್ಷ್ಮವಾಗಿ ಗ್ರಹಿಸಿದವರು ಮತ್ತಾರೂ ಇಲ್ಲ. ಲೋಹಿಯಾ ಅವರೊಳಗೊಬ್ಬ ಕವಿಯೂ ಅಪ್ಪಟ ಮಾನವತಾವಾದಿಯೂ ಇದ್ದಿದ್ದರಿಂದ ಘಟಿಸಿದ್ದು ಇದು. ಹೀಗಾಗಿ ಅವರ ಸಂಪರ್ಕ ಮತ್ತು ಪ್ರಭಾವಕ್ಕೆ ಕಲಾವಿದರು ಹೊರಳಿದ್ದು ತೀರಾ ಸಹಜವಾಗಿಯೇ ಇತ್ತು. ಸ್ವಾತಂತ್ರ್ಯೋತ್ತರ ಭಾರತದ ಬಹುಮುಖ್ಯ ತಿರುವು ಇದು. ಭಾರತ ತನ್ನನ್ನು ತಾನು ಪುನರುಜ್ಜೀವಿಸಿಕೊಳ್ಳುವ, ಹೊಸ ರೂಪಾಂತರದಲ್ಲಿ ಜಾಗತಿಕ ರಂಗವನ್ನು ಪ್ರವೇಶಿಸಬಹುದಾದ ಅಪೂರ್ವ ಅವಕಾಶ ಇದಾಗಿತ್ತು ಎಂದೇ ಅನಿಸುತ್ತದೆ. ಆದರೆ ಎಲ್ಲ ಮೂರನೆ ಜಗತ್ತಿನ ರಾಷ್ಟ್ರಗಳಲ್ಲಾಗುವಂತೆ ಇಲ್ಲೂ ಆಡು ಆನೆಯ ನುಂಗಿ ಆ ಪ್ರಕ್ರಿಯೆಯೇ ಬೇರೆ ದಿಕ್ಕಿನೆಡೆಗೆ ಹೊರಳಿತು.


ಅನಂತಮೂರ್ತಿಯವರ ಒಟ್ಟೂ ಬರವಣಿಗೆಯ ಕೇಂದ್ರ ವ್ಯಕ್ತಿಯೇ ಸಮುದಾಯವೇ ಅಥವಾ ಅದನ್ನು ಹೀಗೆ ವರ್ಗೀಕರಿಸಲಾಗದಷ್ಟು ಅಖಂಡತೆಯಲ್ಲಿ ಅವರ ಬರವಣಿಗೆಯಿದೆಯೆ? ಸುಬ್ಬಣ್ಣನವರು ಕಾದಂಬರಿ ತ್ರಿವಳಿಯೆಂದು ಕರೆದ ಕೃತಿಗಳನ್ನು ಇನ್ನೊಂದು ದಿಕ್ಕಿನಿಂದ ಪ್ರವೇಶಿಸುವುದು ಸಾಧ್ಯವಿದೆಯೆ? ಈ ಮೂರೂ ಕಾದಂಬರಿಗಳಿಗೆ ಮೂರ್ತವಾದ ರಾಜಕೀಯ ಹುಡುಕಾಟದ ಮತ್ತು ಹೋರಾಟದ ಸ್ವರೂಪವಿರುವಂತೆಯೇ ಅಮೂರ್ತವಾದ ಅನುಭಾವಿಕ ಹುಡುಕಾಟದ ಸ್ವರೂಪವೂ ಇದೆ. ಇದನ್ನು ವಿಕಾಸದ ಪ್ರಕ್ರಿಯೆ ಎಂದೂ ಕರೆಯಲು ಸಾಧ್ಯವಿದೆ. 'ಸಂಸ್ಕಾರ'ದ ನಾರಣಪ್ಪನ ವ್ಯಕ್ತಿಗತ ಬಂಡಾಯವು, 'ಭಾರತೀಪುರ'ದ ಜಗನ್ನಾಥನಲ್ಲಿ ಸಾಮಾಜಿಕ ಮತ್ತು ರಾಜಕೀಯ ಅರಿವಾಗಿ ಬೆಳೆದು 'ಅವಸ್ಥೆ'ಯ ಕೃಷ್ಣಪ್ಪನಲ್ಲಿ ಖಚಿತವಾದ ತಾತ್ವಿಕ ಮತ್ತು ಸಾಮುದಾಯಿಕ ಸ್ವರೂಪವನ್ನು ಪಡೆದಿದೆ. ಚೂರು ನಾಟಕೀಯವಾಗಿ ಹೇಳುವುದಾದರೆ ಭಾರತದಂತಹ ಸಾಂಪ್ರದಾಯಿಕ ಬೇರುಗಳ, ಶ್ರೇಣೀಕೃತ ವ್ಯವಸ್ಥೆಯ ಸಮುದಾಯದಲ್ಲಿ ಜನತಂತ್ರ ತಾತ್ವಿಕತೆಯು ರೂಪುಗೊಳ್ಳಬಹುದಾದ ಬಲು ಕಷ್ಟದ ದಾರಿಯ ಪ್ರಯಾಣವಾಗಿ ಈ ಮೂರೂ ಕಾದಂಬರಿಗಳು ನನಗೆ ಕಾಣಿಸುತ್ತವೆ.

ಇದು ಈ ಕಾದಂಬರಿಗಳ ಸಮಾಜೋರಾಜಕೀಯ ನೆಲೆಯಾದರೆ ಇಷ್ಟೇ ದಟ್ಟವಾದ ಆಧ್ಯಾತ್ಮದ ಹುಡುಕಾಟವೂ ಈ ಕೃತಿಗಳಲ್ಲಿರುವುದು ಯಾರ ಅನುಭವಕ್ಕಾದರೂ ಬರುತ್ತದೆ. ತಾನು ತನಗಾಗಿ ಎನ್ನ ನೆಲೆಯಿಂದ ಆರಂಭವಾಗುವ ನಾರಣಪ್ಪನ ಹುಡುಕಾಟ, ತನಗೂ ಇತರರಿಗೂ ಎನ್ನುವ ವಿಸ್ತಾರವನ್ನು ಪಡೆದು ಕೃಷ್ಣಪ್ಪನಲ್ಲಿ ನನ್ನದು ನನ್ನದು ಮಾತ್ರವಲ್ಲ ಎನ್ನುವ ಸ್ಪಷ್ಟತೆಯನ್ನು ಪಡೆದುಕೊಳ್ಳುತ್ತದೆ. ಮನುಷ್ಯ ಚೈತನ್ಯದ ವಿಕಾಸವಾಗಿಯೇ ಇದು ಕಾಣಿಸುತ್ತದೆಯಲ್ಲವೆ? ದೂರ್ವಾಸಪುರ ಅಗ್ರಹಾರದಿಂದ ವಿಧಾನಸೌಧದ ತನಕದ ಈ ಪ್ರಯಾಣ ಬಹಿರಂಗದ ಪ್ರಯಾಣವೂ ಹೌದು ಅಂತರಂಗದ ಪ್ರಯಾಣವೂ ಹೌದು. ಪಲ್ಲಟವೂ ಹೌದು ಸಾತತ್ಯದ ಪ್ರಕ್ರಿಯೆಯೂ ಹೌದು. ಸರಳೀಕರಣಗೊಳಿಸಿದ ಹಾಗೆ ಕಂಡರೂ ಅನಂತಮೂರ್ತಿಯವರನ್ನು ಗ್ರಹಿಸಲು ಇದು ಒಂದು ಸರಿಯಾದ ಪ್ರವೇಶವೆಂದೇ ನನಗೆ ತೋರುತ್ತದೆ. ಏಕೆಂದರೆ, ಈ ಅಂತರಂಗದ ಮತ್ತು ಬಹಿರಂಗದ ಘರ್ಷಣೆ ಎನ್ನುವುದು ಅವರಲ್ಲಿ ಕೊನೆಯವರೆಗೂ ಉಳಿದ ಸಂಗತಿ. ಇದನ್ನು ಎಷ್ಟು ಬೇಕಾದರೂ, ಯಾವ ದಿಕ್ಕಿನಲ್ಲಿ ಬೇಕಾದರೂ ಬೆಳಸಬಹುದು. ಪರಂಪರೆ ಮತ್ತು ಆಧುನಿಕತೆಯ ಜೊತೆಗಿನ ಮುಖಾಮುಖಿಯಾಗಿ ಇದನ್ನು ಬೆಳಸುವ ಸಾಧ್ಯತೆಯೂ ಇದೆ.

ಅನುಭಾವದ ಹುಡುಕಾಟ ಎನ್ನುವುದನ್ನು ಅವರು ಇನ್ನೂ ಸ್ಪಷ್ಟವಾಗಿ ಮಾಡುವುದು 'ಸೂರ್ಯನ ಕುದುರೆ' ಕತೆಯಲ್ಲಿ. ಈ ಕತೆಯನ್ನು ಅವರ ಮೂರು ಕಾದಂಬರಿಗಳ ಜೊತೆ ಸೇರಿಸಿ ನಾಲ್ಕನೆಯ ಆಯಾಮ ಎಂದೂ ಕರೆಯಬಹುದು. ಆಧುನಿಕತೆ ಮತ್ತು ತಾಂತ್ರಿಕ ವೈಜ್ಞಾನಿಕ ಪ್ರಗತಿಯ ದಾರಿಯನ್ನು ಅನೇಕ ಕಾರಣಗಳಿಗಾಗಿ ನಂಬಿ ನೆಚ್ಚಿದ ನಿಲುವುಗಳನ್ನು ತೀವ್ರವಾದ ಶೋಧಕ್ಕೆ ಒಡ್ಡುವ ಅಪೂರ್ವ ಕಥನ ಇದು. ಆಧುನಿಕತೆಯನ್ನು ಈ ದೇಶದ ಅನೇಕ ರೋಗಗಳಿಗೆ ಮದ್ದೆಂದು, ಪರ್ಯಾಯವೆಂದು, ಪರಿಹಾರವೆಂದು ಗಾಢವಾಗಿ ನಂಬಿದ್ದ ನಂಬಿಕೆಯನ್ನು ಪುನರ್ಪರಿಶೀಲಿಸುವ ಈ ಕತೆ ನಿರ್ದಿಷ್ಟವಾದ ನಿಲುವಿಗೆ ಬರಲು ಸಾಧ್ಯವಾಗದೇ ಇಬ್ಬಂದಿತನದ ಸಂಕಟದಲ್ಲಿಯೇ ಮುಕ್ತಿಯನ್ನು ಹುಡುಕುವ ತೀವ್ರತೆಯನ್ನು ಪಡೆದಿದೆ. ಆಧುನಿಕತೆ ಮತ್ತು ಪರಂಪರೆಗಳು ಸಂಧಿಸುವ, ಅಖಂಡವಾಗುವ ಸಾಧ್ಯತೆಗಳೇ ಇಲ್ಲವೇ ಎನ್ನುವ ಅನಂತುವಿನ ತಲ್ಲಣ ಈ ದೇಶದ, ಮೂರನೆ ಜಗತ್ತಿನ ಎಲ್ಲರ ತಲ್ಲಣ. ಹಡೆ ವೆಂಕಟನಿಗೆ ತಲ್ಲಣಗಳಿಲ್ಲವೆಂದಲ್ಲ, ಆದರೆ ಆಯ್ಕೆಯ ದ್ವಂದ್ವವನ್ನು ಅವನು ಬಿಟ್ಟುಕೊಡಲು, ಬಿಟ್ಟುಬಿಡಲು ನಡೆಸುವ ಪ್ರಯತ್ನವೇ ಅನಂತುವಿಗೆ ಹುಟ್ಟಿಸುವ ಕಸಿವಿಸಿಯನ್ನು ಅರ್ಥಮಾಡಿಕೊಳ್ಳುವುದು ಹೇಗೆ? ತನ್ನೆಲ್ಲ ಕಷ್ಟದಲ್ಲೂ ಪೊರೆಯುವ ದೇವಿ ಇದ್ದಾಳೆ ಎನ್ನುವ ಅವನ ನಂಬಿಕೆ, ಭ್ರಮೆಯಾಗಿರಲಿ, ವಿಲೇಜ್ ಈಡಿಯಸಿಯಾಗಿರಲಿ, ಪರಂಪರೆಯ ಆಲಕ್ಕೆ ನೇಣು ಹಾಕಿಕೊಳ್ಳುವುದೇ ಆಗಿರಲಿ... ಏನೇ ಆಗಿರಲಿ, ಅದು ಅವನ ಬದುಕನ್ನು ಹೋಗುತ್ತ ಕೊಯ್ಯುವ ಬರುತ್ತ ಕೊಯ್ಯುವ ಗರಗಸವಾಗಿಸುವುದರಿಂದ ತಪ್ಪಿಸುತ್ತದೆ ಅನ್ನುವುದಾದರೆ ..ಎನ್ನುವ ಪ್ರಶ್ನೆ ನಿಜಕ್ಕೂ ಮೂರನೆ ಜಗತ್ತಿನ ಲಕ್ಷಾಂತರ ಜನರ ಪ್ರಶ್ನೆ ಅಲ್ಲವೆ? ಹಡೆ ವೆಂಕಟ ಬೇಜವಾಬ್ದಾರಿಯವನು ಅನ್ನುವುದಾದರೆ, ಅವನ ಮಗನನ್ನು ಅರ್ಥ ಮಾಡಿಕೊಳ್ಳುವ, ಅವನಿಗೆ ಬದುಕಿನ ದಾರಿ ತೋರಿಸುವ ಶಕ್ತಿ ಅವನಿಗಿಲ್ಲ, ಅವನು ಸೋತಿದ್ದಾನೆ ಅನ್ನುವುದಾದರೆ ಮಾರ್ಕ್ಸ್‌ನಿಂದ ಪ್ರಭಾವಿತನಾದ ಅವನ ದಾರಿ ಭಾರತದ ದಾರಿಯಾದರೆ ಸರಿಯಾದೀತು. ಅವನ ಮಗನಿಗೆ ಒಂದು ದಾರಿ ತೋರಿಸಲು ಸಾಧ್ಯವಿದೆಯೇ ಎಂದರೆ ಅದೂ ಸಾಧ್ಯವಿಲ್ಲ ಅನ್ನುವುದಾದರೆ ವ್ಯಕ್ತಿಯಾಗಿ ತಾನೆ ಒಂದು ಹೆಜ್ಜೆ ಮುಂದಿಡಲು ಸಾಧ್ಯವಿಲ್ಲ ಎಂದಾದರೆ ಮಾರ್ಕ್ಸ್‌ನ ದಾರಿ ಸರಿಯೇ ತಪ್ಪೆ? ಹಡೆ ವೆಂಕಟ 'ಸೂರ್ಯನ ಕುದುರೆ' ನೋಡುತ್ತಾ ದೇವಿಯನ್ನು ಧ್ಯಾನಿಸುತ್ತಾ ಜೈಲರ್‌ನಿಗೆ ಒಂದು ಅಭ್ಯಂಜನ ಮಾಡಿಸಿ ಮಗನನ್ನು ಬಿಡಿಸಿಕೊಳ್ಳುವ ಕನಸು ಕಾಣುತ್ತಾ, ಅನಂತುವಿಗೆ ಅಭ್ಯಂಜನ ಮಾಡಿಸುತ್ತಲೆ ದೇವಿಯನ್ನು ತೋರಿಸ ಬಯಸುವ ದಾರಿ ಯಾಕೆ ತಪ್ಪು?

ವ್ಯಕ್ತಿಗತ ಸವಾಲನ್ನು ಈ ಕತೆ ಅದ್ಭುತವಾಗಿ ಎನ್ನುವಂತೆ ಸಾಧಾರಣೀಕರಿಸುತ್ತದೆ. ಎಂತಲೇ ಈ ಕತೆ ಭಾರತದ ಅತ್ಯುತ್ತಮ ಕತೆಗಳಲ್ಲಿ ಒಂದು.


ಅನಂತಮೂರ್ತಿಯವರ ಯಶಸ್ಸು ಮಹತ್ವ ಪ್ರಸ್ತುತತೆ ಇರುವುದಾದರೂ ಈ ಕಾರಣಕ್ಕೇ. ತನ್ನ ಕಾಲದ ಪ್ರತಿನಿಧಿಯಾಗುತ್ತಲೇ ಮನುಷ್ಯನ ಸರ್ವಕಾಲಿಕ ಹುಡುಕಾಟಗಳನ್ನು ತಮ್ಮ ಬದುಕು ಮತ್ತು ಬರವಣಿಗೆ ಎರಡರಲ್ಲೂ ಅಪೂರ್ವ ಕಥನ ಮಾದರಿಯಲ್ಲಿ ಮಾಡಿದ ಕಾರಣಕ್ಕೆ.






● ಡಾ.ಎಂ.ಎಸ್.ಆಶಾದೇವಿ

‘ಮಾತು ಸೋತ’ ಗಳಿಗೆಯಲ್ಲಿ ನಿರ್ಗಮಿಸಿದ ‘ಮಾತು’ಗಾರ



‘ನುಡಿ ನಮನ’ ಬರೆಯುವಾಗ, ತೀರಿಹೋದವರ ಜೊತೆಗಿನ ಸಂಬಂಧವನ್ನು ಆಪ್ತತೆಯಲ್ಲಿ ನೆನೆಯಬೇಕು; ಆದರೆ, ಆಪ್ತತೆ, ಅವರ ವೈಚಾರಿಕತೆಯ ಕುರಿತಾದ ನಮ್ಮ ಪ್ರಾಮಾಣಿಕ ಅನಿಸಿಕೆಗಳನ್ನು ಹೇಳುವುದಕ್ಕೆ ಅಡ್ಡಿಯಾಗದ ಹಾಗಿರಬೇಕು ಎನ್ನುವುದು, ಕನ್ನಡದ ಉತ್ತಮ ‘ನುಡಿ ನಮನ’ಗಳು ಹಾಕಿಕೊಟ್ಟಿರುವ ಭಾವ ವ್ಯಾಕರಣ. ಆದರೆ, ಮೇಷ್ಟ್ರ ಬಗ್ಗೆ ಬರೆಯಬೇಕಾದ ಈ ಹೊತ್ತಿನ ಕಾಲ-ದೇಶ, ಭಾಷೆಯು ಸೂಕ್ಷ್ಮ ದನಿಗಳನ್ನು ಕೇಳಿಸಿಕೊಳ್ಳಲು ವ್ಯವಧಾನವಿಲ್ಲದ ಉದ್ಧಟತನದಲ್ಲಿ ವರ್ತಿಸುತ್ತಿದೆ; ‘ಆಪ್ತತೆ’-‘ಆರಾಧನೆ’ಗೂ, ನಿಷ್ಠೂರ ಟೀಕೆಗೂ- ಕೀಳು ಕಟುಕಿಗೂ ನಡುವೆ ಗೆರೆಯೇ ಇಲ್ಲದ ಹಾಗೆ ‘ಮಾತು’ ತನ್ನ ಮಾಟ ಕಳೆದುಕೊಂಡಂತೆ ಅನಿಸುತ್ತಿದೆ. ಇದು ಕೂಡ, ದಿವಂಗತರಾದ ಮೇಷ್ಟ್ರ ಮೇಲೇರಿ ಕುಕ್ಕಿ, ತನ್ನ ವಿಕಾರವನ್ನು ತೋರಿದ ವಿದ್ಯಮಾನ ಎನ್ನುವುದನ್ನು ನೆನೆದರೆ, ಬರೆಯುವುದಕ್ಕೆ ಆತಂಕವಾಗುತ್ತದೆ.

ಅನಂತಮೂರ್ತಿ, ‘ಮಾತು’-ಅದರಲ್ಲೂ ಕನ್ನಡದ ಹಲವು ದನಿಗಳ ‘ಆಡುಮಾತಿನ’ ಕಸುವನ್ನು ತನ್ನ ವಿಚಾರದ ಚಿತ್ರವತ್ತಾದ ಸಂವಹನ(ಗೆಸ್ಚರ್)ಕ್ಕೆ ಸಶಕ್ತವಾಗಿ ದುಡಿಸಿಕೊಂಡ ಅತ್ಯುತ್ತಮ ಕಲಾವಿದರು; ಕನ್ನಡಿಗರ ಬುದ್ಧಿ-ಭಾವಕ್ಕೆ ತಟ್ಟನೇ ತಾಗುವ ‘ಆಡುಗನ್ನಡ’ದಲ್ಲಿ ಹೇಳಲಾಗದ ಎಲ್ಲಾ ವಿಚಾರಗಳೂ ಅವರಿಗೆ ಅಮೂರ್ತವೆನಿಸುತ್ತಿದ್ದವು. ತನಗೆ ಹೊಳೆದ ಅಮೂರ್ತ ತತ್ವ-ವಿಚಾರವನ್ನು ಆಡುಗನ್ನಡದಲ್ಲಿ ಅನೇಕವಾಗಿ ಹೇಳಲಾಗದೆನಿಸಿದಾಗಲೆಲ್ಲಾ ಅವರು, ಕಥನವಾಗಿ ನಿರೂಪಿಸಿ; ಅವುಗಳನ್ನು ಕನ್ನಡದ ನುಡಿಗಟ್ಟಿನೊಳಗೆ ಸಹಜವಾಗಿಸುತ್ತಿದ್ದರು. ಅವರು, ತನ್ನ ಸಾಹಿತ್ಯವನ್ನು ‘ನನ್ನ ಕಾಲದ ಎಲ್ಲರ ಮಾತಿನ ಜೊತೆ, ನನ್ನ ಮಾತೂ ಸೇರಿ, ನನ್ನ ಮಾತಿನ ಜೊತೆ ನನ್ನ ತಲೆಮಾರಿನ ಮಾತು ಸೇರಿ’ ಕಟ್ಟಿಕೊಂಡ ವಿಚಾರ ಎಂದಾಗ ಅದು ಬರಿ ತೋರಿಕೆಯ ವಿನಯವಾಗಿರದೇ, ಅವರ ವೈಚಾರಿಕ ವಿಳಾಸದ ಸರಿಯಾದ ವಿವರಣೆಯಾಗಿತ್ತು. ಅವರ ‘ಮಾತುಸೋತ ಭಾರತ’ ಪ್ರಬಂಧ ಸಂಕಲನ, ಭಾರತದಲ್ಲಿ ಬೆಳೆಯುತ್ತಿದ್ದ ‘ಹಿಂದೂತ್ವವಾದದ ಹಿಂಸೆ’ ಮತ್ತು ‘ಅಭಿವೃದ್ಧಿಯ ಹಿಂಸೆ’ಗಳ ಕುರಿತು ಭಯಾತಂಕ ಸಹಿತವಾಗಿ ನಿಷ್ಠೂರ ನುಡಿಯಲ್ಲಿ ಅವರು ಮಾಡಿದ ಭಾಷಣಗಳ ಲಿಖಿತರೂಪವಾಗಿದ್ದು ಆಕಸ್ಮಿಕವಲ್ಲ; ಅವರಾಡುತ್ತಿದ್ದ ‘ಮಾತು’ ಮತ್ತು ‘ಬರಹ’ಗಳ ನಡುವೆ ಬಿರುಕೇ ಇಲ್ಲ. ‘ಅಲ್ಲಿ ಇಲ್ಲಿ ಮಾಡಿದ ಭಾಷಣಗಳನ್ನು ಒಟ್ಟಿಗೆ ಸೇರಿಸಿ ಒಂದು ಪುಸ್ತಕ ಮಾಡವ್ರೆ’ ಅಂತ ಮೇಷ್ಟ್ರ ಬಗ್ಗೆ ಉಡಾಫೆ ಮಾತಾಡುವ ಹಾಗಿಲ್ಲ- ಅವರು, ಆ ಭಾಷಣಗಳನ್ನು ಮಾಡದೇ ಹೋಗಿದ್ದರೆ, ಎಂದೂ ಕೂತು ‘ಬರೆಯುತ್ತ’ಲೂ ಇರಲಿಲ್ಲ. ‘ಮಾತು’ ಅವರಿಗೆ ಸುತ್ತಲಿನ ಲೋಕವನ್ನರಿಯುವ ಪ್ರಮಾಣ, ಲೋಕದ ಕುರಿತು ತನ್ನ ವ್ಯಾಖ್ಯಾನ. ಹತ್ತು ವರ್ಷಗಳ ಅವರ ಜೊತೆಗಿನ ಒಡನಾಟದಲ್ಲಿ ಒಂದು ವಿಷಯ ನನ್ನ ಗಮನಕ್ಕೆ ಬಂದಿತು: ಆಪ್ತ ಸಭೆ ಸಮಾರಂಭಗಳಲ್ಲಿ ಮಾತನಾಡುವಾಗ, ಅವರು ಯಾವ ಟಿಪ್ಪಣಿಗಳನ್ನೂ ಮಾಡಿಟ್ಟುಕೊಳ್ಳುತ್ತಿರಲಿಲ್ಲ; ಅಂದಿಗೆ ಪ್ರಸ್ತುತವಾದ ಒಂದು ಮಾತಿನ ಎಳೆಯನ್ನು ಹಿಡಿದುಕೊಂಡು, ತಮ್ಮ ವಿಚಾರಗಳನ್ನು ಹೆಣೆಯುವ ಬಗೆಯಲ್ಲಿ ವಿಸ್ತರಿಸಿಕೊಂಡು ಹೋಗುತ್ತಿದ್ದರು. ಅಂತಹ ಮಾತುಗಳ ಧ್ವನಿಮುದ್ರಣವೇ, ಅವರ ಅನೇಕ ಖ್ಯಾತ ಬರಹಗಳ ಮೂಲಗಳಾಗಿವೆ. ತುಂಬಾ ವಿಸ್ತಾರವಾದ, ತನಗೆ ಪರಿಚಿತವಲ್ಲದ ಒಂದು ದೊಡ್ಡ ಸಮೂಹವನ್ನು ಉದ್ದೇಶಿಸಿ ಮಾತನಾಡುವ ಸಂದರ್ಭಗಳಲ್ಲಿ ಅವರು, ತಮಗೆ ಆಪ್ತರೆನಿಸಿದವರ ಜೊತೆ ‘ನಾಳೆ ನಾನು ಈ ವಿಚಾರವಾಗಿ, ಹೀಗೆ ಮಾತಾಡಬೇಕೆಂದಿದ್ದೇನೆ’ ಎಂದು ಹೇಳಿ, ಹಾಗೆ ಮಾತನಾಡಬೇಕಾದದ್ದು ಯಾಕೆ ಜರೂರಾಗಿದೆ ಎಂದೂ ವ್ಯಾಖ್ಯಾನಿಸಿ ‘ಏನು ಹೇಳ್ತಿ ಕಣೋ!’ ಎಂದು ಕಾಯುತ್ತಿದ್ದರು; ಜೊತೆ ಇದ್ದವರು ಹೇಳಿದ ಮಾತುಗಳನ್ನು ಆಸಕ್ತಿದಾಯಕ ಎನಿಸಿದರೆ ‘ಇಂಟರೆಸ್ಟಿಂಗ್’ ಅನ್ನುತ್ತಾ ಕೇಳಿಸಿಕೊಳ್ಳುತ್ತಿದ್ದರು, ಇಲ್ಲದೇಹೋದರೆ, ವಿಷಯಾಂತರ ಮಾಡಿ ಲೋಕಾಭಿರಾಮಕ್ಕೆ ಮರಳಿಬಿಡುತ್ತಿದ್ದರು. ಮರುದಿನ ಭಾಷಣ ಮಾಡುವ ಹೊತ್ತಿಗೆ ಅವರ ಬಳಿ ಕೆಲವು ಹೇಳಬೇಕಾದ ಅಂಶಗಳನ್ನು ನಮೂದಿಸಿಕೊಂಡ ಒಂದು ಚೀಟಿ ಅಥವಾ ಮೊಬೈಲಿನ ನೋಟ್ ಇರುತ್ತಿತ್ತು ಅಷ್ಟೇ. ಅವರು ಮಾತನಾಡುತ್ತಾ ಹಿಂದಿನ ದಿನ ‘ಇಂಟರೆಸ್ಟಿಂಗ್’ ಅಂದ ವಿಚಾರಗಳನ್ನು ಹೆಣೆದು ಮಾತನಾಡುವಾಗ, ಅದು ನಿಮ್ಮ ಕಾಪಿರೈಟೂ ಅಂತ ಹೇಳುವ ಹಾಗೂ ಇರುತ್ತಿರಲಿಲ್ಲ-ಅವರು ಅದಕ್ಕೆ ತಮ್ಮದೇ ಭಿನ್ನ ವ್ಯಾಖ್ಯಾನ ಸೇರಿಸಿ ಬಿಡುತ್ತಾ ಇದ್ದರು. ಆದರೆ, ವಾಗ್ವಾದದ ಮುಂದುವರಿಕೆಗೆ ಯೋಗ್ಯ ಎನ್ನುವ ಆಪ್ತರ ವಿಚಾರಗಳಿದ್ದಲ್ಲಿ, ಅದಕ್ಕೆ ‘ನಮ್ಮ ರಾಜಶೇಖರ ಹೇಳ್ತಾರೆ...’ ಅನ್ನೋ ಅಕ್ನಾಲೆಜ್ಮೆಂಟು ಇದ್ದು, ಅದಕ್ಕೆ, ಟೀಕುಗಳ ಮೂಲಕ ತಮ್ಮ ವಿಚಾರಗಳಿಗೆ ರೂಪ ಕೊಟ್ಟುಕೊಳ್ಳುತ್ತಿದ್ದರು. ಹೀಗೆ, ‘ಮಾತ’ನ್ನೇ ಪ್ರಮಾಣ ಮಾಡಿಕೊಂಡಿದ್ದವರು, ‘ನಮ್ಮ ಇಸ್ಮಾಯಿಲನ ಒತ್ತಾಯಕ್ಕೆ ಒಪ್ಪಿ’ ‘ಋಜುವಾತು’ ಎಂಬ ಪಾಕ್ಷಿಕ ಅಂಕಣವನ್ನು ಬರೆಯುವಾಗ ಮಾಡಿಕೊಳ್ಳುತ್ತಿದ್ದ ಚಡಪಡಿಕೆಯನ್ನೂ ನಾನು ಗಮನಿಸಿದ್ದೇನೆ. ಆ ಅಂಕಣ ಪ್ರಕಟವಾದ ಪ್ರತಿ ಆದಿತ್ಯವಾರ ಸಂಜೆಯೊಳಗೆ ನನ್ನಂಥ ಸ್ನೇಹಿತರು ಎಸ್ಸೆಮ್ಮೆಸ್ ಮೂಲಕವೋ, ಮೇಲ್ ಮೂಲಕವೋ ಪ್ರತಿಕ್ರಿಯೆ ಕಳಿಸದೇ ಇದ್ದರೆ, ‘ಏನೋ, ಓದಿಲ್ವೇನೋ!’ ಅನ್ನೋ ಕಾಲ್ ಬರುತ್ತಿತ್ತು, ‘ಅಯ್ಯೋ, ಓದಿದ್ದೀನಿ ಸಾರ್. ನಂಗೆ ಒಂಚೂರು ಜಗಳ ಇದೆ. ಬರೆದು ಮೇಲ್ ಮಾಡ್ಬೇಕು ಅಂತಿದ್ದೆ...’ ಅಂದ್ರೆ ‘ಹಾಗಾದ್ರೇನು! ಐ ಯಾಮ್ ಈಗರ್ಲಿ ವೇಟಿಂಗ್’ ಅನ್ನೋರು. ವಿಚಾರ ‘ಬರವಣಿಗೆ’ ಮಾತ್ರವೇ ಆಗಿದ್ದಾಗ, ಮೇಷ್ಟ್ರಿಗೆ ‘ಬರವಣಿಗೆ’ಯನ್ನು ‘ವಾಗ್ವಾದ’ವಾಗಿಸುವ ಹುಮ್ಮಸ್ಸು. ಅದು ತೋರಿಕೆಯದ್ದಾಗಿರಲಿಲ್ಲ. ಅವರು ಒಟ್ಟು ಅಂಕಣವನ್ನು ಪುಸ್ತಕವಾಗಿ ಹೊರ ತರುವಾಗ, ಅವರು ಹಾಗೆ ಕೇಳಿ ಪಡೆದ ‘ವಾಗ್ವಾದ’ಗಳನ್ನು, ಎಷ್ಟೇ ಕಟುವಾಗಿದ್ದರೂ, ಹಾಗೇ ತಮ್ಮ ಬರಹಗಳ ಜೊತೆ ಪ್ರಕಟಿಸಿದರು; ತೀರಾ ನಿರಾಕರಣೆ ಇದ್ದಲ್ಲಿ, ತಮ್ಮ ಪ್ರತಿ ಮಾತನ್ನು ಸಂಕ್ಷಿಪ್ತವಾಗಿ ಸೇರಿಸಿದ್ದರು. ‘ಮಾತು’ ಮೇಷ್ಟ್ರಿಗೆ ‘ಪ್ರಮಾಣ’ವೂ, ‘ದೈವ’ವೂ ಆಗಿತ್ತು, ‘ಬರಹ’ ಮಾತ್ರವಾಗಿದ್ದವು ಹೆಚ್ಚಾಗಿದ್ದಾಗ, ಅವರು ಸ್ವಇಚ್ಛೆಯಿಂದ ವಾಗ್ವಾದಯುಕ್ತ ಪ್ರತಿಕ್ರಿಯೆಗಳನ್ನು ಬರೆಸಿಕೊಂಡು, ‘ತಮ್ಮ ಮಾತನ್ನೂ’ ಸೇರಿಸಿದ ಮತ್ತೊಂದು ಪ್ರಬಂಧ ಸಂಕಲನ ‘ವಾಲ್ಮೀಕಿಯ ನೆವದಲ್ಲಿ’. ಹೀಗೆ, ತನ್ನ ‘ಮಾತನ್ನು’ ಮತ್ತೊಬ್ಬರ ಮಾತಿನ ಜೊತೆ ಸೇರಿಸಿಕೊಂಡು ‘ವಾಗ್ವಾದ’ವಾಗಿಸುವ ಇಚ್ಛೆಯುಳ್ಳ ಇಬ್ಬರು ಕನ್ನಡದ ಲೇಖಕರು- ‘ಲಂಕೇಶ್ ಪತ್ರಿಕೆ’ಯ ಪಿ.ಲಂಕೇಶ್ ಹಾಗು ಯು.ಆರ್. ಅನಂತಮೂರ್ತಿ. ಈ ಇಬ್ಬರ ‘ಮಾತಿನ’ ಕ್ರಿಯೆಯೂ ಪ್ರಶ್ನಾತೀತವೇನಲ್ಲ-ಅವರ ಸಂವೇದನೆ, ಆಯ್ಕೆಗಳಿಗೆ ಮಿತಿಗಳಿವೆ- ನಮ್ಮ ಕಾಲದ ಯಾವ ಸಂವೇದನೆ ಹಾಗು ಆಯ್ಕೆಗಳು, ಅವರುಗಳಿಗಿಂತ ಹೆಚ್ಚು ಮುಕ್ತವೂ, ವಿಸ್ತಾರವೂ ಆಗಿವೆ ಎಂದು ವಿವರಿಸುವುದು ಬೌದ್ಧಿಕ ಜವಾಬ್ದಾರಿಯಾಗಿರುತ್ತದೆಯೇ ಹೊರತು- ಹಂಗಿಸುವುದಲ್ಲ ಎನ್ನುವುದನ್ನು ಮಾತ್ರ ಈ ಕ್ಷಣದಲ್ಲಿ ಸೂಚಿಸಬಯಸುವೆ.




ಅನಂತ ಮೂರ್ತಿ ರೀತಿ

ಲಂಕೇಶ್ ಮತ್ತು ಅನಂತಮೂರ್ತಿ ಇಬ್ಬರೂ, ವೈಚಾರಿಕ ವಾಗ್ವಾದಗಳನ್ನು ಚೋದಿಸುವ ಬಗೆಯಲ್ಲಿ ಮಾತನಾಡುತ್ತಿದ್ದರು. ಅದನ್ನು ನಾವುಗಳೆಲ್ಲ ‘ವಿವಾದ ಸೃಷ್ಟಿ’ ಎನ್ನುತ್ತೇವೆ- ‘ವಿವಾದ’ಕ್ಕೆ ತರ್ಕ, ಚರ್ಚೆ, ಮಾತಿಗೆ ಮಾತು ಎಂಬ ಅರ್ಥಗಳಿವೆ, ಹಾಗೆಯೇ ಜಗಳ ಎಂಬ ಅರ್ಥವೂ ಇದೆ; ಬರುಬರುತ್ತಾ ‘ವಿವಾದ’, ‘ಕಲಹ ಕುತೂಹಲ’ದ ಅರ್ಥಕ್ಕೆ ಇಳಿದುಬಿಟ್ಟಿದೆ. ಅನಂತಮೂರ್ತಿ ‘ಮೋದಿ ನಾಡಿನಲ್ಲಿ ನನಗೆ ಬದುಕಲು ಇಷ್ಟವಿಲ್ಲ’ ಎಂದಾಗ ಅದು ತರ್ಕ, ಚರ್ಚೆಗಳನ್ನು ಆಹ್ವಾನಿಸುವ ಮಾತಾಗಿತ್ತು; ಆದರೆ ಅದನ್ನು ‘ಕಲಹ ಕುತೂಹಲ’ದ ಮಟ್ಟಕ್ಕಿಳಿಸಲು ‘ವಿಜಯವಾಣಿ’ ಹಾಗು ‘ಕನ್ನಡಪ್ರಭಾ’ ಪತ್ರಿಕೆಗಳು ಆ ಮಾತುಗಳನ್ನು ‘ಮೋದಿ ಪ್ರಧಾನಿಯಾದರೆ ನಾನು ಈ ದೇಶದಲ್ಲಿ ಇರಲಾರೆ’ ಎಂದು ತಿರುಚಿದವು. ಇಂಗ್ಲಿಷ್ ಪತ್ರಿಕೆಗಳು ಮಕ್ಕಿಕಾಮಕ್ಕಿ ‘ಇಫ್ ಮೋದಿ ಬಿಕಮ್ಸ್ ಪ್ರೈಮಿನಿಸ್ಟರ್, ಐ ವಿಲ್ ಲೀವ್ ದ ಕಂಟ್ರಿ’ ಎಂದು ಪ್ರಸಾರ ಮಾಡಿದವು; ಇದನ್ನೇ ನಂಬಿಕೊಂಡ ಅಮಾರ್ತ್ಯ ಸೇನ್ ಕೂಡ ‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾಯಿತ ಅಭ್ಯರ್ಥಿ ನಮಗೆ ಒಪ್ಪಿತವಲ್ಲದಿದ್ದರೂ, ಈ ರೀತಿ ಪ್ರತಿಕ್ರಿಯೆ ತೋರುವುದು ಸರಿಯಲ್ಲ’ ಎನ್ನುವ ಮಟ್ಟ ತಲುಪಿದೆವು. ಇದಾದ ಕೆಲವೇ ತಿಂಗಳುಗಳ ನಂತರ, ಮೇಷ್ಟ್ರಿಗೆ ‘ಬಸವಶ್ರೀ’ ಪ್ರಶಸ್ತಿ ನೀಡಿರುವುದನ್ನು ವಿರೋಧಿಸಿದ ಎಂ.ಎಂ.ಕಲ್ಬುರ್ಗಿ, ತಮ್ಮ ವಾದವನ್ನು ಸಮರ್ಥಿಸಿಕೊಳ್ಳುವ ಸಲುವಾಗಿ, ಅನಂತಮೂರ್ತಿ ತಮ್ಮ ಭಾಷಣವೊಂದರಲ್ಲಿ ‘ಬಸವಣ್ಣ ಇಸ್ ಎ ನಾನ್ಸೆನ್ಸ್ ಫಿಲೋಸಫರ್’ ಎಂದಿದ್ದಾರೆ ಎಂದು ಆರೋಪಿಸಿದರು-ವಾಸ್ತವದಲ್ಲಿ ‘ನೋ ನಾನ್ಸೆನ್ಸ್’ ಎನ್ನುವುದು ಕಲ್ಬುರ್ಗಿಯವರು ಕಂಡ ಮುದ್ರಣದ ಅವತಾರಿಣಿಕೆಯಲ್ಲಿ ‘ನಾನ್ಸೆನ್ಸ್’ ಎಂದಾಗಿತ್ತು; ಕಲ್ಬುರ್ಗಿಯಂಥ ಸಂಶೋಧಕರು ತಾವು ಕಂಡದ್ದೇ ನಿಜ ಎಂದು ಪಟ್ಟು ಹಿಡಿದರೇ ವಿನಹ, ಇಂಗ್ಲಿಷಿನಲ್ಲಿ ಆ ಬಗೆಯ ಮಾತಿನ ಬಳಕೆ ಇದೆಯೋ ಇಲ್ಲವೋ ಎಂದು ವಿವೇಚಿಸಲೂ ಇಲ್ಲ. ಇದಾದ ಕೆಲವೇ ದಿನಗಳಲ್ಲಿ, ಇದೇ ಕಲ್ಬುರ್ಗಿಯವರು ‘ಮೌಢ್ಯವಿರೋಧಿ ಕಾನೂನು’ನನ್ನು ಜಾರಿಗೆ ತರಬೇಕು ಎಂದು ಒತ್ತಾಯಿಸುವ ಸಲುವಾಗಿ ಸಂಘಟಿಸಲಾಗಿದ್ದ ವಿಚಾರಮಂಥನ ಸಭೆಯಲ್ಲಿ ಮಾತನಾಡುತ್ತಾ, ಅನಂತಮೂರ್ತಿಯವರು ತಮ್ಮ ‘ಬೆತ್ತಲೆ ಪೂಜೆ ಏಕೆ ಕೂಡದು?’ ಎಂಬ ಪ್ರಬಂಧದಲ್ಲಿನ ಒಂದು ಸಾಲನ್ನು, ಅದರ ಸಂದರ್ಭ, ಆ ಸಾಲಿನ ನಂತರದಲ್ಲಿ ಇರುವ ವಿವೇಚನಾ ವಿವರಣೆಗಳನ್ನು ಕಡೆಗಾಣಿಸಿ, ತಮ್ಮ ವಾದದ ಪುಷ್ಟಿಗೆ ಅನುಕೂಲವಾಗುವ ಹಾಗೆ ಬಳಸಿಕೊಂಡರು. ಮರುದಿನ ಮೇಲೆ ಕಾಣಿಸಿದ ಎರಡು ಕುಖ್ಯಾತ ಪತ್ರಿಕೆಗಳೂ ಹಾಗು ಹಿಂದೂತ್ವ ಪಡೆಗಳು ಆ ಒಂದು ವಾಕ್ಯವನ್ನೇ ಹಿಡಿದುಕೊಂಡು, ಗಲಭೆ ಸೃಷ್ಟಿಸಿದವು. ಕಲ್ಬುರ್ಗಿಯವರು ಆಗಲೂ ತಮ್ಮಿಂದಾದ ತಪ್ಪನ್ನು ಅರ್ಥೈಸದೇ ಇಡೀ ಹೊಣೆಯನ್ನು ಅನಂತಮೂರ್ತಿಯವರ ಮೇಲೆ ಹೊರಿಸಿ, ಕ್ಷಮೆಯಾಚಿಸತೊಡಗಿದರು. ಅನಂತಮೂರ್ತಿಯವರನ್ನು ‘ತಾನಾಡದ ಒಂದು ಮಾತಿಗೆ’ ಇಡೀ ಮಾಧ್ಯಮ ಕಟಕಟೆಯಲ್ಲಿ ನಿಲ್ಲಿಸಿ ಪ್ರಶ್ನಿಸತೊಡಗಿತು. ಆಗ ಅನಂತಮೂರ್ತಿ, ಕಲ್ಬುರ್ಗಿಯವರನ್ನು ದೂಷಿಸಲಿಲ್ಲ, ಕಟಕಟೆಯಲ್ಲಿ ನಿಲ್ಲಲು ಅಂಜಲಿಲ್ಲ; ಅವರು ಕೇಳಿದ್ದು ಒಂದನ್ನೇ-ಹದಿನೆಂಟು ವರ್ಷಗಳ ಹಿಂದೆ ಪ್ರಕಟವಾಗಿ, ಬಹು ಚರ್ಚೆಗೆ ಒಳಗಾಗಿದ್ದ ಆ ಪ್ರಬಂಧದ, ಎತ್ತಿ ಆಡಿದ ಸಾಲಿರುವ ಇಡಿ ಪ್ಯಾರಾವನ್ನು ನಿಮ್ಮ ಮಾಧ್ಯಮದ ಮೂಲಕ ಕನ್ನಡದ ಜನರಿಗೆ ಓದಿ ಹೇಳಲು ಬಿಡಿ; ಆದರೆ, ಮಾಧ್ಯಮಗಳು ಅವರಿಗೆ ಆ ಒಂದು ಅವಕಾಶವನ್ನೂ ಕೊಡಲಿಲ್ಲ. ಇಷ್ಟೆಲ್ಲಾ ಆದಮೇಲೂ, ಕನ್ನಡದ ಖ್ಯಾತವಂತ ಕವಿ ಎಚ್.ಎಸ್.ಶಿವಪ್ರಕಾಶ್, ಕನ್ನಡದ ಖ್ಯಾತ ಪತ್ರಿಕೆಯಲ್ಲಿ ತಾವು ಬರೆಯುವ ಅಂಕಣದಲ್ಲಿ, ಅನಂತಮೂರ್ತಿಯವರು ತಮ್ಮ ಪ್ರಸ್ತುತ ಪ್ರಬಂಧದಲ್ಲಿ ಯಾವ ವಿಚಾರಗಳನ್ನು ಹೆಚ್ಚು ಸೋದಾಹರಣವಾಗಿ ಹೇಳಿದ್ದರೋ, ಅದಕ್ಕಿಂತ ಹೆಚ್ಚಿನದೇನನ್ನೂ ಹೇಳದೆ, ಆ ‘ವಿವಾದಾಸ್ಪದ’ ಒಂದೇ ಸಾಲನ್ನು ಎತ್ತಿ ಆಡಿ, ಅನಂತಮೂರ್ತಿಯವರನ್ನುದ್ದೇಶಿಸಿ ಅಸಂದಾರ್ಭಿಕವಾಗಿ ಕುಹಕವಾಡಿದರು. ಇದು ‘ಮಾತಿಗೆ’ ಕನ್ನಡದಲ್ಲಿ ಬಂದೊದಗಿದ ಅಧೋಗತಿ!

ಮೇಷ್ಟ್ರು ಎಂದೂ ಕಟ್ಟಾ ನಾಸ್ತಿಕರೂ, ಸಾಂಪ್ರದಾಯಿಕ ವಿಧಿ-ವಿಧಾನಗಳ ಕಡು ವಿರೋಧಿಗಳೂ ಆಗಿರಲಿಲ್ಲ ಎನ್ನುವುದು ಅವರ ಪ್ರಕಟಿತ ಸಾಹಿತ್ಯ ಸಂಚಯದಿಂದಲೇ ತಿಳಿಯುತ್ತದೆ. ಸಂಪ್ರದಾಯವಾದಿಗಳ ಕಡು ವಿರೋಧಕ್ಕೆ ಕಾರಣವಾಗಿದ್ದ ಅವರ ‘ಸಂಸ್ಕಾರ’ ಹಾಗು ‘ಭಾರತೀಪುರ’ ಕಾದಂಬರಿಗಳು ನಾಸ್ತಿಕತೆ, ಸಂಪ್ರದಾಯ ವಿರೋಧಿ ಕ್ರಾಂತಿಕಾರಿ ವ್ಯಕ್ತಿವಿಚಾರಗಳು ಹಾಗು ಆಸ್ತಿಕ, ಸಂಪ್ರದಾಯಸ್ಥ ಜನಸಮುದಾಯದ ನಂಬಿಕೆಗಳ ನಡುವೆ ಏರ್ಪಟ್ಟಿರುವ ಬಿಕ್ಕಟ್ಟಿನ ಕಥನಗಳೇ ಆದರೂ, ಅಲ್ಲಿ ಕಥಿಸುವ ಲೇಖಕನ ನಿಲುವು ಡೋಲಾಯಮಾನದ್ದು; ಎರಡರಲ್ಲಿರುವ ಶಕ್ತಿಯ ಕಡೆ ಒಲವು, ಎರಡಲ್ಲಿರುವ ಕಟುತ್ವಗಳ ಬಗೆಗಿನ ಅಸಹ್ಯ... ಒಟ್ಟಿಗೇ ಅನುಭವಿಸಿ, ಹೊಸದೊಂದು ಮಾರ್ಗ... ಕಟ್ಟಿಕೊಳ್ಳಬಹುದೇ ಎಂಬ ಅಸಾಧ್ಯ ತಹತಹಿಕೆಯ... ಈ ತಹತಹಿಕೆಯನ್ನು ಓದುಗರು ಅನಂತಮೂರ್ತಿಯ... ಖ್ಯಾತ ಪ್ರಬಂಧಗಳಾದ ‘ಪ್ರಜ್ಞೆ ಮತ್ತು ಪರಿಸರ’ ವ... ‘ಭಾರತೀಯ ಸಂಸ್ಕೃತಿ ಮತ್ತು ಲೇಖಕ’ (ಇ... ವಾಗ್ವಾದರೂಪಿಯಾಗಿ ಪೂರ್ಣಚಂದ್ರ ತೇಜಸ್ವಿಯ... ‘ಕರ್ನಾಟಕದ ಸಂಸ್ಕೃತಿ ಮತ್ತು ಲೇಖಕ’ ಎನ್ನುವ ಪ್ರಬಂಧ... ಬರೆದರು)ಗಳಲ್ಲೂ ಕಾಣಬಹುದು. ‘ಪೂರ್ವಾಪರ’ ಸಂಕಲ... ನಂತರ ಮೇಷ್ಟ್ರು ಹೆಚ್ಚೆಚ್ಚು ‘ಪಾಶ್ಚಾತ್ಯ ಜ್ಞಾನ’ಕ್ಕೆ ಎದು... ‘ನಮ್ಮ ಪರಂಪರೆಯನ್ನು’ ಶೋಧಿಸಿ, ನಮ್ಮ ಕಾಲದ... ಸುಸಂಬದ್ಧವಾದ ಜ್ಞಾನಾರ್ಜನೆಯ ಒಲ... ತೋರತೊಡಗಿದರು. ಅವರ ‘ಭವ’ ಕಾದಂಬರಿಯ ಬಿಡು... ಮಣಿಪಾಲದಲ್ಲಿ ನಡೆದಾಗ ಮೇಷ್ಟ್ರು ‘ನನ್ನ ಎಲ್ಲಾ ಹಿಂ... ಅಸ್ತಿತ್ವದ ಸ್ಥಿತಿಗಳನ್ನು ಕಳಚಿ ನಾನು ಮತ್ತೊಮ್ಮೆ ಬೀಜವ... ನೆಲದಲ್ಲಿ ಬಿತ್ತಿಕೊಳ್ಳುವ ಪ್ರಯತ್ನದಲ್ಲಿದ್ದೇನೆ’ ಎಂದಾ... ಮಾತುಗಳು ಇಂದಿಗೂ ನನಗೆ ನೆನಪಿದೆ; ಅದೇ ಸಭೆಯ... ಆ ಕಾದಂಬರಿಯ ವೈಚಾರಿಕತೆಯ ಕುರಿತು ಜಿ.ರಾಜಶೇ... ಮಾಡಿದ ಟೀಕೆಗೆ ಅನಂತಮೂರ್ತಿಯವರು ಬಿಸಿಯ... ಪ್ರತಿಕ್ರಿಯಿಸಿದ್ದೂ ನೆನಪಿದೆ. ನಂತರ ಮತ್ತ... ಪೂರ್ವಮುಖಿಯಾದ ಕಾದಂಬರಿ ‘ದಿವ್ಯ’ದ ಕುರಿತು ತ... ಬರೆದ ವಿಮರ್ಶೆಗೆ ಅನಂತಮೂರ್ತಿ ತೋರಿ... ಇರುಸುಮುರಿಸನ್ನು ಡಾ.ಸಿ.ಎನ್.ರಾಮಚಂದ್ರನ್, ಮ... ನಿಧನಕ್ಕೆ ಸಲ್ಲಿಸಿದ ನುಡಿನಮನದಲ್ಲಿ ನೆನಪಿಸಿಕೊಂಡಿದ... ಅನಂತಮೂರ್ತಿಯವರು, ಗಾಂಧಿಯ ಹಾದಿಯ... ನಂಬಿದವರು: ಪರಂಪರೆಯನ್ನು ನಿರಾಕರಿಸದೇ ಅದರೊ... ಕೆಡುಕನ್ನು ವಿರೋಧಿಸಿ, ತೊಳೆಯಬೇಕು; ಆಧುನಿಕತೆಯ... ನಿರಾಕರಿಸುತ್ತಲೇ ಅದರರೊಳಗಿನ ‘ನ್ಯಾಯ-ಸಮಾನತೆ’... ಗುಣಗಳನ್ನು ಸೋಸಿ ಹಿಡಿದಿಟ್ಟುಕೊಳ್ಳಬೇಕು ಎನ... ಅವರ ವೈಚಾರಿಕತೆ ಬಗ್ಗೆ ಅವರಿಗೆ ಹತ್ತಿರವಿದ್ದವರ... ಅಗಾಧ ಭಿನ್ನಮತವಿದೆ. ಈ ನಿಲುವು ಪರಂಪರೆ ಹಾ... ಆಧುನಿಕತೆಯಲ್ಲಿರುವ ‘ಅಸಮಾನತೆ-ಅನ್ಯಾಯ’... ಯಜಮಾನದ ಕ್ರೂರ ವಾಸ್ತವಿಕತೆಗೆ ಕುರುಡಾಗಿಸು... ಎಂಬ ನಮ್ಮಂಥ ಎಡಪಂಥೀಯರ ಜೊತೆ ಮೇ... ಸತತ ವಾಗ್ವಾದದಲ್ಲಿ ತೊಡಗಲು ಸಿದ್ಧರಿದ್ದ... ಸಿಡಿಮಿಡಿಗೊಳ್ಳುತ್ತಿದ್ದರು, ಅಸಹನೆಯಿಂ... ಹಂಗಿಸುತ್ತಿದ್ದರು-ಒಂದಷ್ಟು ದಿನಗಳ ಕಾಲ, ಮನುಷ್ಯನ... ಮುನಿಸಿನಲ್ಲಿ ಮಾತು ನಿಲ್ಲಿಸಿಬಿಡುತ್ತಿದ್ದರು. ಆದರೆ, ಇದೆಲ್ಲ... ಮುಂಚೆ, ಒಂದು ಗಾಢ ಸಲುಗೆಯ ಮನುಷ್ಯ ಸಂಬಂಧವ... ಏರ್ಪಡಿಸಿಕೊಂಡುಬಿಡುತ್ತಿದ್ದರು; ಆ ಮೂಲಕ ಒ... ನಿಲುವು ಎಷ್ಟೇ ಅಪಥ್ಯವಾಗಿದ್ದರೂ, ಗೌರವದಿ... ಕೇಳಿಸಿಕೊಳ್ಳುವ, ನಿರ್ದಾಕ್ಷಿಣ್ಯದಿಂದ ಜಗಳವಾಡಿಯ... ‘ಇಬ್ಬರೂ ಕೊಂಚ ನಮ್ಮೊಳಗಿನ ಸರಿತಪ್ಪು’ಗಳ... ವಿವೇಚಿಸಿಕೊಳ್ಳುವ ಸ್ನೇಹಸಮುದಾಯ ಕಟ್ಟಿಕೊಳ್ಳುತ್ತಿದ್ದ... [illegible] ವಿಚಾರಗಳು ಜನರನ್ನು ಉದ್ದೇಶಿಸಿದ್ದೇ ಆದರೆ, ಅ... ಜನಸಮುದಾಯದ ಜೊತೆ ಸಖ್ಯತೆ ಸಾಧಿಸಿಕೊಳ್ಳದೆ ತ... ಮಾತು ಅವರ ಬುದ್ಧಿಭಾವಗಳನ್ನು ತಲುಪದು ಎ... ನಂಬಿಕೆಯಿಂದ ಬಂದದ್ದಾಗಿತ್ತು, ‘ನಾವು ವಿರೋಧಿಸ... ಆರೆಸ್ಸೆಸ್‌ನವರ ಜೊತೆ ಕೂಡ ಮಾತು ಸಾಧ್ಯವಾಗ್ಬೇ... ಕಣೋ! ಹಾಗೆ ಮಾತಾಡೋದನ್ನು ನಾವು ಕಲಿಬೇ... ಅನ್ನೋರು. ಅವರಿಗೆ ಇಂಥ ಕ್ರಿಯಾಶೀಲತೆಗಳೆಲ್ಲ ಸಂಬ... ಕಲ್ಪಿಸಬಲ್ಲ ‘ಮಾತಿ’ನಿಂದ ಸಾಧ್ಯ ಎಂಬ ವಿಶ್ವಾಸವಿ... ಕೊನೆಗಾಲದಲ್ಲಿ, ಅಂಥ ‘ಮಾತಿ’ನ ಘನತೆಯನ್ನೇ ಕಳೆ... ‘ವಿವಾದ’ವನ್ನು ‘ಜಗಳ’ದ ಮಟ್ಟಕ್ಕೆ ಇಳಿಸಿದಾಗ ಮೇ... ‘ಮಾತು ಸೋತಿದೆ’ ಎನ್ನುವ ಹತಾಶೆ ಕಾಡತೊಡಗಿ... ಅವರ ಜೊತೆ ಕಟ್ಟಾ ವಾಗ್ವಾದದಲ್ಲಿ ಉತ್ಸುಕರಾಗಿದ್ದ ನಮ... ಇದು ಖುಷಿಯ ವಿಚಾರವಾಗಿರಲಿಲ್ಲ.

ಆದರೆ, ‘ಮಾತಿನ ಸೋಲಿಗೆ’ ಕಾರಣರಾದವ... ಖುಷಿಯಾಗಿದ್ದಾರೆ; ಅನಂತಮೂರ್ತಿ ‘ನಾಸ್ತಿಕ’, ‘ಪರಂಪರೆ ವಿರೋಧಿ’ಯಾಗದೆಯೂ ‘ಮೋದಿಯ ಹಿಂದೂತ್ವ’ ಮ... ‘ಅಭಿವೃದ್ಧಿ’ಯ ಕಡುವಿರೋಧಿಯಾಗಿದ್ದು ಅವರಿಗೆ ದೊ... ಸವಾಲಾಗಿತ್ತು, ಆ ಕಾರಣಕ್ಕೇ ಅವರನ್ನು ‘ನಾಸ್ತಿ... ‘ಪರಂಪರೆಯ ವಿರೋಧಿ’ ಎಂದು ಅವರು ಗುಲ್ಲೆಬ್ಬಿಸುತ್ತಿದ್ದ... ಈಗ ಅವರ ಅಂತ್ಯಸಂಸ್ಕಾರದ ವಿದ್ಯಮಾನವ... ಗುರಿಯಾಗಿಟ್ಟುಕೊಂಡು ‘ಅಯ್ಯೋ! ಅವರು ತ... ಪ್ರಚಾರಪಡಿಸಿದ ವೈಚಾರಿಕತೆಗೆ ದ್ರೋಹ ಬಗೆದಿದ... ಎಂದು ಚೀರಾಡುತ್ತಿದ್ದಾರೆ (ನೋಡಿ: ದಿ.26.8.2014 ‘ಕನ್ನಡಪ್ರಭ’)! ಮೇಷ್ಟ್ರ ಬದುಕು-ವಿಚಾರಗಳ... ವಿಮರ್ಶಿಸುವಾಗ ನಾವು ‘ಮಾತೇ ಜ್ಯೋತಿರ್ಲಿಂಗ’ವಾ... ಸಿಕೊಂಡ ಮೇಷ್ಟ್ರನ್ನು ತಾಳ್ಮೆಯಿಂದ ಅರಿಯಬೇಕು, ‘ಮಾತನ್ನು ಸೋಲಿಸು’ವವರ ತಂತ್ರಗಳನ್ನೂ ಕಾಣಬೇಕು.



● ಕೆ.ಫಣಿರಾಜ್


ಅಣುವಿನಿಂದ ಅನಂತದೆಡೆಗಿನ ಹರಹು

ಮೇಷ್ಟರ ಬಗ್ಗೆ ಬರೆಯುವುದು ಒಂದು ರೀತಿ ಃ ಇನ್ನೊಂದು ರೀತಿಯಲ್ಲಿ ಕಷ್ಟ. ಸದಾ ವಾಗ್ವಾದಕ್ಕೆ ಗುತ್ತಿದ್ದ ಅವರ ನಿಲುವುಗಳು, ಸಾರ್ವಜನಿಕ ಯಾಗಿಬಿಡುತ್ತಿದ್ದ ಅವರ ಹೇಳಿಕೆಗಳು ಮತ್ತು ಗಳಿಂದಾಗಿ ಅವರ ವ್ಯಕ್ತಿತ್ವದ ಒಂದು ಭಾಗ ಗೂ ಪರಿಚಿತವೇ. ಹಾಗೆ ನೋಡಿದರೆ ಅವರ ಬಗ್ಗೆ ಅಭಿಪ್ರಾಯವೂ ಇಲ್ಲದ ಕನ್ನಡ ಜನರೇ ನ್ನುವಷ್ಟರ ಮಟ್ಟಿಗೆ ಅನಂತಮೂರ್ತಿಯವರು ಕನ್ನಡ ದ ಭಾಗವಾಗಿ ಹೋಗಿದ್ದಾರೆ. ಹೀಗಾಗಿ ತಮ್ಮ ಯದ ಅನಂತಮೂರ್ತಿಯವರನ್ನೇ ಅವರನ್ನು ಕುರಿತ ಗಳಲ್ಲಿ ನಿರೀಕ್ಷಿಸುವವರು ಬಹಳ ಮಂದಿ. ಈ ಯೇ ಅವರ ಬಗ್ಗೆ ಇರುವ ಸಿದ್ಧ ಅಭಿಪ್ರಾಯಗಳ ಹೋಗಿ ಅವರ ವ್ಯಕ್ತಿತ್ವ, ಬರಹಗಳ ಸಂಕೀರ್ಣತೆಯನ್ನು ಸಲು ಒಂದು ತೊಡಕಾಗಿಯೂ ಪರಿಣಮಿಸಬಹುದು. ನ್ಯವಾಗಿ ಸ್ವೀಕೃತ ವಿಚಾರಗಳ ವಿರುದ್ಧದ ನಿಲುವುಗಳನ್ನು ಲಿಸಿ, ವೈರುಧ್ಯಗಳನ್ನು ಒರೆಗೆ ಹಚ್ಚುವುದು ಅವರ ಚನಾ ಕ್ರಮ. ಇಂಥದೊಂದು dialetics ಅನ್ನು ಚನಿಂದಲೂ ಅವರ ಬರವಣಿಗೆಯಲ್ಲಿ ಕಾಣಬಹುದು. ರ್ಕವನ್ನು ಗಮನಿಸದೇ ಇದ್ದವರಿಗೆ ಅವರು ಾಯವಾದಿ ಅಥವಾ ಕಂದಾಚಾರವನ್ನು ಸಮರ್ಥಿಸುವ ಸ್ಥಿತಿವಾದಿಯ ಹಾಗೆ ಕಂಡದ್ದಿದೆ. 'ಬೆತ್ತಲೆ ಪೂಜೆ ಕೂಡದು?' ಎನ್ನುವ ವಿಚಾರದಲ್ಲಾಗಲೀ, ಜಾತಿ ತೆ ಅವರು ಕೆಲವು ಬಾರಿ ಆಡಿದ ಮಾತುಗಳಲ್ಲಾಗಲೀ, ನ್ನು ಅಪಾರ್ಥ ಮಾಡಿಕೊಂಡದ್ದೇ ಹೆಚ್ಚು. ಶೀಲರನ್ನು ಹೀಗೆ ಆಗಾಗ ಬೆಚ್ಚಿ ಬೀಳಿಸಿ, ಅವರ ಟೀಕೆಗೆ ಈಡಾಗುತ್ತಿದ್ದವರೇ, ಸಂಪ್ರದಾಯವಾದಿಗಳ ನ್ನಿಗೂ ಗುರಿಯಾಗುತ್ತಿದ್ದರು. ಈ ವಿಪರ್ಯಾಸವನ್ನೇ ತಮೂರ್ತಿಯವರ ಮೂಲಭೂತ ವೈಶಿಷ್ಟ್ಯವೆಂಬಂತೆ ಕೆಲ ಪಟ್ಟ ಶಿಷ್ಯರು ಹೊಗಳಿರುವುದೂ ಉಂಟು. ಬಹಳಷ್ಟು ಜನ ಸಾಮಾನ್ಯರಿಗೆ ಅವರ ಈ ದ್ವಂದ್ವ ವು ಗೊಂದಲವನ್ನೂ ಮೂಡಿಸುತ್ತಿತ್ತು. ಲಂಕೇಶರ ನಿಲುವುಗಳಿಗೆ ಹೋಲಿಸಿದಾಗ ಈ ದ್ವಂದ್ವ ಇನ್ನೂ ಕಾಣುತ್ತಿತ್ತು.

ಎಪ್ಪತ್ತರ ದಶಕದಲ್ಲಂತೂ ಕನ್ನಡ ಆಧುನಿಕತೆಯ ಎರಡು ಬಗಳಂತೆ ಲಂಕೇಶ್, ಅನಂತಮೂರ್ತಿ ಇದ್ದರು. ರಡೂ ಮಹಾನ್ ಚಿಂತನಾ ಕ್ರಮಗಳಿಂದ ಕನ್ನಡ ಗೆ ಲಾಭವೇ ಆಯಿತು. ಆಧುನಿಕತೆ ಎಂದರೆ, ದಾಯದ ಅನಿಷ್ಟಗಳ ಮತ್ತು ಕೊಳಕುಗಳಿಂದ ಬಿಡುಗಡೆ ಬುದು ಲಂಕೇಶ್‌ರ ನಿಲುವಾದರೆ, ಅದನ್ನು ಕೊಂಡೂ, ಅದು ನೀಡುವ ಬಿಡುಗಡೆಯ ಬಗ್ಗೆ ಸದಾ ಮಾನವನ್ನು ಇಟ್ಟುಕೊಂಡಿದ್ದವರು ಅನಂತಮೂರ್ತಿ. ಕೊಳೆತ ಕಲ್ಯಾಣಿಯಂತಿರುವ ನಮ್ಮ ಸಂಪ್ರದಾಯ, ಮ ಕಾಲದಲ್ಲಿ ಚೈತನ್ಯದ ಚಿಲುಮೆಯೂ ಆಗಿದ್ದಿರ ದು. ಯಾಕೆ ಎನ್ನುವ ಪ್ರಶ್ನೆಯನ್ನು ಅನಂತಮೂರ್ತಿ ರು ಸದಾಕಾಲ ಅನ್ವೇಷಿಸುತ್ತಿದ್ದರು. ಈ ಅನ್ವೇಷಣೆಯಲ್ಲಿ ಮು ಎಷ್ಟೇ ಅಪಾರ್ಥಕ್ಕೆ ಸಿಲುಕಿದರೂ, ಯಾವ ಯನ್ನೂ ಮಾಡಿಕೊಳ್ಳಲಿಲ್ಲ ಎಂಬುದು ಇಂದು ದೊಡ್ಡ ವಾಗಿ ನಮಗೆ ಕಾಣುತ್ತದೆ. ಪೂರ್ವಸೂರಿಗಳೊಡನೆ ದ ಮಾಡುತ್ತಲೇ ವರ್ತಮಾನದ ವಿದ್ಯಮಾನಗಳನ್ನು ಸಿಕೊಳ್ಳುವ ಒಂದು ಮಾದರಿಯನ್ನು ಅನಂತಮೂರ್ತಿ ಗೆ ನೀಡಿದ್ದಾರೆ. ಅವರ ಈ ನಿಲುವಿನಲ್ಲಿ ಯಾವ ವ್ವವೂ ಇರಲಿಲ್ಲ. ಅವರ 'ದ್ವಂದ್ವದ' ಬಗ್ಗೆ ಸದಾ ಮಾಡುವ ಮಂದಿ ಅವರ ಚಿಂತನಾ ಕ್ರಮದಲ್ಲಿದ್ದ ಸ್ಪಷ್ಟತೆಯನ್ನು ಗಮನಿಸುವ ಅಗತ್ಯವಿದೆ.


90ರ ದಶಕದಲ್ಲಿ ಪ್ರವೇಶಿಸಿದ ಮಹಾಹತೋತ್ತರ ಚಿಂತನೆ ತಮೂರ್ತಿಯವರ ಚಿಂತನಾ ಕ್ರಮಕ್ಕೆ ಸಮರ್ಥನೆಯನ್ನೂ ಸ ಮೆರುಗನ್ನೂ ನೀಡಿತು. ಪಶ್ಚಿಮ ಪ್ರೇರಿತ ಜ್ಞಾನ ಗಳು, ಹೊಸ ಚಿಂತನೆಗಳು ಮೊದಲನೆಯ ಜಗತ್ತಿನ ಜಗಳನ್ನು ಮಹಾಹತುಶಾಹಿ ಮೂಲಕ ಪ್ರವೇಶಿಸಿದಾಗ, ಮ ಬದುಕಿನಲ್ಲಿ ಅನೇಕ ಒಡಕುಗಳನ್ನು ಮೂಡಿಸಿದವು. ರಲ್ಲಿ ಪ್ರಧಾನವಾದದ್ದು ಖಾಸಗೀ ಮತ್ತು ಸಾರ್ವಜನಿಕ ಯದ ನಡುವೆ ಉಂಟಾದ ಬಿರುಕು. ಪಶ್ಚಿಮ ಬದುಕಿನ ಗಳನ್ನು ಅಳವಡಿಸಿಕೊಳ್ಳುವ, ಆದರೆ ಹಾಗೆ ಮಾಡುತ್ತಲೇ ವ್ಯಕ್ತಿತ್ವಕ್ಕೆ ಪರಕೀಯವಾಗಿ ಬಿಡುವ ಸಂದಿಗ್ಧತೆ ಕುರಿತು ಖಾನುಪುಂಖವಾಗಿ ವಿವಿಧ ಬಗೆಯ ಪೋಸ್ಟ್ ಲೋನಿಯಲ್ ಸಿದ್ಧಾಂತಗಳು ಮೂಡಿಬರತೊಡಗಿದವು. ರೆ ಈ ಸಿದ್ಧಾಂತಗಳಿಗೆ ಪುಷ್ಟಿ ನೀಡುವಂಥ ಅನೇಕ ಗಳನ್ನು ಚಿಂತನಾ ಮಾದರಿಗಳನ್ನು ಅನಂತಮೂರ್ತಿ, ವಿನಿಂದಲೂ ಕಟ್ಟಿಕೊಟ್ಟಿದ್ದರು ಎನ್ನುವುದು ವಿಶೇಷ. ರ ಪ್ರಸಿದ್ಧ ಹಿತ್ತಲು ಜಗಲಿ ಪರಿಕಲ್ಪನೆ ಇದಕ್ಕೊಂದು ಹರಣೆ.

ಮೈಸೂರು ವಿವಿಯ ಇಂಗ್ಲಿಷ್ ವಿಭಾಗದಲ್ಲಿ ಬೆಳಗ್ಗೆ ತಿಗಳು ಮುಗಿದ ಮೇಲೆ, ಸಂಜೆ ಟುಟೋರಿಯಲ್ಸ್ ಸಿದ್ದವು. ಇದು ಪ್ರೊ. ಸಿಡಿಎನ್ ಅವರ ಪರಿಕಲ್ಪನೆ. ಅಂದರೆ ಸಣ್ಣ ಗುಂಪುಗಳಲ್ಲಿ ವಿದ್ಯಾರ್ಥಿಗಳು ಪಠ್ಯಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಅಧ್ಯಾಪಕರಲ್ಲಿ ಚರ್ಚಿಸುವುದನ್ನು ಮಾಡಿಕೊಂಡಿದ್ದ ಅನುಕೂಲ. ಇಷ್ಟಾದರೂ ಅನೇಕೆ ಟುಟೋರಿಯಲ್ಸ್‌ಗಳು ಕಡೆಗೆ ಒಂದು ಮಿನಿ ತರಗತಿಯಾಗಿ ಮಾರ್ಪಡು ಹೊಂದುತ್ತಿದ್ದವು. ಆದರೆ ಅನಂತ ಮೂರ್ತಿಯವರ ಟುಟೋರಿಯಲ್‌ಗಳ ಖದರೇ ಬೇರೆ ಇರುತ್ತಿತ್ತು. ಗೆಳೆಯ ನಾರಾಯಣ್‌ನ ಇಂದಿಗೂ ನೆನಪಿಸಿಕೊಳ್ಳು ವಂತೆ ಅದೊಂದು ಖಾಸಗೀ ದರ್ಬಾರ್. ಅಲ್ಲಿ ಪಠ್ಯದ ಆಚೆಯ ವಿಷಯಗಳೇ ಹೆಚ್ಚಾಗಿ ಚರ್ಚೆಗೆ ಈಡಾಗುತ್ತಿದ್ದದ್ದು. ಆದರೂ ಅವು ಅಪ್ರಸ್ತುತವೆನಿಸದ ಹಾಗೆ ಮೇಷ್ಟ್ರು ಅವುಗಳ ಹಿಂದಿನ ಸಂಬಂಧಗಳನ್ನು ಕಟ್ಟಿಕೊಡುತ್ತಿದ್ದರು. ಎಷ್ಟೋ ಬಾರಿ; ಈ ದರ್ಬಾರ್ ತರಗತಿಗಳನ್ನು ದಾಟಿ, ಕ್ಯಾಂಟೀನ್, ರಸ್ತೆ ಹೀಗೆ ಎಲ್ಲೆಂದರಲ್ಲಿ ಮುಂದುವರೆಯುತ್ತಿತ್ತು. ನಾವುಗಳೆಲ್ಲಾ ಹೆಚ್ಚಿನ ವಿಷಯ ಕಲಿತದ್ದು ತರಗತಿಗಳಿಗಿಂತಲೂ ಹೆಚ್ಚು ಈ ದರ್ಬಾರಿನಲ್ಲೇ. ಇದನ್ನು ಯಾಕೆ ಪ್ರಸ್ತಾಪಿಸಿದನೆಂದರೆ, ಈ ಖಾಸಗೀ ದರ್ಬಾರಿನಲ್ಲಿ ಅವರ ಪಾಠಗಳು ಒಂದು ಡಯಲಾಸಿಸ್ ಗುಣ ಪಡೆಯುತ್ತಿದ್ದದ್ದು. ಅಂದರೆ ಒಂದು ವಿಷಯದ ವಿರೋಧದ ಬೆನ್ನು ಹತ್ತುವುದರ ಮೂಲಕವೇ, ಅದರ ವಿಪರ್ಯಾಸಗಳನ್ನು ಹೊರಚೆಲ್ಲುವುದು; ಮೂಲ ತಿರುಳನ್ನು ಅರಿಯಲು ವಿರೋಧಾಭಾಸಗಳನ್ನು ಅನ್ವೇಷಿಸುವುದು.



ಸುಮಾರು ಇದೇ ಸಮಯದಲ್ಲಿ ಅನಂತಮೂರ್ತಿಯವರು ಉತ್ತಮ ವಾಗ್ಮಿಗಳಾಗಿ ಕೂಡ ಪ್ರಸಿದ್ಧರಾದರು. ಖಾಸಗಿ ದರ್ಬಾರುಗಳು ಸಾರ್ವಜನಿಕ ಭಾಷಣಗಳ ರೂಪವನ್ನು ಪಡೆದುಕೊಂಡರೂ, ಅವರ ಯೋಜನಾ ಕ್ರಮದ ಮೆಥಡ್ ಹಾಗೆಯೇ ಮುಂದುವರೆದು, ಇನ್ನಷ್ಟು ವಿಸ್ತಾರಗೊಂಡಿತು. ಸಾಮಾನ್ಯವಾಗಿ ಅವರು ಯಾವುದೇ ಸಿದ್ಧ ಟಿಪ್ಪಣಿಗಳನ್ನು ಇಟ್ಟುಕೊಂಡು ಮಾತನಾಡುತ್ತಿರಲಿಲ್ಲ. ಮಾತನಾಡುತ್ತಲೇ ಯೋಚಿಸುವ, ಯೋಚಿಸುತ್ತಲೇ ಮಾತುಗಳನ್ನು ವಿಸ್ತರಿಸುವ ಅವರ ಭಾಷಣ ಕಲೆಯನ್ನು ಅವರ ಕೆಲವು ಪಟ್ಟ ಶಿಷ್ಯರು `loud thinking' ಎಂದು ತಮಾಷೆ ಮಾಡುತ್ತಿದ್ದುದು ಉಂಟು. ಆದರೆ ಅವರ ಮಾತುಗಳಲ್ಲಿ ಯಾವುದೇ ಗೊಂದಲವಿರುತ್ತಿರಲಿಲ್ಲ. ಒಮ್ಮೆಲೇ ಅವರ ಮಾತಿನ ಹರವು ಕರ್ನಾಟಕ, ಕನ್ನಡ ಸಂಸ್ಕೃತಿಯ ಎಲ್ಲೆಗಳನ್ನು ದಾಟಿ, ಇಡೀ ಭಾರತವನ್ನು ಇತ್ಯಾದಿಗಳನ್ನೆಲ್ಲಾ ಕ್ರಮಿಸಿ, ಪ್ಲೇಟೋವರೆಗೆ ವಿಸ್ತರಿಸುತ್ತಿತ್ತು. ಪಶ್ಚಿಮದ ಹೈಪರ್ ರಾಷನಾಲಿಟಿ ಬಗ್ಗೆ ಅವರಿಗೆ ತೀವ್ರ ಅನುಮಾನಗಳಿದ್ದವು, ಹಾಗೆಯೇ ಭಾರತದ ಅವಧೂತರ ಬಗ್ಗೆ ಅಪಾರ ಆಕರ್ಷಣೆಯನ್ನೂ ಹೊಂದಿದ್ದರು. ಇವೆರಡೂ ಧ್ರುವಗಳನ್ನು ತಮ್ಮ ಲೋಹಿಯಾ ಸಮಾಜವಾದದ ನೆಲೆಗಟ್ಟಿನಿಂದಲೇ ಒಟ್ಟಿಗೇ ಹಿಡಿದಿರುವ ಅವರ ಪ್ರಯತ್ನವನ್ನು ಹೆಚ್ಚುಕಡಿಮೆ ಅವರ ಸೃಜನಾತ್ಮಕ ಮತ್ತು ವೈಚಾರಿಕ ಬರವಣಿಗೆಗಳೆರಡರಲ್ಲೂ ಮತ್ತೆಮತ್ತೆ ನೋಡಬಹುದು. ಅವರ ಈ ನಿಲುವಿನಿಂದಾಗಿ ಅವರು ದ್ವಂದ್ವಗಳಲ್ಲೇ ಸಂಭ್ರಮಿಸುವ, ಸ್ಪಷ್ಟತೆ ಇಲ್ಲದ ಚಿಂತಕ ಎಂಬ ಆಪಾದನೆಯನ್ನು ಎದುರಿಸಬೇಕಾಯಿತು. ಆದರೆ ಆಳದಲ್ಲಿ ಅವರ ವಿಶ್ಲೇಷಣಾ ಕ್ರಮದಲ್ಲಿ ಒಂದು ಏಕಸೂತ್ರವನ್ನು ನಿಚ್ಚಳವಾಗಿ ಗುರುತಿಸಬಹುದು. ಅವರನ್ನು ಸರಳವಾಗಿ ಗ್ರಹಿಸಿದವರಿಗೆ ಈ ಸೂಕ್ಷ್ಮತೆ ಅರ್ಥವಾಗುತ್ತಿರಲಿಲ್ಲ.


ಆದರೆ ಕೆಲವು ಸಾರ್ವಜನಿಕ ವಿಷಯಗಳಲ್ಲಿ ಜನತೆ ನೇರ ಹಾಗೂ ಸ್ಪಷ್ಟ ಹೇಳಿಕೆಗಳನ್ನು ಬಯಸುತ್ತಾರೆ. ಸಾಮಾಜಿಕ ಹೋರಾಟಗಳಲ್ಲಿ ಈ ಖಚಿತತೆಗೆ ಹೆಚ್ಚಿನ ಮಹತ್ವ ಇರುತ್ತದೆ. ಪರಿಸರವಾದ, ಕೋಮುವಾದ ಅಥವಾ ಭಾಷಾ ಮಾಧ್ಯಮದಂತಹ ವಿಚಾರಗಳನ್ನು ಮುಂದಿಟ್ಟುಕೊಂಡು ಹೋರಾಡುವಾಗ, ಸಂಕೀರ್ಣವಾದ ವಿಶ್ಲೇಷಣೆಗಳು ಸಾರ್ವಜನಿಕರಲ್ಲಿ ಗೊಂದಲ ಮೂಡಿಸುತ್ತವೆ. ಗೋಕಾಕ್ ಚಳವಳಿಯ ವಿಷಯದಲ್ಲಿ ಅನಂತಮೂರ್ತಿಯವರ ನಿಲುವು ಈ ರೀತಿಯ ಗೊಂದಲವನ್ನು ಸೃಷ್ಟಿಸಿದ್ದು ನಿಜ. ಆದರೆ ಪಟ್ಟುಬಿಡದೆ ತಮ್ಮ ನಿಲುವಿಗೆ ಬದ್ಧವಾಗಿ ಉಳಿದ ಅವರ ವಿಚಾರ ನಿಧಾನಕ್ಕಾದರೂ ಜನಮಾನಸಕ್ಕೆ ಅರ್ಥವಾಗತೊಡಗಿತು. ವೈಯಕ್ತಿಕವಾಗಿ ಅವರು ತಮ್ಮನ್ನು ವಿರೋಧಿಸಿದವರ ಜೊತೆಗೂಡಿದರೂ (ಉದಾ: ಕುಮಾರಸ್ವಾಮಿಯವರಿಂದ 'ಯಾರು ಈ ಅನಂತಮೂರ್ತಿ?' ಎಂದೆನಿಸಿಕೊಂಡರೂ, ಅವರ ಉಪವಾಸ ನಿಲ್ಲಿಸುವುದಕ್ಕೆ ಹೋದದ್ದು-ಇಂಥ ಅಸಂಖ್ಯ ಉದಾಹರಣೆಗಳನ್ನು ಕಾಣಬಹುದು) ಸೈದ್ಧಾಂತಿಕವಾಗಿ ಅವರು ರಾಜಿಯಾದದ್ದು ಕಡಿಮೆ. ಹೀಗಾಗಿ ಅವರ ನಿಲುವುಗಳ ಬಗ್ಗೆ ಅನೇಕ ಅನುಮಾನಗಳಿದ್ದರೂ, ಜನಪರ ಹೋರಾಟಗಾರರು ಅವರ ನೆರವನ್ನು ಬಯಸುತ್ತಿದ್ದರು.



ಕುದುರೆಮುಖ ಉಳಿಸಿ ಹೋರಾಟ, ಗಣಿಗಾರಿಕೆಯ ವಿರುದ್ಧದ ಹೋರಾಟ, ಕೋಮು ಸೌಹಾರ್ದ ವೇದಿಕೆ ನಡೆಸುತ್ತಿರುವ ಚಳವಳಿ ಹೀಗೆ ಅವರು ನಮ್ಮ ಅಸಂಖ್ಯ ಹೋರಾಟಗಳಲ್ಲಿ ಪಾಲ್ಗೊಂಡಿದ್ದಾರೆ, ಬೆಂಬಲ ಸೂಚಿಸಿದ್ದಾರೆ. ಜಾತ್ಯತೀತ ಸಿದ್ಧಾಂತಕ್ಕೆ ಬದ್ಧರಾಗಿದ್ದೂ ಕೋಮು ಸೌಹಾರ್ದ ವೇದಿಕೆಯ ಚಟುವಟಿಕೆಗಳನ್ನು ಅನುಮಾನದಿಂದ ನೋಡುತ್ತಾ, ಅದರಿಂದ ಇಂದಿಗೂ ದೂರ ಉಳಿದಿರುವ ಬುದ್ಧಿಜೀವಿಗಳಿಗೆ ಹೋಲಿಸಿದರೆ, ಅನಂತಮೂರ್ತಿಯವರ ವ್ಯಕ್ತಿತ್ವದಲ್ಲಿರುವ ವ್ಯತ್ಯಾಸ ಎದ್ದು ಕಾಣುತ್ತದೆ. ಹಾಗೆಯೇ ಜಾಗತೀಕರಣ ಕೋಮುವಾದಗಳೆರಡಕ್ಕೂ ವಿರೋಧವನ್ನು ಕಡೆಯವರೆಗೂ ಉಳಿಸಿಕೊಂಡು, ಅವೆರಡರ ವಿರುದ್ಧವೂ ಸೆಟೆದು ನಿಂತ ನಮ್ಮ ನಡುವಿನ ಅಪರೂಪದ ಬುದ್ಧಿಜೀವಿ ಅವರು. ಯಾಕೆಂದರೆ ಕೋಮುವಾದವನ್ನು ವಿರೋಧಿಸುವ ನಮ್ಮ ಬಹುತೇಕ ಮಂದಿ ವಿದ್ವಾಂಸ, ಲೇಖಕರು ಜಾಗತೀಕರಣದ ಬಗ್ಗೆ ಸ್ಪಷ್ಟ ನಿಲುವನ್ನು ಹೊಂದಿಲ್ಲ, ಅವೆರಡರ ನಡುವೆ ಇರುವ ಆಳವಾದ ಸಂಬಂಧ ಕುರಿತು ಅರ್ಥಮಾಡಿಕೊಂಡವರು ನಮ್ಮಲ್ಲಿ ಇನ್ನು ಕಡಿಮೆ. ಆದರೆ ಅನಂತಮೂರ್ತಿ ತಮ್ಮ ತೀವ್ರ ಅನಾರೋಗ್ಯದ ನಡುವೆಯೂ, ಇವೆರಡರ ವಿರುದ್ಧ ತಮ್ಮ ಹೋರಾಟವನ್ನು ಕಡೆತನಕವೂ ಮುಂದುವರೆಸಿಕೊಂಡೇ ಬಂದರು. ತಮ್ಮ ಮೇಲಿನ ಸಂಘ ಪರಿವಾರದ ದಾಳಿಯಿಂದ ಅವರು ಸಹಜವಾಗಿಯೇ ಕೋಪಗೊಂಡಿದ್ದರೂ, ಬೇಸರ ಪಟ್ಟುಕೊಂಡಿದ್ದರೂ ವಿಚಲಿತರಾಗದೇ ಉಳಿದದ್ದು ಅವರ ಹೆಗ್ಗಳಿಕೆಯೇ.

ಹಿಂದೂತ್ವ, ಫ್ಯಾಸಿಸಂಅನ್ನು ವಿರೋಧಿಸಿದಷ್ಟೇ ತೀವ್ರವಾಗಿ ಅವರು ಸಮಾನ ಶಿಕ್ಷಣದ ಹೋರಾಟದ ಕಟ್ಟಾ ಬೆಂಬಲಿಗರಾಗಿದ್ದರು. ಸಮಾನ ಶಿಕ್ಷಣ ಕುರಿತ ಅಖಿಲ ಭಾರತ ಮಟ್ಟದ ಸಂಘಟನೆಯ ಭಾಗವಾಗಿದ್ದರು.


ನಾವು ಬದುಕುತ್ತಿರುವ ನವ ಉದಾರವಾದಿ ಕಾಲಘಟ್ಟ ಅನೇಕ ವಿರೋಧಾಭಾಸಗಳಿಂದ ಕೂಡಿರುವ ಸಂಕ್ರಮಣದ ಕಾಲ. ಸೈದ್ಧಾಂತಿಕ ಸ್ಪಷ್ಟತೆಗಿಂತಲೂ ನಾವು ಯಾವುದರ ವಿರುದ್ಧ ಹೋರಾಡಬೇಕಿದೆ ಎಂಬುದರ ಬಗ್ಗೆ ಬದ್ಧತೆಯೇ ಹೆಚ್ಚು ಮುಖ್ಯವಾಗಿ ಬಿಟ್ಟಿರುವ ಸಮಯ ಇದು. ವಿರೋಧಾಭಾಸಗಳ ನಡುವೆಯೇ ಕೆಲವು ಸಮಾನ ಆಶಯಗಳಿಗಾಗಿ ಕೂಡಿ ಹೋರಾಟ ಮಾಡಬೇಕಾಗಿರುವ ಅನಿವಾರ್ಯತೆ ಹಿಂದೆಂದಿಗಿಂತಲೂ ಇಂದು ಹೆಚ್ಚು.



ಇಂಥದೊಂದು ಅನಿವಾರ್ಯತೆಯ ಪಾಠವನ್ನು ಗುರುಗಳಿಂದ ನಾವೆಲ್ಲರೂ ಕಲಿಯಬೇಕಾಗಿದೆ. ಬಹುಶಃ ನಾವು ಅವರಿಗೆ ನೀಡಬಹುದಾದ ದೊಡ್ಡ ಗೌರವ ಇದೇ.

● ವಿ.ಎಸ್. ಶ್ರೀಧರ

'ಅನಂತ ತಾನ್ ಅನಂತವಾದೆ'



ಸುರಗಿಯ ಬನದಲ್ಲಿ
ಮತ್ತೆ ಮಳೆ ಹುಯ್ಯುತ್ತಿದೆ
ಒಣಗಿದರು ಘಮ್ಮೆಂದು ನೀನೆ
ನೆನಪಾಗಿ ಕಾಡುತ್ತಿರುವೆ
ಕಾಲದ ಮಹಿಮೆಯಿಂದ

ಮನೆ ಮಾತಾದವರ ಮಧ್ಯೆ
ನೀನು ಕಾಲಘಟ್ಟಕ್ಕೆ ಹೊಸ ಹೆಸರ ತಂದುಕೊಟ್ಟೆ
ನಿನ್ನ ಅವಸ್ಥೆ ಕಂಡೇ
ನಿನ್ನದೇ ಜನ, ನಿನಗೆ
ಪ್ರೀತಿ ಮತ್ತು ಅಸಹನೆ
ಸಮನಾಗಿ ಉಣಿಸಿದರು
ಸಿಗಿಸಿಗಿ ಕೆಂಡದಂತೆ

ಬೂದಿಯಾಗೊವರೆಗು ಉರಿದೆ
ಪರಿಸರದಲ್ಲಿ ಕಿಡಿಯಾಗಿ
ಇನ್ನೂ ಉಳಿಸಿದೆ ಸಮಯಪ್ರಜ್ಞೆ

(ಮುಂದುವರೆದಿದೆ)
ಆದರೂ ಎಲ್ಲೆಡೇ ನಿರ್ವಾತ
ಮತ್ತದೇ ಬಿಕ್ಕಟ್ಟು
ಋಜುವಾತುಪಡಿಸಲು
ನೀನಿಲ್ಲ ಎಂಬುದೇ
ಸದ್ಯ ಮತ್ತು ಶಾಶ್ವತ
ದೇಶದೊಳಗಿಂದಲೇ ವಿಶ್ವಕಂಡೆ
ಅನಂತ ತಾನ್ ಅನಂತವಾದೆ
ದೇಶ ಬಿಟ್ಟು ಮತ್ತೆಲ್ಲಿ ನಡೆವೆ?
ಸ್ನೇಹಕ್ಕೋ, ಜಗಳಕ್ಕೋ ನಾವಿದ್ದೆವೆ
ಎಂದೂ ಮುಗಿಯದ ಕಥೆಯೊಳಗೆ
ಗಾಂಧಿ ಪಾತ್ರಗಳಂತೆ
ಇವೆಲ್ಲ ನಿನ್ನ ಸಮಕ್ಷಮ
ಹೇಳೋಣ ಅಂದರೆ
ಯುಗಪಲ್ಲಟಗೊಂಡಿದೆ
ಮಾತು ಸೋತು ಮೌನಿಯಾಗುತೀತ
ತುರ್ತಾಗಿ ಮಾತಾದು
ಮತ್ತದೇ ವಿವಾದವಾದೀತು.

● ದಾದಾಪೀರ್ ತರೀಕೆರೆ



ಅನಂತ ಮೂರ್ತಿ ರೀತಿ

ಚೈತನ್ಯ ವಿಶೇಷಕ್ಕೆ ಕಂಬನಿದುಂಬಿ ವಿದಾಯ, ನಮನ

ಅನಂತ ಮೂರ್ತಿಯವರು ಹೋದರು...

ಪ್ರೀತಿಯ ಅನಂತಮೂರ್ತಿಯವರೂ ಹೋದರು.

ಮೊನ್ನೆಮೊನ್ನೆಯವರೆಗೂ ನಮ್ಮೊಡನಿದ್ದು, ಅವರು ಇಲ್ಲವಾಗುವ ದಿನವನ್ನು ಕಲ್ಪಿಸಲೂ ಆಗದಷ್ಟು ನಮ್ಮೆಲ್ಲರ ಮಾನಸದಲ್ಲಿ ನೆಟ್ಟುಹೋದವರು. ಮಾತಿನ ಶಕ್ತಿಯನ್ನು ತೋರಿಸಿದ ಅವರು ಈ ನಾಡಿನಲ್ಲಿ ಮಾತಿನ ಶಕ್ತಿ ಸೋತು ಹೋಗುತ್ತಿರುವ ಅಪಾಯವನ್ನೂ ತೋರಿಸಿ ಹೊರಟುಹೋದರು.

ಆರೋಗ್ಯಪೂರ್ಣ ವಾಗ್ವಾದ - ಸಂವಾದಗಳ ಕಾಲವೇ ಅಂತ್ಯವಾಗುತ್ತಿದೆಯೆ...

ಮನಸ್ಸಿಗೆ ಸೂತಕ ಕವಿದ ಸಮಯವಿದು.


ಆದರೂ ನುಡಿಯಬೇಕು, ಗತ್ಯಂತರವಿಲ್ಲ, ನುಡಿವ ಮೂಲಕವೇ ಸೂತಕ ಕಳೆಯಬೇಕು.

* * *

ನನ್ನಂಥ ಎಷ್ಟೋ ಮಂದಿ, ಆಗಲೆ ಕಥೆಗಾರರಾಗಿ ಪರಿಚಿತರಾಗಿದ್ದ ಅನಂತಮೂರ್ತಿಯವರನ್ನು ಹತ್ತಿರದಿಂದ ಕಂಡದ್ದು ಹೆಗ್ಗೋಡಿನಲ್ಲಿ, ಕೆಲವರ್ಷಗಳಿಂದ ಸಂಸ್ಕೃತಿ ಶಿಬಿರದ ನಿರ್ದೇಶಕರಾಗಿ ಅಷ್ಟೂ ದಿನಗಳ ಕಾಲ ಅವರು ಅಲ್ಲಿರುತ್ತಿದ್ದರು. ಆಗ ಅವರ ಮಾತು, ಉಪನ್ಯಾಸ, ಇತರರನ್ನು ಮನಗೊಟ್ಟು ಕೇಳುವ ಮತ್ತು ಪ್ರತಿಕ್ರಿಯಿಸುವ ಕ್ರಮ, ಸಕಲರೊಡನೆಯೂ ಅವರು ಬೆರೆಯುತಿದ್ದ ರೀತಿ ಅದು ಅನನ್ಯವೆಂದರೆ ಅನನ್ಯವೇ. ಬೇರೆ ಶಬ್ದವೇ ಇಲ್ಲ. ಅವರೆಂದರೆ ಏನೋ ಭಯ ಭಕ್ತಿ ನನ್ನನ್ನೂ ಸೇರಿ ಅನೇಕರಿಗೆ. ನಾವವರನ್ನು ದೂರದಿಂದಲೇ ಕೇಳುತಿದ್ದೆವು, ಗ್ರಹಿಸಲು ಯತ್ನಿಸುತಿದ್ದೆವು. ಶಿಬಿರಾರ್ಥಿಗಳು ಅಳುಕಿನಿಂದಲೂ ಗೊಂದಲದಿಂದಲೂ ಪ್ರಶ್ನೆ ಕೇಳುತಿದ್ದರೆ, 'ನೀನು ಕೇಳುವ ಪ್ರಶ್ನೆ ಇದಲ್ಲವೆ?' ಅಂತ ಅವರದನ್ನು ಸ್ಫುಟಗೊಳಿಸಿ ಉತ್ತರ ಹೇಳುತಿದ್ದರು. ಸಭಿಕರ, ಕೇಳುಗರ ಆತ್ಮವಿಶ್ವಾಸ ಕುಸಿಯದಂತೆ ನೋಡಿಕೊಂಡವರು ಅನಂತಮೂರ್ತಿ. ಒಂದಿಷ್ಟೂ ಅವಜ್ಞೆ ತೋರದೆ ಅವರನ್ನು ಹೊರಗೆ ಭೇಟಿಯಾದಾಗಲೂ ಮಾತಾಡಿಸಿ ವಿಶ್ವಾಸಕ್ಕೆ ತೆಗೆದುಕೊಂಡವರು. ಸುಬ್ಬಣ್ಣ ಮತ್ತು ಅನಂತಮೂರ್ತಿಯವರು ಪರಮಾಪ್ತರಿದ್ದರು. ಆದರೆ ಅವರೊಳಗಿನ ಭಿನ್ನಾಭಿಪ್ರಾಯ ಚಕಮಕಿಗಳೇನು ಸ್ವಲ್ಪವಿತ್ತೆ? ಏನಿದ್ದರೂ ಅವೆಲ್ಲ ಕೇವಲ ವಿಷಯಗಳಿಗೆ ಸಂಬಂಧಿಸಿದಂತೆ, ಸೈದ್ಧಾಂತಿಕತೆಗೆ ಸಂಬಂಧಿಸಿದಂತೆ ನಡೆಯುತಿತ್ತೇ ಹೊರತು 'ಗೆಲ್ಲುವ' ಪಂಥವೇ ಅಲ್ಲಿರಲಿಲ್ಲ, ವಿತಂಡವಾದವಂತೂ ಈ ಇಬ್ಬರಲ್ಲಿಯೂ ಇರಲೇ ಇಲ್ಲವಷ್ಟೆ? ಆ ಅಡಿಕೆ ದಬ್ಬೆಯ ಬೆಂಚಿನ ಮೇಲೆ ಕುಳಿತು ಈ ಇಬ್ಬರು ಮಹಾನುಭಾವರು ಪರಸ್ಪರ ಛೇಡಿಸಿಕೊಳ್ಳುತ್ತ ನಗುವೇ ನಗು ಆಗುತಿದ್ದದ್ದಕ್ಕೆ ಎಷ್ಟು ಜನ ಸಾಕ್ಷಿ ಬೇಕು! ಸುವರ್ಣ ಚೌಕಟ್ಟಿನ ದೃಶ್ಯವಿಶೇಷಗಳು ಅವೆಲ್ಲ. ನಮ್ಮ ಕೆ.ಎಸ್.ರಾಜಾರಾಮ್ ಕೆಮರಾ ಇಂತಹ ಎಷ್ಟು ದೃಶ್ಯಗಳನ್ನು ಸೆರೆಹಿಡಿದಿರುವುದೋ.

* * *

ಅನಂತಮೂರ್ತಿಯವರನ್ನು ಮೊಟ್ಟಮೊದಲಿಗೆ ನಾನು ಕಂಡದ್ದು ಶಿವಮೊಗ್ಗೆಯಲ್ಲಿ, ಅಲ್ಲಿನ ದೇಶೀಯ ವಿದ್ಯಾಶಾಲೆಯ ವಿಶಾಲವಾದ ಆಡಿಟೋರಿಯಂನಲ್ಲಿ. ಅದು ತುರ್ತುಪರಿಸ್ಥಿತಿಯ ವರ್ಷ. ಎಪ್ಪತ್ತರ ದಶಕ ಎಂದರೆ ಅನಂತಮೂರ್ತಿ ಮತ್ತು ಲಂಕೇಶರ ಒಳ್ಳೊಳ್ಳೆಯ ಕತೆಗಳು ಪ್ರಕಟಗೊಂಡ ಅವಧಿಯಷ್ಟೆ? ನಮ್ಮ ಸ್ನೇಹಿತರ ಮಾತಲೆಲ್ಲ ಅವರ ಕತೆಗಳ ಕುರಿತು ಹೇಗೂ ಆಯಿತಲ್ಲ, ಅವರ ಕುರಿತೂ ಮಾತು, ಮಂಥನ, ಅಭಿಮಾನ, ಮೆಚ್ಚುಗೆ. ಮೈಸೂರಿನಲ್ಲಿ ಪ್ರಾಧ್ಯಾಪಕರಾಗಿದ್ದ ಅವರು ಮಾತಿಗೆ ನಿಂತರೆಂದರೆ ಅಲ್ಲಲ್ಲೇ ಮಾತು ಕಟ್ಟುತ್ತ ಹೋಗುವ ರೀತಿಯೆ ಅದ್ಭುತ ಅಂತೆಲ್ಲ ಆಗಲೇ ಬಹಳ ಕೇಳಿದ್ದೆ ನಾನು. ಅಂದು ಸಂಜೆ ಅವರು ಅಲ್ಲಿ ಮಾತಾಡುವವರಿದ್ದರು. ಆಡಿಟೋರಿಯಮ್ ತುಂಬಿ ಹೊರಚೆಲ್ಲುತ್ತಿದೆಯೋ ಎಂಬಷ್ಟು ಜನ ಊರಿಂದ ಮುಂಚೆ ಬಂದು ಸೇರಿದ್ದಾರೆ, ಅದರಲ್ಲಿ ನಮ್ಮ ಬೀದಿಯ (ಎಸ್‌ಪಿಎಂ ರಸ್ತೆಯ) ಅನೇಕ ವಯಸ್ಸಾದ ಮಹಿಳೆಯರೂ ಇದ್ದಾರೆ. ನಮ್ಮನೆಯಿಂದಂತೂ ನಾವು ಎಲ್ಲರೂ ಇದ್ದೆವು; ನಮ್ಮ ಮಾವ ಒಬ್ಬರನ್ನು ಬಿಟ್ಟು. ಇಷ್ಟಕ್ಕೂ ಅದು ರಾಜಕೀಯ ಭಾಷಣ, ಆದರೂ! ಅಂದು ನಾನು ಶಿವಮೊಗ್ಗೆಯಲ್ಲಿ ಕಂಡ ವಿಶೇಷಗಳಲ್ಲಿ ಇದೂ ಒಂದು, ಯಾವುದೇ ಕಾರ್ಯಕ್ರಮಕ್ಕೂ ಗಂಡಸರು ಮಾತ್ರವಲ್ಲ, ಹುಡುಗ ಹುಡುಗಿಯರು, ಹೆಂಗಸರಾದಿಯಾಗಿ ಸಮಸ್ತ ಸಮಾಜವೂ ಸೇರುವುದು, ಮಿಡಿಯುವುದು. ಅಲ್ಲಿ ಕಂಡುಂಡದನ್ನು ಮನೆಗೂ ತಂದು, ಅಡುಗೆಮನೆಯಲ್ಲಿ, ಊಟದ ಕೋಣೆಯಲ್ಲಿ, ಹಜಾರದಲ್ಲಿ, ಅತಿಥಿ ಅಭ್ಯಾಗತರ ಜೊತೆಗಿನ ಮಾತಿನಂಶದಲ್ಲಿ ನೆನೆಯುವುದು, ಚರ್ಚಿಸುವುದು. ಈಗ ಹೇಗೋ, ತಿಳಿಯದು. ಎಲ್ಲರಿಗೂ ಅನಂತಮೂರ್ತಿ



ಅವರು ತಮ್ಮ ಶಿವಮೊಗ್ಗೆಯ ಹುಡುಗ ಎಂಬ ಅರ್ತಿ. 'ನಮ್ಮ ಅನಂತಮೂರ್ತಿ...' ಎಂದು ಅನಂತಮೂರ್ತಿಯವರನ್ನು, 'ನಮ್ಮ' ಎಂಬುದನ್ನು ಎಂದೂ ಬಿಡದೆ, ಸೇರಿಸಿಯೇ ಮಾತಾಡುತ್ತಿದ್ದ, ಅವರನ್ನು ಪ್ರಸ್ತಾಪಿಸಿಯೇ ಮುಂದರಿಯಲು ಬಯಸುವ ಅವರೆಲ್ಲರ ಧ್ವನಿ ಹೇಗಿತ್ತೆಂದರೆ ಅನಂತಮೂರ್ತಿಯವರು ಆ ಎಲ್ಲರ ಮನೆಹುಡುಗನೊ ಎಂದು ತಿಳಕೊಳ್ಳಬೇಕು, ಹಾಗೆ.

ಅದಾಯಿತೆ, ಅನಂತಮೂರ್ತಿಯವರು ಆರು ಗಂಟೆಗೆ ಸರಿಯಾಗಿ ಬಂದರು. ಕೆಂಪುಬಣ್ಣದ ಟೀಶರ್ಟು ತೊಟ್ಟಿದ್ದರೋ ಏನೋ, ಅದೂ ಸರಿಯಾಗಿ ನೆನಪಿದೆ. ಅವರು ಬರುತ್ತಲೂ ಎಲ್ಲರೂ ಎದ್ದು ನಿಂತರು. ಹಾಗೆ ಎಲ್ಲರೂ ಒಮ್ಮೆಗೇ ಥಟಥಟನೆ ಎದ್ದು ನಿಂತಾಗ ಒಂದು ಸದ್ದಿಲ್ಲದ, ಶಬ್ದಕ್ಕೆ ಅಳವಲ್ಲದ, ಸದ್ದು ಕೇಳಿಸುತ್ತದೆಯಲ್ಲ, ಆ ಸದ್ದು ಕೂಡ ಈಗ ಕೇಳಿದ ಕೇಳಿದೆ ಎನ್ನುವಂತಿದೆ. ಯಾಕೆಂದರೆ ಆಗಿನ ನನಗೆ ಅದೆಲ್ಲ ಹೊಸದು. ಭಯಂಕರ ಅಚ್ಚರಿಯದು. ಪಾಪ ನಾನು, ಹೇಳಿಕೇಳಿ -ಅಂದಿನ- ದ.ಕ. ಜಿಲ್ಲೆಯವಳು. ಹೊರಬಂದು ಹೆಚ್ಚು ಅರಿಯದ ಒಳಕೋಣೆಯವಳು. ಒಬ್ಬ ಸಾಹಿತಿಯ ಕುರಿತು ಈ ಪರಿಯ ಅಭಿಮಾನ ಯಾವುದೇ ಹಮ್ಮುಬಿಮ್ಮು ಹಿಂಜರಿಕೆ ಇತ್ಯಾದಿ ಅಡ್ಡ ತಡೆಗೋಡೆಯಿಲ್ಲದೆ ಮನೆಗಳೊಳಗೂ ಹೊರಗೂ ಉಕ್ಕಿ ಹರಿಯುವುದನ್ನು ಕಣ್ಣಾರೆ ಕಂಡದ್ದು ಕೇಳಿದ್ದು ಎಲ್ಲವೂ ಅತ್ಯಾಶ್ಚರ್ಯದ ಅನುಭವವೆ.

ಅವರು ಬಂದರು. ಪ್ರಾಸ್ತಾವಿಕ ಮಾತುಗಳೆಲ್ಲ ಮುಗಿಯುತ್ತಲೇ, ಪೋಡಿಯಂ ಬಳಿ ಬಂದು ಮಾತಿಗಾರಂಭಿಸಿದರು. ಎಲ್ಲ ವಿವರವೂ ನೆನಪಿಲ್ಲವಾದರೂ ಅವರು ನಿಂತು ಮಾತಾಡಿದ, ರಾಜಕಾರಣಿಗಳನ್ನು ತರ್ಕಬದ್ಧವಾಗಿ ಪ್ರಶ್ನಿಸಿದ ದೇಶವನ್ನು ಚಿಂತಿಸಿದ ರೀತಿ, ಮಾತು ಕಟ್ಟುವ, ಬಿಡಿಸುವ ಬಗೆ, ನಡುನಡುವೆ ತಾಳುತಿದ್ದ ಮೌನ, ನಿಂತಲ್ಲೇ ತಾನಾಡಿದ ಮಾತನ್ನು ತಾನೇ ತೂಗಿ ನೋಡುವಂತೆ ತಲೆದೂಗುತ್ತ ಯೋಚಿಸುತಿದ್ದ ಭಂಗಿ ಎಲ್ಲವೂ ಈಗಲೂ ಮನದಲ್ಲಿ ಚಿತ್ರವತ್!

ಇನ್ನೂ ಒಂದು ನೆನಪಿದೆ. ಶಿವಮೊಗ್ಗೆಯ ಕಮಲಾ ನೆಹರೂ ಕಾಲೇಜಿನ ತರಗತಿ ಕೋಣೆಯಲ್ಲಿ ಅವರು ತಮ್ಮ 'ಸೂರ್ಯನ ಕುದುರೆ' ಕತೆಯನ್ನು ಸ್ವತಃ ಓದಿದ ಸಂಜೆ. ಅಂದು ಅದೃಷ್ಟವಶಾತ್ ಆ ಪುಟ್ಟ ಸಭೆಯಲ್ಲಿ ನಾನೂ ಇದ್ದೆ. ಅವರನ್ನು ಕೇಳುವುದಷ್ಟೇ ಅಲ್ಲ, ನೋಡಲು ಮಾತಾಡಲು ಶಿವಮೊಗ್ಗೆಯ ಜನ ಎಷ್ಟು ಇಷ್ಟ ಪಡುತಿದ್ದರೆಂದರೆ ಅಂದು ಕೂಡ ಆ ತರಗತಿ ಕೋಣೆ ತುಂಬಿ ಹೋಗಿ ಹೊರಗೆ ಕಾರಿಡಾರ್‌ನಲ್ಲೆಲ್ಲ ಜನ ನಿಂತು ಆಲಿಸುತ್ತಿದ್ದರು. ಅದಿನ್ನೂ ಅವರು ಆ ಕತೆಯನ್ನು ಬರೆದ ಹೊಸತು. ಅವರದನ್ನು ಓದುತ್ತ ಮೆಲ್ಲುತ್ತ ಸವಿಯುತ್ತ ಅದರಲ್ಲಿನ ಪಾತ್ರಗಳೊಂದಿಗೇ ತಾವೂ ನಡೆಯುತ್ತ, ತಾವಾಗುತ್ತ, ನಮ್ಮನ್ನೂ ನಡೆಸುತ್ತ ನಿಲಿಸುತ್ತ ಒಳಗೊಳಿಸುತ್ತ ಕತೆ ಮುಗಿಸಿದಾಗ ಸಭೆಯನ್ನು ಆವರಿಸಿದ ಒಂದು ಅಪೂರ್ವ ಸ್ತಬ್ಧತೆ... ಮುಗಿದರೂ ಚದುರದ ಜನ; ಆ ದಿನ ಮರೆತೇ ಹೋಗದು.

* * *

ತಮ್ಮ ಅಧ್ಯಾಪನವನ್ನು ನಾಡಿಗೇ ವಿಸ್ತರಿಸಿದ ಆಚಾರ್ಯರಲ್ಲಿ ಒಬ್ಬರು, ಅನಂತಮೂರ್ತಿ. ಕನ್ನಡದ ಘಮವನ್ನು ನಾಡಿನಾಚೆಗೆ ದೇಶದಾಚೆಗೆ ತಲುಪಿಸಿದವರು. ಒಂದು ದೃಷ್ಟಿಯಲ್ಲಿ ಪರಿಪೂರ್ಣ ಸಾಹಿತಿ. ವಿಪುಲವಾಗಿ ಸಂಚರಿಸಿದರು ಓದಿಕೊಂಡರು ಬರೆದರು ಅವರು, ವಿಪುಲವಾಗಿ ಮಾತಾಡಿದರು, ವಿಪುಲವಾಗಿ ಎಲ್ಲರೊಡನೆ ಬೆರೆತರು, ವಿಪುಲ ಪ್ರೀತಿ ಪಡೆದರು, ವಿಪುಲವಾಗಿ ಟೀಕಿಸಿಕೊಂಡರು, ಅನ್ಯಾದೃಶ ರೀತಿಯಲ್ಲಿ ಅವನ್ನು ಧಾರಣೆ ಮಾಡಿಕೊಂಡರು. ಪ್ರತಿಭಟಿಸಿದರು. ಉನ್ನತೋನ್ನತ ಸ್ಥಾನಮಾನಗಳಲ್ಲಿದ್ದು ತನ್ನದೇ ವಿಶಿಷ್ಟ ಕಾಣ್ಕೆಯಿಂದ ನಿಭಾಯಿಸಿದರು. ಸಾರ್ವಜನಿಕ ಹೋರಾಟಗಳಲ್ಲಿ ಪಾಲ್ಗೊಂಡರು. ಗಾಢವಾಗಿ ಗಟ್ಟಿದನಿಯಲ್ಲಿ ಚಿಂತಿಸಿದರು. ಹೇಳುವ, ಆಲಿಸುವ ಜಗಳಾಡುವ ರಾಜಿಯಾಗುವ, ಮತ್ತೆ ಮುಂದರಿಯುವ, ಮಾತಿನ ಜಲ್ಲರಿಯನ್ನು ನಿರಂತರ ಹರಿಸಿದ ನೀರಿನಂತಹ ಗುಣದವರು.

ಬೆಳೆದು ಬಂದ ಬಾಲ್ಯದ ವಾತಾವರಣದಿಂದಾಗಿ ದ್ವೇಷ, ಹಠಸಾಧನೆ, ವರ್ಮಸಾಧನೆ ಅವರ ಬಳಿ ಸುಳಿಯಲೂ ಅಸಾಧ್ಯವಿತ್ತು. ಆ ಕ್ಷಣದ ಸಿಟ್ಟನ್ನು ನಿಷ್ಠುರವಾಗಿ ಒಮ್ಮೆ ಹೊರಚೆಲ್ಲಿದರೂ ಅಲ್ಲೊಂದು ಅನುನಯದ ಎಂದಿಗೂ ಅವಸರಿಸದ ಸಾವಧಾನದ ದನಿ ಇರುತಿತ್ತು. ಅನುನಯವೆಂದರೆ ಏನೆಂದು ಕಾಣಬೇಕಾದರೆ, ಅನಂತಮೂರ್ತಿಯವರನ್ನು ಆಲಿಸಬೇಕು. ತನ್ನ ವಿರೋಧವನ್ನು ಹೇಳುವುದರಲ್ಲಿಯೂ ಅವರದೊಂದು ಪ್ರೀತಿ ಮರೆಯದ ಅನಾಕ್ರಮಣ ಶೈಲಿ. ಮನವರಿಕೆಯ ಆಶಯದ ಶೈಲಿ. ಮನಃಪರಿವರ್ತನೆಗೊಳಿಸುವ ಇರಾದೆಯ ಶೈಲಿ. ತನ್ನ ದೋಷಗಳ ಅರಿವಾದಾಗ ತೀವ್ರ ಆತ್ಮನಿರೀಕ್ಷೆಗೆ ಒಡ್ಡಿಕೊಳ್ಳುವ, ತನ್ನೊಳಗೇ ತನ್ನ ಟೀಕಾಕಾರನನ್ನು ಪೋಷಿಸಿ ಬೆಳೆಸಿಕೊಂಡ ಮಲೆನಾಡ ಮನದವರು. ಎಂತೆಂಥ ಪ್ರಶಸ್ತಿ ಪುರಸ್ಕಾರಗಳಿಂದಲೂ ಅವರು ವಿಚಲಿತಗೊಳ್ಳದೆ ತನ್ನೆಲ್ಲ ದ್ವಂದ್ವಗಳನ್ನು ಮುಕ್ತವಾಗಿ ತೆರೆದಿಡುತ್ತ ಸೃಜನಶೀಲ ಶೋಧನೆಗೆ ತೊಡಗಿಕೊಂಡರು. ದಂತಗೋಪುರದಲ್ಲಿ ಕುಳ್ಳಿರಲಾರದವರು ಅನಂತಮೂರ್ತಿ, ನಿರಹಂಕಾರದಿಂದ ಜನಸಂದೋಹದಲ್ಲಿ ತನ್ನ ಇರ ಕಂಡುಕೊಂಡು ಕಿರಿಯರು ಹಿರಿಯರೆನ್ನದೆ ಎಲ್ಲರನ್ನೂ ಒಳಗೊಂಡು ಬದುಕಿದರು. ಯಾರು, ಬೇಡವಿತ್ತು ಅವರಿಗೆ, ಯಾವುದು ಬೇಡವಿತ್ತು? ಸಾಹಿತ್ಯ ಸಂಗೀತ ವಿಜ್ಞಾನ ಎಲ್ಲವೂ, ಒಟ್ಟಾರೆ, ಆಕಾಶವೂ ಬೇಕು ಭೂಮಿಯೂ. ಆಕಾಶ ಮತ್ತು ಬೆಕ್ಕು.

ಮಣಿಪಾಲದಲ್ಲಿ ಅವರು ಇದ್ದಷ್ಟು ದಿನವೂ ನಮಗೊಂದು ಸಂಭ್ರಮ. ಅವರನ್ನೇನು ನಾವು ನಿತ್ಯಾ ಹೋಗಿ ನೋಡುವವರಲ್ಲ, ಮಾತಾಡುವವರೂ ಅಲ್ಲ, ಆದರೂ. ಈ ಹಿಂದೆ ಮಣಿಪಾಲದಲ್ಲಿ ನಾಲ್ಕು ವರ್ಷಗಳ ಕಾಲ ಹಾಗೂ ಮತ್ತೆರಡು ಬಾರಿ ಮೂರು ತಿಂಗಳ ಕಾಲ ಅವರಿದ್ದ ದಿನಗಳಲ್ಲಿ ಗೋಚರಿಸಿದಂತೆ -ತನ್ನನ್ನು ಬೋಳೇ ಶಂಕರರಂತೆ ಮೆಚ್ಚುವವರಿಗಿಂತ ತನ್ನೊಡನೆ ಸರಿಗಟ್ಟಿ (ಅರ್ಥಪೂರ್ಣ) ವಾದಕ್ಕಿಳಿಯುವ ಸ್ನೇಹಿತರೆಂದರೆ ಅವರಿಗೆ ಅಪಾರ ಇಷ್ಟವಿತ್ತು. ಮೂಲತಃ ಅವರ ಮನೋಭಾವವೇ ಸಂವಾದ ಶೀಲ. ಮಾತು, ವಿಚಾರ ಮತ್ತು ಚಿಂತನೆಗಳ ಚೆಲುವಾದ ಸಾಂಗತ್ಯದೊಂದಿಗೆ ಹೊಮ್ಮುವ ಅವರ ಭಾಷಣ ಕೇಳುತಿದ್ದರೆ ಒಂದು ಪುಸ್ತಕ ಓದಿದ, ಎಷ್ಟೋ ಸಲ ಒಂದು ಒಳ್ಳೆಯ ಕಥೆಯನ್ನು ಕೇಳಿದ ಅನುಭವವಾಗುತಿತ್ತಲ್ಲವೆ. ತನ್ನ ವಿಶಿಷ್ಟ ಮಾರ್ದವತೆಯ ಧ್ವನಿಯಲ್ಲಿ ಭಾಷೆಯನ್ನೂ ಮೀರಿ ಎಂತಹ ಕ್ಲಿಷ್ಟ ವಿಷಯವನ್ನೂ ಸಂವಹನಗೊಳಿಸುವ ಸಾಮರ್ಥ್ಯ ಅವರಿಗಿತ್ತು. ಅನ್ಯಾಯದ ವಿರುದ್ಧ, ಅಭಿವೃದ್ಧಿಯೆಂಬ ಅಪರಿಕಲ್ಪನೆಯ ವಿರುದ್ಧ ದೊಡ್ಡದಾಗಿ, ಒಂಟಿಯಾದರೆ ಸರಿ ಒಂಟಿಯಾಗಿಯೇ ಸ್ವರವೆತ್ತುತಿದ್ದ ಅವರು ಕೊನೆ ಉಸಿರಿರುವವರೆಗೂ ಹಾಗೆಯೇ ಇದ್ದರು. ರಕ್ತಬಲ, ದೇಹಬಲ ಕಡಿಮೆಯಾದಾಗಲೂ ಅವರ ದನಿಯಲ್ಲಿನ ಆ ಅಪೂರ್ವ ಅನುನಯತೆ ಕುಂದಿರಲಿಲ್ಲ, ಸ್ನೇಹಹಸ್ತ ಚಾಚುವ ಅವರ ಸ್ವಭಾವ ಅತ್ತಿತ್ತಾಗಲಿಲ್ಲ. 'ಮಾತುಸೋತ' ಪ್ರಸಂಗಗಳಿಂದಾಗಿ ಟೀಕೆಟಿಪ್ಪಣಿಗಳ ಶರಶಯನದಲ್ಲಿದ್ದೂ ಎಲ್ಲವನ್ನೂ ಮಾತಿನ ಮೂಲಕವೇ ಎದುರಿಸುತ್ತ ಕೊನೆಯಲ್ಲಿ ತನ್ನಿಚ್ಛೆಯಂತೆಯೇ ಮರೆಯಾದರು.

ಹೀಗೆ ಇನ್ನಿಲ್ಲದ, ಮುಂದೆ ಬಾರದ ಯುಗದ ಒಂದು ಸಶಕ್ತ ಕೊಂಡಿ ಕಳಚಿಬಿತ್ತು.

ದೀರ್ಘಯುದ್ಧ ಮುಗಿಸಿದ ವೀರಯೋಧ ಮಲಗಿದಂತಿತ್ತು, ಅವರು ತಟಸ್ಥ ಮಲಗಿದ ರೀತಿ.

ಮತ್ತೆದ್ದು ಬಂದಾರು ಎಂದು ಕಾಯುವಂತೆಯೂ.

* * *



ಕನ್ನಡದಿ ಭವಿಸಿ ಬದುಕಿ ಬಾಳಿ ಕನ್ನಡದಿ ಸಕಲ ಅಂತರ್ಬಾಹ್ಯ ಜಗತ್ತುಗಳನ್ನು ಭಾವಿಸುವ ಕ್ರಮವನ್ನೂ ಕರ್ತವ್ಯವನ್ನೂ ತಿಳಿಸಿಕೊಟ್ಟ ನಮ್ಮ ಪ್ರೀತಿಯ, ಪ್ರೀತಿಸುವ ಈ ಚೈತನ್ಯವಿಶೇಷಕ್ಕೆ, ಕಂಬನಿದುಂಬಿ ವಿದಾಯ, ನಮನ.

● ವೈದೇಹಿ

...ಡೋಜನಾಗಿ 'ಋಣ' ತೀರಿಸಿದರು



ಅನಂತ ಮೂರ್ತಿ ರೀತಿ


...ದ ವಿಶ್ವವಿದ್ಯಾಲಯದೊಂದಿಗೆ ಯು.ಆರ್.ಅನಂತ ...ಯವರ ಸಂಬಂಧ ಹಲವು ತೆರನಾಗಿತ್ತು. ಅದನ್ನು ...ನಲ್ಲಿ ದಾಖಲಿಸುವುದು ಈ ಬರೆಹದ ಇರಾದೆ. ...ತಮೂರ್ತಿ ಅವರು ಪ್ರಥಮ ಕುಲಪತಿ ...ರ ಕಂಬಾರರು ಕುಲಪತಿಗಳಾಗಿದ್ದ ಕಾಲದಿಂದಲೂ ...ಲಯದ ಜತೆ ಸಂಬಂಧವಿರಿಸಿಕೊಂಡಿದ್ದರು. ಇಲ್ಲಿನ ... ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತ ತಮ್ಮ ...ಗಳ ಹಂಚಿಕೊಳ್ಳುತ್ತಿದ್ದರು. ಅವರು ಎನ್‌ಬಿಟಿಯ ...ದ ಬಳಿಕ, ಟಾಗೂರರ 'ಗೋರಾ' ಕಾದಂಬರಿಗೆ ...ತುಂಬಿತ್ತು. ಅದರ ಮೊದಲನೇ ಕಾರ್ಯಕ್ರಮವನ್ನು ...ಲ್ಲಿ ಏರ್ಪಡಿಸಿದರು. ಮುಂದೆ ಕನ್ನಡ ...ಲಯದ ಘಟಿಕೋತ್ಸವ ಭಾಷಣ ಮಾಡುವ ... ಬಂದಾಗ (1998), ಕನ್ನಡದಲ್ಲಿ ಜ್ಞಾನಸೃಷ್ಟಿ ... ಕುರಿತು ಕೆಲವು ಪ್ರಮೇಯಗಳನ್ನು ಮಂಡಿಸಿದರು; ... ವಿಶ್ವವಿದ್ಯಾಲಯವು ನಾಡು ನುಡಿಗೆ ...ಸುವವರಿಗೆ ಕೊಡುವ 'ನಾಡೋಜ' ಗೌರವ ...ವನ್ನು ಅವರಿಗೆ (2008) ನೀಡಿತು. ಕನ್ನಡ ...ಲಯ ಇಕ್ಕಟ್ಟಿಗೆ ಸಿಲುಕಿದಾಗ ಧಾವಿಸಿ ಬಂದು ...ತೆಗೆ ನಿಂತರು. ಅದು ಅವರು ನಾಡೋಜರಾಗಿ ...ಣವನ್ನು ತೀರಿಸಿದ ಪರಿಯಾಗಿತ್ತು.

...ಕೀಯವಾದ ಈ ವಿದ್ಯಮಾನ ಸಂಭವಿಸಿದ್ದು ... ಇಸವಿಯಲ್ಲಿ. ಶ್ರೀ ಯಡಿಯೂರಪ್ಪನವರು ...ಮಂತ್ರಿಗಳೂ, ಅವರ ಮಂತ್ರಿಮಂಡಲದಲ್ಲಿ ...ಲಿಗಳಾಗಿದ್ದ ಜನಾರ್ದನ ರೆಡ್ಡಿಯವರು ಬಳ್ಳಾರಿ ...ಉಸ್ತುವಾರಿ ಮಂತ್ರಿಗಳೂ ಆಗಿದ್ದ ಕಾಲವದು. ...ತ್ತಿಗೆ ವಿಜಯನಗರ ದೊರೆಯಾಗಿದ್ದ ...ದೇವರಾಯನು ಪಟ್ಟಾಭಿಷೇಕದ 500ನೇ ವರ್ಷ ...ತ್ತು ಇದರ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ...ಕಾರ್ಯಕ್ರಮ ಹಮ್ಮಿಕೊಂಡಿತು. ಅವುಗಳಲ್ಲಿ ...ಲಯದ 80 ಎಕರೆಯಷ್ಟು ಭೂಮಿಯನ್ನು ...ನಗರ ಪುನಶ್ಚೇತನ ಟ್ರಸ್ಟಿ'ಗೆ ವರ್ಗಾಯಿಸಿ, ಅದರಲ್ಲಿ ...ರಾಯ ಪುತ್ಥಳಿ ಸ್ಥಾಪಿಸಿ, ದೆಹಲಿಯ ಅಕ್ಷರಧಾಮದ ... ಮಾದರಿಯಲ್ಲಿ ಥೀಮ್‌ಪಾರ್ಕನ್ನು ನಿರ್ಮಾಣ ...ಕೆಂದು ನಿರ್ಧರಿಸಿತು. ಇದಕ್ಕಾಗಿ ಜಮೀನಿನಲ್ಲಿ ... ಅಡ್ವಾಣಿಯವರಿಂದ ಶಿಲಾನ್ಯಾಸವನ್ನು ಸಹ ...ಸಿತು. ಇದು ಕನ್ನಡ ವಿಶ್ವವಿದ್ಯಾಲಯದ ...ಗಳಿಗೆ ಒಪ್ಪಿತವಾಗಲಿಲ್ಲ. ಅವರು ಒಟ್ಟಿಗೆ ನಿಂತು ...ಧ ಮಾಡಿದರು. ಹಿಂದಿನ ಕುಲಪತಿಗಳಾದ ...ರ ಕಂಬಾರರು, ಎಂ.ಎಂ. ಕಲಬುರ್ಗಿಯವರು, ...ಲಕ್ಕಪ್ಪಗೌಡರು, ವಿವೇಕ ರೈಯವರು ಇದಕ್ಕೆ ...ಡಿಸಿದರು. ಬಹುಶಃ ಎಂ.ಚಿದಾನಂದಮೂರ್ತಿ ... ಹೊರತುಪಡಿಸಿ, ಜಿ.ಎಸ್.ಶಿವರುದ್ರಪ್ಪ ಚೆನ್ನವೀರ ...ಟೀಲ ಪುಟ್ಟಪ್ಪ ಜಿ.ರಾಮಕೃಷ್ಣ ಗೋವಿಂದರಾವ್, ...ಪ್ರಭು ಬೆಟ್ಟದೂರು, ಕೆ.ಮರುಳಸಿದ್ದಪ್ಪ, ಸಾರಾ ...ಕರ್, ನಾ.ಡಿಸೋಜಾ, ಪುರುಷೋತ್ತಮ ಬಿಳಿಮಲೆ, ... ಪ್ರಸಾದ್, ಬರಗೂರು ರಾಮಚಂದ್ರಪ್ಪ, ...ಪ್.ಭೈರಪ್ಪ, ಕಡಿದಾಳು ಶಾಮಣ್ಣ, ಕುಂವೀ, ...ರಾಯಣ, ದೇವನೂರ ಮಹಾದೇವ, ಗಿರಡ್ಡಿ ...ದರಾಜ, ಜಿ.ಎಸ್.ಆಮೂರ, ಡಿ.ದುರ್ಗಾದಾಸ್, ...ಕುಂದ, ವಾಮನ ಬೇಂದ್ರೆ, ವೀಣಾ ಶಾಂತೇಶ್ವರ, ...ಗೀತಾ ನಾಗಭೂಷಣ, ಶೂದ್ರ ಶ್ರೀನಿವಾಸ್, ...ಅಮೀನ್ ಮಟ್ಟು ಮುಂತಾದ ನೂರಾರು ನಾಡಿನ ...ರೂ ಚಿಂತಕರೂ ದನಿಗೂಡಿಸಿದರು. ನಾಡಿನ ...ಕ ಪತ್ರಿಕೆಗಳು ಸಂಪಾದಕೀಯ ಬರೆದು ...ದವು. ಮುಖ್ಯವಾಗಿ 'ಪ್ರಜಾವಾಣಿ' ಪತ್ರಿಕೆ ...ಕ ಪಾತ್ರ ವಹಿಸಿತು. ಎಪ್ಪತ್ತೈದರಷ್ಟು ಸ್ಥಳೀಯರ ... ಸಂಘಟನೆಗಳು, ಪರಶುರಾಮ್ ಕಲಾಲರ ...ತ್ವದಲ್ಲಿ ಒಕ್ಕೂಟ ಮಾಡಿಕೊಂಡು, ಒಂದು ತಿಂಗಳು ...ರಣಿ ಮುಷ್ಕರ ಮಾಡಿದವು. 187 ಜನರು ... ಒಳಗಾದರು. ಬಹುಶಃ ಗೋಕಾಕ್ ಚಳವಳಿಯನ್ನು ...ನ್ನಡಚಿಂತಕರು ಈ ಬಗೆಯಲ್ಲಿ ಒಗ್ಗಟ್ಟು ತೋರಿದ್ದು ...ವೇಶದಲ್ಲಿ ಎಂದು ಕಾಣುತ್ತದೆ. ಕರ್ನಾಟಕದ ...ಕಡೆಯಿಂದ ಕನ್ನಡ ವಿಶ್ವವಿದ್ಯಾಲಯದ ಈ ...ಹೋರಾಟಕ್ಕೆ ಸಿಕ್ಕ ಬೆಂಬಲ ಮತ್ತು ಸಿಕ್ಕ ವಿಜಯವನ್ನು ... ಹೃದಯ ತುಂಬಿಬರುತ್ತದೆ.

...ಹೋರಾಟದ ಅನಂತಮೂರ್ತಿಯವರು ವಹಿಸಿದ ...ಣಾಯಕವಾಗಿತ್ತು. ಭೂಮಿ ಪರಭಾರೆಯಾದ ... ಅವರು ಬೆಂಗಳೂರಿನ ಟೌನ್‌ಹಾಲಿನಲ್ಲಿ ನೂರಾರು ... ಕಲಾವಿದರನ್ನು ಕೂಡಿದ ಸಭೆಯಲ್ಲಿ ಸರ್ಕಾರದ ...ನ್ನು ವಿರೋಧಿಸಿ ಭಾಷಣ ಮಾಡಿದರು. ...ರಾಟ ನಡೆದ ಇಡೀ ತಿಂಗಳು ಕಾಲ ಅವರು ... ಹೋರಾಟಗಾರರ ಸಂಪರ್ಕದಲ್ಲಿದ್ದರು. ಒಮ್ಮೆ ...ಉನ್ನತ ಶಿಕ್ಷಣ ಮಂತ್ರಿಗಳಾದ ಅರವಿಂದ ...ಯವರು, ಭೂಮಿ ಹಸ್ತಾಂತರ ವಿರೋಧಿಸುವ



ಶಿಕ್ಷಕರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಹೇಳಿಕೆ ಮಾಡಿದರು. ಆದಕ್ಕೆ ಅನಂತಮೂರ್ತಿಯವರು ಕೂಡಲೆ ವಾಚಕರವಾಣಿಯಲ್ಲಿ (1.3.10) 'ಹಾಗೆ ಶಿಕ್ಷೆ ಮಾಡುವ ಅಧಿಕಾರ ಶಿಕ್ಷಣ ಮಂತ್ರಿಗಳಿಗಿಲ್ಲ; ಈ ಕೆಲಸವನ್ನು ಕುಲಪತಿ ಮತ್ತು ರಾಜ್ಯಪಾಲರು ಮಾತ್ರ ಮಾಡಬಹುದು. ವಿಶ್ವವಿದ್ಯಾಲಯದ ಅಧ್ಯಾಪಕ ಸಂಘದ ಅಧ್ಯಕ್ಷನಾಗಿದ್ದ ಮತ್ತು ವಿಶ್ವವಿದ್ಯಾಲಯವೊಂದರ ಕುಲಪತಿಯಾಗಿದ್ದ ಅನುಭವದಲ್ಲಿ ಈ ಮಾತನ್ನು ಬರೆದಿದ್ದೇನೆ. ಹಂಪಿ ವಿಶ್ವವಿದ್ಯಾಲಯದ ಅಧ್ಯಾಪಕರ ಹೋರಾಟಕ್ಕೆ ನನ್ನ ಬೆಂಬಲವಿದೆ. ಮಂತ್ರಿಗಳ ಮಾತಿಗೆ ಯಾರೂ ಹೆದರಬೇಕಿಲ್ಲ' ಎಂದು ಪತ್ರ ಬರೆದರು. ಈ ಪತ್ರ ಬರೆಯುವ ವಾರದ ಹಿಂದೆ 'ಕನ್ನಡದಿಂದ ಕಸಿದ ಜಾಗ ವಾಪಸ್ ಸಿಗಲಿ' ಎಂಬ ಬಹಿರಂಗಪತ್ರವನ್ನು ಕುಲಪತಿಗಳಿಗೆ (26.2.10 ಪ್ರಜಾವಾಣಿ) ಬರೆದಿದ್ದರು.



ಅದೊಂದು ಚಾರಿತ್ರಿಕ ಮಹತ್ವದ ಪತ್ರವಾಗಿದ್ದು, ಅದರಲ್ಲಿ ಅವರು ಕನ್ನಡ ವಿಶ್ವವಿದ್ಯಾಲಯದ ಮೂಲಕ ತಮ್ಮ ಕನಸನ್ನು ಹಂಚಿಕೊಂಡರು. ಆ ಪತ್ರದ ಪಾಠ ಹೀಗಿದೆ:

"ಭಾಷೆಗಳ ಹೆಸರಿನಲ್ಲಿ ವಿಶ್ವವಿದ್ಯಾಲಯಗಳನ್ನು ಸೃಷ್ಟಿಸುವುದು ಸಮರ್ಪಕವಲ್ಲ. ತೆಲುಗು ವಿಶ್ವವಿದ್ಯಾಲಯ ನನಗೆ ಗೊತ್ತಿರುವಂತೆ ಅರ್ಹರನ್ನು ಹುಡುಕಿ ಪ್ರಶಸ್ತಿಗಳಿಗೆ ಆಯ್ಕೆ ಮಾಡುವ ಕೆಲಸಕ್ಕೆ ಸೀಮಿತವಾಗಿದೆ. ಕೇರಳದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ ಮಾಡಲು ಹೊರಟಾಗ ನಾನದನ್ನು ವಿರೋಧಿಸಿದ್ದೆ. ನಾನು ಊಹಿಸಿದಂತೆಯೇ ಅದು ಕಾಮರ್ಸ್ ಕಲಿಸಿ ಉದ್ಯೋಗ ಸೃಷ್ಟಿಸುವ ಅಂಗಡಿಯಾಯಿತು. ನೆವಕ್ಕೆ ಸಂಸ್ಕೃತ ಅಲ್ಲಿ ಇತ್ತು. ಹಂಪಿಯ ಕನ್ನಡ ವಿಶ್ವವಿದ್ಯಾಲಯ ಮಾತ್ರ ಇದಕ್ಕೆ ಹೊರತಾಗಿತ್ತು. ಇದಕ್ಕೆ ಕಾರಣ ಕವಿ ಕಂಬಾರರು ಮೊದಲ ಕುಲಪತಿಯಾಗಿ ಆಯ್ಕೆಯಾದದ್ದು. ಆಗಿನ ಸರ್ಕಾರ ಅವರಿಗೆ ಬೆಂಬಲವಾಗಿ ನಿಂತದ್ದು. ಕಂಬಾರರು 'ರಿಸರ್ಚ್'ನ ಕಲ್ಪನೆಯನ್ನೇ ಬದಲಿಸಿ ಅದನ್ನು ದೇಸಿಗೊಳಿಸಿದರು.

ಈ ಕೆಲಸ ಮುಂದುವರೆಯಬೇಕಾದ್ದು. ಅದಕ್ಕೀಗ ವಿಘ್ನ ಒದಗಿದೆ. ಭೂತಕಾಲವನ್ನು ಪುನರುಜ್ಜೀವಿಸುವ ಆಶಯವಿಟ್ಟುಕೊಂಡಿದ್ದೇವೆಂದು ಹೇಳಿಕೊಳ್ಳುವ ಒಂದು ಟ್ರಸ್ಟಿಗೆ 80 ಎಕರೆ ಭೂಮಿಯನ್ನು ವರ್ಗಾಯಿಸಿದೆ. ಇದು ಅನೈತಿಕ ಮಾತ್ರವಲ್ಲ; ಅಸಿಂಧು ಕೂಡಾ. ವಿಶ್ವವಿದ್ಯಾಲಯದ ಹುಟ್ಟಿನ ಆಶಯಕ್ಕೇ ವಿರೋಧವಾದ್ದು. ಭೂತಕಾಲವನ್ನು ಪುನರುಜ್ಜೀವನಗೊಳಿಸುವುದು ಅಸಾಧ್ಯ ಮಾತ್ರವಲ್ಲ, ಅಸಾಧು ಕೂಡ. ಕೊನೆಗೆ ಭೂತಕಾಲ ಕೃಷ್ಣದೇವರಾಯನ ಕಂಚಿನ ಪ್ರತಿಮೆ ಮಾತ್ರವಾದೀತು. ರಾಜಕುಮಾರ್ ತಮ್ಮ ಸಿನಿಮಾದಲ್ಲಿ ಅದ್ಭುತವೆಂಬಂತೆ ಕೃಷ್ಣದೇವರಾಯ ಈ ಕಾಲಕ್ಕೆ ಒದಗುವಂತೆ ಮಾಡಿದರು. ನಮಗೆ ಅಷ್ಟು ಸಾಕು.

ಕೃಷ್ಣದೇವರಾಯನ ಸಿಂಹಾಸನದ 500 ವರ್ಷಗಳ ಆಚರಣೆಗೆ ಅದೆಷ್ಟು ಕೋಟಿಯೋ ಖರ್ಚಾಯಿತಂತೆ. ಕೃಷ್ಣದೇವರಾಯನ ಕಾಲದಲ್ಲೇ ಇಷ್ಟೊಂದು ಕೋಟಿ ಖರ್ಚಿನಲ್ಲಿ ಸಿಂಹಾಸನವನ್ನು ಅವನು ಹತ್ತಿದ್ದರೆ, ಖಂಡಿತ ಆ ಕಾಲದ ನಮ್ಮ ಪುರಂದರದಾಸರು ಕರೆದರೂ ಆ ಸಮಾರಂಭಕ್ಕೆ ಹೋಗುತ್ತಿರಲಿಲ್ಲ. ಅವರು ಹಾಡಿದ್ದಾರಲ್ಲವೇ 'ಉತ್ತಮ ಪ್ರಭುತ್ವ ಲೊಳಲೊಟ್ಟೆ'. ಪ್ರಭುತ್ವ ಉತ್ತಮವಾಗಿದ್ದರೂ ಲೊಳಲೊಟ್ಟೆ. ಉತ್ತಮವಾದೀತೆಂಬ ಭರವಸೆಯೂ ಲೊಳಲೊಟ್ಟೆ. ರಾಜಕೀಯದ ಬದಲಾವಣೆ ಹೃದಯದೊಳಗಿನ ಸಂಸ್ಕಾರವೂ ಆಗದ ಹೊರತು, ತೋರಿಕೆಗೆ ಇರುವ ವಿಜೃಂಭಣೆ ಲೊಳಲೊಟ್ಟೆ ಎನ್ನುವ ನಮ್ಮ ವಿಜಯನಗರ ವೈಭವದ ಕಾಲದ ದಾಸರಿಗೂ, ತನ್ನ ಕಾಲದ ಜರ್ಮನಿಯ ಪ್ರಭುತ್ವವೇ ಅಂತಿಮ ವೃದ್ಧಿಯ ಸ್ಥಿತಿ ಎಂದು ತಿಳಿದಿದ್ದ ಪಾಶ್ಚಾತ್ಯ ಹೆಗೆಲ್‌ಗೂ ಇರುವ ವ್ಯತ್ಯಾಸ ಗಮನಿಸಬೇಕು.

ಕನ್ನಡದಲ್ಲಿ ಜ್ಞಾನದ ಸಂವಹನೆ ಚೆನ್ನಾಗಿ ನಡೆದಿದೆ; ಈಗ ಜ್ಞಾನದ ಸೃಷ್ಟಿಯೂ ಕನ್ನಡದಲ್ಲಿ ನಡೆಯಬೇಕೆಂಬುದು ನಮ್ಮ ಆಶಯ. ಇಂಗ್ಲಿಷಿನಲ್ಲಿ ಹಲವರು ಜ್ಞಾನದ ಹೊಸ ಆವಿಷ್ಕಾರಗಳನ್ನು ಮಾಡಿದ್ದಾರೆ. ಡಾರ್ವಿನ್ ನಂತಹವರು, ಡೇನಿಷ್‌ನಂತಹ ಪುಟ್ಟಭಾಷೆಯಲ್ಲಿ ಕಿರ್ಕೆಗಾರ್ಡ್‌ನಂಥವರು ಹೊಸ ತಿಳಿವನ್ನು ಹುಟ್ಟಿಸುವ ಕೆಲಸ ಮಾಡಿದ್ದಾರೆ. ಕನ್ನಡದಲ್ಲಿ ನಮ್ಮ ವಚನಕಾರರು, ಮುಖ್ಯವಾಗಿ ಬಸವ ಅಲ್ಲಮನಂತಹವರು, ಹೊಸ ಆಲೋಚನೆಗಳನ್ನು ಜಗತ್ತಿಗೆ ಕೊಟ್ಟಿದ್ದಾರೆ. ಕನ್ನಡದಲ್ಲೂ ಈ ಕಾಲದ ಅಗತ್ಯಕ್ಕೆ ತಕ್ಕಂತೆ ಇಡೀ ಜಗತ್ತೇ ಆಲಿಸಬೇಕಾದ(ಬಹುದಾದ), ವಿಚಾರಗಳು ಹುಟ್ಟಿರಬೇಕು. ಕನ್ನಡ ವಿಶ್ವವಿದ್ಯಾಲಯ ಬೇರೆ ಕನ್ನಡ ಇಲಾಖೆಗಳಂತಲ್ಲದೆ ಅನನ್ಯವಾಗಲು ಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಹೊಸ ವಿಚಾರದ ಹುಟ್ಟಿನ ಮಾಧ್ಯಮವಾಗಬೇಕು.

ಇವತ್ತಿನ ವಾಸ್ತವ ಮರೆಯದಂತೆ ನನ್ನೆರಡು ಸೂಚನೆಗಳು ಇಲ್ಲಿವೆ. ಬುದ್ಧಿವಂತ ಮಕ್ಕಳೆಲ್ಲ ಎಂ.ಬಿ.ಬಿ.ಎಸ್ ಮಾಡಲು ಹಾತೊರೆಯುತ್ತಾರೆ. ನನಗೆ ತಿಳಿದಂತೆ ಹಿಂದೆ ರಷ್ಯನ್ ಕಲಿತು ಸೋವಿಯತ್ ದೇಶಗಳಲ್ಲಿ ಮೆಡಿಸಿನ್ ಡಿಗ್ರಿ ಪಡೆಯುತ್ತಿದ್ದರು. ಕನ್ನಡಕ್ಕೆ ಬಲವೂ ಆತ್ಮಗೌರವವೂ ಬರಲು ಕನ್ನಡ ವಿಶ್ವವಿದ್ಯಾಲಯ ಪಾಶ್ಚಾತ್ಯ ಮೆಡಿಸಿನ್ ಅನ್ನು ಕನ್ನಡದಲ್ಲಿ ಕಲಿಸಲು ಮುಂದಾಗಲಿ. ಇದರಲ್ಲಿ ಪ್ರವೇಶ ಪಡೆಯುವವರಿಗೆಲ್ಲ ಜ್ಞಾನದ ಗ್ರಹಿಕೆಗೆ ಅಗತ್ಯವಾದಷ್ಟು ಇಂಗ್ಲಿಷ್ ಕೂಡ ಗೊತ್ತಿರಬೇಕು. ಪಾಶ್ಚಾತ್ಯ ವೈದ್ಯಶಾಸ್ತ್ರ ಕಲಿಯುವ ಈ ವಿದ್ಯಾರ್ಥಿಗಳೂ ನಮ್ಮ ದೇಸಿ ಪದ್ಧತಿಯ ಎಲ್ಲ ಔಷಧೋಪಚಾರಗಳನ್ನು ವೈಜ್ಞಾನಿಕವಾಗಿ ಸಂಶೋಧನೆಗೆ ಒಳಪಡಿಸಿ ಪರೀಕ್ಷಿಸಬೇಕು ಜ್ಞಾನಸೃಷ್ಟಿಯಾಗುವ ಬಗೆಗಳಲ್ಲಿ ಇದೂ ಒಂದು.


ಮುಖ್ಯವಾಗಿ ಇಲ್ಲೊಂದು ಸೂಚನೆ. ಕನ್ನಡೇತರ ದೇಶದ ಯಾವ ವಿದ್ಯಾರ್ಥಿಯಾಗಲಿ, ಕನ್ನಡ ಕಲಿತು ಪ್ರವೇಶ ಬಯಸಿದರೆ, ಅರ್ಹತೆಯ ಆಧಾರದ ಮೇಲೆ ಅವರಿಗೂ ಇಲ್ಲಿ ಪ್ರವೇಶ ಸಿಗಬೇಕು. ತನ್ನ ಪರಿಧಿಗೆ ಸೀಮಿತವಾದ ಕನ್ನಡ ಆಗ ಚಲಿಸುವ ಭಾಷೆಯೂ ಆಗುತ್ತದೆ. ವಿಜ್ಞಾನಕ್ಕೆ ಸಂಬಂಧಿಸಿದಂತೆ ಇನ್ನೊಂದು ಸೂಚನೆ. ವಿಜ್ಞಾನಕ್ಕೊಂದು ಚರಿತ್ರೆಯಿದೆ. ಅದರ ಹಿಂದೊಂದು ತಾತ್ವಿಕ ದರ್ಶನವೂ ಇದೆ. ಇದು ಪಾಶ್ಚಾತ್ಯ ಮಾತ್ರವಲ್ಲ, ಜಾಗತಿಕವಾದ್ದು. ಈ ವಿಷಯದಲ್ಲಿ ಆಳವಾದ ಸಂಶೋಧನೆಯನ್ನು ಕನ್ನಡದಲ್ಲಿ ನಡೆಸುವಂತೆ ಆಗಬೇಕು. ಗತಿಸಿದ್ದ ವಿಜ್ಞಾನಿ ಸಿ.ಎಸ್.ಶೇಷಾದ್ರಿಯವರು ನಾವು ಕೇವಲ ಸತ್ಯವೆಂದು ಒಪ್ಪಿಕೊಳ್ಳುವ ಎಷ್ಟೋ ಪಾಶ್ಚಾತ್ಯ ವಿಜ್ಞಾನದ ಗ್ರಹಿಕೆಗಳ ಹಿಂದೆ ಅವರ ಮತಧರ್ಮಗಳೂ ಕಾಲದ ಚಲನೆ ಸರಳ ರೇಖಾತ್ಮಕವೆಂಬ ಈ ಮತಧರ್ಮಗಳ ಗ್ರಹಿಕೆಯೂ ಕೆಲಸ ಮಾಡುತ್ತವೆಯೆಂದು ಭಾವಿಸಿದ್ದರು. ನಾವಿದನ್ನು ಪರೀಕ್ಷಿಸಿದಲ್ಲಿ ಪ್ರಾಯಶಃ ಮುಂದಿನ ಯುಗಕ್ಕೆ ಬೇಕಾದ ಪರ್ಯಾಯ ತಂತ್ರಜ್ಞಾನವನ್ನು ಹುಟ್ಟು ಹಾಕುವ ವಿಜ್ಞಾನ ನಮ್ಮಲ್ಲಿ ಬೆಳೆಯಬಹುದು. ಹಾಗೆ ನೋಡಿದರೆ ವಿಜ್ಞಾನದ ಅತಿ ಸಂಕೀರ್ಣವಾದ ಭಾಗವಾದ ಗಣಿತಶಾಸ್ತ್ರಕ್ಕೆ ಬಹುದೊಡ್ಡ ಕೊಡುಗೆಗಳನ್ನು ನೀಡಿದ್ದು ಪೂರ್ವದ ದೇಶಗಳೇ. ಈ ಪೂರ್ವದ ದೇಶಗಳ ಪ್ರಾಚೀನ ಗಣಿತಜ್ಞರು ಇಂಗ್ಲಿಷ್‌ನಲ್ಲೇನೂ ಬರೆಯಲಿಲ್ಲ. ಅವರು ತಮಗೆ ತಿಳಿದಿದ್ದ ಸಂಸ್ಕೃತ ಅರಾಬಿಕ್‌ನಂತಹ ಭಾಷೆಗಳಲ್ಲೇ ಗಣಿತದ ಸಂಕೀರ್ಣ ತತ್ವಗಳನ್ನು ಮಂಡಿಸಿದ್ದರು ಎಂಬುದು ನಮಗೆ ನೆನಪಿರಬೇಕು.

ಪಾಶ್ಚಾತ್ಯ ವಿಜ್ಞಾನದ ಗ್ರಹಿಕೆ ವಿಧಾನಗಳಿಗೆ ಪರ್ಯಾಯವನ್ನು ಸೃಷ್ಟಿಸುವುದಕ್ಕೆ ನಮ್ಮ ಗ್ರಹಿಕೆಯ ಭಾಷೆಯೂ ಬದಲಾಗಬೇಕಿರುವ ಅಗತ್ಯವನ್ನು ಮನಗಂಡರೆ, ಕನ್ನಡದಲ್ಲಿ ಜ್ಞಾನಸೃಷ್ಟಿಯ ಅಗತ್ಯವೂ ಅನಿವಾರ್ಯತೆಯೂ ತಿಳಿಯುತ್ತದೆ. ಸಾಂಸ್ಕೃತಿಕ ಏಕರೂಪೀಕರಣವನ್ನು ಹೇರುತ್ತಿರುವ ಜಾಗತೀಕರಣದ ಈ ದಿನಗಳಲ್ಲಿ ಪರ್ಯಾಯದ ಸೃಷ್ಟಿಗೆ ನಮ್ಮ ಅನನ್ಯತೆಗಳನ್ನು ಪುನರಾವಿಷ್ಕರಿಸುವ ಅಗತ್ಯವಿದೆ. ಚೀನಾದಲ್ಲಿ ಮಾವೋ ಸಾಂಸ್ಕೃತಿಕ ಕ್ರಾಂತಿಯ ಮೂಲಕ ಪಶ್ಚಿಮಕ್ಕಿಂತ ಭಿನ್ನವಾದ ತಂತ್ರಜ್ಞಾನವನ್ನೊಂದನ್ನು ಬೆಳೆಸಲು ಪ್ರಯತ್ನಿಸಿದರು. ಆದರೆ ಇದು ಪರ್ಯಾಯ ತಂತ್ರಜ್ಞಾನವಾಗಿರಲಿಲ್ಲ, ಬದಲಿಗೆ ಪಶ್ಚಿಮದ ತಂತ್ರಜ್ಞಾನ ಸಂಸ್ಕೃತಿಯನ್ನೇ ಶ್ರೇಷ್ಠವೆಂದು ಒಪ್ಪಿಕೊಂಡು ಆ ಹಂತವನ್ನು ತಲುಪುವುದಕ್ಕೆ, ಅಗತ್ಯವಿರುವ ಮಧ್ಯಮ ತಂತ್ರಜ್ಞಾನವೊಂದನ್ನು ರೂಪಿಸುವ ಪ್ರಯತ್ನ ಅದಾಗಿತ್ತು. ನಮಗೆ ಬೇಕಿರುವುದು ಇಂಥ ಮಧ್ಯಮ ತಂತ್ರಜ್ಞಾನವಲ್ಲ, ನಮಗೆ ಬೇಕಿರುವುದು ಭೂಮಿಯನ್ನು ಉಳಿಸಿ ಬೆಳೆಸುವುದಕ್ಕೆ ಅಗತ್ಯವಿರುವ ತಂತ್ರಜ್ಞಾನ. ಭೂಮಿಯ ವಾತಾವರಣದ ಶಾಖ ಏರುತ್ತ ಇರುವ ನಮ್ಮ ಆತಂಕದ ಕಾಲದಲ್ಲಿ ಪರ್ಯಾಯಗಳನ್ನು ಚಿಂತಿಸುವ ಗ್ರಹಿಸುವ ಮತ್ತು ಸಾಕಾರಗೊಳಿಸುವ ಸಂಶೋಧನೆಯ ದಾರಿಯಲ್ಲಿ ನಮ್ಮ ಕನ್ನಡ ವಿಶ್ವವಿದ್ಯಾಲಯವೂ ಹೆಜ್ಜೆಗಳನ್ನಿಡಬೇಕು. ಈಗಾಗಲೇ ಇರುವ ಕನ್ನಡ ಭಾಷಾತಜ್ಞರು ಈ ದಿಕ್ಕಿನಲ್ಲಿ ಕನ್ನಡ ಭಾಷೆ ಸಜ್ಜಾಗುವಂತೆ ಬೆಳೆಸಬೇಕು. ಹೀಗೆ ಕನ್ನಡ ಬೆಳೆದರೆ ಈ ಭಾಷೆಯನ್ನು ಇಂದಿಗೂ ಉಳಿಸಿಕೊಂಡಿರುವ ದೇಶದ ಬಡಬಗ್ಗರಿಗೆ ಕನ್ನಡ ಧೀಮಂತ ವಿಶ್ವಭಾಷೆಯಾಗಿ ಒದಗಿದಂತಾಗುತ್ತದೆ.

ವಿಶ್ವವಿದ್ಯಾಲಯದ ನೆಲವನ್ನು ಪರಭಾರೆ ಮಾಡಲು ಯಾವ ಸಂದಿಗ್ಧದಿಂದಲೊ ಒಪ್ಪಿರುವಂತೆ ಕಾಣುವ ಕುಲಪತಿ ಎ.ಮುರಿಗೆಪ್ಪ ರಾಜ್ಯಪಾಲರಿಗೆ ಬರೆಯುವ ಧೈರ್ಯ ಮಾಡಿ, ಈ ಕನಸಿನ ಭೂಮಿಕೆಯಾಗಿ ನೆಲವನ್ನು ಉಳಿಸಿಕೊಳ್ಳಬೇಕೆಂದು ಅವರಿಂದ ನಾಡೋಜ ಪಡೆದ ನಾನು ಕೋರುತ್ತೇನೆ-ಯು. ಆರ್. ಅನಂತಮೂರ್ತಿ"

ಕರ್ನಾಟಕದ ಸಮಸ್ತ ಪ್ರಜ್ಞಾವಂತರ ಬೆಂಬಲದಿಂದ ಕನ್ನಡ ವಿಶ್ವವಿದ್ಯಾಲಯದ ಭೂಹೋರಾಟ ಯಶಸ್ಸನ್ನು ಕಂಡಿತು. ಸದನದಲ್ಲಿ ಮುಖ್ಯಮಂತ್ರಿಯವರು ವಶಪಡಿಸಿಕೊಂಡಿದ್ದ ಭೂಮಿಯನ್ನು ವಿಶ್ವವಿದ್ಯಾಲಯಕ್ಕೆ ಮರಳಿಸುವ ಹೇಳಿಕೆ ನೀಡಿದರು. 'ಪ್ರಜಾವಾಣಿ'ಯು ಈ ಘಟನೆಯನ್ನು 'ಕನ್ನಡದ ನೆಲ ಕನ್ನಡಕ್ಕೆ' ಎಂದು ತಲೆಬರೆಹದಲ್ಲಿ ಪ್ರಕಟಿಸಿತು. ಇದಾದ ಮೇಲೆ ವಿಶ್ವವಿದ್ಯಾಲಯವು 'ಕನ್ನಡನಾಡು ಮತ್ತು ಕನ್ನಡ ವಿಶ್ವವಿದ್ಯಾಲಯದ ಮನ್ನೋಟ' ಎಂಬ ವಿಚಾರ ಸಂಕಿರಣವನ್ನು (12.4.2010) ಹಮ್ಮಿಕೊಂಡಿತು. ಅದರ ಉದ್ಘಾಟನೆಗೆ ಅನಂತಮೂರ್ತಿ ಅವರನ್ನೇ ಆಹ್ವಾನಿಸಿತು- ಜತೆಗೆ ಈ ಹಿಂದಿನ ಎಲ್ಲ ಕುಲಪತಿಗಳನ್ನು. ಆಗ ಅನಂತಮೂರ್ತಿ ಅವರು ಮತ್ತೊಮ್ಮೆ ಕನ್ನಡದಲ್ಲಿ ಲೋಕದ ಎಲ್ಲ ವಿದ್ಯೆಯನ್ನು ಕಲಿಯುವಂತೆ ಅದನ್ನು ಸಜ್ಜುಗೊಳಿಸುವ ಬಗ್ಗೆ ತಮ್ಮ ಕನಸನ್ನು ಹಂಚಿಕೊಂಡರು. ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತವರು ಈ ನೆಲಕ್ಕೆ ಅನಾಥರಾಗುತ್ತಾರೆ. ಇದು ಕನ್ನಡಕ್ಕೆ ಮಾತ್ರವಲ್ಲ ಎಲ್ಲ ಭಾರತೀಯ ಭಾಷೆಗಳಿಗೆ ಬಂದಿರುವ ಅಪಾಯ ಎಂದು ಹೇಳಿದರು. ಕನ್ನಡ ವಿಶ್ವವಿದ್ಯಾಲಯವು ಕನ್ನಡದಲ್ಲಿಯೇ ಒಂದು ಸಮಾಜವಿಜ್ಞಾನದ ಕೋರ್ಸನ್ನು ಮಾಡಬೇಕೆಂದೂ ಅದು ಭಾರತದಲ್ಲಿಯೇ ವಿಶಿಷ್ಟವಾದ ಪದವಿಯಾಗಿರಬೇಕೆಂದೂ ತಮ್ಮ ಆಸೆ ಹಂಚಿಕೊಂಡರು.

ಅನಂತಮೂರ್ತಿ ಅವರು ತಮ್ಮ ಪತ್ರದಲ್ಲಾಗಲಿ, ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾಡಿದ ಬೇರೆಬೇರೆ ಉಪನ್ಯಾಸಗಳಲ್ಲಾಗಲಿ ಪ್ರಕಟಿಸಿದ ಚಿಂತನೆಯಲ್ಲಿ ಅನೇಕ ಕಡೆ ತಾತ್ವಿಕ ಭಿನ್ನಮತ ತೋರಬಹುದು; ಪ್ರಶ್ನೆ ಎತ್ತಬಹುದು. ಆದರೆ ದೇಶಭಾಷೆಗಳು ತಮ್ಮ ನಿಜಶಕ್ತಿಯನ್ನು ಕಂಡುಕೊಳ್ಳಬೇಕೆಂಬ ಅವರ ಕನಸು ಮಾತ್ರ ಪ್ರಾಮಾಣಿಕವಾಗಿತ್ತು, ಅವರ ಕಾಮನ್‌ಸ್ಕೂಲಿನ ಕಲ್ಪನೆಯಲ್ಲಿ, ಮಕ್ಕಳು ಎಳವೆಯಲ್ಲಿ ಮನೆಮಾತು ಇಲ್ಲವೇ ಪರಿಸರ ಭಾಷೆಯಲ್ಲೇ ಕಲಿಯಬೇಕೆಂಬ ಶಿಕ್ಷಣನೀತಿ ಮಾತ್ರವಿರಲಿಲ್ಲ, ಒಂದು ಪ್ರದೇಶದ ಎಲ್ಲ ಮಕ್ಕಳು ತರತಮಗಳಿಲ್ಲದ ಶಾಲಾವ್ಯವಸ್ಥೆಯಲ್ಲಿ ಕಲಿಯಬೇಕೆಂದು ಸಮಾಜವಾದಿ ಆಶಯವೂ ಇತ್ತು; ಈ ಆಶಯವು ಅತ್ಯುತ್ತಮ ಬರೆಹ ಅಥವಾ ಚಿಂತನೆ ಹುಟ್ಟುವ ಸಾಧ್ಯತೆ ಹೆಚ್ಚಿರುವುದು, ಮನೆಮಾತು ಇಲ್ಲವೇ ಪರಿಸರ ಭಾಷೆಯಲ್ಲಿ ಬರೆದಾಗಲೇ ಎಂಬ ಬರೆಹ ಮೀಮಾಂಸೆಯ ವಿಸ್ತರಣೆಯೂ ಆಗಿತ್ತು. ಕನ್ನಡ ವಿಶ್ವವಿದ್ಯಾಲಯವು ಅವರಿಗೆ ತಮ್ಮ ಯಾವತ್ತಿನ ಕನ್ನಡ ಕುರಿತ ಹೊಳಹುಗಳನ್ನು ಹಂಚಿಕೊಳ್ಳುವ ವೇದಿಕೆ ಮಾತ್ರವಾಗಿರಲಿಲ್ಲ, ಅದನ್ನು ಸಾಕಾರಗೊಳಿಸಬಲ್ಲ ಸಂಸ್ಥೆಯೆಂಬ ನಂಬುಗೆಯೂ ಇದ್ದಂತಿತ್ತು, ಅವರಿಗೆ ಕೋಮುವಾದದ ವಿರುದ್ಧದ ಹೋರಾಟವು ಕನ್ನಡ ಪರವಾದ ಹೋರಾಟವೂ ಆಗಿತ್ತು.




• ರಹಮತ್ ತರೀಕೆರೆ

ಹೀನಾತಿಹೀನರ ಜೊತೆ ಹೀಗೊಂದು 'ಅನಂತ' ಕತೆ

ಅದೆಷ್ಟೇ ಬೇಡಿಕೊಂಡರೂ ನನ್ನ ಜೊತೆ ಬಂದಿದ್ದ ಆ ಮೂರು ನಾಯಿಗಳನ್ನು ಪೊಲೀಸರು ಚಿತೆಯತ್ತ ಬಿಡಲೇ ಇಲ್ಲ. ಅದೇನೋ: ನಾಯಿಗಳ ಜೊತೆಗೇ ಹೋಗಿ ನನ್ನದೊಂದು ಕೊನೆಯ ನಮಸ್ಕಾರ ಸಲ್ಲಿಸಬೇಕೆನಿಸಿತ್ತು. ಕಲಾಗ್ರಾಮದ ಆ ವಿಶಾಲ ಸಜ್ಜಿಕೆಯ ಸುತ್ತ ನೆರೆದಿದ್ದ ಪತ್ರಕರ್ತರು, ಗನ್ಮ್ಯಾನ್‌ಗಳು, ಬಂದೋಬಸ್ತಿಗಿದ್ದ ಪೊಲೀಸರು ಅದೇನೆಂದುಕೊಂಡರೋ. ನಾನು ಒಂದೊಂದೇ ದುಃಖದ ಹೆಜ್ಜೆಗಳನ್ನಿಡುತ್ತ ಆ ಕಳೇಬರದತ್ತ ಸಾಗುತ್ತಿದ್ದರೆ ಪೊಲೀಸರ ತಡೆಗೋಡೆಯ ಆಚೆ ಕುಳಿತು ಒಳಬರಲಾಗದೆ ಚಡಪಡಿಸುತ್ತಿದ್ದ ಆ ಮೂರೂ ನಾಯಿಗಳು ನನ್ನನ್ನೇ ದಿಟ್ಟಿಸುತ್ತಿದ್ದವು. ನಿಶ್ಚಲವಾಗಿ ಮಲಗಿದ್ದರು ಅನಂತಮೂರ್ತಿ. ಅವರಿಗೊಂದು ಸುತ್ತು ಹಾಕಿ ತಂದಿದ್ದ ಹೂಮಾಲೆಯನ್ನು ಅವರ ಪಾದಕ್ಕರ್ಪಿಸಿ ಕೈಮುಗಿದೆ. ನೆನಪುಗಳು ಅಲೆಅಲೆಯಾಗಿ ಮನಕ್ಕಪ್ಪಳಿಸುತ್ತಿದ್ದವು.

ಅದು 2007ರ ಮಾರ್ಚ್ ತಿಂಗಳು. ಅದೊಂದು ಅಪರಾಹ್ನ ತೀರ ಅನಿರೀಕ್ಷಿತವೆಂಬಂತೆ ಫೋನ್ ಕರೆಯೊಂದು ಬಂತು. "…. ನಾನು ಯು.ಆರ್. ಅನಂತಮೂರ್ತಿ… ಸೋಮನಾಥ್ ತಾನೆ?"

"ಹೌದು, ಹೇಳಿ ಸಾರ್" ಎಂದೆ. ಯಾರೋ ಪತ್ರಕರ್ತರೊಬ್ಬರು ಅವರಿಗೆ ನನ್ನ ನಂಬರ್ ಕೊಟ್ಟಿದ್ದರಂತೆ. ಬೀದಿನಾಯಿಯೊಂದು ಮಗುವನ್ನು ಕಚ್ಚಿ ಕೊಂದ ಕಾಲವದು. ಜೈರಾಜ್ ಆಗ ಬೆಂಗಳೂರು ಮಹಾನಗರ ಪಾಲಿಕೆಯ ಕಮೀಷನರ್. ಟೀವಿ, ಪತ್ರಿಕೆಗಳ ತುಂಬೆಲ್ಲ ಬೀದಿನಾಯಿಗಳ ಹಾವಳಿಯದ್ದೇ ಸುದ್ದಿ. ನಾಯಿಗಳೆಂದರೇನೇ ಮಕ್ಕಳ ಬೇಟೆಗೆ ನಿಂತ ರಕ್ತಪಿಪಾಸುಗಳೆಂಬಂತೆ ಲೋಕ ಪರಿಗಣಿಸಿದ ಸಂದರ್ಭ. ಸರ್ಕಾರ ವೀರಾವೇಷದಿಂದಲೇ ಬೆಂಗಳೂರಿನ ಬೀದಿನಾಯಿಗಳ ಮಾರಣಹೋಮವನ್ನು ಘೋಷಿಸಿತ್ತು. ಯಹೂದ್ಯ ಕುಲವನ್ನೇ ನಾಮಾವಶೇಷ ಮಾಡಲು ಸಜ್ಜಾದ ನಾಜಿ ಪಡೆಯಂತೆ ಪಾಲಿಕೆ ಕಮೀಷನರ್ ಜೈರಾಜ್ ಇನ್ನೂರಕ್ಕೂ ಅಧಿಕ ಲಾರಿ-ವ್ಯಾನುಗಳ ತುಂಬ ಬೋನುಗಳನ್ನು, ನಾಯಿ ಬೇಟೆಗಾರರನ್ನೂ ಪಾಲಿಕೆ ಆವರಣದಲ್ಲೇ ಅಣಿಗೊಳಿಸಿದ್ದರು. ತಾನೇ ನಿಂತು ಹಸಿರು ನಿಶಾನೆ ತೋರಿಸಿ ಅವುಗಳನ್ನು ಶ್ವಾನಸಂಹಾರಕ್ಕೆಂದು ಛೂಬಿಟ್ಟ



ಆವತ್ತು ಯುಆರ್ ಮತ್ತು ಇತರೆ ದಯಾವಂತರೊಂದಿಗೆ ನಾನು


ವಹಿಸಿ ದನಿಯೆತ್ತುತ್ತಿಲ್ಲ ಎಂಬುದೇ ದೊಡ್ಡ ದುರಂತ. ಮನುಷ್ಯರಾಗಿ ನಾವು ಇಷ್ಟೊಂದು ನಿರ್ದಯಿಗಳಾಗಬಾರದು. ಯಾವುದೋ ಒಂದು ನಾಯಿ ಮಗುವನ್ನು ಕಚ್ಚಿ ಕೊಂದಿರಬಹುದು. ಅದಕ್ಕೆ ಕಾರಣವೂ ಇರಬಹುದು. ಹಾಗಂತ ಎಲ್ಲಾ ನಾಯಿಗಳನ್ನು ಕೊಲ್ಲುವುದು ಯಾವ ನ್ಯಾಯ? ಯಾರೋ ಒಬ್ಬ ವಿಕೃತ ಮಗುವೊಂದರ ಮೇಲೆ ಅತ್ಯಾಚಾರ ಮಾಡಿದನೆಂದು ನಾವು ಎಲ್ಲಾ ಪುರುಷರನ್ನೂ ಅಥವಾ ಆತನ ಜಾತಿಗೆ, ವಯಸ್ಸಿಗೆ ಸೇರಿದ ಎಲ್ಲರೂ ಅಂಥವರೇ ಎಂದು ನಿರ್ಧರಿಸೋಕ್ಕಾಗುತ್ತಾ?"

ಇದು ಆವತ್ತು ಅನಂತಮೂರ್ತಿಯವರ ತರ್ಕವಾಗಿತ್ತು. ಹಾಗೆ ಯು.ಆರ್.ಎ ಬೀದಿನಾಯಿಗಳ ಕುರಿತಂತೆ ತಲೆಕೆಡಿಸಿಕೊಳ್ಳಲು ಇನ್ನೂ ಒಂದು ಕಾರಣವಿತ್ತು.

ನಿಮಗೆ ನಾನು ಹೇಳಿಕೊಡಬೇಕಿಲ್ಲ ಅಂತ ಭಾವಿಸ್ತೀನಿ…" ಎಂದವರೇ ನಮ್ಮನ್ನು ಬೀಳ್ಕೊಟ್ಟರು.

ಪತ್ರದ ಕೆಲ ಸಾಲುಗಳು ಹೀಗಿದ್ದವು: ಸನ್ಮಾನ್ಯ ಮುಖ್ಯಮಂತ್ರಿ ಶ್ರೀಕುಮಾರಸ್ವಾಮಿಗಳಿಗೆ, ಯುಗಾದಿಯ ಶುಭಾಶಯಗಳು. ನಾನೇ ಖುದ್ದು ಬಂದು ತಮ್ಮನ್ನು ನೋಡಿ ಮಾತಾಡಬೇಕಿತ್ತು, ಪ್ಯಾರಿಸ್ ಬುಕ್‌ಫೇರ್‌ಗೆ ಹೋಗಬೇಕಾಗಿ ಬಂದಿದ್ದರಿಂದ ಆಗುತ್ತಿಲ್ಲ, ಕ್ಷಮಿಸಿ.

ಬೆಂಗಳೂರಿನಲ್ಲಿ ನಾಯಿಗಳನ್ನು ನಾವು ಅಟ್ಟಿ, ಹಿಡಿದು ಕೊಲ್ಲುತ್ತಿರುವ ರೀತಿ, ಮಾಧ್ಯಮಗಳಲ್ಲಿ ಇದು ಬಿಂಬಿತವಾಗುತ್ತಿರುವ ರೀತಿಯಿಂದ ನಮ್ಮಲ್ಲಿ ಹಲವರಿಗೆ ಮನಸ್ಸು ನೊಂದಿದೆ. ಬೆಂಗಳೂರು ವಿಪರೀತ ವೇಗದಲ್ಲಿ ಬೆಳೆಯುತ್ತಿದ್ದಂತೆ ಮನುಷ್ಯನಿಗೂ ನಾಯಿಗೂ ಇದ್ದ



ಸತ್ಯಾಗ್ರಹದಲ್ಲಿ ಆದೇಶದ ಪ್ರತಿ ತಂದು ಆಲ್ಕೋಡು ಮತ್ತು ಹೆಚ್. ಆಂಜನೇಯ, ಮಧ್ಯೆ ಮಾದಾರ ಚನ್ನಯ್ಯ ಸ್ವಾಮೀಜಿ

ಫೋಟೋಗಳು ಮರುದಿನದ ಪತ್ರಿಕೆಗಳ ಮುಖಪುಟದಲ್ಲಿ ರಾರಾಜಿಸಿತ್ತು.

ಅದು ಅನಾಥ ನಾಯಿಗಳ ಪಾಲಿಗೆ ಘೋರ ದುರಂತ. ಪಾಲಿಕೆಯ ನಾಯಿ ಬೇಟೆ ಅದೆಷ್ಟು ಭೀಕರವಾಗಿತ್ತೆಂದರೆ, ತಪ್ಪಿಸಿಕೊಳ್ಳಲು ಮೋರಿ ಹೊಕ್ಕ ನಾಯಿಯೊಂದನ್ನು ಎರಡೂ ದಿಕ್ಕಿನಿಂದ ಬೆಂಕಿಕೊಟ್ಟು ಹೊಗೆ ಹಾಕಿಕೊಂದದ್ದು, ಪಾಲಿಕೆ ಸಿಬ್ಬಂದಿ ಜೊತೆ ಸೇರಿದ ಪುಂಡರ ಗುಂಪೊಂದು ನಾಯಿಯನ್ನು ಅಟ್ಟಾಡಿಸಿಕೊಂಡು ಹಾಕಿದ್ದು, ತಪ್ಪಿಸಿಕೊಳ್ಳಲು ಹೋಗಿ ಲಾರಿಗೆ ಸಿಲುಕಿ ನಾಯಿಯೊಂದು ಅಪ್ಪಚ್ಚಿಯಾದದ್ದು, ಹಿಡಿದೊಯ್ದ ತಾಯಿಯ ಹಾಲಿಲ್ಲದೆ ಮರಿಗಳು ಹೆಣವಾಗಿದ್ದು, ಕೊಂದ ನೂರಾರು ನಾಯಿಗಳ ಹೆಣಗಳನ್ನು ಟ್ರಾಕ್ಟರ್‌ಗೆ ತುಂಬಿಸಿ ಕಸದ ತಿಪ್ಪೆಗೆ ಬೀಸಾಕಿದ್ದು; ಹೀಗೆ ಪತ್ರಿಕೆ, ಟೀವಿಗಳ ತುಂಬೆಲ್ಲ ಬೆಂಗಳೂರಿನ ಬೀದಿನಾಯಿಗಳ ಮಾರಣಹೋಮದ್ದೇ ಸುದ್ದಿ.

ಈ ಘಟನೆಯೇ ಮುಂದೆ ನನ್ನ ಮತ್ತು ಅನಂತಮೂರ್ತಿಯ ಪರಿಚಯಕ್ಕೆ ಕಾರಣವಾಗಿ ಅದು ವಿನೂತನ ಪ್ರಾಣಿ ಹಕ್ಕು ಹೋರಾಟವಾಗಿ ಅದಕ್ಕೆ ಕುಮಾರಸ್ವಾಮಿ ಸರ್ಕಾರವೇ ಮಣಿಯಬೇಕಾಗಿ ಬರಬಹುದೆಂಬ ನಿರೀಕ್ಷೆ ತಾನೇ ನನಗೆಲ್ಲಿತ್ತು? ಕ್ಯೂಪಾ, ಕರುಣಾ, ಪೇಟಾ ಇತ್ಯಾದಿ ಪ್ರಾಣಿ ದಯಾ ಸಂಘಟನೆಗಳಿದ್ದಾಗ್ಯೂ, ಯು.ಆರ್.ಎ ನನನ್ನೇ ಏಕೆ ಸಂಪರ್ಕಿಸಿದರೋ ಗೊತ್ತಾಗಲಿಲ್ಲ, ಆಗ ಬೆಂಗಳೂರು ವಿಶ್ವವಿದ್ಯಾಲಯದ ಮೈಸೂರು ಬ್ಯಾಂಕ್ ಸರ್ಕಲ್ ಬಳಿಯ ಯಾವುದೋ ಕಟ್ಟಡವೊಂದರಲ್ಲಿ ಅವರ ಕಚೇರಿಯಿತ್ತು, ಬೀದಿನಾಯಿಗಳನ್ನು ಸರ್ಕಾರ ಅಟ್ಟಾಡಿಸಿ ಕೊಲ್ಲುತ್ತಿರುವ ರೀತಿ ಅವರ ಮನಸ್ಸನ್ನು ಕಲಕಿತ್ತು.

"ನೋಡಿ… ಮನುಷ್ಯನನ್ನೇ ನಂಬಿ ಬದುಕುತ್ತಿರುವ ಒಂದು ಜೀವಿಯನ್ನು ಇಡೀ ಸಮಾಜವೇ ನಿಂತು ಅಟ್ಟಾಡಿಸಿ ಕೊಲ್ಲುತ್ತಿರುವಾಗ ಯಾರೊಬ್ಬರೂ ಆ ಜೀವಿಯ ಪರ

ಬೆಂಗಳೂರಿನಲ್ಲಿ ಬೀದಿನಾಯಿಗಳ ಮಾರಣಹೋಮದ ವರದಿಗಳು ಅಂತಾರಾಷ್ಟ್ರೀಯವಾಗಿ ಸುದ್ದಿಯಾಗಿತ್ತಂತೆ. ಯಾರೋ ಫ್ರೆಂಚ್ ಮಹಿಳೆಯೊಬ್ಬರು 'ಆ ಮೂಕಪ್ರಾಣಿಗಳನ್ನು ದಯವಿಟ್ಟು ಕಾಪಾಡಿ…' ಎಂದು ಅವರಿಗೆ ಇಮೇಲ್ ಮಾಡಿದ್ದನ್ನು ನನಗೆ ತೋರಿಸಿದರು. "ನಾನು ನಾಳೆಯೇ 'ಪ್ಯಾರಿಸ್ ಬುಕ್‌ಫೇರ್'ಗೆ ಹೋಗಬೇಕು. ಅದಿಲ್ಲದಿದ್ದರೆ ನಾನೇ ಬೀದಿಗಿಳಿದು ಪ್ರತಿಭಟಿಸುತ್ತಿದ್ದೆ. ಪ್ಲೀಸ್, ಈ ಬಗ್ಗೆ ಏನಾದರೂ ಮಾಡಿ…" ಎಂದು ಯು.ಆರ್.ಎ ಗೋಗರೆದ ರೀತಿಯೇ ನಮ್ಮ ಮನ ಕಲಕಿತ್ತು.

ಮರುದಿನ ನಾನು ಮತ್ತು ಕೆಲ ದಯಾವಂತರು ಡಾಲರ್ಸ್ ಕಾಲನಿಯ ಅವರ ಮನೆಗೆ ಹೋದೆವು. ನಾನೆಂದೆ: "ಸರ್, ಮುಖ್ಯಮಂತ್ರಿಗಳಿಗೆ ನೀವೊಂದು ಪತ್ರ ಬರೆಯಲು ಸಾಧ್ಯವಾ?"

"ಯಾಕಿಲ್ಲ? ಈಗಲೇ ಬರೆದುಕೊಡ್ತೀನಿ. ಈ ಪತ್ರವನ್ನು ನಿಮಗೆ ಎಲ್ಲಿ, ಹೇಗೆಲ್ಲಾ ಬೇಕೋ ಹಾಗೆ ಬಳಸಿಕೊಳ್ಳಿ. ಏನಾದರೂ ಮಾಡಿ ಆ ಮುಗ್ಧ ಜೀವಿಗಳನ್ನು ಉಳಿಸಿ" ಎಂದ ಯುಆರ್‌ಎ ಪಕ್ಕದಲ್ಲೇ ಇದ್ದ ಟೇಬಲ್ಲಿನ ಮೇಲೆ ಬಿಳಿ ಹಾಳೆಯೊಂದನ್ನು ಇಟ್ಟು ಬರೆಯತೊಡಗಿದರು. ಅದು ಲೆಟರ್‌ಹೆಡ್ ಅಲ್ಲ, ಮೇಲೆ ತಮ್ಮ ಹೆಸರು ಅದರ ಕೆಳಗೆ ವಿಳಾಸ. ಹತ್ತೇ ನಿಮಿಷಕ್ಕೆ ಎರಡು ಬಿಳಿ ಹಾಳೆಗಳಲ್ಲಿ ತಮ್ಮ ಹಸ್ತಾಕ್ಷರದಲ್ಲೇ ಪತ್ರ ಬರೆದು ನನ್ನ ಕೈಗಿತ್ತು, "ಪ್ಯಾರಿಸ್ ಬುಕ್‌ಫೇರ್ ಮುಗಿಸಿಕೊಂಡು ಬರ್ತೀನಿ. ಅಲ್ಲೀತನಕ ನನ್ನನ್ನು ಕಾಯಬೇಡಿ. ಹೋರಾಟ, ಪ್ರತಿಭಟನೆಗಳನ್ನು

ಸ್ನೇಹಸಂಬಂಧ ಕಣ್ಮರೆಯಾಗುತ್ತಿದೆ. ನಾಯಿಗಳು ಹಿಂದೆ ಕೇರಿಯ ನಾಯಿಗಳಾಗಿದ್ದವು. ಸಮುದಾಯದ ನಾಯಿಗಳಾಗಿದ್ದವು. ಪ್ರತಿ ಮನೆಯವರೂ ಉಂಡು ಉಳಿದದ್ದನ್ನು ಅವಕ್ಕೆ ತಿನ್ನಲು ಕೊಟ್ಟು ಸಲಹುತ್ತಿದ್ದರು. ಪ್ರತಿ ಮನೆಯನ್ನು ಈ ನಾಯಿಗಳು ಕಾಯುತ್ತಿದ್ದವು. ಈ

ಸಮುದಾಯದ ನಾಯಿಗಳು ಈಗ ಅನಾಥ ನಾಯಿಗಳಾ[ಗಿ]ದ್ದಾವೆ. ಅವುಗಳ ಸಂಖ್ಯೆ ಹೆಚ್ಚುತ್ತಿದೆ. ಸ್ನೇಹದ ವಾತಾವರ[ಣ] ಇಲ್ಲದೆ ಅವು ತಮ್ಮ ಸ್ವಭಾವದಲ್ಲಿ ಅಂತರ್ಗತವಾಗಿರು[ವ] ಬೇಟೆಯ ಪ್ರವೃತ್ತಿ ಹಿಡಿದುಬದುಕಬೇಕಾಗಿ ಬಂದಿದೆ.


ನಮಗೂ ನಾಯಿಗಳಿಗೂ ಕಾಲಾನುಕಾಲದಿಂದ ಇ[ದ್ದ] ಪ್ರೀತಿಯ ಸಂಬಂಧ ಮಾಯವಾಗುತ್ತ ಹೋಗಿದೆ. [ಈ] ಬಗ್ಗೆ ಸರ್ಕಾರ ಮಾತ್ರವಲ್ಲ ನಾಗರಿಕರಾದ ನಾವೆಲ್ಲರ[ೂ] ಜಾಗೃತರಾಗಬೇಕಿದೆ. ನಾಯಿಗಳನ್ನು ಬೇಟೆಯಾ[ಡಿ] ಅಟ್ಟಿಕೊಲ್ಲುವ ನಾವು ಪಶುಗಳಂತೆ ಆಗುತ್ತಿದ್ದೇವೆ.

ಗೆಳೆಯ ಸೋಮನಾಥರು ನಮ್ಮೆಲ್ಲರ ಪರವಾಗಿ [...] ನಾಯಿಗಳ ಮೇಲಿನ ಕ್ರೌರ್ಯವನ್ನು ಅನಗತ್ಯವಾಗಿಸುವ[...] ಜೊತೆಗೇ ನಾಯಿಗಳಿಂದ ನಮ್ಮ ಮಕ್ಕಳಿಗ[ೂ] ಓಡಾಡುವವರಿಗೂ ಕಿರುಕುಳವಾಗದಂತೆ ಏನೇನ[ು] ಮಾಡಬಹುದೆಂಬ ಅಧ್ಯಯನ ಕೈಗೊಂಡಿದ್ದಾರೆ. ಇವ[ರಿಗೆ] ನಿಮ್ಮ ಸಹಕಾರ ಬೇಕು. ಇವರ ಜೊತೆ ನಾಯಿಗ[ಳ] ವರ್ತನೆಯನ್ನು ಬಲ್ಲ ಮನೋವಿಜ್ಞಾನಿಗಳು, ಪ್ರಾಣಿಪ್ರಿಯರ[ೂ] ಇರುತ್ತಾರೆ. ನಾವೊಂದು ನಾಗರಿಕ ಸಮಾಜವಾ[ಗಿ] ಪುರಾತನಕಾಲದಿಂದಲೂ ಮನುಷ್ಯನ ಸಂಗಾತಿಯಾ[ದ] ನಾಯಿಗಳ ಬಗ್ಗೆ ಚಿಂತಿಸಬೇಕಾಗಿದೆ. ಇದಕ್ಕೆ ನಿಮ್ಮ ನೆರವ[ು] ಬೇಡುತ್ತೇನೆ. ನಿಮ್ಮ ವಿಶ್ವಾಸಿ, ಯು.ಆರ್. ಅನಂತಮೂರ್ತಿ

ಇದು 2007ರ ಮಾರ್ಚ್ 19ರಂದು ಯು.ಆರ್[.ಎ] ಮುಖ್ಯಮಂತ್ರಿ ಕುಮಾರಸ್ವಾಮಿಯವರಿಗೆ ಬರೆದ ಪತ್ರ[ದ] ಯಥಾವತ್ತು, ಬೀದಿನಾಯಿಗಳ ವಿರುದ್ಧ ಸಮರವನ್ನೇ ಸಾರಿ[...] ಮೀಡಿಯಾಗಳನ್ನು ಎದುರು ಹಾಕಿಕೊಂಡು ಕುಮಾರಸ್ವಾ[ಮಿ] ಅನಂತಮೂರ್ತಿಯವರ ಪತ್ರಕ್ಕೆ ಮಾನ್ಯತೆ ನೀಡುತ್ತಾರೆಂ[ಬ] ನಂಬಿಕೆ ನಮಗೂ ಇರಲಿಲ್ಲ, ಆದರೆ ಕಾರ್ಮೋಡದ ನಡುವಿ[ನ] ಆಶಾಕಿರಣದಂತೆ ಅದು ಬೀದಿನಾಯಿಗಳ ಪರ ಮೊದ[ಲ] ದನಿಯಾಗಿ ಮೊಳಗಲಿದೆ ಎಂಬುದು ಖಾತರಿಯಾಗಿತ್ತು. ಅದೇ ಪತ್ರವನ್ನು ವಿಧಾನಸೌಧದ ಮುಖ್ಯಮಂತ್ರಿಗಳ ಅಜ[ಿ] ಸ್ವೀಕರಣಾ ಕೇಂದ್ರಕ್ಕೆ ಕೊಟ್ಟು ಅದರ ಮೇಲೊಂ[ದು] ಮೊಹರನ್ನು ಹಾಕಿಸಿಕೊಂಡೆವು. ಅದನ್ನೇ ಎಲ್ಲಾ ಪತ್ರಿಕೆಗಳಿಗ[ೆ] ಮುಟ್ಟಿಸಲಾಯಿತು. ಮರುದಿನದ ಪತ್ರಿಕೆಗಳ[ಲ್ಲಿ] ಬೀದಿನಾಯಿಗಳ ಪರವಾಗಿ ಅನಂತಮೂರ್ತಿ[ಯವರು] ಮುಖ್ಯಮಂತ್ರಿಗಳಿಗೆ ಬರೆದ ಪತ್ರದ್ದೇ ದೊಡ್ಡ ಸುದ್ದಿಯಾಗಿ[ತ್ತು].


ಅದು ಮಾರಣಹೋಮದ ವಿರುದ್ಧದ ಮೊದ[ಲ] ಪ್ರತಿಭಟನೆಯಾಗಿತ್ತು, ಬೀದಿನಾಯಿಗಳಿಗೂ ದನಿಯಿ[ದೆ] ಎಂಬುದು ಸಾಬೀತುಗೊಂಡಿತ್ತು. ಬೆನ್ನಲ್ಲೇ ಡ[ಿ.ಎಸ್.] ಚಿದಾನಂದಮೂರ್ತಿ ಹೇಳಿಕೆ ಕೊಟ್ಟರು. ಇದಾಗಿ ನಾಲ್ಕು ದಿನಕ್ಕೆ ಪ್ಯಾರಿಸ್ಸಿನಿಂದ ಮತ್ತೆ ಯುಆರ್ ಫೋನು ಬಂ[ತು]. "ಕೇವಲ ನನ್ನ ಒಂದು ಪತ್ರಕ್ಕೇ ಸರ್ಕಾರ ಮಣಿಯುತ್ತ[ೆ] ಅಂದುಕೊಂಡ್ರಾ? ನೀವು ದಯಾವಂತರು ಬೀದಿಗಿಳಿ[ದು] ಹೋರಾಡಬೇಕು. ಮೀಡಿಯಾಗಳು ಸಂಘ ಪರಿವಾ[ರದ] ಕೈವಶವಾಗಿವೆ. ನಾಯಿ ಏನಿದ್ದರೂ ಅವರಿಗೆ ನೆಪ ಮಾ[ತ್ರ]

⏭ 1


ಮಾರ್ಚ್ 19, 07

ಸಿಎಂ ಕುಮಾರಸ್ವಾಮಿಗೆ ಬರೆದ ಯುಆರ್ ಪತ್ರ

ಯು.ಆರ್.ಎ ಒಂದು ನೆನಪು



ಗುರುಗಳಾದ ಶ್ರೀ ಅನಂತಮೂರ್ತಿಯವರ ...ಜೀವನದ ಪ್ರಾರಂಭದ ದಿನಗಳಲ್ಲಿ ಅವರ ವಿದ್ಯಾರ್ಥಿ...ಗಿದ್ದ ನಮಗೆ, ನಮ್ಮ ಹದಿನಾರರ ಕುತೂಹಲಭರಿತ ...ಗೆ ಅವರು ಹೇಗೆ ಕಂಡರು ಎನ್ನುವುದನ್ನು ನಾನೀಗ ...ಬೇಕಾಗಿದೆ.

...ನಾನು ಮೊಟ್ಟಮೊದಲು ಅನಂತಮೂರ್ತಿಯವರನ್ನು ...ದ್ದು ನನ್ನ ಹೈಸ್ಕೂಲ್ ವ್ಯಾಸಂಗದ ಕೊನೆಯ ವರ್ಷದಲ್ಲಿ. ...ಮಯದಲ್ಲಿ ಸಾಹಿತಿ ಅನಕೃರವರು ನಮ್ಮೂರಿನ ಒಂದು ...ರಂಭಕ್ಕೆ ಆಗಮಿಸಿದ್ದರು. ಅಷ್ಟರಲ್ಲಾಗಲೇ ಅನಕೃ, ತರಾಸು, ...ಸು ಮುಂತಾದವರ ಕೃತಿಗಳನ್ನು ಓದಿದ್ದರಿಂದ ನಾನು ...ಗಳನ್ನು ನೋಡಬೇಕೆಂಬ ಉತ್ಸಾಹದಿಂದ ಆ ಪುಟ್ಟ ...ರಂಭಕ್ಕೆ ಹೋದೆ. ಅಲ್ಲಿ ಒಬ್ಬ ಯುವ ಕವಿಗಳು ತಮ್ಮ ... ಕವಿತೆಯನ್ನು ಓದಿದರು. "ಸಿಗರೇಟು ಸುಡಬೇಕೆಂಬ ...ಎಂದು ಪ್ರಾರಂಭವಾದ ಆ ಕವಿತೆ ನನಗೆ ವಿಚಿತ್ರವಾಗಿ ...ಎ. ಪುಂಜೆ, ಕುವೆಂಪು ಮುಂತಾದವರ ಪದ್ಯಗಳನ್ನು ...ಹಾಡಿಕೊಂಡಿದ್ದ ನಮಗೆ ಇದ್ಯಾವ ಸೀಮೆ ಕವಿತೆ ಎನಿಸಿತು ... ಆ ಯುವಕವಿ ನಮ್ಮೂರು ಹಾಸನದ ಪ್ರಥಮ ದರ್ಜೆ ...ಜಿನ ಅಧ್ಯಾಪಕರೆಂದೂ, ಅವರ ಹೆಸರು ...ರ್.ಅನಂತಮೂರ್ತಿ ಎಂದೂ ತಿಳಿದು ಬಂದಿತು. ಇದೇ ...ಮೂರ್ತಿಯವರ ಮೊದಲ ಪರಿಚಯ.

...ದೇ ವರ್ಷ ನಾನು ಮತ್ತು ನನ್ನ ಸಹಪಾಠಿಗಳು ನಮ್ಮೂರಿನ ...ನಲ್ಲಿ ಪಿ.ಯು.ಸಿಗೆ ದಾಖಲಾದೆವು. ಕಾನ್ವೆಂಟ್ ಶಾಲೆಯ ...ವಿದ್ಯಾರ್ಥಿಗಳಾಗಿದ್ದ ನಾವು ಬೋನಿನಿಂದ ಹೊರಬಿದ್ದ ...ಳಂತಾದೆವು. ಎಲ್ಲವೂ ಹೊಸ ವಾತಾವರಣ! ಜೊತೆಗೆ ...ರು! ಭಯ, ಸಂಕೋಚ, ಒಳಗೊಳಗೆ ಕುತೂಹಲ ...ಂದ ಭಾದಿತರಾಗಿ ಕಾಲೇಜಿನ ವಾತಾವರಣವನ್ನು ಬಿಟ್ಟ ...ದ ಬೆರಗಾಗಿ ಗಮನಿಸುತ್ತಿದ್ದೆವು. ಎಲ್ಲಾ ಸಬ್ಜೆಕ್ಟ್‌ಗಳಿಗೂ ...ಮ ಮೇಷ್ಟ್ರುಗಳು; ಅದರಲ್ಲೂ ಇಂಗ್ಲಿಷಿಗೆ ಒಬ್ಬ ಸುಂದರಾಂಗ ...!

...ನಂತಮೂರ್ತಿಯವರದ್ದು ಬಹಳ ಆಕರ್ಷಕ ವ್ಯಕ್ತಿತ್ವ. ... ನಾವು ವಿದ್ಯಾರ್ಥಿಗಳು 'ಯುಆರ್‌ಎ' ಎಂದು ...ದ್ದೆವು. ಅವರು ಶಿಸ್ತಾಗಿ ಉಡುಪು ಧರಿಸಿ ಕಾಲೇಜಿಗೆ ...ದ್ದ ವೈಖರಿಯದ್ದೇ ಒಂದು ಸೊಗಸು. ಆಕರ್ಷಕ ..., ನಾವು ಮಾತ್ರ ಅವರಿಗೆ ಸ್ಪೆಷಲ್ ಏನೋ ಅನ್ನುವ ...ಲ್ಲಿ ನವಿರಾಗಿ ಮಾತನಾಡುತ್ತಿದ್ದ ಬಗೆ, ಪಾಠ ...ತ್ತಿದ್ದ ಆಕರ್ಷಕ ಶೈಲಿ, ಇವೆಲ್ಲವೂ ಹದಿನಾರರ ...ದ ಹುಡುಗಿಯರ ಮನಸ್ಸಿಗೆ ಲಗ್ಗೆ ಹಾಕಿ, ಅವರನ್ನ ...ಿ ಮಾಡಿದ್ದರಲ್ಲಿ ಏನೂ ಆಶ್ಚರ್ಯವಿಲ್ಲ.

...ನಗೆ ಇನ್ನೂ ನೆನಪಿದೆ 'ಯುಆರ್‌ಎ' ಅವರು ನಮಗೆ ...ಗೆ ಪದ್ಯ ಮತ್ತು ನಾಟಕಗಳನ್ನು ಪಾಠ ಮಾಡುತ್ತಿದ್ದರು. ...ಜೂನ್ ತಿಂಗಳಿನಲ್ಲಿ ಕಾಲೇಜ್ ಪ್ರಾರಂಭವಾಗುವಾಗ ...ರಿನಲ್ಲಿ ಮಳೆಗಾಲ. ಥಂಡಿ ಗಾಳಿ, ಪಿರಿಪಿರಿ ಮಳೆ, ... ಹೊರಗಿದ್ದ ಕಾಲೇಜಿಗೆ ಎಲ್ಲ ಅಧ್ಯಾಪಕರೂ ...ಕೊಂಡೇ ಬರುತ್ತಿದ್ದರು. ಹುಡುಗರು, ಹುಡುಗಿಯರು ನಡೆದೂ, ಸೈಕಲ್ ಮೇಲೂ ಬರುತ್ತಿದ್ದರು. ಶಿಸ್ತಾಗಿ 'ಗ್ರೇ' ಬಣ್ಣದ ಸೂಟ್ ಧರಿಸಿ, ಕೋಟಿನ ಜೇಬಿನಲ್ಲಿ ಪಾಚಿ ಬಣ್ಣದ ಕರವಸ್ತ್ರ ಇಟ್ಟು, ಕೈಯಲ್ಲಿ ಛತ್ರಿ ಹಿಡಿದು 'ಯುಆರ್‌ಎ' ಅವರು ಬರುತ್ತಿದ್ದರೆ, ಲೇಡಿಸ್ ರೂಮಿನಿಂದ ಇಣುಕಿ ನೋಡುತ್ತಿದ್ದ ವಿದ್ಯಾರ್ಥಿನಿಯರಿಗೆ ಇದೇನಿದು ಜೇಬಿನಲ್ಲಿ ವೀಳೆದೆಲೆ ಇಟ್ಟುಕೊಂಡಿದ್ದಾರಲ್ಲ ಎಂಬ ಅಚ್ಚರಿ! ಕೊನೆಗೆ ಅದು ಕರ್ಚೀಫ್ ಎಂದು ಗೊತ್ತಾಯಿತು.

ಯು.ಆರ್.ಎ ಯವರ ಪೀರಿಯಡ್ ಎಂದರೆ ಹುಡುಗರು ಹುಡುಗಿಯರು ತಪ್ಪದೆ ಲಗುಬಗೆಯಿಂದ ಬೆಂಚ್ ಹಿಡಿದು ಕುಳಿತು ಬಿಡುತ್ತಿದ್ದೆವು. ಪದ್ಯ ಮತ್ತು ನಾಟಕಗಳನ್ನು ಪಾಠ ಮಾಡುತ್ತಿದ್ದ 'ಯುಆರ್‌ಎ'ಯವರು ಹಾಜರಿ ಪುಸ್ತಕ ಕೈಗೆತ್ತಿಕೊಂಡರೆ ನಮಗೆ ಒಂದು ರೋಮಾಂಚನ! ಅಟೆಂಡೆನ್ಸ್ ಕರೆಯುವುದೇ ಒಂದು ಸೊಗಸು. 'ಯುಆರ್‌ಎ' ಅವರು ಹುಡುಗಿಯರ ಹೆಸರನ್ನು ಬಹಳ ರೊಮ್ಯಾಂಟಿಕ್ ಆಗಿ ಪ್ರಸನ್ನ... ಲಕ್ಷ್ಮಿ ಎಂದು ಪಿಸುಗುಟ್ಟಿ ಹಾಜರಿ ಪುಸ್ತಕದಿಂದ ಮುಖ ಮೇಲೆತ್ತಿ ಕರೆದರೆ, ಹುಡುಗಿಯರೂ ಪ್ರೆಸೆಂಟ್ ಸರ್ ಎಂದು ಪಿಸುಗುಟ್ಟಿ ಕೊಂಚ ಮೇಲೆದ್ದು ಹೇಳುತ್ತಿದ್ದರು! ನಡೆ, ನುಡಿ, ಹಾಜರಿ ಹಾಕುವ ಕ್ರಮ, ಪಾಠ ಮಾಡುವ ಸ್ಟೈಲ್ ಎಲ್ಲವೂ ಅವರದ್ದೇ ಸ್ಪೆಷಲ್ ಎಫೆಕ್ಟ್!

'ಯುಆರ್‌ಎ' ಅವರು ನಮಗೆ **"Dear Departed"** ಎಂದು ನಾಟಕವನ್ನು ಪಾಠ ಮಾಡಿದರು. ಆ ನಾಟಕದ ಹಲವು ಪಾತ್ರಗಳಿಗೆ ತಕ್ಕಂತೆ ತಮ್ಮ ಧ್ವನಿಯಲ್ಲಿ ಏರಿಳಿತ ತಂದುಕೊಂಡು ಆ ಪಾತ್ರವೇ ಮಾತಾಡಿದಂತೆ ಓದಿ, ನಾಟಕವನ್ನು ನಮಗೆ ವಿವರಿಸುತ್ತಿದ್ದರು. ಈ ರೀತಿಯಲ್ಲಿ ವಿದ್ಯಾರ್ಥಿಗಳ ಗಮನವನ್ನು ಸೆರೆ ಹಿಡಿಯುತ್ತಿದ್ದರು.

ನನಗೆ ನೆನಪಿರುವಂತೆ 'ಯುಆರ್‌ಎ'ರವರು ವರ್ಡ್ಸ್‌ವರ್ತ್ ಕವಿಯ **"The world is too much with us"** ಎಂಬ ಕವಿತೆಯನ್ನು ಪಾಠ ಮಾಡಿದರು. ಈ ಕವಿತೆಯನ್ನು ವಿವರಿಸುವಾಗ ಹೇಗನ್ ಎಂಬ ಪದದ ಅರ್ಥ ಏನೆಂದು ಕೇಳಿದರು. ಕನ್ನಡ ಮಾಧ್ಯಮದಿಂದ ಇಂಗ್ಲಿಷ್ ಮೀಡಿಯಂಗೆ ಬಂದು, ಇನ್ನೂ ನೀರಿನಿಂದ ಹೊರಬಿದ್ದ ಮೀನುಗಳಂತೆ ಚಡಪಡಿಸುತ್ತಿದ್ದ ನಮಗೇನು ಗೊತ್ತು ಅಂಥ ಶಬ್ದಗಳು? ಆಗ ಅವರೇ ಪದದ ಅರ್ಥ ವಿವರಿಸಿ ಪಾಠವನ್ನು ಮುಂದುವರಿಸಿದರು. ಮತ್ತೊಮ್ಮೆ ಮೇಷ್ಟ್ರು ಹೆಣ್ಣಿಗೆ ಬಹಳ ಇಷ್ಟವಾದ ಮನೆ ಯಾವುದು ಎಂದು ಪ್ರಶ್ನಿಸಿದರು. ಯಥಾಪ್ರಕಾರ ತಲಾ ಒಂದೊಂದು ತರ, ಹೆಣ್ಣಿಗೆ ಅವಳ ಗಂಡನ ಮನೆ, ಅವಳ ಸ್ವಂತ ಮನೆ ಇಷ್ಟ ಎಂದು ಉತ್ತರಿಸಿದೆವು. ಅಲ್ಲಾ! ಎಂದು ನಗುತ್ತ ಮೇಷ್ಟ್ರು 'ತವರು', 'ತವರ್ಮನೆ' ಇದು ಹೆಣ್ಣಿಗೆ ಬಹಳ ಆಪ್ತವಾದ ತಾಣ ಎಂದರು. ನಮಗೆ ಆಗ ಹೌದಲ್ಲ ಎಂದೆನಿಸಿತು.


ಹೀಗೆ ಏನೋ ಒಂದು ಉಮೇದಿನಲ್ಲಿದ್ದಾಗ ಒಂದು ದಿನ ಯುಆರ್‌ಎ ಅವರು ಕ್ಲಾಸ್ ತೆಗೆದುಕೊಳ್ಳಲಿಲ್ಲ. ಅನಂತರ ಅನಂತಮೂರ್ತಿಯವರು ಮತ್ತು ಕನ್ನಡದ ಮತ್ತೊಬ್ಬ ಶ್ರೇಷ್ಠ ಪ್ರಾಧ್ಯಾಪಕ ತಿಪ್ಪೇರುದ್ರಸ್ವಾಮಿಯವರು ವರ್ಗವಾಗಿ ಮೈಸೂರಿಗೆ ಹೋದರು ಎಂದು ತಿಳಿಯಿತು. ಹದಿಹರೆಯದ ಹುಡುಗ ಹುಡುಗಿಯರಿಗೆ ಆದ ನಿರಾಶೆ ಅಷ್ಟಿಷ್ಟಲ್ಲ.

ಮುಂದೆ ಅಂದಿನ ಹದ್ದೆ ಹುಡುಗರಾಗಿದ್ದ ನಾವು ಬೇರೆ ಬೇರೆ ಅಧ್ಯಾಪಕರ ಕೈಕೆಳಗೆ ಕಾಲೇಜುಗಳಲ್ಲಿ ಓದಿ ನಮ್ಮ ಜೀವನ ಒಂದು ಘಟ್ಟಕ್ಕೆ ಬಂದಿತು. ಆಶ್ಚರ್ಯವೆಂದರೆ ನಾನು ಯುಆರ್‌ಎ ಅವರ ಶಿಷ್ಯರಾದ ಪ್ರೊ.ಶ್ರೀರಾಮ ಅವರನ್ನ ಮದುವೆಯಾಗಿ ಮೈಸೂರಿಗೆ ಬಂದಮೇಲೆ ನಮ್ಮಿಬ್ಬರ ಗುರುಗಳಾದ ಅನಂತಮೂರ್ತಿಯವರನ್ನು ಇಲ್ಲಿಯವರೆಗೆ ಅನೇಕ ಬಾರಿ ಭೇಟಿಯಾಗುವ ಸುಯೋಗ ಲಭಿಸಿತು. ಇಂತಹ ಒಂದು ಸಮಾರಂಭದ ಚಹಾ ವಿರಾಮದಲ್ಲಿ ನಾನು ಮೊಟ್ಟ ಮೊದಲು ಕೇಳಿದ್ದ, ಅವರು ಅನಕೃ ಮುಂದೆ ಓದಿದ 'ಸಿಗರೇಟು ಸುಡಬೇಕೆಂಬ ಆಸೆ' ಎಂಬ ಅರ್ಧಸಾಲನ್ನು ಹೇಳಿ ಅಂದು ನಾನು ಕೇಳಿದ ನಿಮ್ಮ ಈ ಕವಿತೆ ಯಾವ ಸಂಕಲನದಲ್ಲೂ ಇಲ್ಲವಲ್ಲ ಎಂದು ಪ್ರಶ್ನಿಸಿದಾಗ ಅವರೇ ತಬ್ಬಿಬ್ಬಾದರು ಮತ್ತು 'ನೆನಪಿಲ್ಲಮ್ಮ' ಎಂದು ನಕ್ಕರು. ಬಹುಶಃ ಅದು ಆ ಕಾಲಘಟ್ಟದಲ್ಲಿ ಪ್ರಾರಂಭವಾಗಿದ್ದ ನವ್ಯ ಸಾಹಿತ್ಯದ ಮೊದಲ ಕವಿತಾ ಪ್ರಯೋಗವಿರಬೇಕು ಎಂದು ಈಗ ಅನಿಸುತ್ತದೆ. ಅವರು ಡಾಲರ್ಸ್ ಕಾಲೋನಿಯಲ್ಲಿ ನೆಲಸಿದ ಮೇಲೆ ಅಲ್ಲಿಯೇ ವಾಸವಾಗಿರುವ ನನ್ನ ಗೆಳತಿಯರಿಗೆ ಆಗಾಗ್ಗೆ ಅನಂತಮೂರ್ತಿಯವರು ಮತ್ತು ಶ್ರೀಮತಿ ಎಸ್ತರ್‌ರವರು ಸಿಕ್ಕಿ ಮೇಷ್ಟ್ರು ತಮ್ಮ ವೃತ್ತಿ ಜೀವನದ ಪ್ರಥಮ ಶಿಷ್ಯೆಯರನ್ನು ಅತ್ಯಂತ ಪ್ರೀತಿಯಿಂದ ಮಾತಾಡಿಸುತ್ತಿದ್ದರು ಎಂದು ನನ್ನ ಸಹಪಾಠಿಗಳಿಂದ ತಿಳಿಯುತ್ತಿತ್ತು ಮತ್ತು ಗೆಳತಿ ರತ್ನಾ ಆಗೀಗ ಅವರ ಆರೋಗ್ಯದ ಬಗ್ಗೆ ನನಗೆ ಮಾಹಿತಿ ಕೊಡುತ್ತಿದ್ದರು. ಸದ್ಯದಲ್ಲೇ ನಾವೆಲ್ಲ ಸಹಪಾಠಿಗಳು ಒಟ್ಟಾಗಿ ಹೋಗಿ ಮೇಷ್ಟ್ರಿಗೆ ನಮ್ಮ ಗೌರವ ಪ್ರೀತಿ ತೋರಿಸಬೇಕೆಂದು ನಿರ್ಧರಿಸಿದ್ದೆವು. ಆದರೆ ವಿಧಿಯ ಕೈ ಮೇಲಾಯಿತು. ನಮ್ಮ ಆಸೆ ಫಲಿಸಲಿಲ್ಲ.

ಜ್ಞಾನಪೀಠ ಪ್ರಶಸ್ತಿ ಪಡೆದು ಅದರಿಂದ ನಮ್ಮ ಭಾಷೆ ಪಡೆದ ಜ್ಞಾನಪೀಠ ಪ್ರಶಸ್ತಿಗಳ ಸಮೃದ್ಧಿಯನ್ನು ಹೆಚ್ಚಿಸಿ ನಮ್ಮ ಭಾಷೆಯ ಹಿರಿಮೆ, ಗರಿಮೆಯ ಬಗ್ಗೆ ಹೆಮ್ಮೆ ಪಡುವಂತೆ ಮಾಡಿದ ಲೇಖಕರು ಶ್ರೀ ಅನಂತಮೂರ್ತಿಯವರು. ಕನ್ನಡ ಭಾಷೆಯ ಇಂಥ ಮಹತ್ವಪೂರ್ಣ ಲೇಖಕರ ವಿದ್ಯಾರ್ಥಿಗಳಾಗಿದ್ದು ನಿಜಕ್ಕೂ ನಮಗೆ ಹೆಮ್ಮೆ ಎನಿಸುತ್ತದೆ. ಅವರಿಗೆ ಈ ಮೂಲಕ ನಾನು ಮತ್ತು ನನ್ನ ಸಹಪಾಠಿಗಳು ನಮ್ಮ ಪ್ರೀತಿ, ಗೌರವ, ವಿಷಾದಗಳನ್ನು ಸಲ್ಲಿಸುತ್ತೇವೆ.



● ಪದ್ಮಾ ಶ್ರೀರಾಮ



ಅನಂತ ಮೂರ್ತಿ ರೀತಿ

◀◀

...ಮಾನವೀಯ ಚಳವಳಿಗಳನ್ನೂ ಹಾಳು ಮಾಡೋದೇ ... ತಂತ್ರ. ಬಹುಶಃ ಬೀದಿನಾಯಿಗಳು ಸಿಗದಿದ್ದರೆ ...ರನ್ನೋ ಬೀದಿ ವೇಶ್ಯೆಯರನ್ನೋ ಟಾರ್ಗೆಟ್ ಮಾಡ್ತಾ... ಪಾಪ ಅವುಗಳ ದೌರ್ಭಾಗ್ಯ, ಮೀಡಿಯಾಗಳ ...ಈಗ ಬೀದಿನಾಯಿಗಳ ಮೇಲೆ ಬಿದ್ದಿದೆ. ಅವುಗಳ ...ಂದಕ್ಕೆ ಮೀಡಿಯಾಗಳೇ ಕಾರಣ. ನೀವು ಬೀದಿಗಿಳಿದು ...ಳ ಪರ ದನಿಯೆತ್ತಲೇ ಬೇಕು...!"

...ಯಿಗಳ ಪರವಾಗಿ ಅನಂತಮೂರ್ತಿಯವರ ಕಳಕಳಿ ...ನೇ ತೀವ್ರಗೊಳ್ಳತೊಡಗಿತ್ತು. ಇದೆಲ್ಲಕ್ಕೂ ಮುನ್ನ ... 'ಲಂಕೇಶ್' ಪತ್ರಿಕೆಗೆ ಯುಆರ್ ಬೀದಿನಾಯಿಗಳ ...ಗಿ ವಿಶೇಷ ಸಂದರ್ಶನವನ್ನೂ ಕೊಟ್ಟಿದ್ದರು. ಅವರ ...ಯ ಮೇರೆಗೆ ನಾನು ಚಿತ್ರದುರ್ಗದ ಬಸವಮೂರ್ತಿ ...ರ ಚನ್ನಯ್ಯ ಸ್ವಾಮೀಜಿಯವರನ್ನು ಕಂಡು ಏನಾದರೂ ...ಸುವಂತೆ ಕೋರಿಕೊಂಡಿದ್ದೆ. 2007ರ ಮಾರ್ಚ್ ...ದು ಮಾದಾರ ಚನ್ನಯ್ಯ ಸ್ವಾಮೀಜಿ ಬೆಂಗಳೂರಿನ ...ಸದೆದುರು ಆಮರಣಾಂತ ಉಪವಾಸ ಕೂತರು. ...ಿ ಮಾರಣಹೋಮ ನಿಲ್ಲಿಸುವ ತನಕ ತಾನು ...ರಣಾಂತ ಸತ್ಯಾಗ್ರಹ ನಿಲ್ಲಿಸುವುದಿಲ್ಲ ಎಂದು ಮಾದಾರ ...ಯ್ಯ ಸ್ವಾಮೀಜಿ ಘೋಷಿಸಿದ್ದರು. ಸ್ವಾತಂತ್ರ್ಯ ...ರಾಟಗಾರ ದೊರೆಸ್ವಾಮಿ ಸೇರಿದಂತೆ ನಾಡಿನ ಅನೇಕ ..., ಸಂಘಟನೆಗಳು ಮಾದಾರ ಚನ್ನಯ್ಯರ ಸತ್ಯಾಗ್ರಹವನ್ನು ...ಸಿದರು. ಇನ್ನೇನು ಸ್ವಾಮೀಜಿಯ ಉಪವಾಸ ಐದನೇ ... ಕಾಲಿಡಲಿದೆ ಎನ್ನುವಾಗಲೇ ಕುಮಾರಸ್ವಾಮಿ ...ದಲ್ಲಿ ಮಂತ್ರಿಯಾಗಿದ್ದ ಆಲ್ಕೋಡ್ ಹನುಮಂತಪ್ಪ, ... ಸಮಾಜ ಕಲ್ಯಾಣ ಮಂತ್ರಿಯಾಗಿರುವ ಹೆಚ್. ...ಯರ ಜೊತೆ ಸತ್ಯಾಗ್ರಹ ತಾಣಕ್ಕೆ ಬಂದರು.

...ದು 2007ರ ಏಪ್ರಿಲ್ 1ನೇ ತಾರೀಖು. ...ನಂತರ ಹೋರಾಟಕ್ಕೆ ಮಣಿದ ಮುಖ್ಯಮಂತ್ರಿ, ...ರಸ್ವಾಮಿ ಬೀದಿನಾಯಿಗಳ ಮಾರಣಹೋಮ ...ತೆ ವಿಶೇಷ ಆದೇಶ ಹೊರಡಿಸಿದರು. ಮುಖ್ಯಮಂತ್ರಿಗಳ ಆದೇಶದ ಪ್ರತಿಯನ್ನು ಖುದ್ದು ತಂದುಕೊಟ್ಟ ಆಲ್ಕೋಡ್ ಹನುಮಂತಪ್ಪ ಮತ್ತು ಹೆಚ್. ಆಂಜನೇಯರು ತಮ್ಮ ಕೈಯಾರೇ ಹಣ್ಣಿನ ರಸಕೊಟ್ಟು ಸ್ವಾಮೀಜಿಯ ಆಮರಣಾಂತಕ್ಕೆ ಅಂತ್ಯ ಕಾಣಿಸಿದ್ದರು. ತೆರೆಮರೆಯಲ್ಲಿದ್ದು ಇಷ್ಟೆಲ್ಲ ಹೋರಾಟಗಳನ್ನು ನಾನೊಬ್ಬನೇ ಸಂಘಟಿಸಿದ್ದೆ. ಮುಖ್ಯಮಂತ್ರಿಗಳ ಆದೇಶ ಬಂದದ್ದು ಗೊತ್ತಾಗಿದ್ದೇ ನಾನು ಮೊದಲು ಫೋನ್ ಮಾಡಿದ್ದು ಅನಂತಮೂರ್ತಿಯವರಿಗೆ. "ಸರ್ ಸಂತೋಷದ ಸುದ್ದಿ, ಸರ್ಕಾರ ನಾಯಿ ಬೇಟೆಯನ್ನು ನಿಲ್ಲಿಸುವಂತೆ ಆದೇಶ ಮಾಡಿದೆ. ಮುಖ್ಯಮಂತ್ರಿಗಳೇ ವಿಶೇಷ ಆದೇಶ ಹೊರಡಿಸಿದ್ದಾರೆ. ಸ್ವಾಮೀಜಿ ಸತ್ಯಾಗ್ರಹ ಇವತ್ತಿಗೆ ಮುಗಿದಂತಾಯ್ತು..." ಎಂದೆ.

"ಅದರ ಶ್ರೇಯಸ್ಸು ಸಲ್ಲಬೇಕಾಗಿದ್ದು ನಿಮಗೆ" ಅಂದರು ಯುಆರ್. "ಇಲ್ಲ ಸರ್, ನೀವು ಮುಖ್ಯಮಂತ್ರಿಗಳಿಗೆ ಪತ್ರ ಬರೆಯದೆ ಹೋಗಿದ್ದರೆ ಇಷ್ಟೆಲ್ಲಾ ಆಗುತ್ತಿತ್ತಾ? ಆ ಮೂಕ ಪ್ರಾಣಿಗಳ ಪರವಾಗಿ ನಿಮಗೆ ನಾನು ಋಣಿ" ಎಂದೆ. ಇದನ್ನು ಇಷ್ಟಕ್ಕೇ ನಿಲ್ಲಿಸೋದು ಬೇಡ ಅಂದರು. ನನ್ನ ಮತ್ತು ಬೀದಿನಾಯಿಗಳ ಸಂಬಂಧ ಅಷ್ಟಕ್ಕೇ ಮುಗಿಯಲಿಲ್ಲ. ವಿಜಯನಗರದ ಸುತ್ತಮುತ್ತಲ ಏರಿಯಾಗಳ ಬೀದಿನಾಯಿಗಳಿಗೆ ಪ್ರತಿನಿತ್ಯ ನೀರು, ಆಹಾರ ನೀಡುವುದು ನನ್ನ ಬದುಕಿನ ಅವಿಭಾಜ್ಯ ದಿನಚರಿಯೇ ಆಗಿಹೋಯಿತು. ನನ್ನ ಖಡಕ್ ವರದಿಗಳಿಂದಾಗಿ ಬಿಜೆಪಿ ಸರ್ಕಾರದ ಮಂತ್ರಿಗಳ ಬುಡಕ್ಕೆ ಬಿಸಿಮುಟ್ಟಿ ಬಿಜೆಪಿ ಸರ್ಕಾರದ ವಿರೋಧಿ ಪತ್ರಕರ್ತರನ್ನೆಲ್ಲ ಬಲಿ ಹಾಕುವ ಕಾರ್ಯಾಚರಣೆ ಶುರುವಾಯಿತಲ್ಲ; ಅದಕ್ಕೆ ನೇರವಾಗಿ ಬಳಕೆಯಾಗಿದ್ದು ನನ್ನ ಈ ದಯಾಕಾರ್ಯವೆ!

ಬಿಜೆಪಿ ಅಧಿಕಾರದಲ್ಲಿದ್ದಷ್ಟೂ ಕಾಲ ಬೀದಿನಾಯಿಗಳಿಗೆ ಆಹಾರ ನೀಡುತ್ತೇವೆಂಬ ಒಂದೇ ಕಾರಣಕ್ಕೆ ನಮ್ಮನ್ನು 17 ಬಾರಿ ಬಂಧಿಸಲಾಯಿತು. ವಿಜಯನಗರ ಪೊಲೀಸ್ ಠಾಣೆಗೆ ಎಳೆದೊಯ್ದು ಹಿಂಸಿಸಲಾಯಿತು. ನಮ್ಮ ವಿರುದ್ಧ ರೌಡಿ ಗುಂಪುಗಳನ್ನು ಛೂಬಿಟ್ಟರು. ನಡುರಾತ್ರಿಯನ್ನೂ ಲೆಕ್ಕಿಸದೆ ರೌಡಿ ಪಡೆಗಳು ಬೀದಿನಾಯಿಗಳಿಗೆ ಆಹಾರ ನೀಡುತ್ತಿದ್ದವರ ಮೇಲೆ ದಾಳಿಯಿಟ್ಟವು. ನಾಯಿಗಳ ಆರೈಕೆ ಮಾಡಿದ ತಪ್ಪಿಗೆ ದಯಾಮಂತರು ರಕ್ತ ಹರಿಸಬೇಕಾಯಿತು. ದಯಾವಂತರ ಈ ದಮನಕಾಂಡ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರವೂ ನಿಲ್ಲಲಿಲ್ಲ.

ಬೀದಿನಾಯಿಗಳಿಗೆ ಆರೈಕೆ ಮಾಡುವುದನ್ನೇ ನೆಪ ಮಾಡಿಕೊಂಡಿದ್ದ ರೌಡಿಗಳು ನನ್ನ ಅಚ್ಚುಮೆಚ್ಚಿನ ಎರಡು ನಾಯಿಗಳನ್ನು ಅತ್ಯಂತ ಕ್ರೂರವಾಗಿ ಕೊಂದು ಹಾಕಿದ್ದರು. ಅವುಗಳ ಪ್ರಾಣ ಉಳಿಸಲು ಹೋರಾಡಿದ ನನ್ನ ಹೊಟ್ಟೆಗೆ ಚಾಕು ಚುಚ್ಚಿ ಕೊಲ್ಲಲೆತ್ನಿಸಿದರು. ರಕ್ತ ಸುರಿಸುತ್ತಾ ಸತ್ತ ನಾಯಿಯ ಹೆಣ ಎತ್ತಿಕೊಂಡು ವಿಜಯನಗರ ಪೊಲೀಸ್ ಠಾಣೆಗೆ ಬಂದರೆ ಇನ್ಸ್‌ಪೆಕ್ಟರ್ ರಾಘವೇಂದ್ರ 'ನಿನ್ನನ್ನು ಒದ್ದು ಲಾಕಪ್ಪಿಗೆ ಹಾಕ್ತೇನಿ...' ಎಂದು ನನ್ನನ್ನೇ ಹೊಡೆಯಲು ಬಂದರು. ಕಂಡಕಂಡ ಪೊಲೀಸ್ ಅಧಿಕಾರಿಗಳನ್ನು ಕಂಡು ಮನವಿ ಕೊಟ್ಟೆವು. ನಾಯಿಗಳನ್ನು ಕೊಂದು ನನ್ನ ಹತ್ಯೆಗೆ ಯತ್ನಿಸಿದವರಿಂದಲೇ ನನ್ನ ವಿರುದ್ಧ ದೂರು ಪಡೆದು ನನ್ನ ವಿರುದ್ಧವೇ ಕೇಸು ದಾಖಲಿಸಲಾಗಿತ್ತು. ನಾನು ಕೊಟ್ಟ ದೂರಿಗೆ ಯಾವ ಬೆಲೆಯೂ ಇಲ್ಲದಂತಾಗಿತ್ತು.

ಇಂಥಾ ದುರ್ಗತಿಯಲ್ಲಿ ಮತ್ತೆ ನೆನಪಾಗಿದ್ದು ಅನಂತಮೂರ್ತಿ. ಇಲ್ಲಿಗೆ 20 ದಿನದ ಹಿಂದೆ ಫೋನ್ ಮಾಡಿ "ಅವತ್ತು ನಿಮ್ಮ ಪತ್ರದಿಂದಾಗಿಯೇ ಸಾವಿರಾರು ಮೂಕಪ್ರಾಣಿಗಳ [illegible] ಉಳಿಯಿತು. ಈಗ ನಡೆಯುತ್ತಿರುವುದು ದಯಾವಂತರ ವಿರುದ್ಧದ ದೌರ್ಜನ್ಯ. ಮುಖ್ಯಮಂತ್ರಿ, ಸಿದ್ಧರಾಮಯ್ಯನವರಿಗೆ ನೀವೊಂದು ಪತ್ರ ಬರೆದರೆ ನಮ್ಮೆಲ್ಲ ಕಷ್ಟ ಪರಿಹಾರವಾಗಬಹುದೆಂಬ ನಿರೀಕ್ಷೆ ನಮ್ಮದು..." [illegible]. "ನನಗೆ ಆರೋಗ್ಯ [illegible] ... [illegible] ಪತ್ರ ಕೊಡ್ತೀನಿ" ಎಂದರು. [illegible] ಫೋನ್ ಮಾಡಿದರೆ [illegible] ಆರೋಗ್ಯ ತೀರ ಹದಗೆಟ್ಟಿತ್ತು, ಮತ್ತೆಂದೂ ಆ ಸೋಮವಾರ ಬರಲೇ ಇಲ್ಲ.


ಮೊನ್ನೆ ಕಲಾಗ್ರಾಮದಲ್ಲಿ ಅನಂತಮೂರ್ತಿಯವರ ಪಾರ್ಥೀವದೆದುರು ನಿಂತಾಗ ಇವೆಲ್ಲ ಘಟನಾವಳಿಗಳೂ ಕಣ್ಣಿಗೆ ಕಟ್ಟಿದಂತಾಯಿತು. ಅವತ್ತು ತಮ್ಮದೊಂದು ಪತ್ರದಿಂದಾಗಿ ಸಾವಿರಾರು ಬೀದಿನಾಯಿಗಳ ಪ್ರಾಣ ಉಳಿಸಿದವರು ಯುಆರ್. ನನ್ನನ್ನು ಈ ಮೂಕಜೀವಿಗಳ ಪರ ಹೋರಾಟಕ್ಕೆ ಪ್ರೇರೇಪಿಸಿದ್ದೂ ಅವರೇ. ಜ್ಞಾನಪೀಠ, ಜನಪರ ಹೋರಾಟ, ಸಾಹಿತ್ಯ, ಚಿಂತನೆ, ಸನ್ಮಾನ, ಕೀರ್ತಿ, ಪ್ರಶಂಸೆ, ಗೌರವಗಳೆಲ್ಲದರ ನಡುವೆಯೂ ಹೀನಾತಿಹೀನ, ಪರಮ ನಿಕೃಷ್ಟ, ಈ ಶಾಪಗ್ರಸ್ತ ಜೀವಿಗಳ ಪರವಾಗಿ ಮರುಗಿದವರು ಯುಆರ್. ಇನ್ನೊಂದೇ ತಿಂಗಳು ಹೆಚ್ಚು ಬದುಕಿದ್ದರೆ ನಮಗೊಂದು ಪತ್ರ ಕೊಟ್ಟು ಅದನ್ನು ಮುಖ್ಯಮಂತ್ರಿಗಳಿಗೆ ತಲುಪಿಸಿದ್ದರೆ ನಮ್ಮೆಲ್ಲಾ ಸಂಕಷ್ಟಗಳು ಪರಿಹಾರವಾಗುತ್ತಿದ್ದವೋ ಏನೋ!


ಕನಿಷ್ಠ ಆ ನಾಯಿಗಳ ಜೊತೆ ನಿಂತು ಅವರ ಪಾರ್ಥೀವಕ್ಕೊಂದು ಕೊನೆಯ ನಮಸ್ಕಾರಕ್ಕೂ ಅವಕಾಶವಿಲ್ಲದಂತಾಗಿತ್ತು. ಕಲಾಗ್ರಾಮದ ಪೊಲೀಸ್ ಭದ್ರಕೋಟೆಯ ಹೊರಗೆ ನಾನು ಹೊರಬರುವುದನ್ನೇ ಕಾದು ಕುಳಿತಿದ್ದ ಆ ಮೂರು ನಾಯಿಗಳ ಕಣ್ಣಲ್ಲಿ ಕಣ್ಣಿಟ್ಟು ಮನಸ್ಸಲ್ಲೇ ಹೇಳಿದೆ. 'ನಮಗಿದು ಕಷ್ಟ ಕಾಲ. ನಮಗಿದ್ದ ಒಂದೇ ಒಂದು ಆಸರೆಯನ್ನೂ ಆ ದೇವರು ಕಿತ್ತುಕೊಂಡ. ನಮ್ಮ ಪಾಲಿಗೆ ಆ ವಿಧಿ ಕೂಡ ಕ್ರೂರಿಯೆ. ಇರಲಿ, ಮುಂದೊಮ್ಮೆ ಅವರ ಸಮಾಧಿಗಾದರೂ ಕೈಮುಗಿಯ ಬಹುದಲ್ಲವೆ?' ಎಂದು ಅವುಗಳ ತಲೆ ನೇವರಿಸಿದೆ. ಏನೋ ಕಳೆದುಹೋದಂತೆ. ಎಲ್ಲೋ ಅಪಾಯ [illegible] ಕಾರ್ಮೋಡ, ಅನಾಥಭಾವ. ನನ್ನೊಂದಿಗೆ ನನ್ನಷ್ಟೇ ಭಾರದ ಹೆಜ್ಜೆಗಳನ್ನಿಡುತ್ತ ತಲೆತಗ್ಗಿಸಿ ಹೆಜ್ಜೆ ಹಾಕುತ್ತಿದ್ದವು ಆ ನಾಯಿಗಳು!

● ರಾ. ಸೋಮನಾಥ್

ಪ್ರೀತಿಯ ಗುರುಗಳಿಗೆ ಹೀಗೊಂದು ಅರ್ಥಪೂರ್ಣ ಶ್ರದ್ಧಾಂಜಲಿ

ಕಳೆದ ವರ್ಷ ನಮ್ಮ ಪ್ರೀತಿಯ ಮೇಷ್ಟ್ರು ಅನಂತ ಮೂರ್ತಿಯವರ 80ನೇ ಹುಟ್ಟುಹಬ್ಬಕ್ಕೆ ಲೇಖನ ಬರೆಯುವಾಗಲೇ ನನಗೆ ಅನ್ನಿಸಿತ್ತು: ಎರಡು ಕಿಡ್ನಿ ವಿಫಲಗೊಂಡಿರುವ ಅವರು ಇನ್ನು ಹೆಚ್ಚು ವರ್ಷ ಬದುಕಲಿಕ್ಕಿಲ್ಲ ಎಂದು. ಆದರೂ ಅವರಲ್ಲಿದ್ದ 'ಜೀವನೋತ್ಸಾಹ' ನಮ್ಮನ್ನು ಬೆರಗಾಗಿಸಿತ್ತು, ಗೆಳೆಯ ಪಟ್ಟಾಭಿ ಹೇಳುತ್ತಿದ್ದ: ಒಮ್ಮೆ ಡಯಾಲಿಸಿಸ್ ಆಗುತ್ತಿರುವಾಗ ಅವನು ಅವರ ಜತೆಗೆ ಇದ್ದನಂತೆ. ಆ ಪ್ರಕ್ರಿಯೆ ನೋಡಿಯೇ ಅವನು ಗಾಬರಿ ಕೊಂಡಿದ್ದನಂತೆ. ಆದರೆ ಮೇಷ್ಟ್ರು ಯಾವುದೇ ಉದ್ವೇಗಕ್ಕೊಳಗಾಗದೆ ಸದ್ಯದ ಬದುಕಿನ ಎಲ್ಲ ಜ್ವಲಂತ ಸಮಸ್ಯೆಗಳ ಬಗ್ಗೆಯೂ ಸಂಪೂರ್ಣ ಮಗ್ನರಾಗಿ ಮಾತನಾಡುತ್ತಿದ್ದರಂತೆ...... ನಮ್ಮ ಗುರುಗಳು ಕಳೆದ 10-15 ವರ್ಷಗಳಿಂದ ವೃದ್ಧಾಪ್ಯ ಮತ್ತು ರೋಗಗಳ ಜತೆ ದಿಟ್ಟ ಹೋರಾಟ ನಡೆಸಿದ್ದೇ ಒಂದು ಅದ್ಭುತ. ಅವರಲ್ಲಿದ್ದ ಜೀವನ ಪ್ರೀತಿಯೇ ಶಿಷ್ಯರಾದ ನಮಗೆಲ್ಲಾ ಆದರ್ಶ. ಮುದುಕನಾದೆನೆಂದು ಅವರು ಆಕರ್ಷಕ ಉಡುಪು ಧರಿಸುವುದನ್ನಾಗಲೀ, ಗಡ್ಡ ತಲೆ ಕೂದಲುಗಳನ್ನು ಒಪ್ಪ ಓರಣ ಮಾಡಿಸಿಕೊಳ್ಳುವುದನ್ನಾಗಲೀ ಬಿಡಲಿಲ್ಲ, ತಿನ್ನಬೇಕೆಂದು ಆಸೆ ಪಟ್ಟದ್ದನ್ನೆಲ್ಲಾ ತಿನ್ನುತ್ತಿದ್ದರು..... ಜೀವನದ ಎಲ್ಲ ರಂಗಗಳಲ್ಲಿ ತಮಗಿದ್ದ ಆಸಕ್ತಿಗಳನ್ನು ಕಳೆದುಕೊಳ್ಳಲೇ ಇಲ್ಲ. ಅಭಿಮಾನಿಗಳು ಕರೆದ ಕಾರ್ಯಕ್ರಮಗಳಿಗೆಲ್ಲಾ ಹೋಗಿ, ತನ್ಮಯತೆಯಿಂದ ಭಾಷಣ ಮಾಡಿ ಬರುತ್ತಿದ್ದರು. ನಾವು ಉಡುಪಿಯಲ್ಲಿ ನಮ್ಮ ಜಾತಿ ಮುಕ್ತ ಸಂಬಂಧ ವೇದಿಕೆಯ





ಅನಂತ ಮೂರ್ತಿ ರೀತಿ

ಆಶ್ರಯದಲ್ಲಿ ಒಂದು ಕಾರ್ಯಕ್ರಮ ಏರ್ಪಡಿಸಿ ಅವರನ್ನು ಆಹ್ವಾನಿಸಿದಾಗ ಬಂದು "ಭಾರತದಲ್ಲಿ ಜಾತಿ ಬಿಟ್ಟು ಬದುಕಲು ಸಾಧ್ಯವೇ?" ಎನ್ನುವ ವಿಷಯದ ಮೇಲೆ ಎರಡು ಗಂಟೆಗಳ ಭರ್ಜರಿ ಭಾಷಣ ಮಾಡಿ, ನಂತರ ಸಂವಾದವನ್ನೂ ನಡೆಸಿಕೊಟ್ಟರು. ಆಗ ಅವರು ಮಣಿಪಾಲದಲ್ಲಿದ್ದರು. ಉಡುಪಿಯ ಕೃಷ್ಣ ಮಠದ ರಾಜಾಂಗಣಕ್ಕೂ ಹೋಗಿ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿ ಬಂದಿದ್ದರು.. ಹಾಗೆ ಬದುಕಿನ ಕೊನೆಯ ಕ್ಷಣದವರೆಗೆ ತೀವ್ರವಾಗಿ ಬದುಕಿದ ಜೀವನೋತ್ಸಾಹದ ವ್ಯಕ್ತಿತ್ವ ನಮ್ಮ ಗುರುಗಳದ್ದಾಗಿತ್ತು, ಫ್ರೆಂಚ್ ಲೇಖಕ ಆಲ್ಬರ್ಟ್ ಕಮೂ ತನ್ನ ಹೆಪ್ಪಿಡೆತ್ ಕಾದಂಬರಿಯಲ್ಲಿ ಹೇಳಿದಂತೆ- ಅವರಲ್ಲಿ ಜೀವನದ ಕೊನೆಯ ಕ್ಷಣದವರೆಗೆ ಇದ್ದದ್ದು **will to renunciation** ಅಲ್ಲ ಬದಲಾಗಿ ಇದ್ದದ್ದು **Will To Happiness.** ಈ ಸಂತೋಷ ಪಡುವ ಇಚ್ಛಾಶಕ್ತಿ ನಮಗೆಲ್ಲಾ ಆದರ್ಶಪ್ರಾಯವಾದುದು.

ಮಹಾಮಾತುಗಾರರಾಗಿದ್ದು, ಸೂಕ್ಷ್ಮ ಸಂವೇದನಾಶೀಲರಾಗಿದ್ದ ಗುರುಗಳನ್ನು ಕರ್ನಾಟಕದ ಬಲಪಂಥೀಯರು ಪೂರ್ತಿಯಾಗಿ ತಪ್ಪು ಅರ್ಥಮಾಡಿಕೊಂಡಿದ್ದರು. ಅವರು ಒಣ ವಿಚಾರವಾದಿಯಾಗಿರಲಿಲ್ಲ, ಅದೇರೀತಿ ತುಂಬ ಆಸ್ತಿಕರೂ ಆಗಿರಲಿಲ್ಲ, ಮಾರ್ಕ್ಸ್ ಹೇಳುವ ಡಯಲೆಕ್ಟಿಕಲ್ ಚಿಂತನಾ ಕ್ರಮ ಅವರದ್ದಾಗಿತ್ತು, ಒಂದು ವಿಷಯದ ಎಲ್ಲ ಮಗ್ಗಲುಗಳನ್ನು, ವಿರೋಧಾಭಾಸಗಳನ್ನೂ ಶೋಧಿಸುತ್ತಾ ಹೋಗುವ ದ್ವಂದ್ವಮಾನ ಆಲೋಚನಾ ಕ್ರಮ ಅವರದ್ದಾಗಿತ್ತು, ಅದನ್ನು ಎಲ್ಲರೂ ಅವರ 'ಎಕ್ಸ್‌ಪರಿಮೆಂಟ್' ಎಂದು ತಪ್ಪಾಗಿ ಅರ್ಥಮಾಡಿಕೊಂಡು ದ್ವಂದ್ವಮೂರ್ತಿ ಎಂದು ಗೇಲಿ ಮಾಡುತ್ತಿದ್ದರು. ಉಡುಪಿಯ 'ಜಾತಿ ಮುಕ್ತ ಸಂಬಂಧ ವೇದಿಕೆ'ಯ ಸಭೆಯಲ್ಲಿ ಹೇಳಿದ್ದರು "ಜಾತಿ ಇರಲಿ; ಜಾತೀಯತೆ ಬೇಡ. ಯಾಕೆಂದರೆ ಜಾತಿ ವ್ಯವಸ್ಥೆಯ ಒಳಗೆ ನಮ್ಮ ಸಾಂಸ್ಕೃತಿಕ ಸಂಭ್ರಮಗಳೆಲ್ಲಾ ಇರುತ್ತವೆ". ಅದೇ ರೀತಿ, "ನಾನು ಮತ ಧರ್ಮಗಳನ್ನು ಪ್ರಶ್ನಿಸುತ್ತೇನೆ; ಆದರೆ ಆಧ್ಯಾತ್ಮವನ್ನು ಒಪ್ಪಿಕೊಳ್ಳುತ್ತೇನೆ". ಅನಂತಮೂರ್ತಿಯವರ ಇಂತಹ ಮಾತುಗಳೇ ಎಲ್ಲರ ಅಪಾರ್ಥಕ್ಕೆ ಒಳಗಾಗುತ್ತಿದ್ದವು. ಅವರ ಭಾರತೀಪುರ, ಸಂಸ್ಕಾರ, ಘಟಶ್ರಾದ್ಧ ಅವಸ್ಥೆಗಳಂತಹ ಬರಹಗಳಲ್ಲಿರುವ ವೈಚಾರಿಕತೆಯಿಂದ ಪ್ರಭಾವಿತರಾದ ನಮ್ಮಂತವರಿಗೆ ಅವರ ನಂತರದ ಕಾದಂಬರಿಗಳಾದ ಭವ, ದಿವ್ಯ ಇತ್ಯಾದಿಗಳು ಇಷ್ಟವಾಗುತ್ತಿಲ್ಲ, ಭಾರತೀಪುರದಲ್ಲಿ ನಾಯಕ ಜಗನ್ನಾಥ ತನ್ನ ಪ್ರೇಯಸಿ ಇಂಗ್ಲೆಂಡ್‌ನ ಮಾರ್ಗರೆಟ್‌ಗೆ ಪತ್ರ ಬರೆಯುತ್ತಾ ಹೀಗೆ ಬರೆಯುತ್ತಾನೆ,

"ದೇವರನ್ನು ನಾಶ ಮಾಡದ ಹೊರತು ನಾವು ಖಂಡಿತ ಕ್ರಿಯೇಟಿವ್ ಆಗಲಾರೆವು. ನಾವೆಲ್ಲ ದೇವರ ಗರ್ಭದಲ್ಲಿ ಪಿಂಡಗಳಂತಿದ್ದೇವೆ. ಹುಟ್ಟಿಯೇ ಇಲ್ಲ ಚರಿತ್ರೆಯ ಮಂಥನಕ್ಕೆ ಸಿಕ್ಕಿಲ್ಲ...." ಅನಂತಮೂರ್ತಿಯ ಇಂತಹ ನಿಲುವು ನಮಗಿಷ್ಟವಾಗಿತ್ತು, ಆದರೆ ಅವರ ಇತ್ತೀಚಿನ ಕೃತಿಗಳಲ್ಲಿ ಅಂತಹ ವೈಚಾರಿಕ ನಿಲುವು ಇಲ್ಲದ್ದು, ನಮ್ಮಲ್ಲಿ ನಿರಾಶೆ ಉಂಟು ಮಾಡಿತ್ತು, ವ್ಯವಸ್ಥೆಯ ಜತೆ ಅವರು ರಾಜಿ ಮಾಡಿಕೊಳ್ಳುತ್ತಿದ್ದಾರೆ ಅನ್ನಿಸುತ್ತಿತ್ತು, ಉಡುಪಿಯಲ್ಲಿ ಪೇಜಾವರರಿಂದ ಸನ್ಮಾನಿಸಲ್ಪಟ್ಟಾಗಲಂತೂ ಅವರ ಅಭಿಮಾನಿಗಳಾದ ನಮಗೆಲ್ಲಾ ತೀವ್ರ ಮುಜುಗರ ಉಂಟಾಗಿತ್ತು.

ಆದರೆ ನಮಗೆ ಇಷ್ಟವಾಗಬೇಕೆಂದು ಅವರು ತಮ್ಮ ನಿಲುವನ್ನು ಬದಲಿಸಲಿಲ್ಲ, ಸಂಘ ಪರಿವಾರದವರ ಕೋಮುವಾದದ ವಿರುದ್ಧ ದಿಟ್ಟ ಹೋರಾಟವನ್ನ ನಡೆಸಿದರು. ಇತ್ತೀಚೆಗೆ ಮೋದಿಯ ಬಗ್ಗೆ ಅವರು ಹೇಳುತ್ತಿ[...] ಮಾತುಗಳು ಬಹಳ ಸರಿಯಾಗಿದ್ದವು. ಮೋದಿಯಂತ[...] ನರಹಂತಕನನ್ನು ಅದಾನಿ, ಅಂಬಾನಿ, ಟಾಟಾರಂತ[...] ಕಾರ್ಪೋರೇಟ್ ದನಿಗಳು 33,000 ಕೋಟ ಖರ್ಚು[...] ಮಾಡಿ ಪ್ರಧಾನಿಯನ್ನಾಗಿ ಆರಿಸಿದ್ದು ಅವರಿಗ[...] ಇಷ್ಟವಾಗಿರಲಿಲ್ಲ, ಅಂತಹ ಮೋದಿ ಪ್ರಧಾನಿಯಾಗಿರು[...] ದೇಶದಲ್ಲಿ ಬದುಕಲು ತಾವು ಇಷ್ಟಪಡುವುದಿಲ್ಲ ಎಂದ[...] ಸಾಮಾಜಿಕ ಜವಾಬ್ದಾರಿಯುಳ್ಳ ಓರ್ವ ಹಿರಿಯ ಲೇಖ[...] ಹೇಳಿದ್ದು ಬಹಳ ಸರಿಯಾಗಿತ್ತು. ಆದರೆ ಸಂಘ ಪರಿವಾರದವರೆಲ್ಲಾ ಅವರ ವಿರುದ್ಧ ಯುದ್ಧವನ್ನೇ ಸಾರಿದರು[...] ಅವರ ಬಗ್ಗೆ ಏಕವಚನದಲ್ಲಿ ಮಾತನಾಡುತ್ತಾ, ಅವರ[...] ಪಾಕಿಸ್ತಾನಕ್ಕೆ ಹೋಗಲಿ ಎಂದು ಉದ್ಧಟತನದ ಮಾತುಗಳ[...] ಆಡಿ, ಅವಮಾನ ಮಾಡಿದರು. ವಿಶ್ವೇಶಭಟ್ಟರು ತ[...] ಕನ್ನಡ ಪ್ರಭದಲ್ಲಿ ಸಂಘ ಪರಿವಾರದ ಸದಸ್ಯರಿ[...] ಅನಂತಮೂರ್ತಿಯವರ ವಿರುದ್ಧ ನಂಜುಕಾರಲು ಒಂದ[...] ವಾರಗಳ ಕಾಲ ಅವಕಾಶ ಮಾಡಿಕೊಟ್ಟರು. ಆದರೆ ನಮ[...] ಗುರುಗಳು ಈ ಅಪಪ್ರಚಾರಕ್ಕೆ ಹೆದರದೆ ಕೊನೆಯ ದಿನಗಳವರೆಗೆ ತನ್ನ ತಾತ್ವಿಕ ನಿಲುವಿಗೆ ಬದ್ಧರಾಗಿಯೆ ಉಳಿದರು. ನನ್ನ ಗೆಳೆಯ ಪಟ್ಟಾಭಿ ಹೇಳುವಂ[...] (ಪಟ್ಟಾಭಿರಾಮ ಸೋಮಯಾಜಿ, ಗುರುಗಳಿಗೆ ತುಂಬ ಹತ್ತಿರವಾಗಿದ್ದವನು) ಇತ್ತೀಚೆಗೆ ಅವರು, ಸಂಘ ಪರಿವಾರದವ[...] 'ಹಿಂದೂತ್ವ' ಪರಿಕಲ್ಪನೆ ಬೇರೆ, ಹಿಂದೂ ಧರ್ಮವೇ ಬೇ[...] ಎನ್ನುವ ಪ್ರಬುದ್ಧ ಲೇಖನವನ್ನು ಬರೆದಿದ್ದಾರಂತೆ. ಅದಿನ[...] ಪ್ರಕಟವಾಗಿಲ್ಲ, ಇದರ ಅರ್ಥ ಬಲಪಂಥೀಯರ ಪ್ರತಿಗಾಮಿ ಚಟುವಟಿಕೆಗಳ ವಿರುದ್ಧ ಅವರು ತಮ್ಮ ತಾತ್ವಿ[...] ಹೋರಾಟವನ್ನು ಕೊನೆಯ ದಿನಗಳವರೆಗೆ ನಡೆಸಿದ್ದರು[...] ಅವರಲ್ಲಿದ್ದ ಸಾತ್ವಿಕ ಕ್ರೋಧ ಮತ್ತು ಹೋರಾಟ[...] ಮನೋಭಾವ ಶಿಷ್ಯರಾದ ನಮಗೆಲ್ಲಾ ನಿಜಕ್ಕೂ ದಾರಿದೀ[...]

ಅವರ "ಬತ್ತಲೆ ಸೇವೆ ಯಾಕೆ ಕೂಡದು?" ಎನ್ನು[...] ಪುಸ್ತಕದಲ್ಲಿ ಪ್ರಾಸಂಗಿಕವಾಗಿ ಬೂತದ ಶಕ್ತಿ ಪರೀಕ್ಷಿಸಲ[...] ಬೂತದ ಕಲ್ಲಿನ ಮೇಲೆ ಮೂತ್ರ ವಿಸರ್ಜನೆ ಮಾಡಿದ್ದ[...] ಪ್ರಸ್ತಾಪಿಸಿದ್ದಾರೆ. (ಎಂ.ಎಂ. ಕಲಬುರ್ಗಿ ಅವರು ಈ ವಿಷ[...] ಎತ್ತಿ ಆಡಿ, ರಾದ್ಧಾಂತಕ್ಕೆ ಕಾರಣರಾದರು.) ಅದರ[...] ಅಹಂಕಾರದ ಪ್ರದರ್ಶನವಾಗಲೀ, ವೈಚಾರಿಕ ಉದ್ಧಟತ[...] ವಾಗಲೀ ಇಲ್ಲ, ಹಾಗಿದ್ದೂ ಅವರ ಈ ಪ್ರಾಸಂಗಿ[...] ಹೇಳಿಕೆಯೇ ದೊಡ್ಡ ರಾದ್ಧಾಂತಕ್ಕೆ ಕಾರಣವಾಯಿತು. ಸಮ[...] ಎಂದರೆ ಸಂಘ ಪರಿವಾರದವರಾಗಲೀ, ಅನಂತಮೂರ್ತಿ[...] ಯವರನ್ನು ನಾಸ್ತಿಕರೆಂದು ಬೈಯುವ ಜನಸಾಮಾನ್ಯರಾಗಲೀ[...] ಅವರ ಪುಸ್ತಕಗಳನ್ನಾಗಲೀ ಲೇಖನಗಳನ್ನಾಗಲೀ ಓದದೆಯೆ[...]

ಅನಂತ ನಮಸ್ಕಾರಗಳು



ನಾನು ಅನಂತಮೂರ್ತಿಯವರ ಹೆಸರು ಕೇಳಿದ್ದು ಎಪ್ಪತ್ತರ ದಶಕದಲ್ಲಿ, ಮೈಸೂರಿನ ನೂರಡಿ ರಸ್ತೆಯಲ್ಲಿದ್ದ ಟಾಕೀಸಿನಲ್ಲಿ 'ಸಂಸ್ಕಾರ' ಬಿಡುಗಡೆಯಾಗಿತ್ತು. ಅದರ ಪೋಸ್ಟರುಗಳು ಕೂಡ ಕತ್ತಲೆ ಬೆಳಕಿನ ಚಿತ್ರದಂತೆ ಅಸ್ಪಷ್ಟವಾಗಿದ್ದವು. 'ಸಂಸ್ಕಾರ' ಚಿತ್ರ ನೋಡಿ ಬಂದ ನಮ್ಮಣ್ಣ "ಆ ಸಿನಿಮಾದಲ್ಲಿ ಅವ್ನ್ಯಾವನೋ ಸ್ವಾಮಿ ಯಂತ ಕ್ಯಲಸ ಮಾಡ್ಯವ್ನೆ ಅಂತೀರೀ? ಅದೇಳಕ್ಕಾಗಲ್ಲ, ಹೋಗೆ ನೋಡಬೇಕು" ಎಂದು ಅವರಿವರಲ್ಲಿ ಹೇಳಿದ್ದನ್ನು ಕೇಳಿಸಿಕೊಂಡಿದ್ದೆ. ಆದರೆ ಸಿನಿಮಾ ನೋಡಲಾಗಲಿಲ್ಲ, ತಡವಾಗಿ ಕಾದಂಬರಿ ಓದಿದೆ. ಉನ್ನತವಾದ ಬದುಕಿನ ಪ್ರಾಣೇಶಾಚಾರಿಯ ದೃಶ್ಯ ಬಹಳ ದಿನ ನನ್ನನ್ನು ಕಾಡಿತ್ತು, ಬಹುಶಃ ಅದೇ ಸಮಯದಲ್ಲಿ ನೋಡಿದ ಶಾಂತಾರಾಮರ 'ಪಿಂಜರಾ' ಚಿತ್ರದ ಮಾಸ್ತರನ ದೃಶ್ಯವಂತೂ ಈಗಲೂ ಎಚ್ಚರಿಸುತ್ತದೆ.

ಈ 'ಸಂಸ್ಕಾರ' ಬ್ರಾಹ್ಮಣರಿಗೆ ಎಷ್ಟು ಆಘಾತ ಮಾಡಿದೆಯೆಂದರೆ, ಎರಡು ವರ್ಷಗಳ ಹಿಂದೆಯೂ ಬೆಲ್ಜಿಯಂನಿಂದ ಬರುವ ವಿದ್ವಾಂಸ ಬಾಲಗಂಗಾಧರ, ಕುವೆಂಪು ವಿ.ವಿಯಲ್ಲಿ 'ಸಂಸ್ಕಾರ'ದ ಬಗ್ಗೆ ಸೆಮಿನಾರ್ ನಡೆಸಿ, ಅದರ ಕಥಾವಸ್ತುವನ್ನು ಹೀಗಳೆದು ಅನಂತಮೂರ್ತಿ ಮೇಲಿನ ಸೇಡು ತೀರಿಸಿಕೊಂಡರು.

ಎಪ್ಪತ್ತರ ದಶಕದಲ್ಲಿ ನಮಗೆ ಲಂಕೇಶರಿಗಿಂತ ಮೊದಲೇ ಅನಂತಮೂರ್ತಿ ಸಿಕ್ಕಿದ್ದರು. ಅವರ 'ಭಾರತೀಪುರ' ಕಾದಂಬರಿಯನ್ನು ಕೈಲಿಡಿದು ತಿರುಗುವುದೇ ಒಂದು ಪ್ರತಿಷ್ಠೆಯಾಗಿತ್ತು, 'ಎರಡು ಕನಸು' ಸಿನಿಮಾದಲ್ಲೂ ಕಲ್ಪನಾ 'ಭಾರತೀಪುರ' ಓದುತ್ತಾ ಕುಳಿತ ದೃಶ್ಯವಿದೆ! ಒಂದೆಡೆ ಆ ಕಾದಂಬರಿ ಅಂದು ಹುಟ್ಟುಹಾಕಿದ್ದ ಚರ್ಚೆ ವಿಶೇಷವಾಗಿದ್ದರೆ, ಇನ್ನೊಂದೆಡೆ, ಭೈರಪ್ಪನವರ 'ದಾಟು' ಕೂಡ ಜನಪ್ರಿಯತೆ ಗಳಿಸಿತ್ತು, 'ದಾಟು'ವಿನಲ್ಲಿ ದೇವಸ್ಥಾನಕ್ಕೆ ನುಗ್ಗಿ ಹೋದ ದಲಿತನ ನಾಯಕ ಮೂರ್ಛೆ ಹೋಗುತ್ತಾನೆ. 'ಭಾರತೀಪುರ'ದಲ್ಲಿ ದಲಿತರು ದೇವಸ್ಥಾನ ಪ್ರವೇಶ ಮಾಡಿ [...] ಗರ್ಭಗುಡಿಯಲ್ಲಿ ದೇವರ ವಿಗ್ರಹವೇ ಇರುವುದಿಲ್ಲ, ಭೈರಪ್ಪ ಆರೆಸ್ಸೆಸ್ಸಿನ ಅಜೆಂಡಾ ಇಟ್ಟುಕೊಂಡು ಬರೆದರೆ ಅನಂತಮೂರ್ತಿ ನಮ್ಮ ಸಂಸ್ಕೃತಿಯ ಶ್ರೇಷ್ಠ

ಲೇಖಕರಾಗಿ ಬರೆಯುತ್ತಿದ್ದರು. ಉಳಿದವರು ಚೆನ್ನಾಗಿ ಬರೆಯುವಂತೆ ಎಚ್ಚರಿಸುತ್ತಿದ್ದರು. ನಾನು 'ಭಾರತೀಪುರ'ವನ್ನು ಎರಡು ಬಾರಿ ಓದಿ, ನನ್ನ ಸುತ್ತಲೂ ಇದ್ದ ಹಲವಾರು ಗೆಳೆಯರಿಗೆ ಅದರಲ್ಲಿನ ಪಾತ್ರಗಳನ್ನ ಹಂಚಿ ತಮಾಷೆ ಮಾಡಿದ್ದೆ. ಮುಂದೆ ಅನಂತಮೂರ್ತಿಯವರ ಕಥೆಗಳು, 'ಪ್ರಶ್ನೆ ಮತ್ತು ಪರಿಸರ' ಓದುತ್ತಾ ಹೋದಂತೆ, 'ಭಾರತೀಪುರ' ಮರೆಯಾಯ್ತು.

ಒಮ್ಮೆ ಗೌರಿ ಅನಂತಮೂರ್ತಿಯವರನ್ನು ಪತ್ರಿಕೆ ಆಫೀಸಿಗೆ ಆಹ್ವಾನಿಸಿದಾಗ ಅವರು ತಮ್ಮ ಪತ್ನಿ ಎಸ್ತರ್ ಜೊತೆ ಬಂದಿದ್ದರು. ಅವತ್ತಿನ ಪಾರ್ಟಿಯಲ್ಲಿ ನಾನು 'ಭಾರತೀಪುರ' ಮೆಚ್ಚಿ ಮಾತನಾಡಿದೆ. ಅದಕ್ಕವರು "ನಿನ್ನ ಕಟ್ಟೆ ಪುರಾಣ ಕಾಲಂ ಅನ್ನು ನನ್ನ ತಮ್ಮ ಡಾ. ಅನಿಲ್ ತುಂಬಾ ಮೆಚ್ಚಿಕೊಂಡು ಮಾತಾಡ್ತನೆ" ಎಂದು ನಕ್ಕರು. ಅವತ್ತು ನನಗೆ ಯಾಕೆ ಅಚ್ಚರಿ ಆಗಿತ್ತೆಂದರೆ ಅದಕ್ಕೆ ಕೆಲವೇ ದಿನಗಳ ಹಿಂದೆ ಗೌರಿ ಅನಂತಮೂರ್ತಿಯವರನ್ನ ಟೀಕಿಸಿ

ಬರೆದಿದ್ದರು. ಅದನ್ನೆಲ್ಲಾ ಮರೆತು ಬಂದು ಲಂಕೇಶರನ್ನ ನೆನೆಸುತ್ತಾ ಗಂಟೆಗಟ್ಟಲೆ ಮಾತನಾಡಿ ಹೋಗಿದ್ದು ವಿಶೇಷವಾಗಿತ್ತು.

ಎಪ್ಪತ್ತರ ದಶಕದಲ್ಲಿ ನಾವೆಲ್ಲಾ ಬಂಡಾಯದ ವೀರಾವೇಶದಲ್ಲಿ ಮಾತನಾಡುತ್ತಿರುವಾಗಲೇ, ಧರ್ಮಸ್ಥಳದಲ್ಲಿ ಅಡಿಗರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಮ್ಮೇಳನ ನಡೆಯಿತು. ಅದಕ್ಕೆ ಪ್ರತಿಯಾಗಿ ಬೆಂಗಳೂರಿನಲ್ಲಿ ಬಂಡಾಯ ಸಾಹಿತ್ಯ ಸಮ್ಮೇಳನ ಜರುಗಿತು. ಆದರೆ ಈ ವೀರಾವೇಶ ಬಹಳ ಕಾಲ ನಡೆಯದೆ, ಬಂಡಾಯದ ವೇದಿಕೆಯ ಕುರ್ಚಿಯ ಮೇಲೆ ಕುಳಿತಿದ್ದವರೆಲ್ಲ, ಮುಂದೆ ಸರ್ಕಾರಗಳ ಒಂದಲ್ಲ ಒಂದು ಕುರ್ಚಿ ಹಿಡಿಯಲೂ ಹೋರಾಡಿದ್ದು ಈಗ ಇತಿಹಾಸ.

ಅದೇ ಕಾಲಕ್ಕೆ, ಅನಂತಮೂರ್ತಿಯವರು ಆಳುವ ಸರ್ಕಾರದ ಸಮೀಪವಿರಲು ಯತ್ನಿಸುತ್ತಾರೆ; ಬಂದಲ್ಲಾ ಒಂದು ಪೀಠ ಹಿಡಿಯಲು ಸಂಚು ರೂಪಿಸುತ್ತಾರೆ ಎಂದು ಕೆಲವರು ಟೀಕಿಸಿದ್ದಿದೆ. ಆದರೆ ಅನಂತಮೂರ್ತಿ ಯಾವುದೇ ಸ್ಥಾ[...] ಯೋಗ್ಯರಾಗಿದ್ದರು. ದೇಶವ್ಯಾಪಿ ಕನ್ನಡದ ಘನತೆಯ[...] ಹೆಚ್ಚಿಸಿದವರಾಗಿದ್ದರು. ಬದುಕಿನ ಕಡೆಯವರೆಗೂ ಅವ[...] ವಿವಾದಗ್ರಸ್ತ ಹೇಳಿಕೆಗಳಿಂದ ಮುಕ್ತರಾಗಿರಲಿಲ್ಲ, ಬತ[...] ಹಿಂದೆಯೇ ಅವರು ಬ್ರಾಹ್ಮಣರ ಶ್ರಾದ್ಧವನ್ನ ಮೆ[...] ಮಾತನಾಡಿ ನಮಗೆಲ್ಲಾ ಬೇಸರವುಂಟುಮಾಡಿದ್ದ[...] ಸುಮಾರು ಅದೇ ಸಮಯದಲ್ಲಿ ಉಡುಪಿಯ ಪೇಜಾ[...] ಮಠಕ್ಕೆ ಹೋಗಿ ಸನ್ಮಾನ ಸ್ವೀಕರಿಸಿ ಆಪ್ಯಾಯಮಾನವ[...] ಮಾತನಾಡಿ ಅಚ್ಚರಿ ಹುಟ್ಟಿಸಿದ್ದರು. ಆದರೂ ಈ ಪೇಜಾ[...] ತಾವು ಗೌರವಿಸುವುದಕ್ಕೆ ಯೋಗ್ಯರಲ್ಲ ಅನ್ನಿಸಿ ದೂ[...] ಸರಿದಿದ್ದರು.

ಲಂಕೇಶರು ಬದುಕಿದ್ದಾಗ ಅನಂತಮೂರ್ತಿಯ[...] ವಿವಾದಗ್ರಸ್ತ ಹೇಳಿಕೆಗೆ ಸರಿಯಾದ ಟೀಕೆ ಟಿಪ್ಪಣಿ ಹೊ[...] ಬೀಳುತ್ತಿದ್ದವು. ಇವುಗಳನ್ನು ನಾವು ಬೀದಿ ಜಗಳದ[...] ಮನರಂಜನೆಯಾಗಿ ಓದಿಕೊಂಡು, ಲಂಕೇಶರ ಸೈನ್ಯದ[...] ಹುರಿಯಾಳಾಗಿ ಗುರುತಿಸಿಕೊಂಡಿದ್ದೆವು. ಆದರೆ ಅ[...] ಲಂಕೇಶರ ಎದುರೇ ಅವರು ಬರೆದಿದ್ದ ಟಿಪ್ಪಣಿಯ[...] ಮೆಚ್ಚಿ ಮಾತನಾಡಿದರೆ, ಅದಕ್ಕೆ ವ್ಯತಿರಿಕ್ತ ಉತ್ತ[...] ಪಡೆಯುತ್ತಿದ್ದೆವು. ಅನಂತಮೂರ್ತಿಯವರ 'ಸೂರ್ಯನ ಕುದುರೆ' ಕಥೆ ಮೆಚ್ಚಿ ಲಂಕೇಶ್ ಬರೆದ ವಿಮರ್ಶೆ ನಿಜಕ್ಕೆ ನಮ್ಮೆಲ್ಲರ ಕಣ್ಣು ತೆರೆಸಿತ್ತು, ಇವರ ಜಗಳವೆಲ್ಲಾ ಒಳ್ಳೆಯ[...] ಸೃಷ್ಟಿಸಲೋಸ್ಕರ ನಡೆಯುವಂತದ್ದು ಎಂಬುದು ನಮ[...] ಅರಿವಾಗಲು ಬಹಳ ತಡವಾಗಿತ್ತು, 'ಸೂರ್ಯನ ಕುದು[...] ಮೆಚ್ಚಿದ ಲಂಕೇಶ್, 'ಭವ' ಕಾದಂಬರಿಯನ್ನು ಅದೊಂದು ಜಡ ಜಗತ್ತಿನ ದಾಖಲೆ ಎಂದಿದ್ದರು.


ಲಂಕೇಶ್ ಪತ್ರಿಕೆ ಬಂದನಂತರ ಅನಂತಮೂರ್ತಿಯ[...] ರುಜುವಾತು ಪತ್ರಿಕೆಯ ಒಂದು ಸಂಚಿಕೆ ಹೊರಬಂ[...] ಅದನ್ನ ನೋಡಿದ ಲಂಕೇಶ್ ಅಲ್ಲಿನ ಲೇಖಕರ ವ[...] ಗುರುತಿಸಿ ಕೆಂಡಮಂಡಲವಾಗಿ "ಈ ಸಂಚಿಕೆಗೆ ಒಂದೆರ[...] ಲಾಂಗ್‌ಜಂಪ್, ಹೈಜಂಪ್ ಫೋಟೋಗಳಿದ್ದರೆ ಒಳ್ಳೆ ಶಾಲಾ ಸಂಚಿಕೆಯಾಗುತ್ತಿತ್ತು" ಎಂದು ಬರೆದುಬಿಟ್ಟರ[...]

ಅನಂತಮೂರ್ತಿಯವರು ನ್ಯಾಷನಲ್ ಬುಕ್ ಟ್ರ[...] ಅಧ್ಯಕ್ಷರಾಗಿ ದೆಹಲಿಯಲ್ಲಿದ್ದಾಗ ಗುಪ್ತಚರ ಇಲಾಖೆ[...]

ಗ್ರಹಪೀಡಿತರಾಗಿ ಅವರ ಮೇಲೆ ಆಕ್ರಮಣ
ದ್ದಾರೆ. ಅನಂತಮೂರ್ತಿಯವರು ಮಾತ್ರವಲ್ಲ,
ನಿಜವಾದ ಭಕ್ತರೆಲ್ಲಾ ಕಲ್ಲಿಗೆ ದೇವರನ್ನು
ಓಳಿಸದೆ ಸಹಜೀವಿಗಳ ಹೃದಯದಲ್ಲಿ ದೇವರನ್ನು
ೆ. ಸಹಜೀವಿಗಳ ಶೋಷಣೆ ಆಗಬಾರದು ಎಂದು
ವ ಪ್ರಗತಿಪರರೇ ನಿಜವಾದ ದೇವರ ಭಕ್ತರು;
ರು. ಮೋದಿಯ ಗುಜರಾತಲ್ಲಿ 2002ರಲ್ಲಿ ನಡೆದ
ಮಾಯಕರ ನರಮೇಧವನ್ನು ಬೆಂಬಲಿಸುವವರು
ದೇವರ ಭಕ್ತರು? ಧಾರ್ಮಿಕರು?


ಕ್ಷ ಸಂವೇದನೆಯ ಅನಂತಮೂರ್ತಿಯವರು
ನೋಯಿಸಲು ಇಷ್ಟಪಟ್ಟವರಲ್ಲ. ಪತ್ರಕರ್ತ
ಅವರ ಹತ್ತಿರ "ನಿಮಗೆ ದೇವರಲ್ಲಿ ನಂಬಿಕೆ
?" ಎಂದು ಪ್ರಶ್ನಿಸಿದಾಗ ಅವರು ಹೇಳಿದರು
ಇದ್ದಾರೆ ಎಂದು ಹೇಳಲು ನನಗೆ ಸಾಧ್ಯವಾಗುತ್ತಿಲ್ಲ;
ದು ಹೇಳಲೂ ಧೈರ್ಯವಾಗುತ್ತಿಲ್ಲ..." ವಾಸ್ತವವಾಗಿ
ಕಾದಂಬರಿಕಾರ ದಾಸ್ತೋವಸ್ಕಿಯ ಮಾತು ಇದೆ.
ವಲ್ಲಿರುವ ಜೀವಿಗಳ ಅಪಾರ ದುಃಖ ನೋಡಿ
ಿದ ಲೇಖಕನೊಬ್ಬ ಸೃಷ್ಟಿಕರ್ತನ ಮೇಲೆ ಮಾಡಿದ
ಇದು. ದೇವರು ಇರುವುದಾದರೆ ಇಷ್ಟೆಲ್ಲಾ
ೋವು, ಶೋಷಣೆ.. ಯಾಕೆ?" ಎನ್ನುವ ಗಂಭೀರ
ದು. ರಷ್ಯಾದ ಲೇಖಕರಾದ ಟಾಲ್‌ಸ್ಟಾಯ್,
ವಸ್ಕಿ, ಚೆಕಾಫ್, ಇಂಗ್ಲೆಂಡಿನ ಕವಿಗಳಾದ ಬ್ಲೇಕ್,
ಹವರು ನಮ್ಮ ಅನಂತಮೂರ್ತಿಯವರ ಧರಾನೇ
ುತ್ತಿದ್ದರು. ಹಲವು ಶ್ರೇಷ್ಠ ಪುಸ್ತಕಗಳನ್ನು ಓದಿ,
ಧ್ಯಾನಿಸಿ, ಅನುಭವಿಸಿ, ಪಕ್ವಗೊಂಡ ಪ್ರಜ್ಞೆ
ಮೂರ್ತಿಯವರದಾಗಿತ್ತು. ಅವರನ್ನು ಅರ್ಥ
ಳ್ಳಲಾಗದ ಸಂಘ ಪರಿವಾರದ ಕಿಡಿಗೇಡಿಗಳು
ನಿಧನರಾದ ಸಂದರ್ಭದಲ್ಲಿ ಪಟಾಕಿ ಹೊಡೆದು,
... ಅವಮಾನಿಸಿದ್ದಾರೆ.

ಅವರ ಶಿಷ್ಯರೆಂದು ಹೆಮ್ಮೆ ಪಡುವ ನಾವು
ದ್ದೇವೆ. ಗುರುಗಳು ತಮ್ಮ ಬದುಕಿನ ಉದ್ದಕ್ಕೂ
ಸಂಘ ಪರಿವಾರದವರ ಕೋಮುವಾದ ಮತ್ತು
ಮನೋಭಾವದ ವಿರುದ್ಧದ ಹೋರಾಟವನ್ನು
ುಂದುವರಿಸುತ್ತೇವೆ. ನಮ್ಮ ಗುರು ಅನಂತಮೂರ್ತಿ
ನಿಜವಾದ ಪ್ರಜಾಪ್ರಭುತ್ವವಾದಿಗಳಾಗಿದ್ದ,
ವನ್ನು ಬಯಸುವ ಸಮಾಜವಾದಿ ಆಗಿದ್ದರು. ಅವರ
ಕನಸಿನ ನಿಜವಾದ ಪ್ರಜಾ ಪ್ರಭುತ್ವದ
ಸ್ಥಾಪನೆಗಾಗಿ ತಾತ್ವಿಕ ಹೋರಾಟ
ನಡೆಸುವುದೇ ನಾವು ನಮ್ಮ
ಗುರುಗಳಿಗೆ ಸಲ್ಲಿಸುವ ಅರ್ಥಪೂರ್ಣ
ಶ್ರದ್ಧಾಂಜಲಿಯಾಗಿರುತ್ತದೆ.



● ಡಾ. ಹಯವದನ ಮೂಡುಸಗ್ರಿ

ಮೌನಿ ಅನಂತಮೂರ್ತಿ ಅವರನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ



ಸಮಾಜದಲ್ಲಿ ದುಷ್ಟರಿಗಿಂತ ಸಜ್ಜನರ ಸಂಖ್ಯೆ ಹೆಚ್ಚು ಎನ್ನುವುದಕ್ಕೆ ಯಾವ ಗಣತಿಯನ್ನೂ ನಡೆಸಬೇಕಾಗಿಲ್ಲ. ಹಾಗಿಲ್ಲದೆ ಹೋಗಿದ್ದರೆ ನಮ್ಮ ಸಮಾಜ ನಾವೆಲ್ಲ ಬದುಕುವಷ್ಟು ಸಹನೀಯವಾಗುತ್ತಿರಲಿಲ್ಲ. ಆದರೆ ಬಹುಸಂಖ್ಯೆಯ ಸಜ್ಜನರು ಮೌನಧಾರಿಗಳು, ದುಷ್ಟರು ಮಾತ್ರ ಕೂಗುಮಾರಿಗಳು. ಈ ಕಾರಣದಿಂದಾಗಿಯೇ ಒಂದಷ್ಟು ಜಾಗೃತ ಸಜ್ಜನರಿಗೆ ನಾವು ಒಂಟಿ, ಅಸಹಾಯಕರು ಮತ್ತು ದುರ್ಬಲರು ಎಂದು ಅನಿಸಿಬಿಡುತ್ತದೆ. ಇದು ಹಲವಾರು ಬಾರಿ ಹತಾಶೆ, ಸಿನಿಕತೆ ಮತ್ತು ಅತಿರೇಕದ ನಿಲುವುಗಳಿಗೆ ಪ್ರೇರಣೆಯಾಗುತ್ತದೆ.

ಮೊನ್ನೆ ಸಂಜೆ ಹೆಚ್ಚುಕಡಿಮೆ ನನ್ನ ಕಣ್ಣೆದುರೇ ಯು.ಆರ್. ಅನಂತಮೂರ್ತಿಯವರು ಸಾವಿನೆಡೆಗೆ ಸರಿದುಹೋದಾಗ ನಮ್ಮ ಆತ್ಮಸಾಕ್ಷಿಯ ಒಂದು ಬಹುದೊಡ್ಡ ಭಾಗ ಕೂಡಾ ಹೊರಟುಹೋಯಿತು ಎಂದು ಅನಿಸಿ ನನ್ನೊಡಲು ವಿಲವಿಲನೆ ಒದ್ದಾಡಿದ್ದು ಈ ಕಾರಣಕ್ಕೆ. ತಾನಾಡಿದ ಮಾತು ತಮ್ಮ ವಿರೋಧಿಗಳನ್ನು ಕೆರಳಿಸುತ್ತದೆ, ಅವರು ತಮ್ಮನ್ನು ಮಾನಸಿಕವಾಗಿ ಕುಗ್ಗಿಸಲು ನಾನಾಬಗೆಯ ಹೀನತಂತ್ರಗಳನ್ನು ನಡೆಸುತ್ತಾರೆ ಎಂದು ಅನಂತಮೂರ್ತಿಯವರಿಗೆ ಗೊತ್ತಿತ್ತು. ಮಾನಸಿಕವಾದ ಹಿಂಸೆ ದೈಹಿಕವಾಗಿಯೂ ಪ್ರತಿಕೂಲ ಪರಿಣಾಮ ಬೀರಬಹುದು ಎಂದು ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ ಅವರಿಗೆ ತಿಳಿದಿತ್ತು. ಹಾಗಿದ್ದರೂ ಅವರು ವಿವಾದಗಳನ್ನು ಆಹ್ವಾನಿಸಿಕೊಂಡೇ ಬದುಕಿದರು.

ತಮ್ಮ ಹೇಳಿಕೆ ಕುರಿತಂತೆ ಸೃಷ್ಟಿಯಾಗಿರುವ ವಿವಾದದ ಬಗ್ಗೆ ಪತ್ರಕರ್ತರು ಪ್ರತಿಕ್ರಿಯೆ ಬಯಸಿದಾಗ ಅವರು ನನಗೆ ಫೋನ್ ಮಾಡುತ್ತಿದ್ದರು. ಅವರ ಅನಾರೋಗ್ಯದ ಸ್ಥಿತಿಯನ್ನು ನೋಡುತ್ತಾ ಬಂದ ನಾನು "ಹೋಗ್ಲಿ ಬಿಡಿ ಸಾರ್. ವಿವಾದ ಬೆಳೆಸಲು ಹೋಗಬೇಡಿ. ಸುಮ್ಮನೆ ನಿಮಗೆ ಕಿರಿಕಿರಿ" ಎನ್ನುತ್ತಿದ್ದೆ. ಆದರೆ ಮರುಕ್ಷಣದಲ್ಲಿಯೇ ಯಾವುದಾದರೂ ಟಿವಿ ಚಾನೆಲ್‌ನಲ್ಲಿ ಅವರ ಸಂದರ್ಶನ ಪ್ರಸಾರವಾಗುತ್ತಿತ್ತು. ಇದು ಅನಂತಮೂರ್ತಿ. ಅವರ ಹೇಳಿಕೆಗಳನ್ನು ನೋಡಿ ಕೆಲವರು ಅವರನ್ನು ಪ್ರಚಾರಪ್ರಿಯರು ಎಂದು ಟೀಕಿಸಿದ್ದೂ ಉಂಟು. ಆದರೆ ಪ್ರಚಾರಪ್ರಿಯರು ತಮಗೆ ಹಿತವಾದುದೇ ಪ್ರಚಾರವಾಗಲಿ ಎಂದು ಬಯಸುತ್ತಾರೆ, ಯಾವ ಪ್ರಚಾರಪ್ರಿಯ ಅನಂತಮೂರ್ತಿಯವರಂತೆ 'ಹೇಟ್ ಕ್ಯಾಂಪೇನ್'ಗೆ ತಮ್ಮನ್ನು ಒಡ್ಡಿಕೊಳ್ಳಲು ಇಷ್ಟಪಡುತ್ತಾರೆ?



ನಮ್ಮ ಸಜ್ಜನ ಮೌನಧಾರಿಗಳೇನು ಕೆಟ್ಟವರಲ್ಲ, ಅವರು ಊರ ಉಸಾಬರಿ ನಮಗ್ಯಾಕೆ? ಎನ್ನುವ ಮನೋಭಾವದವರು. ಯಾವುದೇ ವಿಷಯ-ಘಟನೆ-ಬೆಳವಣಿಗೆಗಳ ಬಗ್ಗೆ ಅವರಲ್ಲಿ ಸ್ವಂತದ್ದೊಂದು ಅಭಿಪ್ರಾಯ ಇರುವುದಿಲ್ಲ. ಈ ಆರೋಪ ನಮ್ಮ ಬಹಳಷ್ಟು ಸಾಹಿತಿಗಳು ಮುಖ್ಯವಾಗಿ ಇತ್ತೀಚಿನ ತಲೆಮಾರಿನ ಸಾಹಿತಿಗಳ ಬಗ್ಗೆಯೂ ಇದೆ. ಅನಂತಮೂರ್ತಿಯವರ ಸಾವು 'ತುಂಬಿಕೊಳ್ಳಲಾಗದ ನಷ್ಟ' ಎಂದು ಅನಿಸುವುದು ಈ ಕಾರಣಕ್ಕೆ.

ಅನಂತಮೂರ್ತಿಯವರ ಸಾವಿನ ನಷ್ಟವನ್ನು ಭರಿಸುವುದಕ್ಕೆ ನಮ್ಮೆದುರು ಇರುವ ಏಕೈಕ ದಾರಿಯೆಂದರೆ ಸಜ್ಜನರೆನಿಸಿಕೊಂಡವರು ಮೌನದ ಕಂಬಳಿ ಕಿತ್ತೊಗೆದು ಮಾತನಾಡಲು ಶುರು ಮಾಡುವುದು. ಅನಂತಮೂರ್ತಿಯವರಂತೆಯೇ ಯಾವುದೇ ಟೀಕೆ-ಟಿಪ್ಪಣಿ, ಅಪಪ್ರಚಾರಕ್ಕೆ ಜಗ್ಗದೆ ತಮಗೆ ಸರಿಕಂಡದ್ದನ್ನು ಅಂಜದೆ, ಅಳುಕದೆ ಅಭಿವ್ಯಕ್ತಿಸುವುದೇ ಅವರಿಗೆ ನಾವು ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ. ಈ ಮೂಲಕವೇ ನಾವು ಅನಂತಮೂರ್ತಿಯವರನ್ನು ಜೀವಂತವಾಗಿಡಬೇಕಾಗಿದೆ, ಅವರಿಗಾಗಿ ಅಲ್ಲ, ನಮಗಾಗಿ.

ಕೊನೆಕ್ಷಣ: ಸಾವಿನ ಎರಡು ದಿನಗಳ ಹಿಂದೆ ಮಣಿಪಾಲ್ ಆಸ್ಪತ್ರೆಯ ಐಸಿಯುನಲ್ಲಿ ದೇಹದ ತುಂಬೆಲ್ಲಾ ನಳಿಕೆಗಳನ್ನು ಪೋಣಿಸಿಕೊಂಡು ಮಲಗಿದ್ದ ಅನಂತಮೂರ್ತಿಯವರು ನನ್ನ ಕೈ ಹಿಡಿದು "ಮೈ ಬಾಡಿ ಈಸ್ ಫೈಟಿಂಗ್ ದಿನೇಶ್" ಎಂದರು. ಆಗಲೂ ಅವರಿಗೆ ಅವರ 'ಮೈಂಡ್'ನ ಆರೋಗ್ಯದ ಬಗ್ಗೆ ವಿಶ್ವಾಸ ಇತ್ತು, ಮಾನಸಿಕ ಶಕ್ತಿ ಮೂಲಕವೇ ದೇಹಕ್ಕೆ ತಗಲಿರುವ ರೋಗವನ್ನು ಗೆಲ್ಲಬಹುದೆಂಬ ಆತ್ಮವಿಶ್ವಾಸವನ್ನು ಅವರು ಹೊಂದಿದ್ದರು. ಅದು ಗೊತ್ತಿದ್ದ ನಾನು "ಯುವರ್ ಮೈಂಡ್ ಈಸ್ ಫೈಟಿಂಗ್ ಸರ್" ಎಂದೆ. ನನ್ನ ಅಂಗೈಯನ್ನು ಅಮುಕಿ ನಕ್ಕರು. ಜೀವಂತವಾಗಿ ಅವರನ್ನು ನೋಡಿದ್ದು ಅದೇ ಕೊನೆ. ಎರಡು ದಿನಗಳ ನಂತರ ಹೋದಾಗ ಅವರು ಪ್ರಜ್ಞಾಹೀನಸ್ಥಿತಿಯಲ್ಲಿದ್ದರು. ಎಷ್ಟೇ ಅನಾರೋಗ್ಯದಿಂದಿರಲಿ, ಡಯಾಲಿಸಿಸ್ ಮಾಡಿಸಿಕೊಳ್ಳುತ್ತಲೇ ಇರಲಿ, ಅವರಲ್ಲಿಗೆ ಹೋದಾಗ ಮಾತನಾಡದೆ ಎಂದೂ ನನ್ನನ್ನು ವಾಪಸ್ ಕಳುಹಿಸುತ್ತಿರಲಿಲ್ಲ. ಸಾವಿನ ಹಿಂದಿನ ದಿನ ಹೋಗಿದ್ದಾಗ ಮಾತ್ರ ಪ್ರಜ್ಞಾಹೀನಸ್ಥಿತಿಯಲ್ಲಿದ್ದರು. ಅದರ ನಂತರ ಕಣ್ಣು ತೆರೆಯಲೇ ಇಲ್ಲ. ಮೌನಹೊದ್ದು ಮಲಗಿದ್ದ ಅನಂತಮೂರ್ತಿಯವರನ್ನು ನಾನು ನೋಡಲೇಬಾರದಿತ್ತು, ನನ್ನೊಡನೆ ಮಾತನಾಡಿದ್ದ ಅನಂತಮೂರ್ತಿಯವರ ಭೇಟಿಯೇ ಕೊನೆಯದಾಗ ಬೇಕಿತ್ತು ಎಂದು ತೀವ್ರವಾಗಿ ಅನಿಸುತ್ತಿದೆ. ಮೌನಿ ಅನಂತಮೂರ್ತಿಯವರನ್ನು ನಾನು ಊಹಿಸಿಕೊಳ್ಳುವುದೂ ಸಾಧ್ಯ ಇಲ್ಲ.



● ದಿನೇಶ ಅಮಿನ್ ಮಟ್ಟು

ಕಾರ್ಯಕ್ರಮಕ್ಕೆ ಅವರನ್ನು ಕರೆಸಲಾಯ್ತು. ಲಂಕೇಶ್‌ರ
ಮೇರೆಗೆ ಏರ್‌ಪೋರ್ಟ್‌ನಿಂದ ನೇರವಾಗಿ ಆಫೀಸಿಗೆ
ಅವರು ಬರುತ್ತಿರುವುದು ಗೊತ್ತಾಗಿ, ದಿಢೀರನೆ
ಲಂಕೇಶ್ ಮೆಟ್ಟಿಲವರೆಗೂ ಹೋಗಿ
ತಮೂರ್ತಿಯವರ ಕೈ ಕುಲುಕಿ, ಭುಜ
ಕೊಂಡು ಬಂದರು. ಅಲ್ಲದೆ ನನ್ನನ್ನು ಮತ್ತು
ಷ್ಟನ್ನು ಪರಿಚಯಿಸುವಾಗ ನಮ್ಮಗಳ ಜಾತಿಯನ್ನೂ
ಸಿದ್ದು ನನ್ನಲ್ಲಿ ಅಚ್ಚರಿ ಮೂಡಿಸಿತ್ತು.

ಕೇಶ್ ಮತ್ತು ಅನಂತಮೂರ್ತಿಯವರ
ಮುಖಿ ಭೇಟಿ ಬಹಳ ದಿವಸಗಳ ನಂತರ
ದ, ಪರಸ್ಪರ ತಮ್ಮ ತಮ್ಮ ಮಕ್ಕಳೇನು
ತ್ತಿದ್ದಾರೆ, ಏನೇನು ಓದುತ್ತಿದ್ದಾರೆ ಎಂದು
ವಾಗಿ ಮಾತನಾಡತೊಡಗಿದರು. ಕೈಯಲ್ಲಿ ವಿಸ್ಕಿ
ಅನಂತಮೂರ್ತಿಯವರು ದೆಹಲಿಯ ಅನುಭವಗಳ
ಕಹಾಡಿದರು. ಒಮ್ಮೆ ತಾವು ಒಬ್ಬ ಜೈನ ದಿಗಂಬರ
ಸ್ನ ಭೇಟಿಯಾದದ್ದು, ಅವನು ದಿಗಂಬರನಾಗಿ
ಬಂದಾಗ ತಮಗಾದ ಗಲಿಬಿಲಿಯನ್ನು ಹತ್ತಿಕ್ಕಿ
ಚಾರುಕೀರ್ತಿಯಂತೆ ಭಕ್ತಿಯಿಂದ ಮಾತನಾಡಿಸಿದ್ದನ್ನು
ಮೂರ್ತಿ ಅವರು ಹೇಳಿದಾಗ ಇಬ್ಬರೂ ತುಂಬಾ
ನಂತರ ಅನಂತಮೂರ್ತಿಯವರು ಎದ್ದು ಹೊರಟಾಗ
ಸಿಕಿದ ಲಂಕೇಶ್, "ತುಂಬಾ ಥ್ಯಾಂಕ್ಸ್, ನಮ್ಮಲ್ಲಿ
ನಿಮ್ಮ ವ್ಯಾಕರಣ ವಾಕ್ಯರಚನೆ ಎಲ್ಲ ಸರಿಯಾಗುತ್ತೆ"
ನಕ್ಕರು. ಅನಂತಮೂರ್ತಿಯೂ ನಕ್ಕರು.

ವರು ಹೋದನಂತರ ಲಂಕೇಶ್ "ನಾಣ್ಯಾಕೆ ನಿಮ್ಮ
ಹೆಸರೇ ಪರಿಚಯಿಸಿದೆ ಗೊತ್ತೇನ್ರಯ್ಯಾ?
ಮೂರ್ತಿ ಜೊತೆ ಇಬ್ರು ಬ್ರಾಹ್ಮಣ ಹುಡುಗ್ರು
ೆ, ಅದ್ಕೆ" ಎಂದರು. ಆಮೇಲೆ "ತುಂಬಾ
ಅದು, ನಾವು ಹರ್ಟ್ ಮಾಡ್ಬಾರ್ದು.
ತನ್ನ ಯೂನಿವರ್ಸಿಟಿ ವಿ.ಸಿ. ಆಗಿದ್ದಾಗ
ಪ್ರಿನ್ಸಿಪಾಲರಾಗಿದ್ದ ಅಂದ್ರೆ, ಹುಡುಗರಿಗೆಲ್ಲಾ
ವಾದ ಪ್ರತಿಭಾಗಿದ್ದ" ಎಂದಿದ್ದರು.

ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ
ಪರ್ಯಾಯವಾಗಿ ಬೆಂಗಳೂರಿನಲ್ಲಿ ಜಾಗೃತ
ಸಾಹಿತ್ಯ ಸಮಾವೇಶ ನಡೆದಿತ್ತು. ಆ ಸಮಾವೇಶದಲ್ಲಿ ಅನಂತಮೂರ್ತಿ ಅದ್ಭುತವಾಗಿ ಭಾಷಣ ಮಾಡಿದ್ದರು. ಅಂದು ಉದ್ಭವಗೊಂಡ 'ಸಾಹಿತ್ಯದಲ್ಲಿ ಶ್ರೇಷ್ಠತೆ' ವ್ಯಾಪಕ ಚರ್ಚೆಯುಂಟುಮಾಡಿ ಅಂತ್ಯ ಕಾಣದೆ ಹೋದದ್ದು ಈಗ ಇತಿಹಾಸ. ಆದರೆ ಜಗದ್ಗುರುಗಳು, ರಾಜಕಾರಣಿಗಳಿಂದ ಮುಕ್ತವಾಗಿ ನಡೆದ ಆ ಸಾಹಿತ್ಯ ಸಮ್ಮೇಳನ ಮತ್ತೆ ಎಂದೂ ನಡೆಯಲಿಲ್ಲ. ಸ್ವಾಭಿಮಾನಿ ಸಾಹಿತಿಗಳೆಲ್ಲಾ ಕೈಯಿಂದ ದುಡ್ಡು ಹಾಕಿದರೆ ಮುಂದೂ ನಡೆಸಬಹುದು. ಅಂದಿನ ಎಲ್ಲಾ ಗೋಷ್ಠಿಗಳಿಗೂ ಎದ್ದು ಬಂದು ಪ್ರತಿಕ್ರಿಯಿಸುತ್ತಿದ್ದ ಅನಂತಮೂರ್ತಿ ಸ್ಟಾರ್ ಆಗಿದ್ದರು.

ಲಂಕೇಶ್‌ಗೆ ಅರವತ್ತು ವರ್ಷ ತುಂಬಿದಾಗ ಮೈಸೂರಿನಲ್ಲಿ ಕೆ. ರಾಮದಾಸ್ ಅವರು ಲಂಕೇಶ್, ತೇಜಸ್ವಿ ಮತ್ತು ಅನಂತಮೂರ್ತಿಯವರ ಸಾಹಿತ್ಯದ ಬಗ್ಗೆ ಎರಡು ದಿನಗಳ ವಿಚಾರಗೋಷ್ಠಿ ಏರ್ಪಡಿಸಿದ್ದರು. ಸಮಾರೋಪದಲ್ಲಿ ಭಾಷಣ ಮಾಡಿದ ಅನಂತಮೂರ್ತಿಯವರು ಲಂಕೇಶರ ಸಾಹಿತ್ಯದ ಬಗ್ಗೆ ಪ್ರಸ್ತಾಪಿಸದೆ ಸಾಧಾರಣವಾಗಿ ಮಾತನಾಡಿದರು. ಕಡೆಗೆ ಲಂಕೇಶ್ ತಮ್ಮ ಭಾಷಣದಲ್ಲಿ ಕಟುವಾಗಿ ಟೀಕಿಸಿದರು. ಇದರಿಂದ ನೊಂದ ಅನಂತಮೂರ್ತಿಯವರು ಡಲ್ಲಾಗಿ ಕುಳಿತು ಎದ್ದು ಹೋದರು.

ಅಷ್ಟರಲ್ಲಾಗಲೇ ಜ್ಞಾನಪೀಠ ಪ್ರಶಸ್ತಿ ಬಂದು ಅನಂತಮೂರ್ತಿಯವರಿಗೆ ವಿಪರೀತ ಸನ್ಮಾನಗಳಾಗಿದ್ದವು. ಇದನ್ನೆಲ್ಲ ಕಂಡ ಲಂಕೇಶ್ ಮತ್ತು ತೇಜಸ್ವಿ "ಏನ್ರಿ ಇದು ಹೇಸಿಗೆ, ತುಂಬಾ ಅತಿಯಾಯ್ತು ಕಂಡ್ರಿ" ಎಂದಿದ್ದರು. ಮೈಸೂರಿನ ಸಭೆಯಲ್ಲಿ ಲಂಕೇಶರು ನೇರಾನೇರ ಟೀಕಿಸಿದ್ದರಿಂದ ತೇಜಸ್ವಿಯೂ ದಂಗು ಬಡಿದುಹೋದರು. ಎಲ್ಲಾ ಮುಗಿದನಂತರ, ರಾಮದಾಸರನ್ನ ಕುರಿತು "ಏನ್ರಿ ಅನಂತಮೂರ್ತಿಗೆ ಇಂತ ಅಪಮಾನ ಮಾಡಿಸಿದರಲ್ರಿ. ನಮ್ಮ ಮೀಟಿಂಗ್‌ಗೆ ನೀವೆ ಇದನ್ನೆಲ್ಲ ಅರೇಂಜ್ ಮಾಡಿದಂಗಿದೆಯಲ್ರೀ" ಎಂದರು ತೇಜಸ್ವಿ. ಅದನ್ನು ಕೇಳಿ ಸಿಟ್ಟುಗೊಂಡ ರಾಮದಾಸ್ "ಹೋಗ್ರೀರಿ. ಏ ಇಷ್ಟೈದು ವರ್ಷದ ಫ್ರೆಂಡ್‌ಷಿಪ್‌ಲಿ ಇಷ್ಟೇ ಏನ್ರಿ, ನನ್ನ ಅರ್ಥಮಾಡಿಕೊಂಡಿದ್ದು ನೀವು" ಎಂದು ಭುಜದಲ್ಲಿ ತಿವಿದು ಮುಂದೆ ಹೋದರು. ಅಂತೂ ಎರಡು ದಿನ ಸಂಭ್ರಮದಲ್ಲಿ ನಡೆದ ಸಾಹಿತ್ಯಗೋಷ್ಠಿ ಲಂಕೇಶರ ಕಟುಟೀಕೆಯಿಂದ ಅನಂತಮೂರ್ತಿ ಅಭಿಮಾನಿಗಳಿಗೆ ನೋವುಂಟು ಮಾಡಿತ್ತು.

ಇದೆಲ್ಲದರಿಂದ ಅನಂತಮೂರ್ತಿಯವರೂ ಸಿಟ್ಟಾಗಿದ್ದರು. ಆಗ ಅವರೇನು ಮಾಡಿದರೆಂದರೆ, ಆ ಸಾಹಿತ್ಯ ಗೋಷ್ಠಿಯ ವಿಚಾರಗಳು ಪುಸ್ತಕವಾಗಿ ಬಿಡುಗಡೆಯಾಗುವ ಸಮಯಕ್ಕೆ 'ನನ್ನ ಪರವಾನಗಿ ಇಲ್ಲದೆ ನನ್ನ ಭಾಷಣ ಪ್ರಕಟವಾಗುವಂತಿಲ್ಲ' ಎಂದು ಸ್ಟೇ ತಂದರು. ಆದರೆ ಲಂಕೇಶ್‌ರ ಶಿಷ್ಯರು ಪುಸ್ತಕ ಪ್ರಕಟವಾದ ನಂತರವೇ ಸ್ಟೇ ತಲುಪುವಂತೆ ವ್ಯವಸ್ಥೆ ಮಾಡಿದ್ದರು. ಆಮೇಲೆ ಅನಂತಮೂರ್ತಿಯವರೇ 'ಆ ಸ್ಟೇ ಅನವಶ್ಯಕವಾಗಿತ್ತು, ಅದನ್ನ ವಾಪಸ್ ತೆಗೆದುಕೊಳ್ಳುತ್ತೇನೆ' ಎಂದರು.

ಅನಂತಮೂರ್ತಿಯವರದ್ದು ಆ ಕ್ಷಣದ ಸಿಟ್ಟು ಮಾತ್ರ. ಆನಂತರ ಅವರು ಎಷ್ಟು ಸಮಾಧಾನವಾಗಿ ಮಾತನಾಡಬಲ್ಲವರೆಂದರೆ, ಕೆಲವೇ ಕ್ಷಣದ ಹಿಂದೆ ರೇಗಿದವರು ಇವರೇನಾ ಎಂಬಷ್ಟು ಅನುಮಾನ ಬರುತ್ತಿತ್ತು.

ಕನ್ನಡ ಸಂಸ್ಕೃತಿ ಮತ್ತು ರಾಜಕಾರಣಕ್ಕೆ ಸಂಬಂಧಿಸಿದಂತೆ ಅವರ ಹೇಳಿಕೆಗಳೆಲ್ಲಾ ವಿವಾದಕ್ಕೆ ತುತ್ತಾಗಿ; ಹಲವರ ಅರಿವಿನ ಕ್ಷಿತಿಜವನ್ನು ಹಿಗ್ಗಿಸಿದರೆ, ಕೆಲವರು ಕಟು ಟೀಕೆಯ ದಾಳಿ ನಡೆಸುತ್ತಿದ್ದರು. ಈ ಪೈಕಿ ಸದಾನಂದಗೌಡ ಎಂಬ ಅನಾಗರಿಕ ರಾಜಕಾರಣಿ ಅನಂತಮೂರ್ತಿಯವರನ್ನು 'ಹುಚ್ಚುನಾಯಿ' ಎಂದು ಕರೆದಾಗ ಕನ್ನಡದ ಸಾಂಸ್ಕೃತಿಕ ಲೋಕ ಬೆಚ್ಚಿ ಬಿದ್ದಿತ್ತು.

ಮೊನ್ನೆ ಅನಂತಮೂರ್ತಿಯವರು ನಿಧನರಾದಾಗ ಸಂಭ್ರಮಾಚರಣೆ ಕಂಡ ಪ್ರದೇಶ ಕೂಡ, ಸದಾನಂದಗೌಡರು ಪ್ರತಿನಿಧಿಸುವ ರಾಜಕಾರಣದ ಪ್ರದೇಶ ಎಂಬುದು ಮುಖ್ಯ. ಅನಂತಮೂರ್ತಿಯವರು ತುರ್ತುಪರಿಸ್ಥಿತಿಯಲ್ಲಿ, ಇಂದಿರಾ ಗಾಂಧಿಯನ್ನು ವಿರೋಧಿಸಿ ಚಿಕ್ಕಮಗಳೂರು ಮತ್ತು ಶಿವಮೊಗ್ಗದಲ್ಲಿ ಭಾಷಣ ಮಾಡಿದಾಗ ಇದೇ ಬಿಜೆಪಿ ಜನರೆ ಹರ್ಷೋದ್ಗಾರಬಂದ ಚಪ್ಪಾಳೆ ಹೊಡೆದಿದ್ದರು. ಈಗ ಇದೇ ಜನ ಅನಂತಮೂರ್ತಿಯವರ ನಿರ್ಗಮನವನ್ನು ಅತ್ಯಂತ ಹೀನಾಯವಾಗಿ ಆಚರಿಸಿದ್ದಾರೆ.

ಸಾಮಾನ್ಯವಾಗಿ ಈ ಜನ ಹೆದರುವುದು ತಮಗಿಂತ ಬಲಾಢ್ಯ ಶಕ್ತಿಗೇ ಹೊರತು ಮಾತುಕತೆಗಲ್ಲ, ಆದ್ದರಿಂದ ಈ ಸಂಸ್ಕೃತಿಹೀನರನ್ನ ಹತ್ತಿಕ್ಕುವ ಸಂಘಟನೆ ಅನಂತಮೂರ್ತಿಯವರ ಸಾವಿನ ನಂತರವಾದರೂ ರೂಪುಗೊಳ್ಳಬೇಕಿದೆ.

ಕಡೆಯದಾಗಿ: ಈಚೆಗೆ ನಮ್ಮೆಲ್ಲರ ಹೀರೊ ಆಗಿ ಕಾಣಿಸಿಕೊಂಡಿದ್ದ ಅನಂತಮೂರ್ತಿಯವರ ನಿಧನಾನಂತರ ಅವರ ಪಾರ್ಥೀವ ಶರೀರ ಕಡೆಗೂ ಪುರೋಹಿತರ ಪಾಲಾಗಿದ್ದು ದುರದೃಷ್ಟಕರ. ಅದನ್ನು ಕಂಡು ನಾಡಿನ ಪ್ರಜ್ಞಾವಂತರು 'ಏನು ಮಾಡಿ ಏನು ಬಂತು' ಎಂಬ ಉದ್ಗಾರ ತೆಗೆದಿದ್ದಾರೆ. ಈ ತರದ ಸಂಸ್ಕಾರ ಅನಂತಮೂರ್ತಿಯವರಿಗೆ ಇಷ್ಟವಿತ್ತು ಎಂದು ಅವರ ಒಡಹುಟ್ಟಿದವರೇ ಹೇಳಿದ್ದಾರೆ. ಅಂತೂ ಅನಂತಮೂರ್ತಿಯವರು ಬ್ರಾಹ್ಮಣ ಸಂಸ್ಕಾರದ ಸಮಸ್ಯೆಯಿಂದಲೇ ಜಗದ್ವಿಖ್ಯಾತರಾದರೂ, ಕಡೆಗೆ ಅವರನ್ನು ಈ ಬ್ರಾಹ್ಮಣರು ಬಿಡಲಿಲ್ಲ ಎಂಬ ಚರ್ಚೆ ನಡೆಯುತ್ತಿದೆ. ಇದಕ್ಕೆ ನಾವು ಅನಂತಮೂರ್ತಿಯವರನ್ನು ಹೊಣೆಗಾರರನ್ನಾಗಿ ಮಾಡುವಂತಿಲ್ಲ. ಇದೆಲ್ಲಾ ಪಾರ್ಥೀವ ಶರೀರದ ವಾರಸುದಾರರ ವಿವೇಚನೆಗೆ ಬಿಟ್ಟ ವಿಚಾರ.

ಲಂಕೇಶರು ತೀರಿಕೊಂಡಾಗ ಅವರ ತೋಟದಲ್ಲಿ ಸಂಸ್ಕಾರ ಮಾಡಲು ತೀರ್ಮಾನಿಸಲಾಯ್ತು. ಆಗ ಅವರ ಊರ ಕಡೆಯಿಂದ ಬಂದಿದ್ದ ಶರಣರು ತಮ್ಮ ಆಚರಣೆಯ ಹತಾರಗಳನ್ನು ರೆಡಿ ಮಾಡಿಕೊಂಡಿದ್ದರು. ಮೊದಲ ಹಂತವಾಗಿ ಲಂಕೇಶರ ಹಣೆಗೆ ವಿಭೂತಿ ಬಳಿದರು. ಕೂಡಲೇ ಸಿಟ್ಟಾದ ಗೌರಿ "ಆ ವಿಭೂತಿ ಅಳಿಸಿ. ನನ್ನಪ್ಪ ಬದುಕಿದ್ದಾಗ ಒಂದೇ ಒಂದು ದಿನ ವಿಭೂತಿ ಹಚ್ಚಲಿಲ್ಲ. ನಿಮ್ಮ ಯಾವ ಸಂಪ್ರದಾಯವೂ ಇಲ್ಲಿ ಬೇಕಾಗಿಲ್ಲ" ಎಂದು ಲಂಕೇಶರನ್ನು ಸಹಜವಾಗಿ ಮಣ್ಣಿಗೆ ಮಲಗಿಸಿದರು. ಇದು ಇಂದಿಗೂ ನಮಗೆಲ್ಲಾ ಮೆಚ್ಚುಗೆಯಾದ ಕ್ರಮವಾಗಿದೆ. ಹಾಗೆಯೇ ಕುವೆಂಪು, ತೇಜಸ್ವಿ ಮತ್ತು ಜಿ.ಎಚ್.ಶಿವರುದ್ರಪ್ಪನವರ ಸಂಸ್ಕಾರಗಳು ಕೂಡ ನನ್ನ ಆಶಯಗಳಂತೆಯೇ ನಡೆದಿವೆ.




● ಬಿ.ಚಂದ್ರೇಗೌಡ



ಸಗಣಿ ಸ್ವಾಮಿಯ 'ನಕಲಿ ಗೋಪ್ರೇಮ'



ಗಾಯಕಿಯನ್ನು ಮುಕ್ಕಿದ ಸಗಣಿ ಸ್ವಾಮಿ



ಹವ್ಯಕ ಬ್ರಾಹ್ಮಣರಿಗೆ ಪೂಜ್ಯವಾದ ರಾಮಚಂದ್ರಾಪುರ ಮಠಕ್ಕೆ ಅದ್ಯಾವ ಗಳಿಗೆಯಲ್ಲಿ ರಾಘವೇಶ್ವರ ಸ್ವಾಮಿಯಾಗಿ ತಗುಲಿಕೊಂಡನೋ, ಅವತ್ತಿನಿಂದ ಆ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯ, ಅವಮಾನ ಅಷ್ಟಿಷ್ಟಲ್ಲ. ಕಾವಿಯನ್ನು ಧರಿಸಿ, ಗೋವನ್ನು ರಕ್ಷಿಸುತ್ತೇನೆಂದು ಹೊರಟ ಈ ರಾಘವೇಶ್ವರ ಮಾಡಿರುವ ಅನಾಹುತಗಳೆಲ್ಲ ಹವ್ಯಕ ಸಮುದಾಯಕ್ಕೆ ಸಗಣಿ ಬಳಿಯುವಂತಹದ್ದೇ. ಮೊದಲು ಅಕ್ರಮವಾಗಿ ಖ್ಯಾತ ಗೋಕರ್ಣದ ದೇವಸ್ಥಾನವನ್ನೇ ನುಂಗಿಹಾಕಿದ. ಆಮೇಲೆ ಅಲ್ಲಿಗೆ ತನ್ನ ರೌಡಿ ಪಡೆಯನ್ನು ಕಳುಹಿಸಿ ಹುಂಡಿಗಳನ್ನು ದೋಚಿದ. ಅದರ ಹತ್ತಿರದಲ್ಲೇ ಹನುಮಂತನ ದೇವಸ್ಥಾನವನ್ನು ನಿರ್ಮಿಸುತ್ತೇನೆಂದ ರಾಘವೇಶ ಆ ಪೂಜ್ಯ ಕಾರ್ಯಕ್ರಮಕ್ಕೆ ಬಾಲಿವುಡ್ಡಿನ ಬಿಚ್ಚಮ್ಮ ಮಲ್ಲಿಕಾ ಶೆರಾವತ್‌ಳನ್ನು ಕರೆದು ತನ್ನ ಮಠದ ಮಂದಿಯೇ ತಲೆ ತಗ್ಗಿಸುವಂತೆ ಮಾಡಿದ.

ಈ ಸ್ವಾಮಿಯ ಆಪ್ತನೊಬ್ಬ ಮಠದಲ್ಲಿ ಓದುತ್ತಿದ್ದ ಬಡ ಹವ್ಯಕ ಬ್ರಾಹ್ಮಣ ಹುಡುಗಿಗೆ ಲೈಂಗಿಕ ಕಿರುಕುಳ ಕೊಟ್ಟಾಗ ಈತ ಆ ಅಮಾಯಕ ಹುಡುಗಿಗೆ ನ್ಯಾಯ ಕೊಡಿಸಲಿಲ್ಲ, ಬದಲಾಗಿ ತನ್ನ ಆಪ್ತನನ್ನು ರಕ್ಷಿಸಿದ. ಈಗ ಸ್ವತಃ ತಾನೇ ಸೆಕ್ಸ್ ಆರೋಪವೊಂದರಲ್ಲಿ ಸಿಕ್ಕಿಬಿದ್ದಿದ್ದಾನೆ.

ಆಕೆಯ ಹೆಸರು ಪ್ರೇಮಲತಾ. ಸುಮಾರು 45 ವರ್ಷ ವಯಸ್ಸಿನ ಪ್ರೇಮಲತಾ ಅವರು ಸಭ್ಯ ಬ್ರಾಹ್ಮಣ ಕುಟುಂಬದ ಮಹಿಳೆ. ಅವರ ಪತಿಯ ಹೆಸರು ದಿವಾಕರ್ ಶಾಸ್ತ್ರಿ. ಈ ದಂಪತಿಗಳಿಗೆ ಬೆಳೆದು ನಿಂತಿರುವ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಗಂಡ ಮತ್ತು ಹೆಂಡತಿ ಬಹಳ ಹಿಂದಿನಿಂದ ರಾಮಚಂದ್ರಾಪುರ ಮಠಕ್ಕೆ ನಡೆದುಕೊಂಡು ಬಂದಿದ್ದಾರೆ. ಅದರಲ್ಲೂ ಈ ಕಪಟ ರಾಘವೇಶನನ್ನು ಮಠದ ಸ್ವಾಮಿಯಾಗಿ ಆಯ್ಕೆ ಮಾಡಿದ ಹವ್ಯಕ ಸಮುದಾಯದ 52 ಜನ ಹಿರಿಯರಲ್ಲಿ ಈ ದಿವಾಕರ ಶಾಸ್ತ್ರಿಯವರ ತಂದೆಯೂ ಒಬ್ಬರಾಗಿದ್ದರು.

ಬೆಂಗಳೂರಿನ ನಿವಾಸಿಗಳಾದ ದಿವಾಕರ್ ಮತ್ತು ಪ್ರೇಮಲತಾ ಮಠದೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದರು. ಪ್ರೇಮಲತಾ ಅವರು ಮಠದ ಕಾರ್ಯಕ್ರಮಗಳಲ್ಲಿ ಸಂಗೀತ ಹಾಡುತ್ತಿದ್ದರು. ಅದ್ಯಾವಾಗ ರಾಘವೇಶನ ವಿಕೃತ ಕಣ್ಣು ಪ್ರೇಮಲತಾ ಅವರ ಮೇಲೆ ಬಿತ್ತೋ ಆ ರಾಮನೇ ಬಲ್ಲ. "ನಾವಿಬ್ಬರು ಕೂಡುವುದು ರಾಮನ ಇಚ್ಛೆ" ಎಂದೆಲ್ಲ ಅವರನ್ನು ನಂಬಿಸಿದ. ಅವರು ಪ್ರತಿಭಟಿಸಿದಾಗ "ಬೇಡ ಅಂದರೆ ಗುರು ಶಾಪ ನಿನಗೆ ಅಂಟುತ್ತದೆ" ಎಂದೆಲ್ಲ ಬೆದರಿಸಿದ. ಹಾಗೆ ಭಯದಲ್ಲಿ ಇಟ್ಟೇ ಆಕೆಯ ಮೇಲೆ ಎರಡು ವರ್ಷಗಳ ಕಾಲ ಅತ್ಯಾಚಾರವೆಸಗಿದ. ಒಂದೆಡೆ ಭಕ್ತಿ ಇನ್ನೊಂದೆಡೆ ಕುರುಡು ಧನ್ಯತೆ, ಮತ್ತೊಂದು ಕಡೆ ಪ್ರಾಣಕ್ಕೆ-ಮಾನಕ್ಕೆ ಭಯ... ಇವೆಲ್ಲದರ ನಡುವೆ ಸಿಕ್ಕಿಕೊಂಡ ಪ್ರೇಮಲತಾ ಅವರು ಅಪಾರ ಪ್ರಮಾಣದಲ್ಲಿ ಮಾನಸಿಕ ಮತ್ತು ದೈಹಿಕ ಯಾತನೆ ಅನುಭವಿಸಿದರು. ಅದರಿಂದ ಬಿಡುಗಡೆ ಪಡೆಯಲು ವೈದ್ಯರನ್ನು, ಮಾನಸಿಕ ತಜ್ಞರನ್ನೂ ಎಡತಾಕಿದರು. ಅದ್ಯಾವುದರಿಂದಲೂ ಪ್ರಯೋಜನವಾಗಲಿಲ್ಲ. ಕೊನೆಗೆ ಈ ದುಷ್ಟನ ಕಪಿಮುಷ್ಟಿಯಿಂದ ಬಿಡುಗಡೆ ಪಡೆಯಲು ಇರುವ ಒಂದೇ ಮಾರ್ಗವೆಂದರೆ ಆತನ ವಿರುದ್ಧ ಪೊಲೀಸರಿಗೆ ದೂರು ಕೊಡುವುದು ಎಂದು ನಿರ್ಧರಿಸಿದರು.

ಇದರ ಸುಳಿವು ಅದು ಹೇಗೋ ರಾಘವೇಶನ ಗ್ಯಾಂಗಿಗೆ ಗೊತ್ತಾಯಿತು. ಆಗ ಅವರಿಗೆ ಹೊಳೆದದ್ದು ಈ ದಂಪತಿಗಳ ವಿರುದ್ಧವೇ ಸುಳ್ಳು ದೂರನ್ನು ದಾಖಲಿಸುವುದು. ಅದಕ್ಕೆ ಮುಂದಾದವನು ಬಿ.ಆರ್.ಚಂದ್ರಶೇಖರ್ ಎಂಬ ವಂಚಕ. ಈ ಚಂದ್ರಶೇಖರನ ಹಿಂದೆ ಒಂದು ದೊಡ್ಡ ಇತಿಹಾಸವೇ ಇದೆ. ಇವನ ತಂದೆ ಆರ್.ಬಿ. ಹೆಗಡೆ ಎಂಬಾತ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ತಿರುಪತಿ ನಾಮ ಬಳಿದು ಆ ಸಂಘದ ದುಡ್ಡನ್ನೆಲ್ಲಾ ನುಂಗಿದ್ದ. ಈಗಲೂ ಈ ಹೆಗಡೆ ವಿರುದ್ಧ ಹೊನ್ನಾವರದಲ್ಲಿ ಹತ್ತಾರು 420 ಕೇಸುಗಳಿವೆ. ತಾನು ವಂಚಿಸಿದ ಜನರಿಗೆ ಇಲ್ಲಿಯತನಕ ಹೆಗಡೆ ಐದು ಪೈಸೆ ಕೊಟ್ಟಿಲ್ಲ. ಇಂತಹ 'ಧೀಮಂತ'ನ ಪುತ್ರ ಚಂದ್ರಶೇಖರನಿಗೆ ತನ್ನ ಮಠದಲ್ಲಿ ರಾಘವೇಶ ಗುರುತರ ಜವಾಬ್ದಾರಿಯನ್ನು ಹೊರಿಸಿದ್ದಾನೆಂದರೆ ಏನರ್ಥ?

ಈಗ ಈ ಚಂದ್ರಶೇಖರ ಹೊನ್ನಾವರದಲ್ಲಿ ದಿವಾಕರ ಶಾಸ್ತ್ರಿ ಮತ್ತು ಪ್ರೇಮಲತಾ ಅವರು "ಆರು ತಿಂಗಳಲ್ಲಿ ನನಗೆ ಮೂರು ಕೋಟಿ ರೂಪಾಯಿಗಳನ್ನು ಕೊಡು. ಇಲ್ಲವೆಂದರೆ ರಾಘವೇಶ ಸ್ವಾಮಿಗಳ ವಿರುದ್ಧ ಲೈಂಗಿಕ ಕಿರುಕುಳ ದೂರನ್ನು ದಾಖಲಿಸುತ್ತೇವೆ ಎಂದು ನನ್ನನ್ನು ಬೆದರಿಸಿದರು" ಎಂದು ದೂರು ದಾಖಲಿಸಿದ್ದಾನೆ. ಅದರ ಪ್ರತಿಫಲವಾಗಿ ಈಗ ದಿವಾಕರ ಮತ್ತು ಪ್ರೇಮಲತಾರನ್ನು ಪೊಲೀಸರು ಬಂಧಿಸಿ, ಹೊನ್ನಾವರದ ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದಾರೆ.

ಅದೇ ಹೊತ್ತಿಗೆ ಬೆಂಗಳೂರಿನ ಬನಶಂಕರಿ ಪೊಲೀಸ್ ಠಾಣೆಯಲ್ಲಿ ಪ್ರೇಮಲತಾ ಅವರ ಪುತ್ರಿ ರಾಘವೇಶನ ವಿರುದ್ಧ ಒಂದು ದೂರನ್ನು ದಾಖಲಿಸಿದ್ದಾಳೆ. ಅದರಲ್ಲಿ ರಾಘವೇಶ ತನ್ನ ತಾಯಿಗೆ ಮತ್ತಿನ ಪ್ರಸಾದವನ್ನು ನೀಡಿ ಆಕೆಯನ್ನು ತನ್ನ ಕಾಮ ತೃಷೆಗೆ ಉಪಯೋಗಿಸಿಕೊಂಡಿದ್ದಾನೆ ಎಂದು ಆರೋಪಿಸಿದ್ದಾಳೆ. ಈಗ ರಾಘವೇಶನ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಪ್ರಸ್ತುತ ಕಾನೂನುಗಳ ಪ್ರಕಾರ ಪೊಲೀಸರು ನಡೆದುಕೊಂಡರೆ ರಾಘವೇಶ ಕಂಬಿ ಎಣಿಸುವ ಸಮಯ ದೂರವಿಲ್ಲ.

ಗೋವುಗಳನ್ನು ರಕ್ಷಿಸುತ್ತೇನೆಂದು ಪೋಸು ಕೊಟ್ಟ ಈ ರಾಘವೇಶ ತನ್ನ ಮಠದ ಗಾಯಕಿಯನ್ನೇ ಮುಕ್ಕಿದ, ಆರೆಸ್ಸೆಸ್ ಜೊತೆ ಸೇರಿ ರಾಮರಾಮ ಎನ್ನುತ್ತಾ ಶಿವನ ದೇವಸ್ಥಾನವನ್ನೇ ಆಪೋಶನ ಮಾಡಿದ, ತನ್ನನ್ನು ವಿರೋಧಿಸಿದವರ ವಿರುದ್ಧ ಗೂಂಡಾಗಳನ್ನು ಬಿಟ್ಟು ಥಳಿಸಿ... ಈಗ ಆತನೇ ಪೊಲೀಸರಿಂದ 'ಧರ್ಮದೇಟು' ತಿನ್ನು... ಹಂತ ತಲುಪಿದ್ದಾನೆ.

ಹವ್ಯಕ ಬ್ರಾಹ್ಮಣರು ಮೂಲತಃ ಕೃಷಿಕರು... ಸ್ವಾಭಿಮಾನಿಗಳು. ಬೇರೆಯವರ ತಂಟೆಗೆ ಹೋಗದೆ ತ... ಪಾಡಿಗೆ ತಾವಿರುವ ಜನ. ಇಂತಹ ಸಭ್ಯ ಸಮುದಾಯ... ಶ್ರೀ ಎನ್ನಿಸಿಕೊಳ್ಳುವ ರಾಘವೇಶ ಆ ಸಮುದಾಯ... ಅವಮಾನ ಮತ್ತು ಅನ್ಯಾಯ ಆಗುವಂತೆಯೆ... ನಡೆದುಕೊಳ್ಳುತ್ತಾ ಬರುತ್ತಿದ್ದಾನೆ. ಆದಷ್ಟು ಬೇಗ ಹ... ಬ್ರಾಹ್ಮಣರು ಈತನನ್ನು ಮಠದಿಂದ ಒದ್ದೋಡಿಸಿ ತ... ಸಮುದಾಯವನ್ನು ರಕ್ಷಿಸಿಕೊಳ್ಳಬೇಕಿದೆ.

■ ವರದಿಗಾ...

ಅನಂತಮೂರ್ತಿ ಮತ್ತು ಸುರಗಿ



1

ಸುರಗಿ
ಹೂವು ಬಿಟ್ಟಾಗ ಜೇನು ಹುಳುಗಳ ನಾದ
ಕಾಡಿನ ತುಂಬ ಹೊಸ ಚೇತನ ಸಂಚಾರ
ಹೂವಿನ ಶಲಾಕೆಗಳು ಸೂರ್ಯನ ಕಿರಣಕ್ಕೂ
ದುಂಬಿಯ ಹೃದಯಕ್ಕೂ
ನೇವರಿಸುತ್ತಿದೆ ಬೆಳಕಿನ ಗೆರೆ

ಕಾಡಿನ ಮೈಯೆಲ್ಲ ಗಂಧಲೇಪಿತ
ಸುಗಂಧವೇ, ಬಾಲ್ಯದಿಂದಲೂ
ಸಣ್ಣ ಮೋಹಗೊಳಿಸಿದ್ದು ತಾತನ ಪ್ರೀತಿ
ಇದ್ದಕ್ಕಿದ್ದಂತೆ ಗದರುವುದು ಆತನ ರೀತಿ

ಪಡೆದದ್ದೆಲ್ಲ ನಿಸ್ಸೆಯದು
ನಾಳೆಗೂ ಉಳಿಬೇಕು
ನಾವು ತಿನ್ನುವ ಹಣ್ಣು ಪೂರ್ವಿಕರ ಶ್ರಮ, ಬೆವರು
ವಾಸನೆಯಲ್ಲೇ ಅರಳಬೇಕು ಹೃದಯ
ಸುರಗಿಗೆ ಸಡೆವ ದುಂಬಿಯಂತೆ

ದಾರಿಯುದ್ದಕ್ಕೂ ಮುಳ್ಳುಬೇಲಿಯ ತಬ್ಬಿ
ಬೆಳೆದು ಅರಳಿದ ಹೂವು
ಹೂ ಹೂವಿನ ಸಾನಿಧ್ಯಕ್ಕೆ ಹಾರುವ ಸೂರ್ಯನ ಕುದುರೆ
ಮುಳ್ಳಬೇಲಿಯೂ ತಲೆದೂಗುವುದು ಅದರ ಮೋಡಿಗೆ.

ಇಲ್ಲಿ ಬೆಳೆದ ಹೂವು
ಮತ್ತೆಲ್ಲೋ ಹೆಣ್ಣು ಮುಡಿದು ಮಿಡಿದು
ನಾಚಿ ನಕ್ಕಳು

ಎಲ್ಲೋ ಬಿದ್ದ ಮಳೆ
ಮತ್ತೆಲ್ಲೋ ಹರಿದು
ಮುಗಿಲಿಗೆ ಕೈಹೊತ್ತು ಸೋತ ಮೊಗದಿ ನಗು ತಂತು

ಹತ್ತು ದಿಕ್ಕಿಗೆ ಹಾರಿದ ದುಂಬಿ
ಹೂ ಹೂವನು ಮುತ್ತಿಕ್ಕಿ
ಮನೆಯಂಗಳ ಮರದಲಿ ಜೇನುಗೂಡು ಕಟ್ಟಿತ್ತು

ಸಮಾನತೆಗಾಗಿ ಹರಿವ ತೊರೆ
ಎಷ್ಟೊಂದು ಜೀವಗಳಿಗೆ ಜೀವ
ಜೀವವೆಂದಾಕ್ಷಣ ನೆನಪಾಗುವುದು
ಒಂದೇ ಎರಡೇ ಹಲವಾರು
ಅಯ್ಯೋ ಅಷ್ಟೆಲ್ಲ ಬೇಡ
ಸಾಕು ಒಂದೇ ಒಂದು ಸುರಗಿ ಹೂವು
ಸುರಲೋಕದ ಸಖಿಗಾಗಿ
ನಾನಿನ್ನು ಬರಲ್ಬೇ

2

ತಾತ ಎದ್ದು ನಡೆದಿರಿ ನೀವು
ನನಗಿದ್ದ ಹಿರಿತನದ ಸಾರವೇ ಸೋರಿಹೋದಂತೆ
ಬಿದ್ದುಹೋದ ಮರದ ಬೀಜಗಳು
ಮತ್ತೆಲ್ಲೋ ಮೊಳಕೆಯೊಡೆಯಬಹುದು

ಈಗ ಖಾಲಿ ಗದ್ದಲದಲಿ ಮಲಿನಗೊಂಡ ಭಯ
ಭ್ರಷ್ಟಗೊಂಡ ಮನಸ್ಸು
ಗಾಂಧಿಯನ್ನು ಕೊಂದ ಕೈ
ಬೀದಿಯಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸುತ್ತಿವೆ

ಅದ ಕಂಡು
ಅದೋ ಅದೇ ಬೀದಿಯಲಿ
ಹುಚ್ಚ ಮರಗುತ್ತಿದ್ದಾನೆ
ಇದು ಎಂತಹ ಹುಚ್ಚು ತಾತ?!




■ ಡಾ. ನಾಗಣ್ಣ ಕಿಲಾರಿ,
ರಾಯಚೂರು

ಹೆಂಗರುಳಿನ ಅನಂತಮೂರ್ತಿ

...ನು ಆರನೆ ಅಥವಾ ಏಳನೆ ತರಗತಿಯಲ್ಲಿದ್ದಾಗ ಅನಂತಮೂರ್ತಿಯವರಿಗೆ ...ಠ ಪ್ರಶಸ್ತಿ ಬಂತು. ನನಗೆ ಮತ್ತು ನನ್ನ ಗೆಳೆಯರಿಗೆ ಆಗ ಮೊದಲ ...ಜ್ಞಾನಪೀಠ ಪ್ರಶಸ್ತಿ ಅಂತ ಒಂದಿದೆ; ಅದರಲ್ಲೂ ಕನ್ನಡಕ್ಕೆ ಗರಿಷ್ಠ ಬಾರಿ ...ಠ ಸಿಕ್ಕಿದೆ ಅಂತ ಗೊತ್ತಾದದ್ದು. ಆಗ ನಾವೆಲ್ಲ ಒಂದು ವಿಶಿಷ್ಟ ...ಗೆ ಒಳಪಟ್ಟಿದ್ದೇವೆ ಅಂತ ಹೆಮ್ಮೆ ಆಗಿತ್ತು.

...ಮ್ಮದೆ ಕ್ಲಾಸಿನಲ್ಲಿದ್ದ ಸಂದೀಪ್ ಶೆಟ್ಟಿ (ಆಗ ನಮ್ಮ ಪಠ್ಯದಲ್ಲಿ ಹಾ.ಮಾ. ...ಕರು ಬರೆದ ಲೇಖನವನ್ನು ಪಾಠವಾಗಿಸಿದ್ದರು) ಎಂಬಾತ ಹಾ.ಮಾ. ...ಕರಿಗೆ ಒಂದು ಪತ್ರ ಬರೆದ. ಒಂದು ವಾರದ ... ಹಾ.ಮಾ.ನಾಯಕರಿಂದ ಆ ಪತ್ರಕ್ಕೆ ಉತ್ತರ ... ಎಲ್ಲರೂ ಖುಷಿ ಪಟ್ಟರು. ಇತರರಿಗೆ ಆಗ ...ಪನ ಮೇಲೆ ಅಭಿಮಾನ ಮತ್ತು ಹೊಟ್ಟೆಯುರಿ. ... 'ತರಂಗ'ದಲ್ಲಿ ಪ್ರಕಟಗೊಂಡಿದ್ದ ...ತಮೂರ್ತಿಯವರ ಸಂದರ್ಶನದ ಕೊನೆಯಲ್ಲಿ ...ಗಿದ್ದ ಅವರ ವಿಳಾಸವನ್ನು ಬರೆದುಕೊಂಡ ನಾನೂ ...ಗೆ ಒಂದು ಪತ್ರ ಬರೆದೆ. ನನ್ನ ಗೆಳೆಯರಿಗೆ ...ಂದು ಪತ್ರ ಬರೆಯುತ್ತಿದ್ದೇನೆ ಅಂತ ಹೇಳಿದಾಗ ...ಲ್ಲರೂ ನಾನು ಸಂದೀಪನ ಮೇಲಿನ ಉರಿಯಿಂದ ...ಮಾಡುತ್ತಿದ್ದೇನೆ ಅಂತ ಸರಿಯಾಗಿ ಗ್ರಹಿಸಿ ನನ್ನನ್ನು ... ಹೀಯಾಳಿಸಿದರು. ಆ ಕಾರಣಕ್ಕೆ ನಾನು ಆ ...ನ್ನು ಪೋಸ್ಟ್ ಮಾಡಲಿಲ್ಲ, ಆಮೇಲೆ ಆ ಪತ್ರ ...ಹೋಯಿತು... ಆದಾದ ಮೇಲೆ ಕ್ವಿಜ್‌ಗಳಲ್ಲಿ ಪ್ರಶ್ನೆ ...ಗ ಅನಂತಮೂರ್ತಿ ನೆನಪಾದರೇ ಹೊರತು ...ರನ್ನು ಮರೆತೇ ಬಿಟ್ಟೆವು... ಎಂಟು ವರ್ಷಗಳ ಹಿಂದಿನ ತನಕ.



...ನಂತಮೂರ್ತಿಯವರ ಸಾವಿಗೆ ಕೆಲವರು ಯಾಕೆ ಪಟಾಕಿ ಸಿಡಿಸಿದರು ...ನನಗೆ ಚೆನ್ನಾಗಿ ಗೊತ್ತು. ನಾವು ಶಾಲೆಯಲ್ಲಿ ಓದುತ್ತಿದ್ದಾಗ (ದ.ಕ ಮತ್ತು ... ಜಿಲ್ಲೆಗಳಲ್ಲಿ) ನಮಗೆ ಗಾಂಧೀಜಿ ಒಬ್ಬ ನಾಮರ್ದರಾಗಿ ಕಂಡಿದ್ದರು. ... ಕಾರಣ ನಮ್ಮ ಸುತ್ತಲಿನ ವಾತಾ'ವರ್ಣ'ನ ಮಾತ್ರವಲ್ಲ, ನಮ್ಮ ಶಿಕ್ಷಕರೂ ...ಗಿದ್ದ ನಮ್ಮಲ್ಲಿ ಇದೇ ಭಾವವನ್ನು ಬಿತ್ತಿದ್ದರು. ದ್ವೇಷ ಎಂಬುದು ...ಾ ಉತ್ತೇಜನ ತುಂಬಿಸುವ ಅಫೀಮು. ಅಂತಹ ಅಫೀಮಿನ ...ಗಳಾದರಂತೂ ಮುಗಿದೇಹೋಯಿತು.

...ಾಡು, ದೇಶ, ಭಾಷೆ, ಧರ್ಮ ಇವೆಲ್ಲ ಪ್ರಶ್ನಾತೀತ. ಇವೆಲ್ಲವು ನಮ್ಮ ...ಗೆ ಸಂಬಂಧಿಸಿರುವಂತಹವು. ಆ ಕಾರಣಕ್ಕೇ ದೇಶಕ್ಕೋಸ್ಕರ, ಧರ್ಮಕ್ಕೋಸ್ಕರ, ...ಳೋಸ್ಕರ ಪ್ರಾಣ ಕೊಡಲು ಮತ್ತು ಪ್ರಾಣ ತೆಗೆಯಲು ಸಿದ್ಧರಿರಬೇಕು. ...ಂದರೆ ನೀವು ಷಂಡರು" ಅನ್ನುವಂತಹ ಹುರಿದುಂಬಿಸುವ ಮಾತುಗಳನ್ನು ...ಾವು ಎಲ್ಲ ಕಡೆ ಕೇಳುತ್ತಿದ್ದೆವು.

...ಗ ನಮಗೆ 'ಷಂಡರು' ಎಂಬ ಪದದ ಅರ್ಥವೇ ಗೊತ್ತಿರದಿದ್ದರೂ ...ಬಾರದು, ಅದು ಅಸಹ್ಯ ಅನ್ನುವುದು ನಮಗೆ ಅನ್ನಿಸುತ್ತಿತ್ತು. ಹೆಣ್ಣು ... ಚರಿತ್ರೆಯನ್ನು ಬಟ್ಟೆಯಲ್ಲಿ ಅಳೆಯುವಂತೆ, ಗಂಡು ಮಕ್ಕಳ ಯೋಗ್ಯತೆಗೆ ...ಷಂಡತನವನ್ನೇ ಮಾಪಕವಾಗಿ ಪರಿಗಣಿಸಲಾಗುತ್ತಿತ್ತು. ಪಾಕಿಸ್ತಾನ ಜನ್ಮವೆತ್ತಿದ್ದಕ್ಕೆ ... ಗಾಂಧೀಜಿಯ ಷಂಡತನ ಎಂದು ನಮ್ಮನ್ನು ನಂಬಿಸಿ ಬಿಟ್ಟಿದ್ದರು.


...ಾಂಧೀಜಿಯನ್ನು ದ್ವೇಷಿಸಲು ನಮಗೆ ಆಗ ಅಷ್ಟು ಕಷ್ಟ ಆಗಲಿಲ್ಲ. ...ಂದರೆ ಬರೀ ಆಕ್ಷನ್ ಸಿನಿಮಾ ನೋಡಿಕೊಂಡು ಸುನೀಲ್ ಶೆಟ್ಟಿ, ...ಯ್ ಕುಮಾರ್ ತರಹದ ಆಕ್ಷನ್ ಸಿನಿಮಾ ನಟರ ಫ್ಯಾನ್ ಆಗಿದ್ದ ನಮಗೆ, ...ಕ್ಕೆ ಹೊಡೆದರೆ ಇನ್ನೊಂದು ಕೆನ್ನೆ ತೋರಿಸಿ ಅಂತ ಹೇಳಿದ ಮನುಷ್ಯ ...ತ್ಮ ಹೇಗಾಗುತ್ತಿದ್ದ? ವಾಪಸ್ ಹೊಡೆಯುವ ಬದಲು ಇನ್ನೊಂದು ... ಶರಣಾಗಿ ಎಂದಿದ್ದ ಮನುಷ್ಯ ಷಂಡನೇ ಇರಬೇಕು ಅಂತ ನಮಗೆ ... ಆಗಿತ್ತು. ಜೊತೆಗೆ ಸುಭಾಶ್ ಚಂದ್ರ ಬೋಸ್ ಮತ್ತು ಭಗತ್ ಸಿಂಗ್ ...ದ ಧೀರರನ್ನೆಲ್ಲ ಗಾಂಧಿನೇ ಸಾಯಿಸಿದ್ದು; ಅದಕ್ಕೆ ನಾಥುರಾಮ್ ಗೋಡ್ಸೆ ... ಮೇಲೆ ಗುಂಡು ಹೊಡೆದು ಆತನನ್ನು ಸಾಯಿಸಬೇಕಾಯಿತು ಎಂದೂ ...ನ್ನು ನಂಬಿಸಲಾಗಿತ್ತು. ಇವತ್ತಿಗೂ ಹಲವರು ಮಕ್ಕಳಿಗೆ ಇಂತಹದ್ದನ್ನೇ ...ಕೊಡುತ್ತಿದ್ದಾರೆ. ಇಂತಹದ್ದನ್ನೆಲ್ಲ ತಮ್ಮ ತಲೆಯಲ್ಲಿ ತುಂಬಿಸಿಕೊಂಡಿರುವ ...ು ದೊಡ್ಡವರಾದ ಮೇಲೆ ಏನಾಗುತ್ತಾರೆ? ನಾನಾಗಲೇ ಹೇಳಿದ ಹಾಗೆ ...ದ ವ್ಯಸನಿಗಳಾಗುತ್ತಾರೆ.

...ದರೆ ನನ್ನನ್ನು ಷಂಡತನದ ಭಯ ಮತ್ತು ಗಂಡಸುತನದ ವಾಂಛೆಯಿಂದ ...ಗೊಳಿಸಿದವರು ಈ ನಾಡಿನ ಪ್ರಗತಿಶೀಲ ಬರಹಗಾರರು. ನಾನೆರಡೂ ...ದವನಾದ್ದರಿಂದ ನನಗೆ ಎರಡೂ ಕಡೆಯವರ ಮನಸ್ಸು ಕಿಂಚಿತ್ತಾದರೂ ...ವಾಗಿರಬಹುದು ಅಂತ ನಂಬಿ ಈ ಮಾತನ್ನು ಹೇಳುತ್ತಿದ್ದೇನೆ.

...ನಂತಮೂರ್ತಿಯವರು ವಿಶಿಷ್ಟವಾಗುವುದೇ ಇಲ್ಲಿ. ಧರ್ಮದ ಟೀಕೆದಾರರು ...ಬಿಸಿರುವ ಗಂಡಸುತನ ಮತ್ತು ಷಂಡತನದ ಅಸಲಿಯತ್ತನ್ನು ಬಯಲಿಗೆಳೆಯಲು ...ತಮೂರ್ತಿಯವರು ಬಳಸಿದ ತತ್ವ 'ಹೆಂಗರುಳಿನದು'. 'ಹುಲಿಯ ...ರುಳು' ಎಂದು ಅವರೇ ಬರೆದ ಒಂದು ಕತೆ ಇದೆ. ಅನಂತಮೂರ್ತಿಯವರ ಕೃತಿಗಳನ್ನು ನಾನು ಓದುತ್ತ ಹೋದಂತೆ ನನ್ನ ಒಳಗೆ ಹೆಂಗರುಳೊಂದು ಮೂಡಲು ಶುರುವಾಯಿತು. ಲಂಕೇಶ್, ತೇಜಸ್ವಿ, ಕಾರಂತರಂತವರು ಕೋಮುವಾದಿಗಳ ಮುಖಕ್ಕೆ ಕ್ಯಾಕರಿಸಿ ಉಗಿದರೆ ಅನಂತಮೂರ್ತಿ ಮತ್ತು ದೇವನೂರು ಮಹಾದೇವ ತರಹದವರು "ಇಲ್ಲ, ಇದನ್ನು ಬೇರಿನಿಂದಲೇ ಸರಿ ಮಾಡಬೇಕು" ಅಂತ ಮಾತಾಡುತ್ತಿರುವಂತೆ ನನಗೆ ಭಾಸವಾಗುತ್ತಿತ್ತು.

'ರಾಮ ಇದ್ದಾನೆ ಅಥವಾ ರಾಮ ಇಲ್ಲ' ಅನ್ನೋ ಎರಡೇ ಸಾಧ್ಯತೆಗಳನ್ನು ನಂಬಿದ್ದ ನನಗೆ ಅನಂತಮೂರ್ತಿಯವರು ಒಮ್ಮೆ ಸಭೆಯಲ್ಲಿ "ರಾಮ ಹುಟ್ಟಿದ್ದು ಅಯೋಧ್ಯೆಯಲ್ಲಿ ಅಲ್ಲ, ಸಾಯಬೇಕಾದರೆ ಗಾಂಧೀಜಿ ಬಾಯಲ್ಲಿ" ಅಂತ ಅಂದಾಗ, ಈ ಕಪ್ಪು ಮತ್ತು ಬಿಳುಪಿನ ಯೋಚನೆಯ ಅಸಂಬದ್ಧತೆ ಕಾಣಿಸಿತ್ತು. ಅದೇ ಸಭೆಯಲ್ಲಿ "ನೀವು ಈ ರೀತಿ ಹೇಳಿ ರಾಮನ ಅಸ್ತಿತ್ವಕ್ಕೆ ಮಾನ್ಯತೆ ಕೊಡುತ್ತಿದ್ದೀರ" ಎಂದು ಕೆಲವರು ಅನಂತಮೂರ್ತಿಯವರನ್ನು ತೀವ್ರವಾಗಿ ಖಂಡಿಸಿದ್ದರು.

ರೆಚ್ಚೆ ಹಿಡಿದ ಮಗುವನ್ನು ಸಮಾಧಾನಪಡಿಸುವ ಹಾಗೆ ಅನಂತಮೂರ್ತಿಯವರು "ಸಿಟ್ಟು ಮಾಡ್ಕೋಬೇಡಿ" ಅಂತ ಸಮಾಧಾನ ಪಡಿಸಿದ್ದರು. ಅವತ್ತು ಅನಂತಮೂರ್ತಿಯವರಿಗೆ ಹಾಗೆ ಮಾಡುವ ದರ್ದೇನಿತ್ತು? ಅದೇ ಅವರ ಹೆಂಗರುಳು.



ಅನಂತ ಮೂರ್ತಿ ರೀತಿ

ಆಗ ನನ್ನ ಪರಿಚಯ ಅವರಿಗೆ ಇರಲಿಲ್ಲ, ಆದರೂ ನಾನು ಸಭೆಯ ನಂತರ ಅವರ ಹತ್ತಿರ ಹೋಗಿ "ಸರ್, ಅವರೆಲ್ಲ ಹಾಗಂದ್ರೂ ಅಂತ ಬೇಜಾರಾಯ್ತಾ?" ಎಂದು ಕೇಳಿದೆ. ಅದಕ್ಕವರು "ಏ ಇಲ್ಲ, ಅವರಿಗೆ ಗೊತ್ತಾಗಲ್ಲ. ನಾವು ಬಿಡಿಸಿ ಹೇಳಬೇಕು" ಎಂದಿದ್ದರು. ನರೇಂದ್ರ ಮೋದಿ ವಿಷಯದಲ್ಲೂ ಅವರು ಕೊನೆಯವರೆಗೂ "ಅವರಿಗೆ ಗೊತ್ತಾಗಲು. ನಾವು ಬಿಡಿಸಿ ಹೇಳಬೇಕು" ಅಂತಲೇ ಒದ್ದಾಡಿದರು.

ಮೋದಿಯ ವಿರುದ್ಧ ಮಾತಾಡುವ ತನಕ ಅನಂತಮೂರ್ತಿ ನಮ್ಮಲ್ಲಿ ಹೆಚ್ಚಿನವರಿಗೆ ತೊಂದರೆ ಕೊಡದ ಆಸಾಮಿ ಆಗಿಯೇ ಇದ್ದರು. ಕನ್ನಡಕ್ಕೆ ಜ್ಞಾನಪೀಠ ತಂದವರು ಎಂದು ಅವರ ಕೃತಿಗಳನ್ನು ಓದದೇ ಇದ್ದವರೂ ಅವರನ್ನು ಗೌರವಿಸುತ್ತಿದ್ದರು. ನನ್ನ ಸುತ್ತ ಇದ್ದ ಹೆಚ್ಚಿನವರೂ ಅಷ್ಟೇ. ಆದರೆ ಅನಂತಮೂರ್ತಿಯವರು ಮಡೆಸ್ನಾನದ ವಿರುದ್ಧ ಮಾತಾಡಿದಾಗ ಅಂಥವರಿಗೆ ಸ್ವಲ್ಪ ಇರಿಸುಮುರಿಸು ಆಗುತ್ತಿತ್ತು. ಆಗ ಅವರು "ಅಲ್ಲಾ, ಆ ಸಾಬರಲ್ಲಿ ಬುರ್ಖಾ ತರಹದ ಅದೆಷ್ಟು ಅನಿಷ್ಟ ಆಚರಣೆಗಳಿವೆ. ಅನಂತಮೂರ್ತಿ ತರಹದವರು ಅದೆಲ್ಲದರ ವಿರುದ್ಧ ಯಾಕೆ ಮಾತಾಡಲ್ಲ" ಎಂದು ಕೇಳುತ್ತಿದ್ದರು. ಇದರ ಅರ್ಥ ತಮ್ಮ ಸಮುದಾಯದ ಅನಿಷ್ಟ ಆಚರಣೆ ವಿರುದ್ಧ ಮಾತಾಡಿದ್ದರ ಬಗ್ಗೆ ಅಂತಹ ತೊಂದರೆ ಇಲ್ಲ; ಅದರ ಜೊತೆಗೆ ಸಾಬರನ್ನೂ ಯಾಕೆ ಅವರು ಬಯ್ಯಲಿಲ್ಲ ಅನ್ನುವುದೇ ಅವರ ಆಕ್ಷೇಪಣೆಯಾಗಿತ್ತು. ಈಗಲೂ ನಮ್ಮ ಎಲ್ಲ ಪ್ರಗತಿಪರ ಚಿಂತಕರ ವಿರುದ್ಧದ ಮನಸ್ಥಿತಿಯ ಜನರ ದೂರು 'ಅವರಿಗೆ' ಬಯ್ಯಲ್ಲ ಎಂಬುದೇ ಆಗಿದೆ.

ಆದರೆ ಮೋದಿಯ ವಿಚಾರ ಇದಕ್ಕಿಂತ ಭಿನ್ನವಾಗಿತ್ತು. ಒಬ್ಬ ಸಾಮಾನ್ಯ ಮನುಷ್ಯ ಒಬ್ಬ ಗಲಭೆಕೋರನಾಗುವುದು ನಾನು ಈ ಮೊದಲು ಉಲ್ಲೇಖಿಸಿದ 'ಗಂಡಸುತನ' ಎಂಬ ಅಫೀಮಿನಿಂದಲೇ. ಇದೆಷ್ಟು ವಿಚಿತ್ರ ಎಂದು ಒಂದುಕ್ಷಣ ಯೋಚಿಸಿ. ಟ್ರಾಫಿಕ್ ಜಗಳಗಳಲ್ಲಿ 'ಅಮ್ಮ, ಅಕ್ಕ' ಅಂತೆಲ್ಲ ಬಯ್ಯುವ ಮನುಷ್ಯ ಸಾಮಾನ್ಯವಾಗಿ ಕೈಕೈ ಮಿಲಾಯಿಸಲು ಹೋಗುವುದಿಲ್ಲ. ಅದಕ್ಕೆ ಆತನಿಗೆ ಅಷ್ಟು 'ಧೈರ್ಯ'ವೂ ಇರುವುದಿಲ್ಲ. ಆದರೆ ಒಂದು ಗಲಭೆಯ ಸಂದರ್ಭದಲ್ಲಿ ಆಗುವುದೇ ಬೇರೆ. ಆ ಮನುಷ್ಯನ ತಲೆಯಲ್ಲಿ ಏರಿರುವ 'ನಶೆ' ಬೇರೆಯ ತೆರನಾದದ್ದು. ಸ್ವತಃ ನಾನೇ ಈ ಶಾಖಾ ಮೀಟಿಂಗಿಗೆ ಒಮ್ಮೆ ಹೋದಾಗ "ನಿಮಗೇನು ನರ ಇಲ್ವಾ? ಬಳೆ ಹಾಕೊಳ್ಳಿ ಹೋಗಿ" ಅಂತೆಲ್ಲ ಅಲ್ಲಿದ್ದವರನ್ನು ಉದ್ರೇಕಿಸುತ್ತಿದ್ದದ್ದನ್ನು ನೋಡಿದ್ದೇನೆ. ಪರಿಣಾಮವಾಗಿ ಯಾವುದೇ ಗಲಭೆ ನಡೆದರೂ, ಅದರ ಹಿಂದಿರುವ ಪ್ರೇರಣೆ ಒಂದೇ: "ನಾವೂ ಗಂಡಸರು ಅಂತ ತೋರಿಸಬೇಕು. ನಾವೇನು ಬಳೆ ಹಾಕೊಂಡಿಲ್ಲ ಅಂತ ತೋರಿಸಬೇಕು." ಅಂದರೆ ಕ್ರೌರ್ಯ ನಿಚ್ಚಳವಾದಷ್ಟು ಗಂಡಸುತನ ಪುಷ್ಕಳವಾಗಿದೆ ಅನ್ನುವ ನಂಬಿಕೆ.

ಗುಜರಾತಿನಲ್ಲಿ ಮೋದಿ ಸಾಧಿಸಿದ್ದೂ ಇದನ್ನೆ. "ತಾನು ಗಂಡಸು" ಅಂತ ತೋರಿಸಲು ಹಾತೊರೆಯುತ್ತಿದ್ದವರಿಗೆ ಅವಕಾಶ ಮಾಡಿಕೊಟ್ಟದ್ದು ಮೋದಿ.

ನಮ್ಮ ದೇಶದಲ್ಲಿ ಎರಡು ಮೌಲ್ಯಗಳಿಗೆ ಮಾತ್ರ ಪ್ರಾಮುಖ್ಯತೆ ಇದೆ: ಒಂದು 'ವೆಜಿಟೇರಿಯನಿಸಂ'ಗೆ, ಮತ್ತೊಂದು 'ವರ್ಜಿನಿಟಿ'ಗೆ. ಮೋದಿ ಇವೆರಡೂ ಆಗಿದ್ದರು ಎಂದು ಬಿಂಬಿಸಲಾಯಿತು. ಇನ್ನು ಸಾರ್ವಜನಿಕ ಭಾಷಣಗಳಲ್ಲಂತೂ ಮೋದಿ 'ಆಕ್ಷನ್ ಹೀರೋ' ತರಹವೇ ಮಾತನಾಡಿದರು. ಇದರಿಂದಾಗಿ ದೇಶದ ಯುವ ಜನತೆ ಅವರನ್ನು ಆರಾಧಿಸುವಂತಾಯಿತು. ಮೋದಿ ನಮ್ಮ ಯುವಜನತೆಯ ಗಂಡಸುತನದ ಕಿರೀಟಪ್ರಾಯ ಸಂಕೇತವಾದರು. ಮೋದಿಗೆ ಮಾಡಿದ ಅಪಮಾನ ಅವರೆಲ್ಲರ ಗಂಡಸುತನಕ್ಕೆ ಮಾಡಿದ ಅಪಮಾನದಂತಿತ್ತು.

ಸ್ವತಃ ನಾನೇ ಮೋದಿಯ ವಿರುದ್ಧ ಮಾತನಾಡಿದರೆ, ಅವರ ಗುಜರಾತ್ ಮಾದರಿಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಮಹಿಳೆಯರು ಮತ್ತು ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ ಎಂದೆಲ್ಲ ವಿಮರ್ಶಿಸಿದರೆ ನನ್ನ ಸುತ್ತಲಿನವರು ನನ್ನನ್ನೇ ಬಯ್ಯುತ್ತಿದ್ದರು; ನನ್ನ ವಿರುದ್ಧ ಹರಿಹಾಯುತ್ತಿದ್ದರು.

ಇದೆಲ್ಲಕ್ಕೆ ತಕ್ಕಂತೆ ಕಾಂಗ್ರೆಸ್ ಪಕ್ಷ ಕೂಡ ಒಂದೇ ಕುಟುಂಬವನ್ನಾಧರಿಸುವ ಹೇತ್ಲಾಂಡಿತನದಿಂದಾಗಿ ಕೃಶವಾಯಿತು. ಎಷ್ಟರಮಟ್ಟಿಗೆಂದರೆ ಮೋದಿ ಗೆಲ್ಲುವುದು ಗ್ಯಾರಂಟಿ ಎಂದೂ, ಚುನಾವಣೆ ಎಂಬುದೆಲ್ಲ ನೆಪಕ್ಕೆ ಮಾತ್ರ ಎಂಬ ವಾತಾವರಣವೂ ಎಲ್ಲೆಡೆ ಸೃಷ್ಟಿಯಾಯಿತು.

ಅಂತಹ ಪರಿಸ್ಥಿತಿಯಲ್ಲಿ ಮೋದಿಯ ವಿರುದ್ಧ ಮಾತಾಡುವ ಛಾತಿ ತೋರಿಸಿದವರು ಅನಂತಮೂರ್ತಿಯವರು. ಮಾಧ್ಯಮದವರು - ಅದರಲ್ಲೂ ಟಿವಿ ಮಾಧ್ಯಮದವರು - ಆಗ ಮೋದಿಯನ್ನು 'ಉದ್ಧಾರಕ', 'ವಿಮೋಚಕ' ತರಹ ಬಿಂಬಿಸಲಾರಂಭಿಸಿದ್ದವು. ಆದರೆ ಅನಂತಮೂರ್ತಿಯವರು ಮಾತ್ರ "ಮೋದಿ ಪ್ರಧಾನಿ ಆಗಿರುವ ಭಾರತದಲ್ಲಿ ನಾನಿರಲಾರೆ" ಎಂದು ಘೋಷಿಸಿದರು. ಯಾಕೆಂದರೆ ಅವರ ಅಭಿಪ್ರಾಯದಲ್ಲಿ ಮೋದಿಯ ಭಾರತದಲ್ಲಿ ಧರ್ಮದ ಗಂಡಸುತನ ಮೆರೆಯುತ್ತದೆ; ನಿಷ್ಪ್ರಮಾಣವೇ ಮೌಲ್ಯವಾಗುತ್ತದೆ; ಬಂಡವಾಳಶಾಹಿಗಳು ಬಡವರ ಜೀವನ್ಮರಣದ ನಿರ್ಧಾರ ತೆಗೆದುಕೊಳ್ಳುತ್ತಾರೆ. ಅಷ್ಟೇ ಅಲ್ಲದೆ, ಪುರುಷರ ಕೈಗಳು ಬಳೆ ಹಾಕೊಂಡಿಲ್ಲ ಎಂದು ತೋರಿಸಲು ಕೈಗಳು ರಕ್ತಸಿಕ್ತವಾಗುತ್ತವೆ. ಇದೆಲ್ಲವನ್ನು ಪ್ರತಿಭಟಿಸುವವರನ್ನು ದ್ರೋಹಿಗಳು ಎಂದು ನೋಡಲಾಗುತ್ತದೆ.

ಇಂತಹದೆಲ್ಲಕ್ಕೆ ಮೋದಿ ಒಂದು ಸಂಕೇತ ಮಾತ್ರ ಎಂಬ ಆಂಶ ಅನಂತಮೂರ್ತಿಯವರನ್ನು ಕಾಡಲಾರಂಭಿಸಿತ್ತು. ಅದಕ್ಕೆ ಕಾರಣವಾಗಿದ್ದು ಅವರಲ್ಲಿದ್ದ 'ಹೆಂಗರುಳು' ಎನಿಸುತ್ತದೆ.


ಜ್ಞಾನಪೀಠಿಗಳೊಬ್ಬರು ಮೋದಿಯ ವಿರುದ್ಧ ಹೀಗಂದಾಗ ಸಾಮಾಜಿಕ ತಾಣಗಳಲ್ಲಿ ಶುರುವಾದ ದ್ವೇಷದ ದಳ್ಳುರಿ ಸ್ವಲ್ಪ ದಿನಗಳಲ್ಲೇ ಕಾಡ್ಗಿಚ್ಚಿನಂತೆ ಎಲ್ಲೆಡೆ ಹಬ್ಬಿತು. ಅನಂತಮೂರ್ತಿಯವರೇ ಹೇಳಿದಂತೆ ಅವರಿಗೆ ಬಂದ ದ್ವೇಷಪೂರಿತ ಪತ್ರಗಳಿಗೆ, ಜೀವ ಬೆದರಿಕೆ ಕರೆಗಳಿಗೆ ಲೆಕ್ಕವಿಲ್ಲ.

ಇನ್ನಾರೇ ಆಗಿದ್ದರೂ 'ಇದು ಜಾಸ್ತಿ ಆಯಿತು. ಸುಮ್ಮನಿರುವುದು ಒಳ್ಳೇದು' ಎಂದೋ, 'ಮಾಧ್ಯಮದವರು ತಪ್ಪಾಗಿ ಹೇಳಿದ್ದಾರೆ' ಎಂದೋ ಸಮಜಾಯಿಷಿ ಕೊಟ್ಟು ಪಲಾಯನ ಮಾಡುತ್ತಿದ್ದರು. ಆದರೆ ಅನಂತಮೂರ್ತಿಯವರು ಹಾಗೆ ಮಾಡಲಿಲ್ಲ, ಬದಲಾಗಿ "ಮೊದಲೆಲ್ಲ ಬ್ರಾಹ್ಮಣರೂ ಗೋಮಾಂಸವನ್ನ ತಿನ್ನುತ್ತಿದ್ದರು" ಎಂದು ಹೇಳುವ ಮೂಲಕ ಮತ್ತೆ ಅವರ ವಿರೋಧಿಗಳ ಗಂಡಸುತನಕ್ಕೆ ಸವಾಲು ಹಾಕಿದರು!

ಆಗ ಅವರ ವಿರುದ್ಧ 'ಗಂಡಸುತನ'ದವರು ಪ್ರಾರಂಭಿಸಿದ ಪ್ರತಿಭಟನೆಗಳು ಅವರ ಸಾವಿನ ಸಂದರ್ಭದಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸುವ ಮಟ್ಟಕ್ಕೆ ಹೋಯಿತು. ಅನಂತಮೂರ್ತಿಯವರಿಗೆ ಇದು ಗೊತ್ತಾಗಿದ್ದರೆ ಮತ್ತೊಮ್ಮೆ "ಅವರಿಗೆ ಗೊತ್ತಾಗಲ್ಲ ಬಿಡಿ. ನಾವು ಬಿಡಿಸಿ ಹೇಳಬೇಕು" ಅಂತಲೇ ಹೇಳುತ್ತಿದ್ದರೇನೋ!

ನಾನು ಚಿಕ್ಕವನಾಗಿದ್ದಾಗ ನನ್ನ ಸುತ್ತಲಿನ ಗೆಳೆಯರು ನನ್ನನ್ನು ಕಿಚಾಯಿಸಿದರು ಎಂದು ನಾನು ಅನಂತಮೂರ್ತಿಯವರಿಗೆ ಬರೆದಿದ್ದ ಪತ್ರವನ್ನು ಅವರಿಗೆ ಪೋಸ್ಟ್ ಮಾಡಿರಲಿಲ್ಲ. ಒಂದು ವೇಳೆ ನಾನು ಆ ಪತ್ರವನ್ನು ಪೋಸ್ಟ್ ಮಾಡಿದ್ದರೆ ಅವರು ನನಗೆ ಪ್ರತ್ಯುತ್ತರ ಕೊಡುತ್ತಿದ್ದರೇನೋ.

ಎಷ್ಟೇ ಆದರೂ ಅವರದ್ದು ಹೆಂಗರುಳಲ್ಲವೆ.



■ಬಿ.ಎಂ. ಗಿರಿರಾಜ್

(ಲೇಖಕರು 'ಜಟ್ಟ' ಚಿತ್ರದ ನಿರ್ದೇಶಕರು)

...ಬದುಕಿದ ಕಾಲಘಟ್ಟದ ಘನತೆ ಹೆಚ್ಚಿಸಿದ ಮಹಾನುಭಾವ

ಡಾ. ಯು.ಆರ್. ಅನಂತಮೂರ್ತಿಯವರು ಕಳೆದ ...ಶತಮಾನದ ಕಾಲ ಕರ್ನಾಟಕದ ಜೀವ ಚೈತನ್ಯವನ್ನು ...ಾಶೀಲಗೊಳಿಸುತ್ತಲೇ ಬದುಕಿದವರು. ತಾವು ...ಕುತ್ತಿರುವ ಸಮಾಜವನ್ನು ಸಮಗ್ರವಾಗಿ ಪರಿಭಾವಿಸುವ ...ವರಿಗಿತ್ತು. ಅದ್ವೈತ, ದ್ವೈತ, ಇಸ್ಲಾಂ, ಕ್ರಿಶ್ಚಿಯಾನಿಟಿ, ...ಣ, ಶೂದ್ರ, ದಲಿತರು, ಇತಿಹಾಸ ವರ್ತಮಾನಗಳನ್ನೆಲ್ಲ ... ಜನಪರವಾದ ಚೌಕಟ್ಟಿನಲ್ಲಿರಿಸಿ ವಿಶ್ಲೇಷಿಸುವ ...ಾರಣ ಸಾಮರ್ಥ್ಯವನ್ನು ಅವರು ಪಡೆದಿದ್ದರು. ಈ ... ಅವರನ್ನು ಕೋಮುವಾದಿಗಳಿಂದ ದೂರವಿರುವಂತೆ ...ತು. ಅವರಿಗೆ ಸಂವಾದದಲ್ಲಿ ಆಸಕ್ತಿಯಿತ್ತು, ...ವಾದದಲ್ಲಿ ಅಲ್ಲ.

...ವರು ಬರೆದ 'ಸಂಸ್ಕಾರ', 'ಭಾರತೀಪುರ', 'ಅವಸ್ಥೆ'ಯಂಥ ಕಾದಂಬರಿಗಳು, 'ಪ್ರಜ್ಞೆ ಮತ್ತು ಪರಿಸರ', 'ಪೂರ್ವಾಪರ'ದಂತ ವಿಮರ್ಶಾ ಕೃತಿಗಳು, 'ಮೌನಿ', 'ಪ್ರಶ್ನೆ', 'ಘಟಶ್ರಾದ್ಧ'ದಂಥ ಸಣ್ಣ ಕತೆಗಳ ಸಂಕಲನ, 'ಅಜ್ಜನ ಹೆಗಲ ಸುಕ್ಕುಗಳು' ಎಂಬ ಕವನಸಂಕಲನ ಕನ್ನಡ ಸಾಹಿತ್ಯದ ಘನತೆಯನ್ನು ನಿರ್ವಿವಾದವಾಗಿ ಹೆಚ್ಚಿಸಿವೆ. ಇದರ ಜೊತೆಗೆ ಅವರು ಅಡಿಗರ ಭೂಮಿಗೀತೆಯೂ ಸೇರಿದಂತೆ ಅನೇಕ ಕೃತಿಗಳಿಗೆ ಬರೆದ ಮುನ್ನುಡಿಗಳು ಕನ್ನಡ ಸಾಹಿತ್ಯ ಪರಂಪರೆಯ ಶಕ್ತಿಯನ್ನು ಹೆಚ್ಚಿಸಿವೆ. ಅನಂತಮೂರ್ತಿ ಅವರು ಮಾಡಿದ ಭಾಷಣಗಳದ್ದೇ ಒಂದು ಪ್ರತ್ಯೇಕ ಲೋಕ. ಕನ್ನಡದ ಹಿರಿಯ ಕಿರಿಯ ಸಾಹಿತಿಗಳೊಡನೆ ಅವರು ಸಾಧಿಸಿಕೊಂಡ ಸಂಬಂಧಗಳು ಅತ್ಯಂತ ಸುಮಧುರವಾದುದು. ಕನ್ನಡ ಭಾಷೆಯು ಅವರ ಕೈಯಲ್ಲಿ ಹೊಸ ಅರ್ಥ ಮತ್ತು ವಿಸ್ತಾರವನ್ನು ಪಡೆದುಕೊಂಡಿತ್ತು. ಜಗಲಿ, ಹಿತ್ತಿಲು, ಅಟ್ಟ ಮೊದಲಾದ ಪದಗಳಿಗೆ ಅವರು ನೀಡಿದ ವ್ಯಾಖ್ಯಾನಗಳು ಚಾರಿತ್ರಿಕವಾದುದು.

ಕರ್ನಾಟಕದ ಹೊರಗಡೆ ಮತ್ತು ದೇಶದ ಹೊರಗಡೆಗೆ ಕನ್ನಡದ ಮಾನ ಹೆಚ್ಚಿಸಿದ ಬೆರಳೆಣಿಕೆಯ ಬರಹಗಾರರಲ್ಲಿ ಅನಂತಮೂರ್ತಿಯವರೂ ಒಬ್ಬರು. ಹವಾಯಿಯ ಹೊನುಲುಲುವಿನಲ್ಲಿ ನಡೆದ ಏಷಿಯಾ ವಿದ್ವಾಂಸರ ಸಮ್ಮೇಳನದಲ್ಲಿ ಅವರ ಉಲ್ಲೇಖವಾಗಿತ್ತು, ಇಸ್ರೇಲ್‌ನ ಹೀಬ್ರೂ ವಿಶ್ವವಿದ್ಯಾಲಯದಲ್ಲಿ ಅವರಿಗೆ ಅಭಿಮಾನಿಗಳಿರುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅವರ ಹೆಸರು ಹೇಳಿದರೆ ನಮ್ಮ ಮರ್ಯಾದೆ ಹೆಚ್ಚುತ್ತಿತ್ತು. ಕನ್ನಡದ ಬರವಣಿಗೆಗೆ ಅಂತಾರಾಷ್ಟ್ರೀಯ ಮನ್ನಣೆ ದೊರಕಿಸಿದವರಲ್ಲಿ ಅನಂತಮೂರ್ತಿ ಪ್ರಮುಖರು.



ನಾನು ಬದುಕಿದ ಕಾಲಘಟ್ಟದಲ್ಲಿ ಅನಂತಮೂರ್ತಿಯವರಿದ್ದರು ಎಂಬುದು ನನ್ನಂತವರ ಆತ್ಮಸ್ಥೈರ್ಯವನ್ನು ಹೆಚ್ಚಿಸುತ್ತಿತ್ತು. ಬದುಕಿದ ಕಾಲಘಟ್ಟದ ಘನತೆ ಹೆಚ್ಚಿಸಿದ ಮಹಾನುಭಾವ ಅವರು.

■ಪುರುಷೋತ್ತಮ ಬಿಳಿಮಲೆ

ಮನುಷ್ಯತ್ವ ಸತ್ತ ಹಿಂದೂವಾದಿ ರಕ್ಕಸರು

ತೀವ್ರ ಅನಾರೋಗ್ಯಗಳ ನಡುವೆಯೂ ಕೊನೆಯುಸಿರಿರುವ ತನಕ ಸಾಮಾಜಿಕ ಶಾಪಗಳ ವಿರುದ್ಧ ಬಂಡೆಯಂತೆ ಎದೆಕೊಟ್ಟು ನಿಂತ ಅನಂತಮೂರ್ತಿಯವರ ನಿಧನ ಕೆಲ ರಕ್ಕಸರಿಗೆ ಹಬ್ಬವಾಗಿ ತೋರಿದ್ದು ಈ ದೇಶದ ನೈತಿಕ ಅಧಃಪತನಕ್ಕೆ ಪ್ರತ್ಯಕ್ಷ ಸಾಕ್ಷಿ.

ತೇಜಸ್ವಿಯಂತಹ ತೇಜಸ್ವಿಯವರು ಬಾಳಿಬದುಕಿದ ಮೂಡಿಗೆರೆ ಹಾಗು ವಿದ್ಯಾವಂತರ ನಾಡೆಂದು ಕೊಚ್ಚಿಕೊಳ್ಳುವ ಮಂಗಳೂರಿನಲ್ಲಿ ನಾಡಿಗೆ ಕೀರ್ತಿ ತಂದ ಹಿರಿಜೀವವೊಂದರ ಮರಣವನ್ನು ಹಬ್ಬದಂತೆ ಸಂಭ್ರಮಿಸಿದ ಸಂಗತಿ ಈ 'ಸಂಸ್ಕೃತಿ ಗುತ್ತಿಗೆದಾರ'ರ ನಿಜ ಸಂಸ್ಕೃತಿ ಏನೆಂಬುದನ್ನ ಎತ್ತಿ ತೋರಿಸುತ್ತಿದೆ. ಮೂಡಿಗೆರೆ ಹಾಗು ಮಂಗಳೂರಿನ ಪ್ರಕರಣಗಳು ಟಿವಿ ಮಾಧ್ಯಮಗಳಲ್ಲಿ ಸುದ್ದಿಯಾಗಿ ತೀವ್ರ ಟೀಕೆಗಳು ವ್ಯಕ್ತವಾದ ಹಿನ್ನೆಲೆಯಲ್ಲಿ ಇನ್ನುಳಿದ ಕಡೆಯಲ್ಲಿ ನಡೆಯುತ್ತಿದ್ದ ಇದೇ ರೀತಿಯ "ತಯಾರಿ"ಗಳು ಕಾರ್ಯರೂಪಕ್ಕೆ ಬಾರದೇ ನಿಂತವೆಂಬ ಸುದ್ದಿಗಳೂ ಇವೆ. ಒಂದು ವೇಳೆ ಮೂರ್ತಿಯವರ ನಿಧನ ರಾತ್ರಿ ಕಾಲದಲ್ಲಾಗದೇ ಹಗಲುವೇಳೆಯಲ್ಲಾಗಿದ್ದರೆ ಈ ಸಾವನ್ನು ಸಂಭ್ರಮಿಸುವ ದುರುಳರ ಪಟಾಕಿ ಹಬ್ಬ ಇನ್ನಷ್ಟು ಹೆಚ್ಚುವ ಸಾಧ್ಯತೆ ಇದ್ದಿತು.

ಮೌಢ್ಯ-ಡಂಭಾಚಾರಗಳನ್ನು ಎತ್ತಿ ಹೇಳಲು ಉದಾಹರಣೆಯಾಗಿ ಎಷ್ಟೋ ವರ್ಷಗಳ ಹಿಂದೆ ಬರೆದು ಇತ್ತೀಚೆಗೆ ಸುದ್ದಿಯಾದ 'ಅನಂತಮೂರ್ತಿಯವರ ಕಲ್ಲ ಮೂರ್ತಿ ಮೇಲೆ ಮೂತ್ರ'ದ ಪ್ರಕರಣವನ್ನು ಕೆಲವರು ಈ ಮರಣದೊಂದಿಗೆ ತಾಳೆ ಹಾಕಿ ತಕ್ಕ ಶಾಸ್ತಿಯೆಂದು ಢಂಗುರ ಸಾರುತ್ತಾ ವಿಕೃತಾನಂದವನ್ನು ಅನುಭವಿಸುತ್ತಿದ್ದಾರೆ. ಅನಂತಮೂರ್ತಿಯವರದ್ದು ಎಂಭತ್ತರ ಇಳಿವಯಸ್ಸು. ಜತೆಗೆ ನಾಲ್ಕೈದು ವರ್ಷಗಳಿಂದ ಕಾಡುತ್ತಿದ್ದ ತೀವ್ರ ಅನಾರೋಗ್ಯಗಳು ಬೇರೆ. ಎರಡೂ ಮೂತ್ರಪಿಂಡಗಳ ವೈಫಲ್ಯದೊಂದಿಗೆ ಇನ್ನೂ ಕೆಲ ವಯೋಸಹಜ ತೊಂದರೆಗಳಿಂದ ಬಳಲುತ್ತಿದ್ದರವರು. ಅವರ ಅಭಿಮಾನಿಗಳಿಗೆ ಇದು ಅನಪೇಕ್ಷಿತವೆನಿಸಿದರೂ ಈ ಮರಣ ನಿರೀಕ್ಷಿತವೇ ಇತ್ತು. ಇದೊಂದು ದೈಹಿಕವಾಗಿ (ಮಾನಸಿಕವಾಗಿ ಅಲ್ಲ) ಜರ್ಜರಿತವಾದ ದೇಹವೊಂದರ ಸಹಜ ನೋವು-ಅಂತ್ಯಗಳೇ ವಿನಹ ಕೆಲವರು ಬಿಂಬಿಸುವಂತಹ ಯಾವ ಶಾಪ-ಶಾಸ್ತಿಗಳೂ ಅಲ್ಲ.

ಅನಂತಮೂರ್ತಿಯವರು ತಮ್ಮ ತೀವ್ರ ಅನಾರೋಗ್ಯದೊಂದಿಗೆ ಇಷ್ಟು ದಿವಸ ಆರೋಗ್ಯವಂತರನ್ನೂ ನಾಚಿಸುವಂತೆ ಬದುಕಿದ್ದರು. ಒಂದುವೇಳೆ ಈ ಶಾಪ ಸತ್ಯವೇ ಆಗಿದ್ದರೆ ಮೂರ್ತಿಯವರು ಯಾವಾಗಲೋ ನಮ್ಮಿಂದ ದೂರಾಗಿರಬೇಕಿತ್ತು. ಶಾಪದ ನೆಪದಲ್ಲಿ ಅನಂತಮೂರ್ತಿಯವರನ್ನು ಟೀಕಿಸುವವರು ಇವರ ಪಿತಾಮಹ ವಾಜಪೇಯಿಯವರು ಇನ್ನೂ ಜೀವಚ್ಛವದಂತೆ ಬಿದ್ದಿರುವುದು ಯಾವುದರ ಶಾಪ ಎನ್ನುವುದನ್ನು ಮೊದಲು ಚಿಂತಿಸಲಿ..


ಯಾರೇ ಆಗಲಿ ಆತ ದುಷ್ಟನೀಚನೇ ಆಗಿದ್ದಿರಲಿ ಹಾಗಂತ ಆತನ ಸಾವು-ನೋವಿಗೆ ಸಂಭ್ರಮಿಸುವುದು ಅತ್ಯಂತ ಹೇಯವಾದುದು. ಅನಂತಮೂರ್ತಿಯವರು ತನ್ನ ಸಮುದಾಯದ ಸಂಪ್ರದಾಯಗಳನ್ನೇ ವಿಮರ್ಶಿಸಿ ಬರೆದಂತವರು. ಅವರ ಅಭಿಪ್ರಾಯಗಳನ್ನು ಎಲ್ಲರೂ ಒಪ್ಪಲೇಬೇಕೆಂದಿಲ್ಲ. ಲೋಕೋ ಭಿನ್ನ ರುಚಿಃ ಒಬ್ಬನ ಅಭಿಪ್ರಾಯ ಎಲ್ಲರಿಗೂ ಸ್ವೀಕೃತವೆನಿಸಲು ಸಾಧ್ಯವೂ ಇಲ್ಲ. ಕೆಲವರಿಗೆ ಇವರ ವಿಚಾರಗಳು ಅಪಥ್ಯ ಎನಿಸಿರುವುದು ಹೌದಾದರೂ ಅವರ ನಿಲುವನ್ನು, ಅವರ ಸಾಹಿತ್ಯ ಕೃಷಿಯನ್ನು ಮೆಚ್ಚಿಕೊಂಡಂತಹ ದೊಡ್ಡ ಸಮೂಹವೇ ಈ ದೇಶದಲ್ಲಿದೆ. ದೇಶದ ಅತ್ಯುನ್ನತ ಗೌರವಗಳಿಗೆ ಪಾತ್ರರಾಗಿ ಕನ್ನಡಕ್ಕೆ ಹಾಗು ದೇಶಕ್ಕೆ ಕೀರ್ತಿ ತಂದಂತಹ ವ್ಯಕ್ತಿ ಇವರು. ಹೀಗಿದ್ದೂ ಕೆಲ ವಿಷ ಜಂತುಗಳು (ಅನಂತಮೂರ್ತಿಯವರನ್ನು ವಿರೋಧಿಸುವ ಇವರು ಮೂರ್ತಿಯವರ ಯಾವ ಸಾಹಿತ್ಯವನ್ನೂ ಓದಿರುವುದಿಲ್ಲ, ಅಂತಹ ತಾಳ್ಮೆಯೂ ಇಂಥವರಿಗಿಲ್ಲ) ಬೊನ್ನೆ ರಕ್ಕಸ ಸಂಹಾರದಂತೆ ಪಟಾಕಿ ಹಚ್ಚಿ ಸಂಭ್ರಮಿಸುವ ಧೂರ್ತತನಕ್ಕೆ ಇಳಿದು ನಮ್ಮೆಲ್ಲರ ಮಾನ ಕಳೆದಿದ್ದಾರೆ.



ಈ 'ಸಂಸ್ಕೃತಿ ಗುತ್ತಿಗೆದಾರರ' ಇಂತಹ ಅಮಾನವೀಯ ನಡೆ ಇದೇನೂ ಮೊದಲ ಬಾರಿಯೇನಲ್ಲ. ಇತ್ತೀಚೆಗೆ ತಮ್ಮ ಮಾನವವಿರೋಧಿ .ಅಜೆಂಡಾವನ್ನು ವಿರೋಧಿಸಿ ಹಾಗು ಪಾಳೇಗಾರ ಮೋದಿಯ ಬಗ್ಗೆ ಬರೆಯುತ್ತಿದ್ದರೆಂಬ ಕಾರಣಕ್ಕೆ ಇದೇ ಸಂಘಪರಿವಾರದ ನಾಯಕರುಗಳು ವಯೋವೃದ್ಧರಾದ ಬಾಕ್ರಬೈಲು ಸುರೇಶ್ ಭಟ್ಟರ ಮೇಲೆ ಹಿಂದೂತ್ವದ ಅಮಲು ಹಿಡಿಸಿಕೊಂಡ ಯುವಕನೊಬ್ಬನನ್ನು ಛೂಬಿಟ್ಟು ಮುಖಕ್ಕೆ ಸಗಣಿ ಹಚ್ಚಿ ಹಲ್ಲೆ ನಡೆಸಿದ್ದರು. ಇದು ಇವರ ಸಂಸ್ಕೃತಿ.

ಸಿದ್ದರಾಮಯ್ಯನವರ ಸರಕಾರ ಕನ್ನಡನಾಡಿಗೆ ಕೀರ್ತಿತಂದವರನ್ನು ಅವಮಾನಿಸಿದ ಇಂತಹ ನೀಚರಿಗೆ ತಕ್ಕುದಾದ ಶಿಕ್ಷೆಯನ್ನು ವಿಧಿಸಲೇಬೇಕು. ಇಲ್ಲವಾದಲ್ಲಿ ಇಂತಹ ಚಾಳಿ ಮುಂದುವರೆಯಲು ಸರಕಾರವೇ ಅದಕ್ಕೆ ನೇರ ಹೊಣೆಯಾಗಬೇಕಾಗುತ್ತದೆ.

- ಅವಿನಾಶ್ ಎಮ್.ಎಸ್, ಮಂಗಳೂರು



ದೇವತೆಗಳೆಲ್ಲ ದುಷ್ಟ ಆರ್ಯನ್ನರು, ಅಸುರರು ಶಾಂತಿಪ್ರಿಯರು

ಅನಂತಮೂರ್ತಿಯವರ ಸಾವಿನ ಸುದ್ದಿ ಕೇಳಿ ಖುಷಿಯಿಂದ ಪಟಾಕಿ ಸುಟ್ಟು ಕೆಲವು ಮತಿಗೇಡಿಗಳು ಸಂಭ್ರಮಿಸಿದರು. ಹೀಗೆ ಪಟಾಕಿ ಸುಟ್ಟು ಸಂಭ್ರಮಿಸಲು ಮೂರ್ತಿಯವರು ಹಿಟ್ಲರ್-ಸದ್ದಾಮ್ ಹುಸೇನನಂತೆ ನರಹಂತಕರಾಗಿದ್ದರೆ? ಕನ್ನಡ ಭಾಷೆಗೆ - ಕನ್ನಡ ಸಾಹಿತ್ಯಕ್ಕೆ ವಿಶ್ವಮಾನ್ಯತೆ ತಂದುಕೊಟ್ಟದ್ದು ಅಪ್ಪಟ ಮಾನವತಾವಾದಿ ಅನಂತಮೂರ್ತಿಯೇ ವಿನಃ ಮಾನವತೆಯೇ ಇಲ್ಲದ ಕೇಸರಿ ಸಂಘಟನೆಗಳವರು ಅಲ್ಲ.

ಇನ್ನು ಕೆಲವು ಬುದ್ಧಿಗೇಡಿಗಳು ಸಾಮಾಜಿಕ ಜಾಲತಾಣದಲ್ಲಿ ಮಂಗಳೂರಿನ ವಿಕೃತಾನಂದಿಗಳು ಪಟಾಕಿ ಸುಟ್ಟು ಸಂಭ್ರಮಿಸಿದ್ದನ್ನು ಸಮರ್ಥಿಸಿಕೊಂಡಿದ್ದಾರೆ. ಅವರು ತಮ್ಮ ಟ್ವೀಟರ್/ಫೇಸ್ ಬುಕ್ಕಲ್ಲಿ ಬರೆದುದೇನೆಂದರೆ "ವೈದಿಕ ಧರ್ಮ ವಿರೋಧಿ ನರಕಾಸುರ ಮಹಿಷಾಸುರ ರಾವಣ ಮುಂತಾದ ರಾಕ್ಷಸರೂ ಸತ್ತದಕ್ಕೆ ಪಟಾಕಿ ಹಚ್ಚಿ ಹಿಂದೂಗಳು ದಸರೆ-ದೀಪಾವಳಿ ಆಚರಿಸಿದಂತೆ ತಾವೂ ಸಹ ವೈದಿಕಧರ್ಮ ವಿರೋಧಿ ಅನಂತಮೂರ್ತಿಯವರ ಮರಣಕ್ಕೆ ಪಟಾಕಿ ಹಚ್ಚಿ ಸಂಭ್ರಮಿಸಿದರೆ ತಪ್ಪೇನು" ಎಂದು ಕೇಳಿದ್ದಾರೆ.

ಅನಂತಮೂರ್ತಿ ಜೀವಂತವಿದ್ದಾಗ ಅವರನ್ನು ರಾಕ್ಷಸರಿಗೆ ಹೋಲಿಸಿದ್ದರೆ ಅವರು ಖುಷಿಯಿಂದ ಹೇಳುತ್ತಿದ್ದರು "ಹೌದು ನಾನು ರಾಕ್ಷಸ, ಯಾಕೆಂದರೆ ಪುರಾಣದಲ್ಲಿ ರಾಕ್ಷಸರೆಂದು ಬಣ್ಣಿಸಲಾಗಿರುವ ಜನಾಂಗವು ನಿಜವಾಗಿ ಭಾರತದ ಮೂಲನಿವಾಸಿ ಸಜ್ಜನ ಶಾಂತಿಪ್ರಿಯ ಬುಡಕಟ್ಟು ಜನಾಂಗದವರು. ಇವರು ಪುರಾಣದಲ್ಲಿ ಬಣ್ಣಿಸಿದಂತೆ ದುಷ್ಟರಾಗಿರಲಿಲ್ಲ, ಮಧ್ಯ ಏಷಿಯಾದಿಂದ ವಲಸೆ ಬಂದ ನೀಚ ಆರ್ಯನ್ನರು ಭಾರತದ ಮೇಲೆ ಆಕ್ರಮಣ ಮಾಡಿ ಇಲ್ಲಿಯ ಬುಡಕಟ್ಟು ಜನಾಂಗಗಳ ಸಂಪತ್ತು-ಭೂಮಿ-ಸ್ತ್ರೀಯರನ್ನು ಬಲಾತ್ಕಾರವಾಗಿ ಲೂಟಿಗೆಯ್ಯುತ್ತಿದ್ದಾಗ ಅದನ್ನು ವಿರೋಧಿಸಿದ ಬುಡಕಟ್ಟು ಜನಾಂಗದ ನೇತಾರರನ್ನು ದುಷ್ಟ ಆರ್ಯರು ಕೊಂದು, ಆ ಮೃತ ನೇತಾರರಿಗೆ ರಾಕ್ಷಸರೆಂಬ ಪಟ್ಟ ಕಟ್ಟಿ ತಮ್ಮ ನೀಚ ಕೆಲಸಗಳನ್ನು ಸಮರ್ಥಿಸಿಕೊಳ್ಳಲು ರಾಕ್ಷಸ-ದೇವತೆ ಯುದ್ಧದ ಕಾಲ್ಪನಿಕ ಪುರಾಣ ಕಟ್ಟಿದ್ದರು" ಎಂದು ಅನಂತಮೂರ್ತಿ ಖಂಡಿತಾ ಹೇಳುತ್ತಿದ್ದರು.

ಹಿಂದೂ ಪೌರಾಣಿಕ ಕಥೆಗಳೆಲ್ಲಾ ಆರ್ಯನ್ನರು ತಮ್ಮ ದುಷ್ಟ ಕೆಲಸಗಳನ್ನು ಸಮರ್ಥಿಸಿಕೊಳ್ಳಲು ಇತಿಹಾಸವನ್ನು ಸಂಪೂರ್ಣ ತಿರುಚಿ ಬರೆದ ಕಥೆಗಳ ಸಂಕಲನವೇ ಆಗಿದೆ. ಹಾಗಾಗಿ ನಾವು ಪುರಾಣ ಓದುವಾಗ ದೇವತೆಗಳ ಮತ್ತು ರಾಕ್ಷಸರ ಪಾತ್ರಗಳನ್ನು ಅದಲುಬದಲು ಮಾಡಿ ಓದಿಕೊಳ್ಳಬೇಕು, ಅಂದರೆ ದೇವತೆಗಳೆಲ್ಲ ದುಷ್ಟ ಆರ್ಯನ್ನರು ಹಾಗೂ ರಾಕ್ಷಸರು. ಅಸುರರು-ದೈತ್ಯರು -ದಸ್ಯುಗಳೆಲ್ಲಾ ಸಜ್ಜನ ಶಾಂತಿಪ್ರಿಯ ಬುಡಕಟ್ಟು (ದ್ರಾವಿಡ) ಜನಾಂಗದವರು ಎಂಬುದಾಗಿ.

ಬಲಿ ಚಕ್ರವರ್ತಿಯಂತಹ ಮಹಾ ಸತ್ಯಸಂಧ ಸಾತ್ವಿಕ ಪ್ರಜಾಪ್ರೇಮಿಯನ್ನು ಆರ್ಯನ್ನರು ಮೋಸದಿಂದ ಕೊಂದು ಅದಕ್ಕೆ ಕುಳ್ಳ ವಾಮನ ಅವತಾರದ ಒಂದು ಸುಳ್ಳು ಕಥೆ ಹೆಣೆದು ಸಂಭ್ರಮಿಸುತ್ತಿಲ್ಲವೇ?

ರಾಕ್ಷಸರು ಹದಿನೈದು-ಇಪ್ಪತ್ತು ಅಡಿ ಎತ್ತರವಿದ್ದರೆಂದು ಹಿಂದೂ ಪುರಾಣದಲ್ಲಿ ಹೇಳಲಾಗಿದೆ. ಮಹಾಭಾರತದ ಘಟೋತ್ಕಚ 45 ಅಡಿ ಎತ್ತರವಿದ್ದನಂತೆ. ನಾಲ್ಕು ಸಾವಿರ ವರ್ಷಗಳ ಹಿಂದೆ ಇದ್ದ ಮಾನವನ ಮತ್ತೂ ಇತರ ಸಸ್ತನಿಗಳ ಪಳಿಯುಳಿಕೆ ವಿಜ್ಞಾನಿಗಳಿಗೆ ಸಿಕ್ಕಿರುವಾಗ ಲಕ್ಷಾಂತರ ಸಂಖ್ಯೆಯಲ್ಲಿ ಆಗ ಇದ್ದ ರಾಕ್ಷಸರ ಒಂದೇ ಒಂದು ಪಳಿಯುಳಿಕೆ ಯಾಕೆ ಸಿಕ್ಕಿಲ್ಲ? ಹದಿನೈದು ಕೋಟಿ ವರ್ಷಗಳ ಹಿಂದೆ ಇದ್ದ ಡೈನೋಸಾರ್‌ಗಳ ಪಳಿಯುಳಿಕೆ ಕಂಡು ಹುಡುಕುವಷ್ಟು ಈಗ ತಂತ್ರಜ್ಞಾನ ಮುಂದುವರಿದಿರುವಾಗ ಕೇವಲ ಮೂರು-ನಾಲ್ಕು ಸಾವಿರ ವರ್ಷಗಳ ಹಿಂದೆ ಇದ್ದರೆನ್ನಲಾದ ಇಪ್ಪತ್ತು ಅಡಿ ಎತ್ತರದ ರಾಕ್ಷಸರ ಒಂದೇ ಒಂದು ಪಳಿಯುಳಿಕೆ ನಮ್ಮ ವಿಜ್ಞಾನಿಗಳಿಗೆ ಸಿಗುತ್ತಿಲ್ಲವೆಂದ ಮೇಲೆ ಪುರಾಣದಲ್ಲಿ ಬರೆದ ರಾಕ್ಷಸ ಜನಾಂಗದ ಕಲ್ಪನೆ ಹಾಗೂ ರಾಕ್ಷಸರನ್ನು ಕೊಲ್ಲಲು ಚಿತ್ರವಿಚಿತ್ರ ರೂಪದಲ್ಲಿ ದೇವರು ಅವತಾರವೆತ್ತಿದ್ದರು ಎಂದು ವೈದಿಕರು ಕಟ್ಟಿರುವ ಪುರಾಣಗಳೆಲ್ಲ ಶುದ್ಧ ಕಟ್ಟುಕಥೆ ಎಂದು ಸಾಬೀತಾಗುತ್ತದೆ ತಾನೇ! ಈಗ ನಮ್ಮ ಸಮಾಜಕ್ಕೆ ಬೇಕಾಗಿರುವುದು ಕಾಲ್ಪನಿಕ ದೇವರಿಗಿಂತ ನೈಜ ಮಾನವತಾವಾದಿ ಅನಂತಮೂರ್ತಿಯಂತವರು.

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಸಾವು ಸಂಭ್ರಮದ ಸಂಗತಿಯಾದಾಗ...

ಧರ್ಮಗಳ ನಡುವಿನ ಅಸಹನೆ, ಕೋಮುವಾದ ಹುಟ್ಟು ಹಾಕಿದ ಭಯೋತ್ಪಾದಕತೆ, ಮಾನವೀಯ ಮೌಲ್ಯಗಳನ್ನೆಲ್ಲ ಗುಡಿಸಿ ಗುಂಡಿಗೆ ಹಾಕಿರುವ ಜಾಗತೀಕರಣದ ಈ ಸಮಯದಲ್ಲಿ ವ್ಯಕ್ತಿಯೊಬ್ಬನ ಸಾವಿಗೆ ಮಿಡಿಯಬಲ್ಲ ಅಂತಃಕರಣ ಮನುಷ್ಯನಲ್ಲಿನ್ನೂ ಉಳಿದಿರಬಹುದೆಂಬ ನನ್ನ ನಂಬಿಕೆ ಹುಸಿಯಾಗತೊಡಗಿದೆ.

ಅದಕ್ಕೆ ಕಾರಣ ಇತ್ತೀಚೆಗಿನ ಕೆಲವು ಘಟನೆಗಳು: ಜಾಗತಿಕ ಭಯೋತ್ಪಾದಕ ಒಸಾಮ ಬಿನ್ ಲಾಡೆನ್ ಅಮೆರಿಕ ಸೇನೆಯಿಂದ ಹತನಾದ ನಂತರ ಆ ದೇಶದ ಜನತೆ ತಡರಾತ್ರಿಯವರೆಗು ಕುಡಿದು-ಕುಪ್ಪಳಿಸಿ ವಿಶ್ವವನ್ನೇ ಗೆದ್ದಂತೆ ವಿಜಯೋತ್ಸವ ಆಚರಿಸಿದರು. ಸರಿಸುಮಾರು ಅದೇ ಸಮಯದಲ್ಲಿ ಬೆಂಗಳೂರಿನ 'ಶ್ರೀರಾಮಸೇನೆಯ ಕೆಲ ಕಾರ್ಯಕರ್ತರು ಉದ್ದುದ್ದನೆಯ ಪಟಾಕಿ ಸಿಡಿಸಿ ಸಂಭ್ರಮಿಸಿದರು. ನಮ್ಮ ಗೌರವಾನ್ವಿತ ಮಠಾಧೀಶರೊಬ್ಬರು ತಮ್ಮ ಕೈಯಾರೆ ಭಕ್ತರಿಗೆ ಸಿಹಿ ಹಂಚಿ ಅವನ ಸಾವಿನ ಸಂತಸ ಹಂಚಿಕೊಂಡರು. ವ್ಯಕ್ತಿಯೊಬ್ಬನ ಸಾವನ್ನು (ಅವನು ಸಂತನಾಗಿರಲಿ-ಹಂತಕನಾಗಿರಲಿ, ನಕ್ಸಲನಾಗಿರಲಿ-ಪೊಲೀಸನಾಗಿರಲಿ, ರಾಜನಾಗಿರಲಿ-ರಾಜದ್ರೋಹಿಯಾಗಿರಲಿ) ಸಿಹಿ ತಿಂದು ಸಂಭ್ರಮಿಸುವುದಿದೆಯಲ್ಲ, ಅದಕ್ಕಿಂತ ಅಮಾನವೀಯವಾದ್ದು ಬೇರೊಂದಿದೆ ಅಂತನ್ನಿಸುವುದಿಲ್ಲ.

ಹಾಗಾದರೆ ಅಮಾಯಕರನ್ನು ಹತ್ಯೆಗೆಯ್ಯುತ್ತ, ಭಯೋತ್ಪಾದಕತೆಯ ಬೀಜಗಳನ್ನು ಭೂಮಿಯೆಲ್ಲೆಡೆ ಬಿತ್ತುತ್ತಿದ್ದ ಲಾಡೆನ್ನನ ಸಾವನ್ನು ನಾವು ಹೇಗೆ ಸ್ವೀಕರಿಸಬಹುದಿತ್ತು?

"ಅಬ್ಬಾ! ಇನ್ನು ಮೇಲಾದರು ಭಯೋತ್ಪಾದಕನೊಬ್ಬನ ಹಾವಳಿ ನಿಂತು, ಜಗತ್ತಿನಲ್ಲಿ ಶಾಂತಿ ನೆಲೆಸಲಿ" ಎಂದು ಹಾರೈಸುತ್ತ ನಿರಾಳತೆಯ ನಿಟ್ಟುಸಿರು ಬಿಡಬಹುದಿತ್ತು.

ಇಲ್ಲಿ ಇನ್ನೊಂದು ವಿಷಯದತ್ತ ನೋಡೋಣ: ಹಾಗೆ ನೋಡಿದರೆ ಅಮೆರಿಕಕ್ಕೆ ಈ ಹತ್ಯೆ ವಿಷಯದಲ್ಲಿ ಸಂತೋಷ ಪಡುವ ಯಾವ ಅಧಿಕಾರವೂ ಇರಲಿಲ್ಲ! ಯಾಕೆಂದ ಆಧುನಿಕ ಜಗತ್ತಿನ ಮೊದಲ ಮತ್ತು ಅತಿ ದೊ ಭಯೋತ್ಪಾದಕನೆಂದರೆ ಅದು ಸ್ವತಃ ಅಮೆರಿಕ ಆಗಿದ

ಹೊಗಳಿಕೆ ತೆಗಳಿಕೆ

ಎರಡನೇ ಮಹಾಯುದ್ಧದಲ್ಲಿ ಸೋತು ಸುಣ್ಣವಾಗಿ ಜಪಾನಿನ ಹಿರೋಷಿಮಾ ನಾಗಸಾಕಿಗಳ ಮೇ ಅಣುಬಾಂಬುಗಳನ್ನು ಹಾಕಿ ಮಿಲಿಯನ್ ಗಟ್ಟಲೆ ಮ ಜನರನ್ನು ಕ್ಷಣಾರ್ಧದಲ್ಲಿ ಇನ್ನಿಲ್ಲವಾಗಿಸಿದ ಅಮೆರಿ ಕೃತ್ಯ ಭಯೋತ್ಪಾದಕತೆಯಲ್ಲದಿದ್ದರೆ ಇನ್ನಾವುದು? ಅರವ ದಶಕದಲ್ಲಿ ಅದು ವಿಯೆಟ್ನಾಂನಂತ ಪುಟ್ಟ ರಾಷ್ಟ್ರದ ಮೇ ನಡೆಸಿದ ದೌರ್ಜನ್ಯ, ಪ್ರಜಾಪ್ರಭುತ್ವ ಸ್ಥಾಪನೆಯ ಹೆಸ ಇರಾಕ್ ಮುಂತಾದ ದೇಶಗಳ ಮೇಲೆ ನಡೆಸಿದ ಯುದ್ಧ ಅಮೆರಿಕಾದ ಕರಾಳಮುಖಕ್ಕೆ ಸಾಕ್ಷಿಯಾಗಿವೆ. ಸೋವಿಯ ಯೂನಿಯನ್ ಹಿಡಿತದಿಂದ ಅಫಘಾನಿಸ್ಥಾನವ ಮುಕ್ತಗೊಳಿಸುವ ನೆಪದಲ್ಲಿ ಅಲ್ಲಿನ ಬುಡಕಟ್ಟು ಜನ ಹಣ-ಯುದ್ಧಾಸ್ತ್ರಗಳನ್ನು ಪೂರೈಸುತ್ತ, ಅವರ ಉಗ್ರಗಾಮಿಗಳನ್ನಾಗಿ ಮಾಡಿದ ಕುಖ್ಯಾತಿ ಅಮೆರಿಕಾ ಇಸ್ರೇಲ್ ಎಂಬ ರಾಜ್ಯವನ್ನು ರಾತ್ರೋರಾತ್ರಿ ಸೃಷ್ಟಿ ಮಧ್ಯಪ್ರಾಚ್ಯದಲ್ಲಿ ನಿರಂತರವಾಗಿ ರಕ್ತ ಹರಿಯುವ ಮಾಡಿದ್ದು ಸಹ ಇದೇ ಅಮೆರಿಕ.

ಇಷ್ಟಲ್ಲದೆ ಇವತ್ತು ಲಾಡೆನ್ ಹತ್ಯೆ ಮಾಡಿ ತಾನೇನ ಮಹಾಸಾಧನೆ ಮಾಡಿದ್ದೇನೆಂದು ಬಿಂಬಿಸಿಕೊಳ್ಳುತ್ತಿರ ಅಮೆರಿಕಾ, ಬಿನ್ ಲಾಡೆನ್ ಅಂತಹ ಭಯೋತ್ಪಾದಕನ ತಾನೇ ಸೃಷ್ಟಿಸಿದ ಭೂತವೆಂಬುದನ್ನು ಒಪ್ಪಿಕೊಳ್ಳಲು ತಯಾರಿಲ್ಲ. ಇವೆಲ್ಲವನ್ನೂ ಅರ್ಥಮಾಡಿಕೊಳ್ಳಲಾಗದ ಮುಗ್ಧರೇನಲ್ಲ ಅಮೆರಿಕನ್ನರು. ಸಾಮ್ರಾಜ್ಯಶಾಹಿ ಮನ ಭಾವನೆಯ ಅವರಿಗೆ ತಮ್ಮ ದೇಶ ಮಾಡಿದ ನರಮೇಧ ಬಗ್ಗೆ, ಅದು ಹುಟ್ಟುಹಾಕಿದ ಭಯೋತ್ಪಾದಕತೆ ಯ ನಾಚಿಕೆಯಾಗಬೇಕಿತ್ತೆ ಹೊರತು ಸಂಭ್ರಮಾಚರ ಅಗತ್ಯವಿರಲಿಲ್ಲ. ಇನ್ನು ನಮ್ಮ ಶ್ರೀರಾಮಸೇನೆಯ ಮ ಗೌರವಾನ್ವಿತ ಮಠಾಧೀಶರು ಸಂಭ್ರಮಿಸಿದ್ದರ ಹಿಂದೆ ಇರ ಮನಸ್ಥಿತಿಯಾದರೂ ಲಾಡೆನ್ ಒಬ್ಬ ಮುಸ್ಲಿಂ ಎಂಬು ಹೊರತು ಅವನೊಬ್ಬ ಜೀವ ವಿರೋಧಿ ಭಯೋತ್ಪಾ ಎಂದೇನು ಅಲ್ಲ.

ನಕ್ಸಲರ ನೆಲಬಾಂಬಿಗೆ ಬಲಿಯಾಗುವ ಪೊಲೀ ಸಾವುಗಳಿಗೆ, ಪೊಲೀಸರ ಗುಂಡಿಗೆ ಬಲಿಯಾಗುವ ನಕ್ಸ ಸಾವುಗಳಿಗೆ, ಮನುಷ್ಯರ ಸಂಭ್ರಮಿಸುತ್ತ ಹೋ ಮಾನವೀಯತೆ ಎಲ್ಲಿ ಉಳಿಯುತ್ತದೆ? ಸಾವ ಸಂಭ್ರಮಿಸುವ ಮನಸ್ಸುಗಳ ಹಿಂದಿರುವ ಕ್ರೌರ್ಯವ ನೆನೆಸಿಕೊಂಡರೆ ನಾಳೆಗಳ ಬಗ್ಗೆ ಭಯವಾಗುತ್ತದೆ!

- ಕು.ಸ.ಮಧುಸೂದನ್ ನಾಯ

. ಗೌರಿ ಲಂಕೇಶರು ನಾರಾಯಣಾಚಾರ್ಯರ 'ವಾಲ ಯಾರು?' ಎಂಬ ಪುಸ್ತಕದ ನಿಷೇಧದ ವಿರುದ್ಧ ಮಾತನ ತನ್ನ ದೊಡ್ಡತನವನ್ನು ಮೆರೆದಿದ್ದಾರೆ. ಆ ಅನಂತಮೂರ್ತಿಯವರು ಸತ್ತಾಗ ಪಟಾಕಿ ಹೊಡ ಮೋದಿವಾದಿಗಳು ಮರ್ಯಾದೆ ಹೀನಕೃತ್ಯ ಎಸಗಿದ ಇಂತಹವರಿಂದ ಮುಕ್ತಿ ಎಂದು?

- ಮಾನಸ್ವಿ, ಧಾರ

ಲಂಕೇಶ್ ಮತ್ತು ತೇಜಸ್ವಿಯವರು ಈಗ ಇದ್ದಿ ಎಂದು ಕೊರಗುವ ಅಸಂಖ್ಯ ಮನಸ್ಸುಗಳಿಗೆ ಹಿರಿ ಚೇತನ ಡಾ. ಅನಂತಮೂರ್ತಿಯವರ ಅನಿರೀಕ್ಷಿತ ಸ ಮತ್ತಷ್ಟು ತಡಬಡಿಸುವಂತೆ ಮಾಡಿದೆ.

- ಡಿ.ಎಲ್.ಮ

ಅನಂತಮೂರ್ತಿಯವರ ನಿಧನ ಲಂಕೇಶ್ ಮೇಷ್ಟ್ರ ಕಳೆದುಕೊಂಡಿದ್ದಾಗ ಆಗಿದ್ದ ದುಃಖದಂತೆಯೇ ಕಾಡು ಮನಸ್ಸು ಖಾಲಿ ಖಾಲಿ. ಜೊತೆಗೆ ರಾಕ್ಷಸರ ಕೇಕೆ...


ಥೂ, ಇದು ಮಾತು ಸೋತ ಭಾರತ!

- ಅಂಜದ್ ಪಾಶಾ, ಮೈಸ

ಮೋಹನ ಭಾಗವತ 'ಹಿಂದೂ ಹಿಂದೂ' ಎ ಒಂದೇಸಮ ಬಡಬಡಿಸುವುದನ್ನು ಪತ್ರಿಕೆಗಳಲ್ಲಿ ಓದಿ ನನಗೆ ಪಿ.ಲಂಕೇಶರ 'ಹಿಂದೂಗಳು ಯಾರು?' ಮರೆಯುವ ಮುನ್ನದ ಟಿಪ್ಪಣಿ ನೆನಪಾಯಿತು. ಅ ಯಥಾವತ್ ಪತ್ರಿಕೆಯಲ್ಲಿ ಪ್ರಕಟಿಸಬಹುದೇನೋ. ಅ ಸಕಾಲಿಕ. ನೋಡಿ, ಮರೆಯುವ ಮುನ್ನ - ಸಂಗ್ರಹ ಪುಟ ಸಂಖ್ಯೆ 169.

- ರವಿಕುಮಾರ್, ಹಾ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೆ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹ



ಅನಂತ ಮೂರ್ತಿ ರೀತಿ


ಸಂಸ್ಕಾರ: ನಿಂತ ಜಗತ್ತಿಗೆ ಚಲನೆ ನೀಡಿದ ಸಿನಿಮಾ

ಪ್ರಾಣೇಶಾಚಾರ್ಯ ಕಾಶಿಯಲ್ಲಿ ವೇದಾಭ್ಯಾಸ ಮಾಡಿ
ಸಂಪ್ರದಾಯಸ್ಥ ಬ್ರಾಹ್ಮಣ. ಆದರೆ ನಾರಣಪ್ಪ ಬ್ರಾಹ್ಮಣ
ಯಲ್ಲಿ ಹುಟ್ಟಿದ್ದರೂ ಮದ್ಯಪಾನ ಮಾಡುವ,
ಸಾಹಾರ ಸೇವಿಸುವ, ವೇಶ್ಯೆಯೊಂದಿಗೆ ನಂಟಿರಿಸಿ
ಡಿರುವ ವ್ಯಕ್ತಿ.


ದೂರ್ವಾಸಪುರದ ಬ್ರಾಹ್ಮಣರ ಮುಖಂಡನಂತಿರುವ
ಣೇಶಾಚಾರ್ಯ ತನ್ನ ಕಠಿಣ ವ್ರತಪಾಲನೆಯಿಂದ ಮುಕ್ತಿ
ಹಂಬಲಿಸಿದರೆ, ಸಂಪ್ರದಾಯದ ಕಟ್ಟುಪಾಡುಗಳಿಗೆ
ಹೊಡೆದು ನಿಂತ ನಾರಣಪ್ಪ ಅಪ್ಪಟ ಲೌಕಿಕ ವ್ಯಕ್ತಿ.
ವರದೂ ವಿರುದ್ಧ ದಿಕ್ಕಿನ ಜೀವನಕ್ರಮ. ಅಕಸ್ಮಾತ್
ಣಪ್ಪ ಸಾಯುತ್ತಾನೆ. ಆತ ಜಾತಿಗೆಟ್ಟವನೆಂಬ ಕಾರಣಕ್ಕೆ
ನ ಬ್ರಾಹ್ಮಣರು ಆತನ ಶವಸಂಸ್ಕಾರಕ್ಕೆ ಕೈ
ಡಿಸುವುದಿಲ್ಲ. ನಾರಣಪ್ಪ ಬ್ರಾಹ್ಮಣನಾದಕಾರಣ
ನಲ್ಲಿರುವ ಇತರ ಶೂದ್ರರೂ ಆತನ ಹೆಣವನ್ನು
ಟ್ಟುವಂತಿಲ್ಲ. ಇದಕ್ಕೆ ಪರಿಹಾರ ಕಂಡುಕೊಳ್ಳಲು
ಣೇಶಾಚಾರ್ಯ ಮನುಸ್ಮೃತಿಯ ಮೊರೆಹೋಗುತ್ತಾನೆ.
ಪರಿಹಾರ ಸಿಗದಿದ್ದಾಗ ದೇವರ ಮೊರೆಹೋಗುತ್ತಾನೆ.
ಯೂ ಪರಿಹಾರ ಮಾರ್ಗ ಸಿಗದಾಗಿ ನಿರಾಶನಾಗುತ್ತಾನೆ.
ಣಪ್ಪನ ಹೆಣ ಕೊಳೆಯಲಾ ರಂಭಿಸುತ್ತದೆ. ಊರಿನಲ್ಲಿ
ಗಳು ಸಾಯುತ್ತವೆ. ಪ್ರಾಣೇಶಾ ಚಾರ್ಯನ ರೋಗಿಷ್ಟ
ಪತ್ನಿಯೂ ಕೊನೆಯುಸಿರೆಳೆ ಯುತ್ತಾಳೆ. ಇನ್ನೊಂದಿಬ್ಬರು
ಹ್ಮಣರೂ ಮೃತರಾಗುತ್ತಾರೆ. ವೇಶ್ಯೆ ಚಂದ್ರಿಯ ಮೋಡಿಗೆ
ಯಾದ ಪ್ರಾಣೇಶಾಚಾರ್ಯ ಆಕೆಯೊಂದಿಗೆ ಮಲಗಿ
ಪಡೆಯುತ್ತಾನೆ. ದಿನೇದಿನೇ ಖಿನ್ನನಾಗುತ್ತಾ, ದಿಕ್ಕು
ಚದವನಂತಾಗಿ ಊರು ಬಿಡುತ್ತಾನೆ. ಖಿನ್ನತೆ, ಪಶ್ಚಾತ್ತಾಪ
ನಿಗೆ ಅಂಟಿಕೊಂಡೇ ಇರುತ್ತದೆ. ಕಡೆಗೊಂದು ದಿನ
ಣೇಶಾಚಾರ್ಯ ಪ್ಲೇಗ್ ರೋಗಕ್ಕೆ ತುತ್ತಾದ ದೂರ್ವಾಸ
ಕ್ಕೆ ವಾಪಾಸಾಗುತ್ತಾನೆ. ಸಿನಿಮಾ ಮುಗಿಯುತ್ತದೆ.

1970ನೇ ಇಸವಿಯಲ್ಲಿ ಬಿಡುಗಡೆಯಾದ ಪಟ್ಟಾಭಿ
ಮ ರೆಡ್ಡಿ ನಿರ್ದೇಶನದ ಈ ಚಿತ್ರ ಯು.ಆರ್.
ನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯನ್ನು
ಧರಿಸಿದ್ದು, ದೂರ್ವಾಸಪುರದಂಥ ಒಂದು ಪುಟ್ಟ ಹಳ್ಳಿಯಲ್ಲಿ
ಯುವ ಈ ಕಥೆಗೆ ನಿರಂತರವಾಗಿ ಸಾಗುವ ನದಿಯ
ವಿದ್ದು ಎಲ್ಲಿಯೂ ಜಡತ್ವ ಹೊಂದಿಲ್ಲ, ನಿರೂಪಣೆ
ಪು ಕಳೆದುಕೊಂಡಿಲ್ಲ; ನಾರಣಪ್ಪನಂಥ ಪಾತ್ರ
ಯುವುದು, ಊರಿನ ಬ್ರಾಹ್ಮಣರು ಆ ಹೆಣದ ಸಂಸ್ಕಾರಕ್ಕೆ
ಮುಂದಾಗದಿರುವುದು, ಆ ಕಾರಣವೇ ಇಡೀ ಊರಿನ
ನೆಮ್ಮದಿಯನ್ನು ಹಾಳುಮಾಡುವುದು ಇದಿಷ್ಟನ್ನು ಗಮನಿಸಿ.
ಮ ಕೃತಿಯ ಕಲಾತ್ಮಕತೆ ಕಾದಂಬರಿಯ ಕರ್ತೃ
ನಂತಮೂರ್ತಿಯವರಿಗೆ, ಚಿತ್ರಕತೆ-ಸಂಭಾಷಣೆ ರಚಿಸಿದ
ರೀಶ್ ಕಾರ್ನಾಡರಿಗೆ ಹಾಗೂ ಚಿತ್ರವನ್ನು ನಿರ್ದೇಶನ
ಡಿದ ಪಟ್ಟಾಭಿರಾಮಿ ರೆಡ್ಡಿಯವರಿಗೆ ಗೊತ್ತು, ಮೌನ
ತಾಡಬೇಕಾದ ಸನ್ನಿವೇಶಗಳಲ್ಲಿ ಸಂಗೀತ ಬೇಕು;
ಣೇಶಾಚಾರ್ಯನ ಆಂತರ್ಯದ ತಳಮಳವನ್ನು ವಾದ್ಯದ
ಸ ಅರ್ಥಮಾಡಿಸಬಲ್ಲದು. ಇವೆಲ್ಲಾ ಅಭಿರುಚಿ
ವಲ್ಲಿ ಇರುತ್ತವೆ. ಇವಿದ್ದರೇನೆ ಒಂದು ಸಿನಿಮಾ
ರ್ಥಪೂರ್ಣ ಕೃತಿಯಾಗುವುದು; ಒಂದು ಕಲಾತ್ಮಕ ಚಿತ್ರ
ದನ್ನು ಚಿಂತನೆಗೂ ದಾರಿ ಮಾಡಿಕೊಡುತ್ತದೆ ಎಂಬುದೂ
ಅಂದರೆ ಈ ಕಾದಂಬರಿಯಾಧಾರಿತ ಸಿನಿಮಾದ
ಪು ಒಂದು ಹೆಣವನ್ನು ಊರಿನಲ್ಲಿಟ್ಟುಕೊಂಡು
ರ್ಮಾಚರಣೆ, ಆಚಾರವಿಚಾರದ ಹೆಸರಿನಲ್ಲಿ ಮೂಢರಂತೆ
ಕುವುದನ್ನು ಮತ್ತು ತಾವು ನಂಬಿಕೊಂಡಿದ್ದೇ ಬದುಕು,
ಓದಿಕೊಂಡಿದ್ದೇ ಶಾಸ್ತ್ರ ಎಂಬ ಹುಂಬತನವನ್ನು
ಪ್ರಶ್ನಿಸುವ, ಚೌಕಟ್ಟಿನಿಂದ ಹೊರನಡೆದು ವಿಶಾಲ ಬದುಕನ್ನು ಕಾಣುವ, ಅದರೊಳಗೆ ಜೀವಿಸುವ ಪರಿಪಾಠವನ್ನು ರೂಢಿಸಿಕೊಳ್ಳುವುದರ ಕುರಿತು ಅರಿವು ಮೂಡಿಸುವುದು. ಪೂಜೆ, ಸಂಧ್ಯಾವಂದನೆ, ಜಪತಪ, ಮಡಿವಂತಿಕೆಯಿಂದಷ್ಟೇ ಶ್ರೇಷ್ಠ ಆನಂದಮಯ ಬದುಕನ್ನು ಕಂಡುಕೊಳ್ಳುತ್ತೇವೆಂಬುದು ಸುಳ್ಳು ಎಂಬುದನ್ನು ನಾರಣಪ್ಪ ನಿರೂಪಿಸುತ್ತಾನೆ. ಮಡಿವಂತಿಕೆ, ಮಂತ್ರಪಠಣ ಮುಖ್ಯವೆಂದು ನಂಬಿರುವ ನಾರಣಪ್ಪನ ಸಂಬಂಧಿಕರೇ ಆತ ಹೆಣವಾಗಿ ಮಲಗಿರುವಾಗಲೇ ಬಂಗಾರಕ್ಕಾಗಿ, ಆತನ ಆಸ್ತಿಗಾಗಿ ಆಸೆ ಪಡುತ್ತಾರೆ. ಇದರಿಂದ ನಾವು ಮನಗಾಣಬೇಕಾದುದು ಆತ್ಮಶುದ್ಧಿಯಿಲ್ಲದ ಯಾವುದೇ ಮಡಿ, ಧ್ಯಾನ, ಪೂಜೆ, ಪುನಸ್ಕಾರ, ವ್ರತ, ನೇಮ ಸಿಂಧುವಲ್ಲ ಎಂಬುದು. ಹಾಗೆಯೇ ತನ್ನ ಮನೆಗೆ ಬಂದ ಪ್ರಾಣೇಶಾಚಾರ್ಯನನ್ನು ನಾರಣಪ್ಪ ಕೇಳುವ ಒಂದಿಷ್ಟು ಪ್ರಶ್ನೆಗಳು ಚಿತ್ರದ ಹೈ ಲೈಟ್- ಆ ವಿಚಾರಪೂರ್ಣ, ಪ್ರತಿಭಟನಾತ್ಮಕ ಮಾತುಗಳು ಭಾರತೀಯ ಸಮಾಜದಲ್ಲಿ ವಾಸಿಸುವ ಪ್ರತಿಯೊಬ್ಬ ಪ್ರೇಕ್ಷಕನನ್ನೂ ಚಿಂತನೆಗೆ ಹಚ್ಚುವ ನೆಲೆಯಲ್ಲಿಯೇ ಪಡಿಮೂಡಿವೆ.

ಇಷ್ಟಕ್ಕೂ ಈ ಬಗೆಯ ಕಲಾತ್ಮಕ ಚಿತ್ರ ಮಾಡುವುದರ ಗುರಿಯೇನು? ಬರೀ ಪ್ರಶಸ್ತಿ ಗಳಿಸಲೆಂದೇ? ಜನರಿಗೆ ತಲುಪುವಲ್ಲಿ ಸೋತಾಗ, ಅಂದರೆ ದೃಶ್ಯಮಾಧ್ಯಮವಾದ ಸಿನಿಮಾ ಜನರಿಂದ ನೋಡಿಸಿಕೊಳ್ಳದಿದ್ದರೆ, ಕೆಲವೇ ಚಿತ್ರೋತ್ಸವಗಳಿಗೆ, ಪ್ರಶಸ್ತಿ ಕಮಿಟಿಯವರಿಗಷ್ಟೇ ನೋಡಲು ಸಿಕ್ಕರೆ ಪಟ್ಟಾಭಿರಾಮಿ ರೆಡ್ಡಿ, ಪಿ.ಲಂಕೇಶ್, ಗಿರೀಶ್ ಕಾರ್ನಾಡ್, ಗಿರೀಶ್ ಕಾಸರವಳ್ಳಿ ಥರದವರ ಚಿತ್ರಗಳು ಕೆಲವೇ ಕೆಲವು ಬುದ್ಧಿವಂತ, ವಿದ್ಯಾವಂತ, ಚಿಂತಕ ಸಮೂಹದ ಸೀಮಿತ ಪ್ರೇಕ್ಷಕವರ್ಗಕ್ಕಷ್ಟೇ ಮೀಸಲಾಗಬೇಕಾಗುತ್ತದೆ. ಈ ಬಗೆಯ ನಿರ್ದೇಶಕರಲ್ಲಿನ ನಿಜವಾದ ಕಲೆ ಸರಳ ಪ್ರೇಕ್ಷಕನ ಅಂತರಾಳ ತಲುಪುವಲ್ಲಿ ಸೋಲುತ್ತದೆ. ಆದರೆ ಈ 'ಸಂಸ್ಕಾರ' ಚಿತ್ರ ಕನ್ನಡಿಗರಿಗೆ ಬೇಕಾಗಿರುವಂಥದ್ದೇ ಅಲ್ಲವೇ? ಅದೆಷ್ಟೋ ಕೋಟಿಗಳನ್ನು ಬಾಚುವ ಆತ್ಮಹೀನ ಚಿತ್ರಗಳಿಗಿಂತ, ಕಥೆಯೇ ಇರದ, ಸವಕಲು ಸಂಭಾಷಣೆ, ಕದ್ದ ದೃಶ್ಯಗಳು, ಅವವೇ ಪಾತ್ರಗಳಿಂದ ಕೂಡಿದ, ಕಲೆಯ ಗಂಧಗಾಳಿಯೇ ಇರದೆ ಹಣಗಳಿಕೆಯೇ ಪ್ರಧಾನವಾಗಿರುವ, ಪ್ರೇಕ್ಷಕನನ್ನು ಸಿನಿಮಾದಾಚೆಗೂ ಚಿಂತನೆಗೆ ಹಚ್ಚದ ಅಂತಹ ಸಾವಿರ ಸಿನಿಮಾಗಳಿಗಿಂತ ಕನ್ನಡ ಚಿತ್ರಗಳ ಜೀವಂತಿಕೆ







ಕಾಯ್ದುಕೊಳ್ಳಲು, ಪ್ರೇಕ್ಷಕನನ್ನು ಆತ್ಮಶೋಧಕ್ಕೊಡ್ಡಲು ಇಂತಹ ಒಂದೇ ಒಂದು ಸಿನಿಮಾ ಸಾಕಲ್ಲವೇ?

ಈ ಕುರಿತು ಸಂದೇಹವೇ ಬೇಡ. ಇಂತಹ ಚಿತ್ರಗಳು ಮುಖ್ಯ, ಧರ್ಮ, ದೇವರು, ಜಗದ್ಗುರುವಿನ ಪ್ರವಚನಕ್ಕಿಂತ ಮುಖ್ಯ. ಆದರೆ ಈ ಪ್ರಾಮುಖ್ಯತೆ ಎಷ್ಟು ಎಂಬುದಕ್ಕೆ ಕಮರ್ಷಿಯಲ್ ಚಿತ್ರಗಳ ಭ್ರಮೆಯಲ್ಲಿ ತೇಲುತ್ತಿರುವ ಪ್ರೇಕ್ಷಕ ಫಿಲಂ ಫೆಸ್ಟಿವಲ್ ಗಲಾಚೆಗೂ ಥಿಯೇಟರ್‌ಗಳಿಗೆ ಬಂದು ಇಂಥ ಚಿತ್ರಗಳನ್ನು ನೋಡಬೇಕು. ಆ ವ್ಯವಸ್ಥೆ ಚಿತ್ರರಂಗದಿಂದಲೂ ಆಗಬೇಕು.

ಬ್ರಾಹ್ಮಣ ಒಬ್ಬ ಜಾತಿಯಿಂದ ಮಾತ್ರ ಬ್ರಾಹ್ಮಣನಾಗುವುದಿಲ್ಲ- ಆತನ ಹೆತ್ತವರು, ಕುಲ, ಗೋತ್ರ, ಆಚರಣೆ ಇತ್ಯಾದಿಗಳಿಂದ ಆತನ ವ್ಯಕ್ತಿತ್ವ, ಸ್ವಭಾವ, ಚಿಂತನಾಕ್ರಮ ರೂಪುತಳೆದಿರುತ್ತದೆ. ಆತ ಹುಟ್ಟುವಾಗ ಸಾಮಾನ್ಯ ಮಗುವಾಗಿಯಷ್ಟೇ ಇರುತ್ತಾನೆ. ಆತ ಬೆಳೆಯುತ್ತಾ ಹೋದಂತೆ ಜಾತಿ, ಕುಲ, ಮನೆದೇವರು, ಯಾರ ಮನೆಯಲ್ಲಿ ಉಣ್ಣಬೇಕು, ಯಾರ ಮನೆಯಲ್ಲಿ ಉಣ್ಣಬಾರದು, ಯಾರ ಜೊತೆ ಬೆರೆಯಬೇಕು, ಯಾರಿಂದ ದೂರ ಇರಬೇಕು, ಯಾವುದು ಶ್ರೇಷ್ಠ, ಯಾವುದು ಕನಿಷ್ಠ- ಇತ್ಯಾದಿಗಳು ಒಂದೊಂದಾಗಿ ಆತನ ತಲೆಗೆ ಅಂಟಿಕೊಳ್ಳುತ್ತಾ, ಆತನ ಬದುಕಿನ ಭಾಗವಾಗುತ್ತಾ ಹೋಗುತ್ತವೆ. ಒಂದು ದಿನ ಆತ ಸಂಪೂರ್ಣವಾಗಿ ತನ್ನ ಜಾತಿಯ ಶ್ರೇಷ್ಠತೆಗೆ ಜೋತುಬೀಳುತ್ತಾನೆ. ತನ್ನ ಜಾತಿಯ, ತನ್ನ ಪೂರ್ವಿಕರ ತತ್ವಗಳಿಗೆ, ಸಿದ್ಧಾಂತಗಳಿಗೆ, ನಂಬಿಕೆಗಳಿಗೆ ಬದ್ಧನಾಗುತ್ತಾನೆ. ತನ್ನ ಅರಿವಿಗೆ ಬಾರದಂತೆ ಸ್ವಂತಿಕೆಯನ್ನು ಕಳೆದುಕೊಂಡು ತನ್ನ ಅಪ್ಪ, ಅಮ್ಮ, ಅಜ್ಜ, ಅಜ್ಜಿ ರೂಪಿಸಿದ ಹಳೆಯ ಪೋಕೇಸಿನ ಆರ್ಟಿಫಿಷಿಯಲ್ ಗೊಂಬೆಯಾಗಿಬಿಡುತ್ತಾನೆ. ತನ್ನ ಕೆಲವೊಂದು ಜೀವವಿರೋಧಿ ನಿಲುವುಗಳು – ಅಂದರೆ ಪಂಕ್ತಿಬೇಧ, ಗುಡಿಗೆ ಬಿಟ್ಟುಕೊಳ್ಳದಿರುವುದು, ಮುಟ್ಟಿಸಿಕೊಳ್ಳದಿರುವುದು – ಇತ್ಯಾದಿಗಳನ್ನು ಯಾರಾದರು ಪ್ರಶ್ನಿಸಿದಾಗ ಮನಸಿಗೆ ಬೇಜಾರು ಮಾಡಿಕೊಳ್ಳುತ್ತಾನೆ. ಪ್ರಶ್ನಿಸುವವರೇ ಮೂರ್ಖರು, ತನ್ನ ನಿಲುವೇ ಸರಿಯಾದದ್ದು, ಸಾರ್ವಕಾಲಿಕವಾದದ್ದು ಎಂಬ ಭ್ರಮೆಯಲ್ಲಿ ತೇಲುತ್ತಾನೆ. ತನ್ನ ಕೆಲವೊಂದು ನಡವಳಿಕೆ, ಕ್ರಿಯೆಗಳು ಸಮಾನ ಸಾಮಾಜಿಕ ಜೀವನಕ್ಕೆ ವಿರುದ್ಧವಾಗಿದೆ ಎಂಬುದರತ್ತ ಚಿಂತಿಸಲೂ ಪ್ರಯತ್ನಿಸದೆ ತನ್ನದೇ ಸರಿ ಎಂದು ಬೀಗುತ್ತಾನೆ, ವಾದಿಸುತ್ತಾನೆ- ಇಂತಹ ಕ್ಲಿಷ್ಟಕರ ವಾತಾವರಣದಲ್ಲಿಯೇ ಹುಟ್ಟಿ ಬಂದ ಅನಂತಮೂರ್ತಿಯವರು ಈ ವ್ಯೂಹವನ್ನು ಬೇಧಿಸಿಕೊಂಡು ಹೊರಬಂದು ಜಾತಿಯ ಲೇಬಲ್ಲನ್ನು ಹಣೆಗೆ ಅಂಟಿಸಿಕೊಳ್ಳದೆಯೇ ಮನುಷ್ಯನಾಗಿ ಜೀವಿಸಿದ್ದರ, ಆ ನಿಟ್ಟಿನಲ್ಲಿ ಚಿಂತಿಸಿದ್ದರ, ಧ್ಯಾನಿಸಿದ್ದರ ಪ್ರತಿಫಲವೇ 'ಸಂಸ್ಕಾರ'ದಂಥ ಕಾದಂಬರಿ, ಸಿನಿಮಾ... ಇದೇ ಕಾದಂಬರಿಯನ್ನು ಬಾಲಚಂದರ್, ಭಾರತಿರಾಜಾ, ಬಾಲಮಹೇಂದರ್, ಪುಟ್ಟಣ್ಣ, ಸಿದ್ಧಲಿಂಗಯ್ಯ ಮಾಡಿದ್ದರೆ ಅವರವರ ಶೈಲಿಯಲ್ಲಿರುತ್ತಿತ್ತಷ್ಟೇ. ಬಹುಷಃ ಇನ್ನಷ್ಟು ಜನಪ್ರಿಯತೆ ಅಂದರೆ ಇನ್ನಷ್ಟು ಭರ್ಜರಿಯಾಗಿ ಟಾಕೀಸಿನಲ್ಲಿ ಓಡುತ್ತಿತ್ತೇನೋ ಅಷ್ಟೇ. ಕಮರ್ಷಿಯಲ್ ಚಿತ್ರಗಳನ್ನೇ ನೋಡಿ ನೋಡಿ ರೂಢಿಯಾಗಿರುವ ಸಿದ್ಧಮನಸ್ಥಿತಿಯ ಜನರಿಗೆ ಇಂತಹ ಚಿತ್ರಗಳನ್ನು ನೋಡುವ, ಅರ್ಥ ಮಾಡಿಕೊಳ್ಳುವ, ಆತ್ಮದ ಆಳಕ್ಕಿಳಿಸಿಕೊಳ್ಳುವಲ್ಲಿ ಪೂರ್ವ ತಯಾರಿಯೂ ಮುಖ್ಯವಾಗುತ್ತದೆ. ಒಬ್ಬ ಆದರ್ಶ ಸಾಧಕನ ಬದುಕನ್ನು ಅವಲೋಕಿಸಿದಷ್ಟೇ, ಒಂದು ಮಹಾಕೃತಿಯನ್ನು ಗಂಭೀರವಾಗಿ ಓದಿದಷ್ಟೇ, ಇಂಥದೊಂದು ಸಿನಿಮಾ ನೋಡುವುದು. ಈ ಚಿತ್ರದ ಒಂದೊಂದು ಫ್ರೇಮಿನಲ್ಲೂ ಅಡಕಗೊಂಡಿರುವ ಮಾನವನ ತೊಳಲಾಟ, ಜಿಜ್ಞಾಸೆ, ಸಣ್ಣತನ, ದೊಡ್ಡ ಗುಣ, ಅನುಭವ, ಆದರ್ಶ, ಅವಿವೇಕತನ ಎಲ್ಲವನ್ನೂ ಗ್ರಹಿಸುವ ಶಕ್ತಿ ಪಡೆದುಕೊಂಡಾಗ ಮಾತ್ರ ಅನಂತಮೂರ್ತಿಯವರು ಇದನ್ನು ಬರೆದಾಗಿನ ಅವರ ಆಂತರಿಕ ತುಮುಲ, ಸಂವೇದನೆ, ಸೃಜನಶೀಲತೆಯ ಆಳ ಅಗಲಗಳು ಗೊತ್ತಾಗಲು ಸಾಧ್ಯ.

'ಸಂಸ್ಕಾರ' ಚಿತ್ರ ಕಲಾವಂತಿಕೆ, ಆಳದ ಆಶಯದ ದೃಷ್ಟಿಯಿಂದ ಒಂದು ಕ್ರಾಂತಿಕಾರಕ ಕೃತಿಯೇ ಆಗಿದೆ. ಸೂತಕದಲ್ಲಿಯೂ ಪ್ರಾಣೇಶಾಚಾರ್ಯ ದೇವಸ್ಥಾನದಲ್ಲಿ ಬ್ರಾಹ್ಮಣರ ಜೊತೆ ಪಂಕ್ತಿಯಲ್ಲಿ ಕೂತು ಊಟ ಮಾಡಿದಾಗ ಅದೊಂದು ಗ್ರೇಟ್ ಎನ್ನಿಸಬೇಕು; ಪುಟ್ಟನೆಂಬ ಅಪಾರ ಜೀವನಪ್ರೀತಿಯುಳ್ಳ ಸಾಮಾನ್ಯ ವ್ಯಕ್ತಿ ತಾನು ಕೊಂದ ಹಾವಿನ ಸಂಸ್ಕಾರ ಮಾಡಿದಾಗ ನಾರಣಪ್ಪನ ಹೆಣದ ಸಂಸ್ಕಾರ ಮಾಡಲು ಧರ್ಮ, ಶಾಸ್ತ್ರದ ನೆಪದಲ್ಲಿ ಹಿಂದೆ ಮುಂದೆ ಯೋಚಿಸುವ ವೇದಪಾರಂಗತ ಪ್ರಾಣೇಶಾಚಾರ್ಯ ಬೆಚ್ಚಿ ಬೀಳಬೇಕು. ಅದೆಲ್ಲಾ ಇಲ್ಲಿ ಮುಖ್ಯವಾಗುತ್ತದೆ. ಆದ್ದರಿಂದಲೇ 'ಸಂಸ್ಕಾರ' ತರಹದ ಸಿನಿಮಾಗಳಿಂದ ಪ್ರತಿಯೊಬ್ಬರೂ ಅರಿತುಕೊಳ್ಳಬೇಕಾದುದು ಬಹಳಷ್ಟಿದೆ ಎನ್ನುವುದು.

ಈ ದೇಶದಲ್ಲಿ ಧರ್ಮದಾಚೆಗೆ, ಜಾತಿಯಾಚೆಗೆ ಚಿಂತಿಸುವ, ಬದುಕುವ, ಅಡಿಯಿಡುವ ಒಂದು ಮನಸ್ಥಿತಿಯುಂಟು. ಈ ಥರದ ಮನಸ್ಥಿತಿಯುಳ್ಳ ಮಂದಿ ಸಂವಿಧಾನದಲ್ಲಿ, ಪ್ರಜಾಪ್ರಭುತ್ವದಲ್ಲಿ, ಬಹುಮುಖತೆಯಲ್ಲಿ ನಂಬಿಕೆ ಇಟ್ಟವರು. ಇವರು ಹೀಗಾಗಲು, ಈ ಮಾರ್ಗದಲ್ಲಿ ಸಾಗಲು ಇತಿಹಾಸ ತೋರಿಸಿಕೊಟ್ಟ ಅಸಮಾನತೆ, ತಾರತಮ್ಯ ಶೋಷಣೆ, ಎಲ್ಲಾ ದುಷ್ಟ ಶೋಷಕರು ಧರ್ಮ, ಜಾತಿ, ವರ್ಣದ ಹೆಸರಿನಲ್ಲಿ ರೂಪಿಸಿದ ಹುನ್ನಾರಗಳು, ತಮ್ಮ ತಮ್ಮ ಜಾತಿಯ, ತಮ್ಮ ತಮ್ಮ ಒಳಜಾತಿಯ ಹಿರಿಮೆಗರಿಮೆಗಳ ಹೆಸರಿನಲ್ಲಿ ಕಿತ್ತಾಡುವ, ಕಚ್ಚಾಡುವ ಸಣ್ಣತನಗಳು ಈ ಬಗೆಯಲ್ಲಿ ಜಾತ್ಯತೀತವಾಗಿ, ಧರ್ಮಾತೀತವಾಗಿ ಚಿಂತಿಸಲು, ಬರೆಯಲು, ಬದುಕಲು, ಹೋರಾಡಲು ಪ್ರೇರೇಪಿಸುತ್ತವೆ. ಆದರೆ ಇಂತಹ ಚಿಂತಕರಿಗೆ ಮನುಷ್ಯ ಸೃಷ್ಟಿಸಿದ ದೇವರುಗಳಲ್ಲಿ, ಮನುಷ್ಯ ನಿರ್ಮಿಸಿದ ಗುಡಿ, ಚರ್ಚ್, ಮಸೀದಿಗಳಲ್ಲಿ ನಂಬಿಕೆ ಇರುವುದಿಲ್ಲ, ಗೀತೆ, ಬೈಬಲ್, ಕುರಾನುಗಳಲ್ಲಿ ವಿಶ್ವಾಸವಿರುವುದಿಲ್ಲ; ಆ ದೇವರುಗಳಾಚೆಗೂ; ಆ ಧರ್ಮಗ್ರಂಥಗಳಾಚೆಗೂ ಅರ್ಥಪೂರ್ಣ ಬದುಕನ್ನು ಕಟ್ಟಿಕೊಳ್ಳಬಲ್ಲರು. ದಯೆ, ಕರುಣೆ, ಅಂತಃಕರಣ, ಆತ್ಮೀಯತೆ, ಮಾನವತ್ವಗಳನ್ನೇ ಉಸಿರಾಡುವ ಇಂಥವರು ಸಾಮಾಜಿಕವಾಗಿ ಎದುರಾಗುವ ನೀಚತನವನ್ನು ಆಗಾಗ ಪ್ರಶ್ನಿಸುತ್ತಾರೆ, ಚಿಂತನೆಗೆ ಹಚ್ಚುವಂತಹ ಕೆಲಸ ಮಾಡುತ್ತಾರೆ; ಅಂಥದೊಂದು ಕೆಲಸವೇ 'ಸಂಸ್ಕಾರ'. ಅಂತಹ ವ್ಯಕ್ತಿಗಳೇ ಅನಂತಮೂರ್ತಿ ತರಹದವರು.

'ಸಂಸ್ಕಾರ' ಚಿತ್ರದ ಬ್ರಾಹ್ಮಣರ ಅಗ್ರಹಾರವನ್ನು ನೋಡಿದಾಗ ಒಂದು ತಟಸ್ಥ ಕೊಳದಂತೆ ಕಾಣುತ್ತದೆ. ಎಂದೋ, ಯಾರೋ ಬರೆದಿಟ್ಟ ಗ್ರಂಥಗಳಿಗೆ ಒಗ್ಗಿಕೊಂಡು ತಮ್ಮ ಸುಂದರ ವರ್ತಮಾನವನ್ನೇ ಕಳೆದುಕೊಳ್ಳುವ ಅಲ್ಲಿಯ ಜನರ ಮನಸ್ಥಿತಿಯ ಬಗ್ಗೆ ಅಯ್ಯೋ ಎನಿಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಇಡೀ ಚಿತ್ರವನ್ನು ನಡೆಸುವ ಪ್ರಾಣೇಶಾಚಾರ್ಯ (ಗಿರೀಶ್ ಕಾರ್ನಾಡ್) ಹಾಗೂ ಚಿತ್ರದುದ್ದಕ್ಕೂ ಹಬ್ಬಿಕೊಂಡಿರುವ ನಾರಣಪ್ಪ (ಪಿ.ಲಂಕೇಶ್) ಪಾತ್ರಗಳು ಸದಾ ಕಾಡಬಲ್ಲ, ಜಡಗೊಂಡ ಸಮಾಜಕ್ಕೆ ಚಲನೆ ನೀಡಬಲ್ಲ ಅದ್ಭುತಗಳಾಗಿ ಕಾಣುತ್ತವೆ.



■ ಹೃದಯಶಿವ

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 10-09-2014 RNI No. KARKAN2005/1464

ಇಂದ್ರಜಿತ್ ಲಂಕೇಶರ ಹೊಸ ಮೂವಿ



'ತುಂಟಾಟ', 'ಲಂಕೇಶ್ ಪತ್ರಿಕೆ', 'ಮೊನಾಲಿಸಾ', 'ಐಶ್ವರ್ಯ' ತರಹದ ಚಿತ್ರಗಳ ಮೂಲಕ ಗೆಲುವಿನ ನಗೆ ಬೀರಿದ ಇಂದ್ರಜಿತ್ ಲಂಕೇಶ್ ಅವರು ಆನಂತರ 'ಹುಡುಗ ಹುಡುಗಿ', 'ದೇವ್ ಸನ್ ಆಫ್ ಮುದ್ದೇಗೌಡ' ತರಹದ ಚಿತ್ರಗಳನ್ನು ನಿರ್ದೇಶಿಸಿದರೂ ನಿರೀಕ್ಷಿತ ಮಟ್ಟದಲ್ಲಿ ಸಕ್ಸಸ್ ಕಾಣಲಿಲ್ಲ. ಈಗ ಎರಡು ವರ್ಷಗಳ ಗ್ಯಾಪ್ ನಂತರ ಒಂದು ಸಿನಿಮಾ ನಿರ್ದೇಶಿಸಲು ತಯಾರಿ ನಡೆಸಿಕೊಳ್ಳುತ್ತಿದ್ದಾರೆ ಎಂಬುದೊಂದು ಸುದ್ದಿ ಅಲ್ಲಲ್ಲಿ ಕೇಳಿಬರುತ್ತಿದೆ. ಇಂದ್ರಜಿತ್ ಅವರ ಹೊಸ ಚಿತ್ರಕ್ಕೆ ಕೆ.ಮಂಜು ನಿರ್ಮಾಪಕರೆಂದೂ, ಯಶ್ ನಾಯಕನಟರೆಂದೂ ಒಂದು ಸುದ್ದಿ.ಇಷ್ಟಕ್ಕೂ ಸದ್ಯದಲ್ಲೇ ಒಂದು ಸಿನಿಮಾ ನಿರ್ದೇಶಿಸುವ ಇಂಗಿತ ತಮಗಿರುವುದಾಗಿ ಹೇಳಿಕೊಂಡಿರುವ ಇಂದ್ರಜಿತ್ ಇನ್ನಷ್ಟೇ ಆ ಕುರಿತ ವಿವರಗಳನ್ನು ಅಧಿಕೃತವಾಗಿ ಪ್ರಕಟಿಸಬೇಕಿದೆ. ಹಾಗೊಂದು ವೇಳೆ-ಸದ್ಯಕ್ಕೆ ಫಾರ್ಮ್‌ನಲ್ಲಿರುವ ಯಶ್ ಜೊತೆ ಇವರೇನಾದರೂ ಸಿನಿಮಾ ಮಾಡುವುದೇ ಆದಲ್ಲಿ ಆ ಚಿತ್ರ ನಿರೀಕ್ಷೆ ಹುಟ್ಟಿಸುವುದರಲ್ಲಿ ಸಂದೇಹವಿಲ್ಲ. 'ತುಂಟಾಟ', 'ಮೊನಾಲಿಸ' ಚಿತ್ರಗಳಿಗೆ ರಾಜ್ಯ ಪ್ರಶಸ್ತಿಗಳನ್ನೂ, 'ಐಶ್ವರ್ಯ' ಚಿತ್ರಕ್ಕೆ ಫಿಲಂಫೇರ್ ಅವಾರ್ಡನ್ನೂ ಪಡೆದುಕೊಂಡಿರುವ ಇಂದ್ರಜಿತ್ ಅವರು ಈ ಬಾರಿ ಯಾವ ಬಗೆಯ ಮೋಡಿ ಮಾಡಲಿದ್ದಾರೆ ಎಂದು ಕಾದುನೋಡಬೇಕು.

ಕೆ.ವೈ.ನಾರಾಯಣಸ್ವಾಮಿಯವರಿಗೆ ರಾಜ್ಯ ಪ್ರಶಸ್ತಿ



ಡಾ. ಕೆ.ವೈ.ನಾರಾಯಣಸ್ವಾಮಿ ಎಂಬ ಹೆಸರು ಕನ್ನಡ ಸಾರಸ್ವತ ಲೋಕದಲ್ಲಿ ಚಿರಪರಿಚಿತ. ತಮ್ಮ ಕಟುವಾದ ವಿಮರ್ಶೆ, ಹೊಸದಿಕ್ಕಿನ ನಾಟಕಗಳ ಮೂಲಕ ಕೆ.ವೈ.ಎನ್. ತಮ್ಮದೇ ಆದ ಛಾಪನ್ನು ಮೂಡಿಸಿದವರು. ಇಂತಹ ಕೆ.ವೈ.ಎನ್. ಚಲನಚಿತ್ರರಂಗದಲ್ಲಿಯೂ ತೊಡಗಿಸಿಕೊಂಡವರು. 'ಸೂರ್ಯಕಾಂತಿ' ಚಿತ್ರಕ್ಕೆ ಕಥೆ, ಚಿತ್ರಕತೆ, ಸಂಭಾಷಣೆ ಬರೆದುದಲ್ಲದೆ 'ಜುಗಾರಿ', 'ಭಗವತಿ ಕಾಡು', 'ಲಾಸ್ಟ್ ಬಸ್' ಎಂಬ ಚಿತ್ರಗಳಿಗೆ ಗೀತೆಗಳನ್ನೂ ಬರೆದಿದ್ದಾರೆ. ಇವರು ಇತ್ತೀಚಿಗೆ 'ಕಳವು' ಎಂಬ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಹಾಗೂ ಹಾಡುಗಳನ್ನು ಬರೆದಿದ್ದರು. ಆ ಪೈಕಿ ಇವರ ಚಿತ್ರಕತೆಗೆ ಈ ಬಾರಿಯ ಅತ್ಯುತ್ತಮ ಚಿತ್ರಕಥಾ ಲೇಖಕ ರಾಜ್ಯ ಪ್ರಶಸ್ತಿ ಬಂದಿದೆ. ಸಾಹಿತ್ಯ ಕ್ಷೇತ್ರದಲ್ಲಿದ್ದುಕೊಂಡು ಸಿನಿಮಾ ಕ್ಷೇತ್ರಕ್ಕೂ ತಮ್ಮ ಬರವಣಿಗೆ ಮೂಲಕ ಸೇವೆ ಸಲ್ಲಿಸುತ್ತಿರುವ ಕೆ.ವೈ.ಎನ್. ಥರದವರಿಂದ ನಮ್ಮ ಕನ್ನಡ ಚಿತ್ರಗಳು ಇನ್ನಷ್ಟು ಗುಣಮಟ್ಟದಿಂದ ರಾಷ್ಟ್ರಮಟ್ಟದಲ್ಲಿ, ಅಂತಾರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಳ್ಳಲಿ ಎಂಬುದು ನಮ್ಮ ಆಶಯ.

ಈ ಪ್ರಶಸ್ತಿ ನನಗೆ ಬೇಡ



'ಅಂಗುಲಿಮಾಲ' ಚಿತ್ರದ ಕಥೆಯು ಈ ಬಾರಿ ಅತ್ಯುತ್ತಮ ಕಥೆಯೆಂದು ರಾಜ್ಯಪ್ರಶಸ್ತಿಗೆ ಆಯ್ಕೆಯಾಗಿದ್ದು ಆ ಅತ್ಯುತ್ತಮ ಕಥಾಲೇಖಕ ಪ್ರಶಸ್ತಿ ಬರಗೂರು ರಾಮಚಂದ್ರಪ್ಪರಿಗೆ ಸಲ್ಲುತ್ತದೆಂದು ಪ್ರಶಸ್ತಿ ಆಯ್ಕೆ ಸಮಿತಿ ತೀರ್ಮಾನಿಸಿತ್ತು ಆದರೆ ಬರಗೂರರು ಈ ಪ್ರಶಸ್ತಿಯನ್ನು ತಿರಸ್ಕರಿಸಿದ್ದಾರೆ. ಯಾಕೆಂದರೆ, 'ಅಂಗುಲಿಮಾಲ' ಕತೆಯು ಇತಿಹಾಸದ ಭಾಗವಾದ್ದರಿಂದ, ಆ ಘಟಿಸಿದ ಭಾಗವನ್ನು ಆಯ್ಕೆ ಮಾಡಿಕೊಂಡು ಸಿನಿಮಾ ಮಾಡಿದ ಮಾತ್ರಕ್ಕೆ ಕಥೆಯ ಕ್ರೆಡಿಟ್ಟು ತಮಗೆ ಸಲ್ಲುವುದಿಲ್ಲ ಎಂಬುದು ಬರಗೂರರ ವಾದ. ಬರಗೂರರ ವಾದದಲ್ಲಿ ಲಾಜಿಕ್ಕಿದೆಯಾದರೂ ಪ್ರಶಸ್ತಿ ಆಯ್ಕೆ ಸಮಿತಿಗೆ ಈ ಬಗ್ಗೆ ಕಾಮನ್‌ಸೆನ್ಸ್ ಇಲ್ಲದಿರುವುದು ವಿಷಾದನೀಯ ಅಲ್ಲವೇ?



ಸಾಫ್ಟ್‌ವೇರ್ ಗಂಡನ ಹಾರ್ಡ್‌ವೇರ್ ಹಾಡುಗಳು

ಜಗ್ಗೇಶ್, ನಿಖಿತಾ ನಟಿಸಿರುವ 'ಸಾಫ್ಟ್‌ವೇರ್ ಗಂಡ' ಚಿತ್ರದ ಹಾಡು[illegible] ಮಾರುಕಟ್ಟೆಗೆ ಬಂದಿವೆ. ಈ ಚಿತ್ರದಲ್ಲಿ ಒಟ್ಟು ನಾಲ್ಕು ಹಾಡುಗ[illegible] 'ಕುಡಿತಾ ಬೇಡ ಅಂದ್ರು ನಮ್ಮ ಮಾತಾಪಿತಾಜಿ' ಎಂಬ ಹಾಡನ್ನು ವಿ[illegible] ಪ್ರಕಾಶ್ ಹಾಡಿದ್ದು ಪಡ್ಡೆ ಹುಡುಗರಿಗೆ ಇಷ್ಟವಾಗುವ ಎಲ್ಲ ಲಕ್ಷಣ[illegible] ಇದರಲ್ಲಿದೆಯಂತೆ. ಅದೇ ರೀತಿ 'ಪ್ಯಾಟೆಗಿಂತ ನಮ್ಮ ಹಳ್ಳೀನೆ ಚಂದ' [illegible] ಹಾಡನ್ನು ರಾಜೇಶ್ ಕೃಷ್ಣ ಶಮಿತಾ ಮಾಲ್ನಾಡ್ ಹಾಡಿದ್ದು ಗ್ರಾಮ್ಯ ಪ[illegible] ಜಗ್ಗೇಶ್ ಇಮೇಜಿಗೆ ಹೊಂದುವಂಥ ಹಾಡಾಗಿದೆಯಂತೆ. ಉಳಿದಂತೆ '[illegible] ಸನಿಹ' ಎಂಬ ರೆಗ್ಯುಲರ್ ಮೆಲೋಡಿ ಲವ್ ಡ್ಯೂಯೆಟ್, 'ಸಾರಿ [illegible]' ಎಂಬ ಮತ್ತೊಂದು ಹಾಡಿದ್ದು ಆಡಿಯೋ ಚೆನ್ನಾಗಿ ಮೂಡಿಬಂದಿ[illegible] ಮಾತುಗಳು ಕೇಳಿಬರುತ್ತಿವೆ. 'ಅಂತಿಂಥ ಗಂಡು ನಾನಲ್ಲ.. ನನ್ನಂಥ [illegible]



ಯಾರಿಲ್ಲ' ತರಹದ ಒಂದಿಷ್ಟು ಹಾಡುಗಳನ್ನು ಬಿಟ್ಟರೆ ಜಗ್ಗೇಶ್ [illegible] ಹಾಡುಗಳು ಹಿಟ್ ಆಗಿದ್ದು ಕಡಿಮೆ. ಕಾರಣ ಜಗ್ಗೇಶ್ ಹೇಳುವ ಡೈಲ[illegible] ಕಾಮಿಡಿಯೇ ಸಾಕು ಎಂಬಂತೆ ಜನ ಫಿಕ್ಸ್ ಆಗಿರುತ್ತಾರೆ. ಆದರೆ ಈ [illegible] 'ಸಾಫ್ಟ್‌ವೇರ್ ಗಂಡ' ಚಿತ್ರದ ಮೂಲಕ ಜಗ್ಗೇಶ್ ಚಿತ್ರದ ಹಾಡುಗಳು [illegible] ಆದರೆ ಅದಕಿಂತಲೂ ಪವಾಡ ಬೇಕೇ?

ಅನೂಪ್ ರೂಬೆನ್ಸ್ ಕನ್ನಡ[illegible]

ಪೂರಿ ಜಗನ್ನಾಥ್ ನಿರ್ದೇಶನದ 'ನೇನು ನಾ ರಾಕ್ಷಸಿ' ಸೇರಿ[illegible] ತೆಲುಗಿನಲ್ಲಿ ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ಚಿತ್ರಗಳಿಗೆ ಸಂಗೀತ ನೀಡಿ[illegible] ಅನೂಪ್ ರೂಬೆನ್ಸ್ ಎಂಬ ಸಂಗೀತ ನಿರ್ದೇಶಕ ಗಣೇಶ್ ನಟಿಸುತ್ತಿ[illegible] 'ಖುಷಿ ಖುಷಿಯಾಗಿ' ಚಿತ್ರದ ಮೂಲಕ ಕನ್ನಡಕ್ಕೆ ಬರುತ್ತಿದ್ದಾರೆ. ಈ ಚಿ[illegible] 'ಗುಂಡೆ ಜಾರಿ ಗಲ್ಲಂತಾಯಿಂದೆ' ಎಂಬ ತೆಲುಗು ಚಿತ್ರದ ರೀಮೇಕಾ[illegible] ತೆಲುಗಿನಲ್ಲಿಯೂ ಇದೇ ಅನೂಪ್ ರೂಬೆನ್ಸ್ ಸಂಗೀತವಿದ್ದು ಎ[illegible] ಮೂಲ ಟ್ರ್ಯಾಕ್‌ಗಳನ್ನು ಹಾಗೇ ಉಳಿಸಿಕೊಂಡು ಉಳಿದ ಮೂರು [illegible] ಹಾಡುಗಳಿಗೆ ರೂಬೆನ್ಸ್ ಟ್ಯೂನ್ ಹಾಕುತ್ತಿದ್ದಾರಂತೆ. ಬರೀ ಟ್ಯೂನ್ ಹಾಕುವುದು ಮಾತ್ರವಲ್ಲದೆ ಒಂದು ಹಾಡನ್ನೂ ಹಾಡಲಿದ್ದಾರಂತೆ. ಅದೆಷ್ಟೋ ಸಂಗೀತ ನಿರ್ದೇಶಕರು, ಗಾಯಕ/ಗಾಯಕಿಯರು ಅನ್ಯಭಾಷೆಗಳಿಂದ ಕನ್ನಡಕ್ಕೆ ಬಂದು ಕನ್ನಡಿಗರಿಗಿಂತಲೂ ಹೆಚ್ಚು ಖ್ಯಾತಿ, ಹಣ, ಅಭಿಮಾನಿಗಳನ್ನು ಗಳಿಸಿರುವ ಸಾಕಷ್ಟು ಉದಾಹರಣೆಗಳು ಕಣ್ಮುಂದೆ ಇರುವಾಗ ಈ ಅನೂಪ್ ಎಂಬ ತೆಲುಗು ಹುಡುಗ ಇಲ್ಲಿ ಎಷ್ಟು ಕಾಲ ಉಳಿಯುತ್ತಾರೋ ನೋಡ[illegible]



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com